ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಗುರುವಾರ, 14 ಮೇ 2026
ಸಂಪುಟ 48, ಸಂಚಿಕೆ 56, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital



ಇಂದು ಕೇರಳ ಮುಖ್ಯಮಂತ್ರಿ ಘೋಷಣೆ | ೦೭
ಚೀನಾಗೆ ಬಂದಿಳಿದ ಅಧ್ಯಕ್ಷ ಟ್ರಂಪ್ | ೦೭
ವಿನಾಸಂ ಕರಡು: ಅಸ್ಸಾಂ ಸಂಪುಟ ಅಸ್ತು | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ರೇವತಿ

ದಿನದ ಮಾತು

ಬುದ್ಧಿಗೆ, ಹೃದಯಕ್ಕೆ ಸಮ್ಮತವಾಗದಿದ್ದ ಯಾವುದನ್ನೂ ಯಾರೂ ಅನುಸರಿಸಬೇಕಾಗಿಲ್ಲ.

▲ ಗಾಂಧೀಜಿ

ಸಂಕಷ್ಟದ ಕಾಲದಲ್ಲಿ ಇಷ್ಟೇ ಕೇಳೋದು, ದೇಶದ ಜತೆ ನಿಲ್ಲಿ

ಗುರುತರ

• ಸೋಮಶೇಖರ ಸಿ.ಜೆ.

• ಪುಟ ೬

ಕಿರುಸುದ್ದಿ

ನಟ, ನಿರ್ಮಾಪಕ ದಿಲೀಪ್‌ರಾಜ್ ವಿಧಿವಶ

• **ಬೆಂಗಳೂರು:** ಕನ್ನಡ ನಟ ಹಾಗೂ ನಿರ್ಮಾಪಕ ದಿಲೀಪ್‌ರಾಜ್ ತೀವ್ರ ಹೃದಯಘಾತದಿಂದ ನಿಧನರಾಗಿದ್ದಾರೆ. ಆರೋಗ್ಯವಾಗಿಯೇ ಇದ್ದ 47



ವರ್ಷದ ನಟ ಹೃದಯಾಘಾತವಾಗಿ ಕೊನೆಯುಸಿರೆಳೆದಿದ್ದಾರೆ. ಕನ್ನಡದ ಹಲವು ಸಿನಿಮಾ, ಸೀರಿಯಲ್‌ಗಳಲ್ಲಿ ನಾಯಕ, ಖಳನಾಯಕ, ಪೋಷಕ ಪಾತ್ರಗಳಲ್ಲಿ ನಟಿಸಿದ್ದರು. ಇಷ್ಟೇ ಅಲ್ಲದೇ ಕಿರುತೆರೆಯ ಹಿಟ್ಲರ್ ಕಲ್ಯಾಣ, ಕೃಷ್ಣ ರುಕ್ಕು ಸೇರಿದಂತೆ ಅನೇಕ ಧಾರಾವಾಹಿಗಳನ್ನು ನಿರ್ಮಾಣ ಸಹ ಮಾಡಿದ್ದರು. ಬುಧವಾರ ಬೆಳಗಿನ ಜಾವ ದಿಲೀಪ್ ರಾಜ್‌ಗೆ ತೀವ್ರ ಹೃದಯಾಘಾತವಾಗಿದ್ದು, ತಕ್ಷಣ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಲಾಯಿತಾದರೂ, ಅವರನ್ನು ಬದುಕಿಸಿಕೊಳ್ಳಲು ಸಾಧ್ಯವಾಗಿಲ್ಲ. ➡ಪುಟ ೪

ನೀಟ್ ತನಿಖೆ ಚುರುಕು; ಐವರ ಬಂಧಿಸಿದ ಸಿಬಿಐ

• **ಜೈಪುರ:** ನೀಟ್–ಯುಜಿ 2026 ವೈದ್ಯಕೀಯ ಪ್ರವೇಶ ಪರೀಕ್ಷೆಯ ಅಕ್ರಮ ಮತ್ತು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ(ಸಿಬಿಐ) ಬುಧವಾರ ದೇಶದ ವಿವಿಧೆಡೆ ಐವರು ಆರೋಪಿಗಳನ್ನು ಬಂಧಿಸಿದೆ. ಬಂಧಿತರಲ್ಲಿ ಮೂವರನ್ನು ಜೈಪುರದಲ್ಲಿ ಹಾಗೂ ತಲಾ ಒಬ್ಬರನ್ನು ಗುರುಗ್ರಾಮ ಮತ್ತು ನಾಸಿಕ್‌ನಲ್ಲಿ ಬಂಧಿಸಲಾಗಿದೆ. ಕೇಂದ್ರ ಶಿಕ್ಷಣ ಸಚಿವಾಲಯದ ದೂರಿನ ಮೇರೆಗೆ 2026ರ ಮೇ 12ರಂದು ಸಿಬಿಐ ಎಫ್‌ಐಆರ್ ದಾಖಲಿಸಿತ್ತು. ➡ಪುಟ ೪

ಶೀಘ್ರವೇ ಪ್ರಥಮ ಸೆಮಿ-ಸ್ಪೀಡ್ ರೈಲು

• ಪುಟ ೦೭

ಮುಲಾಯಂ ಪುತ್ರ ಪ್ರತೀಕ್ ಯಾದವ್ ನಿಧನ

• ಪುಟ ೦೭



ರಷ್ಯಾ ಸೈತಾನನ ಆರ್ಭಟ!

• ಪುಟ ೦೭

ಸುದ್ದಿ ಸಮಗ್ರ

ಶುದ್ಧ ಪ್ರೀತಿಗೆ ವಿರೋಧವಿಲ್ಲ, ಲವ್ ಜಿಹಾದ್ ಆತಂಕಕಾರಿ

• **ಹೊಸದಿಲ್ಲಿ:** ಬೇರೆ ಧರ್ಮಗಳ ವ್ಯಕ್ತಿಗಳ ನಡುವೆ ನಡೆಯುವ 'ನಿಷ್ಕಳಂಕ ಪ್ರೀತಿ'ಗೆ ಯಾವುದೇ ವಿರೋಧವಿಲ್ಲ. ಆದರೆ ಹಿಂದು ಯುವತಿಯರನ್ನು ಗುರಿಯಾಗಿಸಿಕೊಂಡು ನಡೆಯುವ ಸಂಘಟಿತ ಸಂಚು ಅಥವಾ ಮೋಸದ ಪ್ರಯತ್ನಗಳು ಆತಂಕಕಾರಿ ಎಂದು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಪ್ರತಿಪಾದಿಸಿದ್ದಾರೆ.

ಪಿಟಿಐ ವಿಡಿಯೋಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಸಂಘದ ಅನೇಕ ಸ್ವಯಂಸೇವಕರು ಜಾತಿ, ಧರ್ಮ ಹಾಗೂ ರಾಷ್ಟ್ರೀಯತೆಯ ಗಡಿಗಳನ್ನು ಮೀರಿ ವಿವಾಹವಾಗಿರುವ ಉದಾಹರಣೆಗಳಿದ್ದು, ಸಂಘವು ಅದನ್ನು ಸಹಜ ಪ್ರಕ್ರಿಯೆಯಾಗಿ ಸ್ವೀಕರಿಸಿದೆ ಎಂದು ಹೇಳಿದರು.

ಅದು ಶುದ್ಧ ಪ್ರೀತಿಯಾಗಿದ್ದರೆ ಯಾವುದೇ ಪ್ರಶ್ನೆಯೇ ಇಲ್ಲ. ಆದರೆ ಅದು ಜಿಹಾದ್ ಆಗಿದ್ದರೆ ಪ್ರಶ್ನೆ ಉದ್ಭವಿಸುತ್ತದೆ ಎಂದು ಅವರು ತಿಳಿಸಿದರು. ಲವ್ ಜಿಹಾದ್ ಎಂಬ ಪದದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹೊಸಬಾಳೆ, ಈ ಪದವನ್ನು ಮೊದಲು ಕೆಲ ಹೈಕೋರ್ಟ್ ನ್ಯಾಯಮೂರ್ತಿಗಳು ಬಳಸಿದ್ದರು; ಅದು ಸಂಘದ ಕೊಡುಗೆ ಅಲ್ಲ ಎಂದು ಸ್ಪಷ್ಟಪಡಿಸಿದರು. ➡ಪುಟ ೪



ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಮತ

ಅಂತರಧರ್ಮ ವಿವಾಹಗಳನ್ನು ಸಂಘ ಸ್ವೀಕರಿಸಿದೆ

ಹಿಂದು ಯುವತಿಯರನ್ನು ಗುರಿಯಾಗಿಸುವ ಪ್ರಯತ್ನ ಸಮಸ್ಯೆ

ರಾಷ್ಟ್ರದ ಭದ್ರತೆಗಾಗಿ ಹೆಚ್ಚು ಮಕ್ಕಳು ಮುಖ್ಯ

ಇದೇ ವೇಳೆ, ಹಿಂದುಗಳು ಹೆಚ್ಚು ಮಕ್ಕಳು ಹೊಂದಬೇಕು ಎಂಬ ಮೋಹನ್ ಭಾಗವತ್ ಅವರ ಹೇಳಿಕೆ ಕುರಿತು ಮಾತನಾಡಿದ ಹೊಸಬಾಳೆ ಅವರು, ಇದು ಕುಟುಂಬ ಮತ್ತು ರಾಷ್ಟ್ರದ ಭದ್ರತೆಗಾಗಿ ಅಗತ್ಯ ಎಂದು ಪ್ರತಿಪಾದಿಸಿದರು. ಜಪಾನ್ ಉದಾಹರಣೆ ನೀಡಿದ ಅವರು, ಆರ್ಥಿಕತೆ ಬೆಳೆಯುತ್ತಿದ್ದರೂ ದೇಶ ವೃದ್ಧರ ರಾಷ್ಟ್ರವಾದರೆ ಭವಿಷ್ಯದಲ್ಲಿ ಸಮಸ್ಯೆ ಎದುರಾಗುತ್ತದೆ. ಭಾರತವು ಯುವ ರಾಷ್ಟ್ರವಾಗಿಯೇ ಉಳಿಯಬೇಕು ಎಂದರು.

20 ಸಾವಿರ ಪ್ರಕರಣ

ಆದರೆ, ಲವ್ ಜಿಹಾದ್ ಎಂದು ಕರೆಯಲಾಗುತ್ತಿರುವ ಪ್ರಕರಣಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಹೇಳಿದ ಅವರು, ಪ್ರತಿ ತಿಂಗಳು ನ್ಯಾಯಾಲಯಗಳಲ್ಲಿ ಇಂತಹ ಪ್ರಕರಣಗಳು ಕೇಳಿಬರುತ್ತಿವೆ. ಅನೇಕ ಯುವತಿಯರು ಮರಳಿ ಬಂದು ತಮ್ಮ ದುಃಖದ ಕಥೆಗಳನ್ನು ಹಂಚಿಕೊಂಡಿದ್ದಾರೆ. ಸುಮಾರು 20 ಸಾವಿರ ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದರು. ಎಲ್ಲಾ ಪ್ರಕರಣಗಳೂ ಹಿಂದು ಯುವತಿಯರು ಮತ್ತು ಮುಸ್ಲಿಂ ಯುವಕರದ್ದೇ ಆಗಿದ್ದರೆ ಅದು ಕೇವಲ ಪ್ರೀತಿ ಅಲ್ಲ, ಅದರ ಹಿಂದೆ ಸಂಚಿನ ಪ್ರಶ್ನೆ ಉದ್ಭವಿಸುತ್ತದೆ ಎಂದರು.

ಪ್ರಧಾನಿ ಘೋಷಣೆ ಬಳಿಕ ಸಿಎಂಗಳು, ಸಚಿವರ ಕ್ರಮ


ಮಿತವ್ಯಯ ಅಲೆ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧಸಂಕಷ್ಟ, ಜಾಗತಿಕ ಮಟ್ಟದಲ್ಲಿ ಏರಿಕೆಯಾಗುತ್ತಿರುವ ಕಚ್ಚಾತೈಲ ದರ ಹಾಗೂ ವಿದೇಶಿ ವಿನಿಮಯದ ಮೇಲಿನ ಒತ್ತಡದ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ದೇಶಕ್ಕೆ ಮಿತವ್ಯಯದ ಸಂದೇಶ ನೀಡಿದ್ದಾರೆ. ಆದರೆ ಕೇವಲ ಕರೆ ನೀಡಿ ನಿಲ್ಲದೇ, ಮೊದಲ ಹೆಜ್ಜೆಯನ್ನು ಸ್ವತಃ ತಾವೇ ಇಟ್ಟಿರುವುದು ಇದೀಗ ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ. ತಮ್ಮ ಭದ್ರತಾ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಪ್ರಧಾನಿ ಗಮನಾರ್ಹವಾಗಿ ಕಡಿತಗೊಳಿಸಿದ್ದು, ಸಾಧ್ಯವಾದಷ್ಟು ವಿದ್ಯುತ್ ವಾಹನ ಬಳಕೆಗೆ ಸೂಚನೆ ನೀಡಿದ್ದಾರೆ.

ಸಾಮಾನ್ಯವಾಗಿ ಪ್ರಧಾನಿಯವರ ಸಂಚಾರದ ವೇಳೆ ಭದ್ರತಾ ಕಾರಣಗಳಿಂದ ಅನೇಕ ವಾಹನಗಳು ಸೇರಿಕೊಂಡಿರುತ್ತವೆ. ಆದರೆ, ಈ ಬಾರಿ ದೇಶ ಮೊದಲು, ಮಿತವ್ಯಯ ಅಗತ್ಯ ಎಂಬ ಸಂದೇಶವೇ ಪ್ರಧಾನಿಯವರ ಕ್ರಮದಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದೆ.

ಹೈದರಾಬಾದ್‌ನಲ್ಲಿ ನಡೆದ ಸಭೆಯಲ್ಲಿ ಪ್ರಧಾನಿ, ಪೆಟ್ರೋಲ್, ಡೀಸೆಲ್ ಬಳಕೆ ಕಡಿಮೆ ಮಾಡಬೇಕು. ಕಾರ್ ಪೂಲಿಂಗ್‌ಗೆ ಉತ್ತೇಜನ ನೀಡಬೇಕು. ಸಾರ್ವಜನಿಕ ಸಾರಿಗೆ ಹೆಚ್ಚಾಗಿ ಬಳಸಬೇಕು. ಸಾಧ್ಯವಾದಲ್ಲಿ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆ ಜಾರಿಗೊಳಿಸಬೇಕು. ಅನಗತ್ಯ ವಿದೇಶ ಪ್ರವಾಸಗಳನ್ನು ತಗ್ಗಿಸಬೇಕು ಎಂದು ಕರೆ ನೀಡಿದ್ದರು.

ಸಿಎಂಗಳಿಂದ ಮಿತ ವ್ಯಯ: ಪ್ರಧಾನಿಯವರ ಈ ಕರೆಗೆ ಬಿಜೆಪಿ ಆಡಳಿತದ ಹಲವು ರಾಜ್ಯಗಳು ತಕ್ಷಣ ಸ್ಪಂದಿಸಿವೆ. ➡ಪುಟ ೪



ಅನಗತ್ಯ ವೆಚ್ಚ ಕಡಿತ ಮಾಡಿ; ಸಚಿವರಿಗೆ ಪ್ರಧಾನಿ ಸೂಚನೆ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾ ಉದ್ವಿಗ್ನತೆ ಹಿನ್ನೆಲೆಯಲ್ಲಿ ಇಂಧನ ಬಳಕೆ ಕಡಿಮೆ ಮಾಡಿ, ಚಿನ್ನ ಖರೀದಿ ತಗ್ಗಿಸಿ ಎಂದು ಸಾರ್ವಜನಿಕರಿಗೆ ಕರೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಇದೀಗ ತಮ್ಮ ಸಚಿವ ಸಂಪುಟ ಸಹೋದ್ಯೋಗಿಗಳಿಗೂ ಅನಗತ್ಯ ವೆಚ್ಚ ಕಡಿತಗೊಳಿಸುವಂತೆ ಸೂಚನೆ ನೀಡಿದ್ದಾರೆ.ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಸಂಪನ್ಮೂಲ ಗಳ ಬಳಕೆಯಲ್ಲಿ ಮಿತವ್ಯಯ ಪಾಲಿಸಿ, ವಿಶೇಷ ವಾಗಿ ಪೆಟ್ರೋಲ್ ವೆಚ್ಚವನ್ನು ಕಡಿಮೆ ಮಾಡಲು ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ. ➡ಪುಟ ೪

ಮುಖ್ಯಾಂಶಗಳು

- ತಮ್ಮದೇ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿತಗೊಳಿಸಿದ ಪ್ರಧಾನಿ
- ವಿದ್ಯುತ್ ಚಾಲಿತ ವಾಹನ ಬಳಕೆಗೆ ಒತ್ತು
- ಪೆಟ್ರೋಲ್, ಡೀಸೆಲ್ ಬಳಕೆ ತಗ್ಗಿಸಲು ರಾಷ್ಟ್ರವ್ಯಾಪಿ ಕರೆ
- ಉತ್ತರ ಪ್ರದೇಶದಲ್ಲಿ ಶೇ.50 ವಾಹನ ಕಡಿತ
- ಮಧ್ಯಪ್ರದೇಶದಲ್ಲಿ ವಾಹನ ರ್‍ಯಾಲಿಗಳಿಗೆ ಬ್ರೇಕ್
- ಮಹಾರಾಷ್ಟ್ರದಲ್ಲಿ ಅಧಿಕೃತ ವಿಮಾನ ಪ್ರಯಾಣಕ್ಕೆ ನಿಯಂತ್ರಣ
- ಗುಜರಾತ್ ರಾಜ್ಯಪಾಲರಿಂದ ರೈಲು-ಬಸ್ ಪ್ರಯಾಣ ನಿರ್ಧಾರ
- ಕಾರ್‌ಪೂಲಿಂಗ್, ಸಾರ್ವಜನಿಕ ಸಾರಿಗೆ ಬಳಕೆಗೆ ಉತ್ತೇಜನ

6ನೇ ಗ್ಯಾರಂಟಿ ಯೋಜನೆ ಘೋಷಿಸಿದ ಡಿಸಿಎಂ

ಭೂ ಗ್ಯಾರಂಟಿಯಲ್ಲಿ ವಿನಾಯ್ತಿ, ರಿಯಾಯ್ತಿ



- ಪ್ರತಿಯೊಂದು ಆಸ್ತಿ ದಾಖಲೆಗಳಲ್ಲಿ ಜಿಪಿಎಸ್, ಮಾಲೀಕರ ಫೋಟೋ ಇರಲಿದೆ
- ಲಂಚ ಇಲ್ಲದೆ ಮನೆ ಬಾಗಿಲಿಗೆ ದಾಖಲೆ ತಲುಪಿಸುವ ವ್ಯವಸ್ಥೆ
- ಗ್ಯಾರಂಟಿ ಅನುಷ್ಠಾನ ಸಮಿತಿ, ಅಧಿಕಾರಿಗಳಿಗೆ ಜವಾಬ್ದಾರಿ
- ಆನ್‌ಲೈನ್‌ನಲ್ಲೂ ಡೌನ್‌ಲೋಡ್‌ಗೆ ಅವಕಾಶ

• **ಬೆಂಗಳೂರು:** ನಗರದ ನಾಗರಿಕರಿಗೆ ರಾಜ್ಯ ಸರ್ಕಾರದ 6ನೇ ಗ್ಯಾರಂಟಿಯಾದ ಭೂ ಗ್ಯಾರಂಟಿಯಲ್ಲಿ ಮಹತ್ವದ ಯೋಜನೆಗಳನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಘೋಷಣೆ ಮಾಡಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಕೇಂದ್ರ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಬುಧವಾರ ಮಾಧ್ಯಮಗೋಷ್ಠಿ ನಡೆಸಿದ ಅವರು, ಭೂ ಗ್ಯಾರಂಟಿ ಮೂಲಕ ಬೆಂಗಳೂರು ನಾಗರಿಕರಿಗೆ ಇ ಖಾತಾ ವಿತರಣೆ, ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಶೇ.5ರಿಂದ ಶೇ.15ಕ್ಕೆ ಹೆಚ್ಚಳ, 100 ದಿನದಲ್ಲಿ ಎ ಯಿಂದ ಬಿ ಖಾತಾ ಶುಲ್ಕ ಪಾವತಿಸಿದರೆ ಶೇ.60ರಷ್ಟು ರಿಯಾಯಿತಿ ಘೋಷಿಸಿದರು.

ಬೃಹತ್ ಅಭಿಯಾನ: ನನ್ನ ಖಾತೆ, ನನ್ನ ಹಕ್ಕು ಅಭಿಯಾನ ಮೂರು ತಿಂಗಳ ಕಾಲ ಪ್ರತಿ ಶನಿವಾರ ನಡೆಯಲಿದೆ. ಪ್ರತಿ ಶನಿವಾರ ಬೆಂಗಳೂರಿನ ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ತಲಾ 10ರಂತೆ 50 ಸ್ಥಳಗಳಲ್ಲಿ ಈ ಅಭಿಯಾನ(ಇ-ಖಾತಾ ಸಿಟಿಜನ್ ಓಪನ್ ಹೌಸ್) ನಡೆಯಲಿದೆ. ➡ಪುಟ ೪

"ಬೆಂಗಳೂರು ಅಭಿವೃದ್ಧಿಗೆ ಸುಮಾರು 150 ಯೋಜನೆಗಳಿದ್ದು ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಈ ಬಗ್ಗೆ ಪ್ರತ್ಯೇಕ ಮಾಹಿತಿ ನೀಡಲಾಗುವುದು. ನಾವು ಅಕ್ರಮ ಸಕ್ರಮ ಮಾಡುತ್ತಿಲ್ಲ. ಗರಿಷ್ಠ ಶೇ.50 ರಷ್ಟು ಸೆಟ್ ಬ್ಯಾಕ್ ರಿಯಾಯಿತಿ ನೀಡಲು ಕಾಯ್ದೆಯಲ್ಲಿ ಅವಕಾಶವಿದೆ.

■ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಬಿಜೆಪಿ ಕಾಲದ ಆದೇಶ ಹಿಂಪಡೆದ ಸರ್ಕಾರ

ಹಿಜಾಬ್ ನಿಷೇಧ ವಾಪಸ್

• **ಬೆಂಗಳೂರು:** ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧಿಸಿ ಈ ಹಿಂದಿನ ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಶಾಲಾ ಶಿಕ್ಷಣ ಇಲಾಖೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಿಂಪಡೆದಿದ್ದು, ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿಗದಿತ



ಸಮವಸ್ತ್ರದ ಜತೆಗೆ ಹಿಜಾಬ್ ಸೇರಿದಂತೆ ಸೀಮಿತವಾದ ಸಾಂಪ್ರದಾಯಿಕ ಆಧಾರಿತ ಸಂಕೇತಗಳನ್ನು ಧರಿಸಲು ಅವಕಾಶ ನೀಡಿ ಹೊಸ ಆದೇಶ ಹೊರಡಿಸಿದೆ.

ಶಿಕ್ಷಣ ಇಲಾಖೆಯು ತನ್ನ ಆದೇಶದಲ್ಲಿ, 2022ರ ಫೆ.5ರಂದು ಹೊರಡಿಸಲಾಗಿದ್ದ ಸಮವಸ್ತ್ರ ಸಂಹಿತೆಯ ಆದೇಶವನ್ನು ರಾಜ್ಯ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ. ಶಿಕ್ಷಣವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಮತ್ತು ಸಾಂವಿಧಾನಿಕ ಮೌಲ್ಯಗಳ ವೃದ್ಧಿಗೆ ಪೂರಕವಾಗಿರಬೇಕು. ➡ಪುಟ ೪

ಭವಿಷ್ಯದ ದೃಷ್ಟಿಯಿಂದ ಈ ಆದೇಶ

ಸಿಇಟಿ ಪರೀಕ್ಷೆಯ ವೇಳೆ ವಿದ್ಯಾರ್ಥಿಯ ಜನಿವಾರ ತೆಗೆಸಿದ್ದ ವಿಚಾರದಲ್ಲಿ ಸಾಕಷ್ಟು ನೋವು ಉಂಟಾಯಿತು. ವಿದ್ಯಾರ್ಥಿಗಳ ಮನೋಸ್ಥೈರ್ಯ ಕುಗ್ಗಿಸುವ ಕೆಲಸ ಆಗಬಾರದು. ಈ ತೀರ್ಮಾನ ಮಕ್ಕಳಲ್ಲಿ ಸಾಮರಸ್ಯ ಮೂಡಿಸಲು ಸಹಕಾರಿಯಾಗಲಿದೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ ಈ ಆದೇಶ ಹೊರಡಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಭತ್ತ, ತೊಗರಿ ಸೇರಿ 14 ಬೆಳೆಗಳ ಎಂಎಸ್‌ಪಿ ಹೆಚ್ಚಳ

• **ಹೊಸದಿಲ್ಲಿ:** ಖಾರಿಫ್ ಹಂಗಾಮು ಆರಂಭಕ್ಕೂ ಮುನ್ನ ರೈತರಿಗಾಗಿ ಕೇಂದ್ರ ಸರ್ಕಾರ ಮಹತ್ವದ ಘೋಷಣೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ ಭತ್ತ, ಹತ್ತಿ, ತೊಗರಿ, ಜೋಳ, ಎಣ್ಣೆಕಾಳುಗಳು ಸೇರಿದಂತೆ 14 ಪ್ರಮುಖ ಬೆಳೆಗಳ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಹೆಚ್ಚಳಕ್ಕೆ ಅನುಮೋದನೆ ನೀಡಲಾಗಿದೆ.



ಆಮದು ಅವಲಂಬನೆಯನ್ನು ಕಡಿಮೆ ಮಾಡಿ, ರೈತರು ಬೆಳೆ ವೈವಿಧ್ಯೀಕರಣದತ್ತ ಮುಖ ಮಾಡುವಂತೆ ಉತ್ತೇಜಿಸುವ ಉದ್ದೇಶದಿಂದ ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮತ್ತು ಹತ್ತಿಗೆ ಹೆಚ್ಚಿನ ಪ್ರಮಾಣದಲ್ಲಿ ಎಂಎಸ್‌ಪಿ ಏರಿಕೆ ಮಾಡಲಾಗಿದೆ.

2026–27ರ ಖಾರಿಫ್ ಹಂಗಾಮಿಗೆ ಸಾಮಾನ್ಯ ಭತ್ತದ ಎಂಎಸ್‌ಪಿಯನ್ನು ಕ್ವಿಂಟಾಲ್‌ಗೆ 72 ರೂ. ಹೆಚ್ಚಿಸಿ 2,441 ರೂ.ಗೆ ನಿಗದಿ ಮಾಡಲಾಗಿದೆ. ಎ-ಗ್ರೇಡ್ ಭತ್ತಕ್ಕೆ 2,461 ರೂ. ಬೆಂಬಲ ಬೆಲೆ ಘೋಷಿಸಲಾಗಿದೆ. ➡ಪುಟ ೪

ಚಿನ್ನ, ಬೆಳ್ಳಿಯ ಆಮದು ಸುಂಕ ಶೇ.15ಕ್ಕೆ ಹೆಚ್ಚಳ

• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿ ಹಾಗೂ ಹೆಚ್ಚುತ್ತಿರುವ ತೈಲ ಮತ್ತು ರಸಗೊಬ್ಬರ ಆಮದು ವೆಚ್ಚದ ನಡುವೆ ವಿದೇಶಿ ವಿನಿಮಯ ಸಂಗ್ರಹವನ್ನು ಉಳಿಸಿಕೊಳ್ಳಲು ಕೇಂದ್ರ ಸರ್ಕಾರ ಚಿನ್ನ ಮತ್ತು ಬೆಳ್ಳಿಯ ಆಮದು ಸುಂಕವನ್ನು



ಶೇ.6 ರಿಂದ ಶೇ.15ಕ್ಕೆ ಏರಿಸಿದೆ. ಮೇ 13ರ ಮಧ್ಯರಾತ್ರಿಯಿಂದ ಪರಿಷ್ಕೃತ ದರ ಜಾರಿಗೆ ಬಂದಿದೆ. ಪ್ಲಾಟಿನಂ ಮೇಲಿನ ಸುಂಕವನ್ನೂ ಶೇ.6.4 ರಿಂದ ಶೇ.15.4ಕ್ಕೆ ಹೆಚ್ಚಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅನಗತ್ಯ ಚಿನ್ನ ಖರೀದಿ ಹಾಗೂ ವಿದೇಶಿ ಪ್ರವಾಸಗಳನ್ನು ತಪ್ಪಿಸಲು ಕರೆ ನೀಡಿದ ಕೆಲವೇ ದಿನಗಳಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಭಾರತವು ವಿಶ್ವದ ಎರಡನೇ ಅತಿ ದೊಡ್ಡ ಚಿನ್ನ ಬಳಕೆದಾರ ರಾಷ್ಟ್ರವಾಗಿದ್ದು, ಹೆಚ್ಚುತ್ತಿರುವ ಆಮದು ದೇಶದ ವಿದೇಶಿ ವಿನಿಮಯದ ಮೇಲೆ ಒತ್ತಡ ತಂದಿದೆ. ಬುಧವಾರ ರೂಪಾಯಿ ಮೌಲ್ಯವು ಡಾಲರ್ ಎದುರು 95.71ಕ್ಕೆ ಕುಸಿದೆ.

ಚಿನ್ನ, ಬೆಳ್ಳಿ ದುಬಾರಿ: ಹೊಸ ಸುಂಕದಿಂದ ಚಿನ್ನ ಮತ್ತು ಬೆಳ್ಳಿಯ ದೇಶೀಯ ಬೆಲೆಗಳಲ್ಲಿ ಭಾರೀ ಏರಿಕೆ ಕಂಡುಬಂದಿದೆ. ದಿಲ್ಲಿ ಮಾರುಕಟ್ಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆ 8,550 ರೂ. ಏರಿಕೆಗೊಂಡು 1.65 ಲಕ್ಷ ರೂ. ದಾಟಿದರೆ, ಬೆಳ್ಳಿ ಬೆಲೆ ಕೆಜಿಗೆ 20,500 ರೂ. ಹೆಚ್ಚಾಗಿ 2.97 ಲಕ್ಷ ರೂ. ತಲುಪಿದೆ. ಉದ್ಯಮ ವಲಯದ ಪ್ರಕಾರ, ಆಮದು ಸುಂಕ ಏರಿಕೆಯಿಂದ 10 ಗ್ರಾಂ ಚಿನ್ನದ ಬೆಲೆ ಸುಮಾರು 27,000 ರೂ.ವರೆಗೆ ಹೆಚ್ಚಾಗಬಹುದು. ➡ಪುಟ ೪

ವಿಶ್ವಾಸಮತ ಪರೀಕ್ಷೆ ಗೆದ್ದ ಸಿಎಂ ವಿಜಯ್

• **ಹೊಸದಿಲ್ಲಿ:** ಹರಸಾಹಸಪಟ್ಟು 144 ಶಾಸಕರ ಬೆಂಬಲ ಗಳಿಸುವಲ್ಲಿ ಯಶಸ್ವಿಯಾಗಿರುವ ತಮಿಳುನಾಡು ಮುಖ್ಯಮಂತ್ರಿ, ಟಿವಿಕೆ ನಾಯಕ ಜೋಸೆಫ್ ವಿಜಯ್, ಬುಧವಾರ ವಿಧಾನಸಭೆಯಲ್ಲಿ ವಿಶ್ವಾಸ ಮತ ಪರೀಕ್ಷೆಯಲ್ಲಿ ತೇರ್ಗಡೆಯಾದರು.



144 ಶಾಸಕರ ಬೆಂಬಲ ಗಳಿಸುವಲ್ಲಿ ಟಿವಿಕೆ ಯಶಸ್ವಿ

ಚುನಾವಣೆಯಲ್ಲಿ 108 ಸ್ಥಾನ ಗೆದ್ದಿರುವ ಟಿವಿಕೆ ನಾಯಕ ವಿಜಯ್ ಸರ್ಕಾರ ರಚನೆಗೆ ಎರಡು ಬಾರಿ ವಿಫಲ ಯತ್ನ ನಡೆಸಿದ್ದರು. ಕನಿಷ್ಠ ಪಕ್ಷ 118 ಶಾಸಕರ ಬೆಂಬಲವನ್ನು ಮೇ 13ರಂದು ಸದನದಲ್ಲಿ ಸಾಬೀತುಪಡಿಸುವಂತೆ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ವಿಜಯ್‌ಗೆ ಸೂಚಿಸಿದ್ದರು. ಅಂತೆಯೇ ತನಗೆ 144 ಶಾಸಕರ ಬೆಂಬಲವಿರುವುದನ್ನು ಸಿಎಂ ವಿಜಯ್ ಬುಧವಾರ ಸದನದಲ್ಲಿ ಸಾಬೀತುಪಡಿಸಿದ್ದಾರೆ. ಈ ಮುನ್ನ ವಿಡುತಲೈ ಚಿರುತೈಗಳ್ ಕಚ್ಚಿ, ಇಂಡಿಯನ್ ಮುಸ್ಲಿಂಲೀಗ್, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ, ದ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾರ್ಕ್ಸಿಸ್ಟ್) ಪಕ್ಷಗಳ ತಲಾ ಇಬ್ಬರು ಶಾಸಕರ ಬೆಂಬಲ ಮತ್ತು ಕಾಂಗ್ರೆಸ್‌ನ ಐದು ಶಾಸಕ ಬೆಂಬಲದೊಂದಿಗೆ ತನ್ನ ಮಿತ್ರಕೂಟ ಬಲವನ್ನು ವಿಜಯ್ 121ಕ್ಕೇರಿಸಿದ್ದರು. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,96,000(2,80,200)	ಅಪರಂಜಿ ಚಿನ್ನ 16,530(15,200)	ಆಭರಣ ಚಿನ್ನ: 15,390(14,155)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)	ಷೇರು ಸೂಚ್ಯಂಕ	ಬಿಎಸ್‌ಇ 74,608(49↑)	ಎನ್‌ಎಸ್‌ಇ 23,412(33↑)	$1=₹95.66

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 14 ಮೇ 2026
ಮಂಗಳೂರು

ಜೈಲಿನಲ್ಲೂ 'ವ್ಯವಸ್ಥಾಪಕ'ರಾಗಿದ್ದರು ಮೈ. ಚ. ಜಯದೇವ



• ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

ಜಯದೇವರ ಹತ್ತಿರದ ಪರಿಚಿತರ ಸಾಲಿನಲ್ಲಿ ನಾನೂ ಒಬ್ಬ. 1971ರಲ್ಲಿ ನಾನು ನನ್ನೂರಿನಿಂದ ಬೆಂಗಳೂರಿಗೆ ಬಂದೆ. 1993ರವರೆಗೆ ಬೆಂಗಳೂರೇ ನನ್ನ ಕೇಂದ್ರ. ಆ 22–23 ವರ್ಷಗಳಲ್ಲಿ ನೂರಾರು ಸಲ ಜಯದೇವ ಅವರನ್ನು ಭೇಟಿಮಾಡಿ ಅವರಿಂದ ಅನೇಕ ಸಂಗತಿಗಳನ್ನು ಕಲಿಯುವ ಅವಕಾಶ ನನಗೆ ಸಿಕ್ಕಿತ್ತು. ಬೆಂಗಳೂರಿಗೆ ಬಂದ ಬಳಿಕ ರಾಷ್ಟ್ರೋತ್ಥಾನ ಪರಿಷತ್ತಿನ ಹಳೆಯ ಕಟ್ಟಡದ ಮೊದಲನೆಯ ಮಹಡಿಯ ಮೂಲೆಯ ಕೋಣೆಯಲ್ಲಿ ಅವರನ್ನು ಭೇಟಿಮಾಡಿದ್ದೆ. ಜಯದೇವ ಅವರು ಸಂಘದ ಕಾರ್ಯಕರ್ತರಾಗಿ ಬೆಂಗಳೂರಿನ ಉದ್ದಗಲವನ್ನೂ ಅಳೆದವರು. ನೂರಾರು, ಸಾವಿರಾರು ಮನೆಗಳ 1993ರಲ್ಲಿ ಸ್ವಯಂಸೇವಕರನ್ನು, ಅವರ ಪರಿವಾರದವರನ್ನು ಅತ್ಯಂತ ಹತ್ತಿರದಿಂದ ಆತ್ಮೀಯತೆಯಿಂದ ಮಾತನಾಡಿಸಿ, ಅವರಿಗೆ ವ್ಯಕ್ತಿಜೀವನದಲ್ಲಿ, ಕುಟುಂಬ ಜೀವನದಲ್ಲಿ, ಅವರ ವೃತ್ತಿಜೀವನದಲ್ಲಿ ಹೇಗಿರಬೇಕು ಹೇಗಿರಬಾರದು ಅನ್ನುವ ಪಾಠಗಳನ್ನು ಕಲಿಸಿದವರು. ದಾರಿಯನ್ನು ತೋರಿಸಿದವರು.

ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಮೈ. ಚ. ಜಯದೇವ ಅವರನ್ನು ಜೈಲಿನಲ್ಲಿ ಹತ್ತಿರದಿಂದ ನೋಡುವಂತಹ ಅವಕಾಶ ನನಗಿತ್ತು. 1975ರ ಡಿಸೆಂಬರ್ 18ನೇ ತಾರೀಖು ಬೆಂಗಳೂರಿನ ಕಾರಾಗೃಹದಲ್ಲಿ ಮೀಸಾ ಬಂದಿಯಾಗಿ ಪ್ರವೇಶ ಪಡೆದೆ. 1976ರ ಜೂನ್ ತನಕ ಸುಮಾರು ಆರೂವರೆ ತಿಂಗಳು ಬೆಂಗಳೂರು ಜೈಲಿನಲ್ಲಿ ನಾವು ಜೊತೆಗಿದ್ದವು. ಅನಂತರ ಅವರನ್ನು ಗುಲ್ಬರ್ಗಾಕ್ಕೆ, ನನ್ನನ್ನು ಬಳ್ಳಾರಿಗೆ ವರ್ಗಾಯಿಸಿದರು.

ಜೈಲಿನಲ್ಲಿ ಇರಬೇಕಾದರೆ ಅಲ್ಲಿರುವಂಥವರ ಮಾನಸಿಕ ಸ್ಥಿತಿಯನ್ನು ಸಮವಾಗಿ ಕಾಪಾಡಬೇಕಾಗುತ್ತದೆ. ಜೈಲಿನಲ್ಲಿ ಇರುವಂತಹ ವ್ಯವಸ್ಥೆಯಲ್ಲಿ ರಾಜಕೀಯ ಖೈದಿಗಳಿಗೆ ಏನು ಸಿಗಬೇಕೋ ಅದು ಸರಿಯಾಗಿ ಸಿಗಬೇಕು. ಈ ಎಲ್ಲ ಸಂಗತಿಗಳ ಬಗ್ಗೆ ಜೈಲಿನಲ್ಲೂ ಒಬ್ಬ ಜನರಲ್ ಮ್ಯಾನೇಜರ್ ಆಗಿದ್ದವರು ಜಯದೇವ ಅವರು. ಅವರಿಗೆ ಮುಖ್ಯ ಸಹಕಾರಿಯಂತಿದ್ದ ನನಗೆ ಅವರ ಜೊತೆ ಒಡನಾಡುವುದೇ ಮುಖ್ಯ ಕೆಲಸ. ಆಗ ಜೈಲಿನ ಸೂಪರಿಂಟೆಂಡೆಂಟ್ ಚಬಲಾನಿ ಎಂಬ ಸಿಂಧಿ ವ್ಯಕ್ತಿ. ಅವರು ಖೈದಿಗಳ ಅಹವಾಲುಗಳನ್ನು ಕೇಳಲು ರಾಜಕೀಯ ಬಂದಿಗಳನ್ನು ಪ್ರತಿನಿಧಿಸುತ್ತಿದ್ದ ಜಯದೇವ ಅವರಿಗೆ ನಿತ್ಯ ಸುಮಾರು ಹನ್ನೊಂದೂವರೆ ಹೊತ್ತಿಗೆ ಭೇಟಿಮಾಡಲು ಅನುಮತಿಯನ್ನು ಕೊಟ್ಟಿದ್ದರು. ಜಯದೇವ ಅವರಿಗೆ ಸಹಾಯಕನಾಗಿ ನಾನು ಹೋಗುತ್ತಿದ್ದೆ.



ಅವರು ಚಬಲಾನಿಯವರ ಬಳಿಗೆ ಹೋಗುವ ಮೊದಲು ಕೆಲವು ಅಂಶಗಳನ್ನು ಬರೆದುಕೊಳ್ಳುತ್ತಿದ್ದರು. ಯಾರಿಗೆ ಏನು ಆವಶ್ಯಕತೆ ಇದೆ, ಏನೇನು ಸಮಸ್ಯೆಗಳಿವೆ ಇತ್ಯಾದಿ. ಅದನ್ನೆಲ್ಲ ಚಬಲಾನಿಯವರ ಜೊತೆ ಮಾತನಾಡುವ ಕೆಲಸ ಜಯದೇವರದ್ದು. ಸೂಪರಿಂಟೆಂಡೆಂಟ್ ಇದಕ್ಕೆ ಬೇಕಾದಂತಹ ಉತ್ತರ ಕೊಡುತ್ತಿದ್ದರು; ಇಂಥದ್ದನ್ನು ಮಾಡುತ್ತೇನೆ, ಇಂಥದ್ದನ್ನು ಮಾಡಬಹುದು ಇತ್ಯಾದಿ. ಜಯದೇವ ಅವರು ಅಧಿಕಾರಿಗಳಿಗೆಂದೂ 'ನಿಮಗೆ ಇದನ್ನು ಕೇಳೋಕೆ ಅಧಿಕಾರವಿಲ್ಲ' ಎಂದು ಹೇಳುವುದಕ್ಕೆ ಅವಕಾಶವನ್ನೇ ಕೊಡಲಿಲ್ಲ; ಅವರಿಗೆ ತನ್ನ ಸೀಮೆ ಎಲ್ಲಿದೆ ಎಂಬುದು ಗೊತ್ತಿತ್ತು. ತನ್ನ ಅಧಿಕಾರ ಎಲ್ಲಿಯ ತನಕ ಇದೆ ಎಂಬುದೂ ಗೊತ್ತಿತ್ತು. ಅದೆಲ್ಲ ಗೊತ್ತಿದ್ದೇ ಅವರು ಜೈಲಿನ ಅಧಿಕಾರಿಗಳ ಜೊತೆ ವ್ಯವಹರಿಸುತ್ತಿದ್ದರು.

ಜೈಲಿನ ಒಳಗಡೆ ಒಂದು ದಿವಸ ನಾವು ನಡೆದು ಹೋಗುತ್ತಿರಬೇಕಾದರೆ 'ಈ ಜೈಲಿನ ಒಳಗಡೆ ಎಷ್ಟು ಬ್ಯಾರಕ್‌ಗಳಿವೆ?' ಎಂದು ಕೇಳಿದರು. ನಾನು 'ಎಣಿಸಿಲ್ಲ' ಅಂದೆ. 'ಎಣಿಸು ನೋಡೋಣ' ಅಂದರು. ನಾನು ಎಣಿಸಿದೆ. 'ಇಷ್ಟಿವೆ' ಎಂದೆ. 'ಬರೆದುಕೊ' ಎಂದರು. 'ಎಷ್ಟು ಎಲೆಕ್ಟ್ರಿಕ್ ಕಂಬ ಇರಬಹುದು?' ಕೇಳಿದರು. 'ಈ ಕಂಬಗಳು ಹೀಗೇ ಎಲ್ಲಿಯ ತನಕ ಹೋಗುತ್ತದೆ?', 'ಜೈಲಿನ ಈ ತುದಿಯಿಂದ ಕೊನೆಯ ತನಕ ಹೋಗುತ್ತಿದೆ. 'ಜೈಲಿನ ಈ ತುದಿಯಿಂದ ಕೊನೆಯ ತನಕ ನಡೆದುಹೋದರೆ ಎಷ್ಟು ಹೆಜ್ಜೆ ಆಗುತ್ತದೆ?' ಎಂದು ಕೇಳಿದರು. 'ಸುಮಾರು ಸಾವಿರದ ಐವತ್ತು ಹೆಜ್ಜೆ'ನಾನೆಂದೆ. 'ಸರಿ. ಬರೆದುಕೋ' ಎಂದರು. ಬರೆದುಕೊಂಡೆ... ಈ ರೀತಿ ಸುಮಾರು 50–60 ಪ್ರಶ್ನೆಗಳು. ಕೊನೆಗೆ ಎಲ್ಲಿಯವರೆಗೆ ಅಂದರೆ, 'ಮೀಸಾ ಬಂದಿಗಳಲ್ಲಿ ಎಷ್ಟು ಜನ ಗಡ್ಡ ಬಿಟ್ಟಿದ್ದಾರೆ, ಎಷ್ಟು ಜನ ಕನ್ನಡಕ ಹಾಕುತ್ತಾರೆ' ಎನ್ನುವವರೆಗೂ ಬರೆದಿದ್ದೆ. ಯಾಕೆ ಹೀಗೆ ಬರೆಸುತ್ತಿದ್ದಾರೆ ಎಂದು ನನಗನ್ನಿಸುತ್ತಿತ್ತು. ಆದರೆ ನನಗೇನು, ಜೈಲಿನಲ್ಲಿ



ಕಾಲ ಕಳೆಯುವುದಕ್ಕೆ ಏನೋ ಒಂದು ಬೇಕಲ್ಲ ಎಂದುಕೊಂಡು ಅವನ್ನೆಲ್ಲ ಶ್ರದ್ಧೆಯಿಂದಲೇ ಮಾಡಿದ್ದೆ. ಇದಕ್ಕೆ ಜಯದೇವ ಅವರು ಹೇಳಿದ್ದು ಇಷ್ಟು: 'ನಾವು ಎಲ್ಲಿದ್ದೇವೋ ಆ ಸ್ಥಳದ ಪೂರ್ತಿ ಮಾಹಿತಿ ನಮಗೆ ಗೊತ್ತಿರಬೇಕು. ಜೈಲಿನ ಒಂದೊಂದು ಭಾಗದ ವಿವರವನ್ನೂ ಈ ರೀತಿ ನನ್ನ ಬಳಿ ಅವರು ಬರೆಸಿದ್ದರು. ಹೀಗೆ ಸೂಕ್ಷ್ಮ ಅವಲೋಕನವನ್ನು ವಿಸ್ತೃತವಾದಂತಹ ಆಲೋಚನೆಯನ್ನು ಹೇಗೆ ಮಾಡಬೇಕು, ನಮ್ಮ ಸುತ್ತಮುತ್ತಲ ಪರಿಸರವನ್ನು ಗಮನವಿಟ್ಟು ನೋಡುವುದು ಹೇಗೆ ಎಂಬುದನ್ನು ಸಹಜವಾಗಿ, ಆದರೆ ಯೋಜಿತವಾಗಿ ಅವರು ಮಾಡುತ್ತಾ ಹೋದರು. ನನಗೂ ಕಲಿಸಿದರು.

ಜಯದೇವರ ಮೇಲೆ ಅವರ ಬಂಧನದ ಎರಡು ದಿನಗಳ ನಂತರ, ಅಂದರೆ 1975ರ ನವೆಂಬರ್ 16ರಂದು ಕೇಸ್ ದಾಖಲಿಸಲಾಯಿತು. 1976ರ ಜೂನ್‌ನಲ್ಲಿ ಜಯದೇವರನ್ನು ಮತ್ತು ಅಜಿತ್‌ಕುಮಾರರನ್ನು ಕಲಬುರ್ಗಿ ಜೈಲಿಗೆ ಕಳಿಸಲಾಯಿತು. ಜಯದೇವರ ಜೈಲು ಪ್ರವೇಶದ ಮುನ್ನ ಒಂದೊಂದೂ ಒಂದೊಂದು ರೀತಿಯ ವ್ಯವಸ್ಥೆ ಇತ್ತು. ಮೀಸಾ ರಾಜಕೀಯ ಬಂದಿಗಳಿಗೆ ಕೊಡುವ ಸೌಲಭ್ಯಗಳಲ್ಲೂ ವ್ಯತ್ಯಾಸವಿತ್ತು. ಅದಕ್ಕೆ ಕಾರಣ ಬೆಳಗಾವಿ ಜೈಲು ಮುಂಬಯಿ ಕರ್ನಾಟಕದಲ್ಲಿದ್ದರೆ, ಬಳ್ಳಾರಿ ಜೈಲು ಮದ್ರಾಸ್ ಪ್ರೆಸಿಡೆನ್ಸಿ ಆಡಳಿತಕ್ಕೆ ಸೇರಿತ್ತು. ಬೆಂಗಳೂರಿನ ವ್ಯವಸ್ಥೆ ಹಳೆಯ ಮೈಸೂರಿನದು. ಹೀಗಾಗಿ ಜೈಲ್ ಮ್ಯಾನ್ಯುಯಲ್‌ಗಳಲ್ಲಿ ತಾರತಮ್ಯವಿತ್ತು. ಆಯಾ ಜೈಲುಗಳಲ್ಲಿ ಆಯಾ ಜೈಲು ಮ್ಯಾನ್ಯುಯಲ್‌ಗಳ ಪ್ರಕಾರ ನಡೆದುಕೊಳ್ಳಲಾಗುತ್ತಿತ್ತು. ಅವುಗಳನ್ನು ಬದಲಾಯಿಸುವ ಪರಿಸ್ಥಿತಿ ಇರಲಿಲ್ಲ. ನಾವು ಇದ್ದಿದ್ದರಲ್ಲಿ ಸಮಾನ ರೀತಿನೀತಿಗಳನ್ನು ತಂದು ಸುಧಾರಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದೆವು. ಆಗ ಕಾನೂನಿನಲ್ಲಿ ಬದಲಾವಣೆ ತರಲು ಸಾಧ್ಯವಾಗದಿದ್ದರೂ ಆಮೇಲೆ ಆಯಿತು. ಈ ಬಗೆಯ ಸುಧಾರಣೆಗಳನ್ನು ತರುವ ಪ್ರಯತ್ನದಲ್ಲಿ ಜಯದೇವರ ಕೊಡುಗೆ ಬಹು ಮಹತ್ತ್ವದ್ದು.

ನಾನು ಬಂಧನಕ್ಕೊಳಗಾಗಿದ್ದು 1975ರ ಡಿಸೆಂಬರ್ 18ರಂದು. ನನಗಿಂತ ಒಂದು ತಿಂಗಳು ಮುಂಚೆಯೇ ಜಯದೇವರು ಜೈಲಿನಲ್ಲಿದ್ದರು. ಡಿಸೆಂಬರ್ 20ಕ್ಕೆ ನನಗೆ ಮೀಸಾ ಆಯಿತು. ನಾನು ಒಳಗೆ ಹೋದಾಗಿನಿಂದ ಜಯದೇವರಿಗೆ ಅಸಿಸ್ಟೆಂಟ್ ಆಗಿದ್ದೆನ್ನೆನ್ನಲಡ್ಡಿಯಿಲ್ಲ. ಜಯದೇವ 'ಬಿ' ಕ್ಲಾಸ್ ಖೈದಿ. ನಾನು ಮೀಸಾ. ಪ್ರತಿ ದಿನ ನಾವಿಬ್ಬರೂ ಜೈಲ್ ಸೂಪರಿಂಟೆಂಡೆಂಟ್ ಐಪಿಎಸ್ ಚಬಲಾನಿಯವರನ್ನು ಬೆಳಗ್ಗೆ 11 ಗಂಟೆಗೆ ಭೇಟಿ ಮಾಡುತ್ತಿದ್ದೆವು. ಅದು ಅವರೊಂದಿಗೆ ಆವಶ್ಯಕತೆಗಳನ್ನು ಕುರಿತು ತಿಳಿಸುವ ಸಂದರ್ಭ. ಜೈಲಿನಲ್ಲಿ ಉದ್ಭವಿಸುತ್ತಿದ್ದ ದಿನನಿತ್ಯದ ಸಮಸ್ಯೆಗಳನ್ನು ವಿವರಿಸುವುದೂ ಅವಕ್ಕೆ ಅವರಿಂದ ಪರಿಹಾರ ಪಡೆಯುವುದೂ ಅದರ ಉದ್ದೇಶ. ಜೈಲಿನಲ್ಲಿ ಬಂದಿಗಳ ಸಂಖ್ಯೆಯಲ್ಲಿ ಪ್ರತಿ ದಿನ ಬದಲಾವಣೆ ಇರುತ್ತಿತ್ತು. ಕೆಲವರಿಗೆ ವರ್ಗಾವಣೆ. ಕೆಲವರ ಆಗಮನ. ಹೀಗೆ ಸಂಖ್ಯೆಯಲ್ಲಿ ಏರುಪೇರು. ಅದಕ್ಕೆ ತಕ್ಕಂತೆ ರೇಶನ್ ವ್ಯವಸ್ಥೆಯನ್ನು ಅವರು ಮಾಡಬೇಕಿತ್ತು. ಮೂರು ನಾಲ್ಕು ದಿನಗಳಿಗೊಮ್ಮೆ ಆರ್ಡರ್‌ಗಳನ್ನು ಬದಲಾಯಿಸುತ್ತಿದ್ದರು.

ಅವರದು ಸದಾಕಾಲ ಅವಿಚಲ ಶಾಂತ ಮನಸ್ಸು. ಅದ್ಭುತ ಕೇಳುಗರು. ಗುಂಪುಗಳಲ್ಲಿ ಅವರಿರುವಾಗ ಉಳಿದವರು ಹರಟೆ ಹೊಡೆಯುತ್ತಿದ್ದರೂ ಜಯದೇವರು ಮುಗುಳುನಗುತ್ತ ಆಲಿಸುತ್ತಿದ್ದುದೇ ಹೆಚ್ಚು. ಅಂಥ ಸನ್ನಿವೇಶಗಳಲ್ಲಿ ಅವರ ಮಾತು ಬಹಳ ಕಡಮೆ. ಇನ್ನೊಬ್ಬರು ಮಾತನಾಡುವಾಗ ಅವರ ಮನಸ್ಸಿನಲ್ಲಿ ಏನು ವಿದ್ಯಮಾನ ನಡೆಯುತ್ತಿದೆ ಎಂದು ಜಯದೇವರು ಲೆಕ್ಕಹಾಕುತ್ತಿದ್ದರು. ಅವರ ಮಾತುಗಳ ಹಿನ್ನೆಲೆಯನ್ನು ಕುರಿತು ಯೋಚಿಸುತ್ತಿದ್ದರು. ಉದಾಹರಣೆಗೆ ಚಬಲಾನಿಯವರ ಭೇಟಿಯ ಹಿಂದಿನ ದಿನ ಮಧ್ಯಾಹ್ನವೆಲ್ಲ ಚರ್ಚಿಸಬೇಕಾದ ಅಂಶಗಳನ್ನು ಕುರಿತೇ ಅವರ ಮನಸ್ಸಿನಲ್ಲಿ ಚಿಂತನೆ ನಡೆಯುತ್ತಿತ್ತು. ಅವರ ಪಾಡಿಗೆ ಅವರು ಒಂದು ಕಡೆ ಕುಳಿತು ಆಲೋಚನೆಯಲ್ಲಿ ಮುಳುಗಿಹೋಗುತ್ತಿದ್ದರು. ತಮ್ಮ ಕೆಲಸವನ್ನು ಯಶಸ್ವಿಗೊಳಿಸಬೇಕಾದರೆ ಕೆಲವು ಅಂಶಗಳನ್ನು ಬಲವಾಗಿ, ಆದರೆ ಯಾವುದೇ ಉದ್ರೇಕ ಅಥವಾ ಆವೇಶಗಳ ಸ್ಪರ್ಶವಿಲ್ಲದಂತೆ, ಮಂಡಿಸುವುದು ಬಹು ಮುಖ್ಯ. ಆ ರೀತಿಯಲ್ಲಿ ಅವರು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಕೆಲವು ಬಾರಿ ವಿನಮ್ರವಾಗಿ ಮನವಿ ಮಾಡುವುದು, ಕೆಲವು ಬಾರಿ ಕಾನೂನಾತ್ಮಕವಾಗಿ ಮಂಡಿಸುವುದು, ಕೆಲವು ಬಾರಿ ಜೋಕ್ ಮಾಡುತ್ತಾ ವಿಷಯವನ್ನು ಸಂವಹಿಸುವುದು – ಅವರದೇ ಆದ ವಿಶಿಷ್ಟ ಶೈಲಿ. ಒಟ್ಟಾರೆ ಕಾರ್ಯ ಸಾಧಿಸಲು ಬೇಕಾದ ಎಲ್ಲ ಪ್ರಯೋಗಗಳನ್ನೂ ಮಾಡುತ್ತಿದ್ದವರು ಅವರು.

1983ರಲ್ಲಿ ಹೆಗಡೆ ಮುಖ್ಯಮಂತ್ರಿ ಆಗಿದ್ದಾಗ ಲಕ್ಷ್ಮೀಸಾಗರ್ ಅವರು ಕಾನೂನು ಸಚಿವರು. ಜಯದೇವರ ಅವರ ಭೇಟಿ ಆಗಾಗ ನಡೆಯುತ್ತಿತ್ತು. ಜಯದೇವರು ಜೈಲಿನಲ್ಲಿದ್ದಾಗ ಸುದೀರ್ಘ ಚಿಂತನ ನಡೆಸಿ ಜೈಲಿನಲ್ಲಿ ಎಲ್ಲ ಕಾಲಕ್ಕೂ ಆಗಬೇಕಾದ ಸುಧಾರಣೆಗಳನ್ನು ಕುರಿತು ಒಂದು ಪಟ್ಟಿಯನ್ನೇ ಸಿದ್ಧಪಡಿಸಿದ್ದರು. ಅವರ ಮನಸ್ಸಿನ ಅಂತರಾಳದಲ್ಲಿ ಏನೇನು ವಿದ್ಯಮಾನಗಳು ನಡೆಯುತ್ತಿದ್ದವೋ ದೇವರೇ ಬಲ್ಲ. ನನ್ನನ್ನು ಜೊತೆ ಮಾಡಿಕೊಂಡು ಸುತ್ತಾಡಲು ಹೋಗುವಂತೆ ಕರೆದುಕೊಂಡು ಹೋಗುತ್ತಿದ್ದರು. ಜೈಲಿನಲ್ಲಿನ ಮರಗಳು, ಅವುಗಳ ಸಂಖ್ಯೆ, ಗೋಡೆಗಳು, ಅವುಗಳ ಎತ್ತರ, ಜೈಲಿನ ಎಲ್ಲ ವ್ಯಕ್ತಿಗಳ ವಯಸ್ಸು, ಆರೋಗ್ಯಸ್ಥಿತಿ, ಆರ್ಥಿಕ ಹಿನ್ನೆಲೆ, ದೈಹಿಕ ಶಕ್ತಿ ಮುಂತಾದವನ್ನು ಯಾರ ಅರಿವಿಗೂ ಬಾರದಂತೆ ಸಂಗ್ರಹಿಸಿ ಅಂಕಿ ಅಂಶ ಸಿದ್ಧಪಡಿಸಿದೆವು. ಓಡಲು ಆಗದಂತಹ ಎಷ್ಟು ಜನ ವಯಸ್ಸಿನವರಿದ್ದಾರೆ. ಸಮಯ ಬಂದರೆ ಅವರನ್ನು ಹೊತ್ತೊಯ್ಯಬಲ್ಲಂಥ ಬಾಹುಬಲಿಗಳು ಎಷ್ಟು ಜನ, ವಿಭಿನ್ನ ವೈಚಾರಿಕತೆಯ ಜನರೆಷ್ಟು? ಅವರಲ್ಲಿ ಯಾರ್ಯಾರು ಎಷ್ಟೆಷ್ಟು? ಇದೆಲ್ಲ ನನ್ನ ಕೈಯಲ್ಲಿ ಬರೆಸಿದ್ದರು. ಹಾಗೆಯೇ ಜೈಲಿನ ಎಲ್ಲ ಮೀಸಾ ಬಂದಿಗಳಿಗೂ ಬಹು ದೊಡ್ಡ ಆಘಾತ ಉಂಟಾದ ಸಂದರ್ಭವೂ ಎದುರಾಯಿತು. ಅದು ಜೈಲಿನಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಿತು. ಮೀಸಾ ಬಂದಿಗಳ ಭವಿಷ್ಯವನ್ನು ಕರಾಳ ಕತ್ತಲೆ ಕವಿದಂತಾಯಿತು. ಆಗ ಜಯದೇವರು ನಿರ್ವಹಿಸಿದ ಪಾತ್ರ ನಮಗೆಲ್ಲ ಅವಿಸ್ಮರಣೀಯ.

ಅದು 1975ರ ಡಿಸೆಂಬರ್ ಮೂರನೆಯ ವಾರದ ಆರಂಭದ ದಿನಗಳು. ಸುಪ್ರೀಂಕೋರ್ಟ್‌ನಿಂದ ಹೊರಬಿದ್ದ ಒಂದು ಸುದ್ದಿ ಮೀಸಾ ಬಂದಿಗಳನ್ನೆಲ್ಲ ಥರಗುಟ್ಟಿಸಿಬಿಟ್ಟಿತು. ಆಗ ನಿರೇನ್ ಡೇ ಎಂಬುವರು ಅಟಾರ್ನಿ ಜನರಲ್ ಆಗಿದ್ದರು. ಪ್ರತಿ ಆರು ತಿಂಗಳುಗಳಿಗೊಮ್ಮೆ ಮೀಸಾವನ್ನು ಸರ್ಕಾರ ಮುಂದುವರಿಸುತ್ತಿತ್ತು. ಆಗ ಹಲವು ಕೋರ್ಟ್ಗಳಿಂದ ರಾಜಕೀಯ ನಾಯಕರನ್ನು ಬಿಡುಗಡೆ ಮಾಡಬೇಕೆಂದು ಹೇಬಿಯಸ್ ಕಾರ್ಪಸ್ ಅರ್ಜಿಗಳು ಹೋಗಿದ್ದವು. ಲಾಲ್ ಕೃಷ್ಣ ಅಡ್ವಾಣಿಯವರೂ ಅಂತಹ ಒಬ್ಬರು ಅರ್ಜಿದಾರರು.

ಮೀಸಾ ಎಂದರೆ ವಿಚಾರಣೆಯೂ ಇಲ್ಲ, ಅಹವಾಲೂ ಇಲ್ಲ. ಬಂದಿಯಾದವನು ದೇಶದ ಭದ್ರತೆಗೆ ಅಪಾಯಕಾರಿ ಮನುಷ್ಯನೆಂಬ ಭಯಂಕರ ಆರೋಪದ ಮೇಲೆಯೇ ಬಂಧನಕ್ಕೆ ಒಳಗಾಗಿರುವುದು. ಸರ್ಕಾರದ ಪರ ಸುಪ್ರೀಂಕೋರ್ಟ್‌ನಲ್ಲಿ ವಾದಮಾಡುತ್ತಿದ್ದವರು ನಿರೇನ್ ಡೇ. ನ್ಯಾಯಮೂರ್ತಿಗಳು ಅಟಾರ್ನಿ ಜನರಲ್ ಅವರನ್ನು 'ಜೈಲಿನಲ್ಲಿ ಬಂಧಿತನಾಗಿ ಒಳಗಿದ್ದ ವ್ಯಕ್ತಿ ಆರು ತಿಂಗಳ ನಂತರವೂ ಅಪಾಯಕಾರಿ ಎಂದು ಹೇಗೆ ರುಜುವಾತು ಮಾಡುತ್ತೀರಿ?' ಎಂದು ಕೇಳಿದಾಗ ಇಡೀ ಕೋರ್ಟ್ ತತ್ತರಿಸುವಂತೆ ಡೇ ಅವರು 'ಮೀಸಾ ಬಂದಿಗಳನ್ನು ದೇಶದ ಭದ್ರತೆಗಾಗಿ ಗುಂಡಿಟ್ಟುಕೊಂದರೂ ಅದನ್ನು ಪ್ರಶ್ನಿಸುವ ಹಕ್ಕು ನ್ಯಾಯಾಲಯಕ್ಕೆ ಇಲ್ಲ' ಎಂದು ಹೇಳಿಕೆಯ ಬಾಂಬ್ ಹಾಕಿದರೂ ಎಲ್ಲ ವಕೀಲರು ನ್ಯಾಯಮೂರ್ತಿಗಳು ಗಪ್‌ಚುಪ್ ಆಗಿ ಕುಳಿತಿದ್ದರು.


ಈ ಪರಿಸ್ಥಿತಿಯನ್ನು ಮತ್ತೆ ನಿಭಾಯಿಸಲು ಮುಂದಾದವರು ಜಯದೇವರೇ! ಎಲ್ಲರಿಗೂ ಸಮಾಧಾನ ಹೇಳುವ ಕೆಲಸ ಅವರದು. ಮೆರವಣಿಗೆಯ ಮೂಲಕ ಪ್ರತಿಭಟನೆ ತೋರಿಸಿದ ತರುಣರನ್ನು ಕರೆದು ಜಯದೇವ ಮಾತನಾಡಿಸಿದರು. 'ನೀವು ಹೀಗೆಲ್ಲ ಮಾಡುವುದು ಸರಿಯಲ್ಲ. ನೀವೇನೋ ಮನೆ ಮಠ ತೊರೆದು ಬಂದಿರುವ ಧೈರ್ಯಶಾಲಿಗಳು. ಯಾವುದಕ್ಕೂ ಹೆದರದಿರುವವರು. ಆದರೆ ಗೃಹಸ್ಥರೂ ವ್ಯಾಪಾರಸ್ಥರೂ ಮುಂತಾದ ಹಿರಿಯರನ್ನು ನೋಡಿ. ಇತರರ ಸ್ಥಿತಿಯನ್ನು ನೋಡಿ. ನಿಮ್ಮ ಈ ಬಗೆಯ ವರ್ತನೆಯಿಂದ ಅವರ ಭವಿಷ್ಯದ ಚಿಂತನೆ ಮತ್ತಷ್ಟು ನಿಗೂಢವಾಗುತ್ತದಲ್ಲವೇ?' ಎಂದು ವಿಧವಿಧವಾಗಿ ಓಲೈಸಿ ಶಾಂತಗೊಳಿಸಿದ್ದು ಅವರ ಕರ್ತೃತ್ವಶಕ್ತಿಯ ಇನ್ನೊಂದು ಉತ್ತಮ ಉದಾಹರಣೆ.

–ಪೂರ್ಣ ಲೇಖನ ಪುಸ್ತಕದಲ್ಲಿದೆ



ಮೈ.ಚ. ಜಯದೇವ ಕುರಿತ ಪುಸ್ತಕ ಲೋಕಾರ್ಪಣೆ ಇಂದು

ಪುಸ್ತಕ: ಅವಿಶ್ರಾಂತ ಧ್ಯೇಯ ಜೀವಿ–ಮೈ.ಚ.ಜಯದೇವ ಬದುಕು–ನೆನಪು
ಲೇಖಕರು: ಡಾ.ಬಾಬು ಕೃಷ್ಣಮೂರ್ತಿ ಮತ್ತು ಬೇಳೂರು ಸುದರ್ಶನ
ಸ್ಥಳ: ಟೌನ್ ಹಾಲ್, ಬೆಂಗಳೂರು
ದಿನಾಂಕ: ಮೇ 14
ಸಮಯ: ಸಂಜೆ 6:30ಕ್ಕೆ
ಲೋಕಾರ್ಪಣೆ: ಸುತ್ತೂರು ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಪುಸ್ತಕದ ಕುರಿತು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮಾತನಾಡಲಿದ್ದಾರೆ.
ಅತಿಥಿಗಳು: ಲೇಖಕರಾದ ಡಾ.ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ.ಕುಮಾರ್



ಒಂದು ಜೀವನ, ಒಂದು ಧ್ಯೇಯಾನುಸಂಧಾನ ಎಂಬ ಸೂತ್ರವನ್ನು ಜೀವನದುದ್ದಕ್ಕೂ ಪಾಲಿಸುತ್ತ ಅವಿಸ್ಮರಣೀಯರಾದ ಮೈ.ಚ. ಜಯದೇವ ಅವರು ರಾಷ್ಟ್ರೋತ್ಥಾನ ಪರಿಷತ್ತನ್ನು ಆರಂಭದ ದಿನಗಳಿಂದಲೂ ಅಂದರೆ 1965ರಿಂದಲೂ ಕಟ್ಟಿ ಬೆಳೆಸಿದವರು.ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಪಳಗಿದ ಜಯದೇವ ಅವರು, ತಮ್ಮ ದೂರದರ್ಶಿ ಚಿಂತನೆ, ರಾಷ್ಟ್ರನಿಷ್ಠ ಕರ್ತವ್ಯಪ್ರಜ್ಞೆ, ಕಠಿಣ ಪರಿಶ್ರಮದ ಮೂಲಕ ಸ್ವಸ್ಥ ಸಮಾಜನಿರ್ಮಾಣದ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ತು ಸ್ಥಿರ ಹೆಜ್ಜೆಗಳನ್ನಿಟ್ಟು ಮುನ್ನಡೆಯಲು ಕಾರಣೀಭೂತರಾದರು. ವ್ಯವಸ್ಥಾಕುಶಲರೂ, ಅಸಾಮಾನ್ಯ ದಕ್ಷರೂ, ಸಂಘಟನೆಯ ರೂವಾರಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು ಮಹಾನಗರ ಕಾರ್ಯವಾಹ, ಪ್ರಾಂತ ಕಾರ್ಯವಾಹ, ಕ್ಷೇತ್ರೀಯ ಕಾರ್ಯವಾಹ, ಕ್ಷೇತ್ರೀಯ ಪ್ರಚಾರಕ, ಅಖಿಲ ಭಾರತೀಯ ಕಾರ್ಯಕಾರಿಣಿಯ ಆಮಂತ್ರಿತ ಸದಸ್ಯರು ಹೀಗೆ 5 ದಶಕಗಳಿಗೂ ಹೆಚ್ಚು ಕಾಲ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಸಂಘದ ಬೇರುಗಳನ್ನು ಗಟ್ಟಿಗೊಳಿಸಿದವರು.

ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅಮೃತ ಶಿಶುನಿವಾಸ, ಅಬಲಾಶ್ರಮ ಸೇರಿದಂತೆ ಬೆಂಗಳೂರಿನ ಅನೇಕ ಸಾಮಾಜಿಕ ಸಂಸ್ಥೆಗಳಿಗೆ ಮಾರ್ಗದರ್ಶಕರಾಗಿ ನಿಂತವರು. ಈ ಎಲ್ಲ ಸಂಸ್ಥೆಗಳು ಮೂಲೋದ್ದೇಶದಂತೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಪ್ರೇರಣೆ ನೀಡುವುದರ ಜೊತೆಜೊತೆಗೆ ಅಗತ್ಯ ವ್ಯವಸ್ಥೆ, ಸಮರ್ಥ ಮತ್ತು ಸರಿಯಾದ ವ್ಯಕ್ತಿ ಜೋಡಣೆಯಂತಹ ಕೆಲಸಗಳನ್ನೂ ತೆರೆಯ ಹಿಂದೆ ನಿಂತು ಮಾಡಿದವರು ಮೈ.ಚ. ಜಯದೇವ ಅವರು.

ಸಂಸ್ಥೆಗಳನ್ನು ಭೌತಿಕ, ಬೌದ್ಧಿಕ, ಸಾಮಾಜಿಕವಾಗಿ ಕಟ್ಟುವಲ್ಲಿ ಮೈ ಚ ಜಯದೇವ ಹೊಂದಿದ್ದ ಕುಶಲತೆ ಅಸಾಮಾನ್ಯ

ಸಮಾಜಸೇವೆಯನ್ನೇ ಉಸಿರಾಗಿಸಿಕೊಂಡಿದ್ದ ಹಿರಿಯ ಚೇತನ



• ಬೇಳೂರು ಸುದರ್ಶನ, ಕೃತಿಯ ಲೇಖಕರಲ್ಲೊಬ್ಬರು

ರಾಷ್ಟ್ರೋತ್ಥಾನ ಪರಿಷತ್ತಿನ ಸ್ಥಾಪನಾ ತಂಡದ ಸದಸ್ಯರೂ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರೂ ಆಗಿ ಸಮಾಜಸೇವೆಯ ಅಭಂಗಪೂಜೆಯನ್ನೇ ಉಸಿರಾಗಿಸಿಕೊಂಡು ಜೀವಿಸಿದ್ದ ಹಿರಿಯ ಚೇತನ ಶ್ರೀ ಮೈ ಚ ಜಯದೇವರ ಜೀವನ ಚರಿತ್ರೆ ಮತ್ತು ಅವರ ಒಡನಾಡಿಗಳ ನೆನಪುಗಳ ಸಂಕಲನ ಅವಿಶ್ರಾಂತ ಧ್ಯೇಯಜೀವಿ ಮೈ ಚ ಜಯದೇವ: ಬದುಕು–ನೆನಪು ಪುಸ್ತಕವನ್ನು ಹಿರಿಯ ಲೇಖಕ ಶ್ರೀ ಬಾಬು ಕೃಷ್ಣಮೂರ್ತಿ ಅವರೊಂದಿಗೆ ಬರೆದು ಪೂರೈಸಿದ ಕೃತಾರ್ಥತೆ ನನ್ನದು.



ಜೀವನೋಪಾಯಕ್ಕಾಗಿ ಯಾವ ಕೆಲಸವನ್ನಾದರೂ ಮಾಡಲು ಮುಂದಾಗಿದ್ದ(ಅಂದ್ರೆ ದಿಕ್ಕು ದೆಸೆ ಇಲ್ಲದವನಾಗಿದ್ದ) ನನ್ನನ್ನು ಜಯದೇವರು ರಾಷ್ಟ್ರೋತ್ಥಾನಕ್ಕೆ(1987) ಸೇರಿಸಿಕೊಂಡು ಕಾರ್ಯಸಂಸ್ಕೃತಿಯ ಪಾಠಗಳನ್ನು ಕಲಿಸಿದರು. 2008–15ರ ಕಾಲಘಟ್ಟದಲ್ಲಿ ಅವರು ನನ್ನ ಹಿರಿಯ ಸ್ನೇಹಿತರೂ ಮಾರ್ಗದರ್ಶಕರೂ ಆಗಿದ್ದರು. ಆ ಕಾಲದಲ್ಲಿ ಅವರೊಂದಿಗೆ ಹಲವು ಸಾಮಾಜಿಕ ಸಂಗತಿಗಳ ಬಗ್ಗೆ ಚರ್ಚಿಸಿದ್ದೆ; ಹಲವೊಮ್ಮೆ ವಾದಿಸಿದ್ದೆ!



ಅವರು ಮಾತ್ರ ಕಂಡೂಕಾಣಿಸದ ಕಿರುನಗುವಿನೊಂದಿಗೆ ಎಲ್ಲವನ್ನೂ ಸಹನೆಯಿಂದ ಕೇಳಿ ಅಗತ್ಯವಿದ್ದ ಸಂಗತಿಗಳ ಬಗ್ಗೆ ಸಕ್ರಿಯವಾಗಿಯೇ ಸ್ಪಂದಿಸುತ್ತಿದ್ದರು. ಈ ಕುರಿತ ಕೆಲವು ಘಟನೆಗಳು ಪುಸ್ತಕದಲ್ಲಿವೆ.

ಜಯದೇವರ ಜೀವನ ಚರಿತ್ರೆಯನ್ನು ಬರೆಯುವ ಅವಕಾಶವೂ ಸಿಕ್ಕಿದ್ದು ನನಗೆ ಒಲಿದ ಅದೃಷ್ಟವೇ. ನಾನು ಹುಟ್ಟಿದ್ದೂ 1965ರಲ್ಲಿ, ರಾಷ್ಟ್ರೋತ್ಥಾನದ ಸ್ಥಾಪನಾ ವರ್ಷವೂ 1965! ನನಗೆ ರಾಷ್ಟ್ರೋತ್ಥಾನವು ಇನ್ನಷ್ಟು ಆಪ್ತವಾಗಲು ಇದೂ ಒಂದು ಕಾರಣ. ವ್ಯಕ್ತಿಯಾಗಿ ನಾನು ಸಾಧಿಸಿದ್ದು ಒಂದು ಬಿಂದು ನೀರಿನಷ್ಟು; ಸಂಸ್ಥೆಯನ್ನು ಕಟ್ಟಿದ ಜಯದೇವರ ಸಾಧನೆ ಹಿಂದು ಮಹಾ ಸಾಗರದಷ್ಟು! ಹೋಲಿಕೆ ಇಷ್ಟಕ್ಕೇ ನಿಲ್ಲುತ್ತದೆ. ಜಯದೇವರ ಬದುಕು ಅಸಾಮಾನ್ಯ. ವೃತ್ತಿಯೆಂದರೇನೆಂದೇ ಗೊತ್ತಿಲ್ಲದ ದಿನಗಳಲ್ಲಿ ಕೆಲಸ ಕೊಟ್ಟ ಜಯದೇವರು, ನನ್ನ ನಿವೃತ್ತಿಯ ಹಂತದಲ್ಲಿಯೂ ತಾವೇ ನನ್ನ ಬರೆವಣಿಗೆಯ ವಿಷಯವಾಗಿದ್ದು ಮಾತ್ರ ಬಯಸದೆಯೇ ಬಂದ ಭಾಗ್ಯ! ಬದುಕು ಕೊಟ್ಟವರ ಬದುಕಿನ ಬಗ್ಗೆ ಬರೆಯುವುದು ದೊಡ್ಡ ಸವಾಲಿನ ಕೆಲಸ.



ಬಾಬು ಕೃಷ್ಣಮೂರ್ತಿಯವರು ನಮ್ಮ ನಡುವಿನ ಹೆಸರಾಂತ ಲೇಖಕರು. ಅವರ ಅಜೇಯ ಓದಿಯೇ ನನ್ನ ಬಾಲ್ಯ ಸ್ಮರಣೀಯವಾಗಿದ್ದು. ಅವರು ಬರೆದ ಮೊದಲ ಅಧ್ಯಾಯಗಳ ಮುಂದೆ ನನ್ನ ಬರವಣಿಗೆ ಏನೇನೂ ಅಲ್ಲ. ಅವರು ಸಂಸ್ಕರಿಸಿ ಬರೆದಿದ್ದಾರೆ. ನಾನು ಸಂಗ್ರಹಿಸಿ ದಾಖಲಿಸಿದ್ದೇನೆ ಅಷ್ಟೇ. ನನ್ನನ್ನು ಬಾಲ್ಯದಿಂದಲೂ ನೋಡಿ ತಿದ್ದುತ್ತಿರುವ ಶ್ರೀ ಸು ರಾಮಣ್ಣನವರು ಈ ಪುಸ್ತಕವನ್ನೂ



ತಿದ್ದಿದ್ದು ನನ್ನ ಇನ್ನೊಂದು ಅಪೂರ್ವ ಅನುಭವ.

ಜಯದೇವರ ಆರಂಭದ ವರ್ಷಗಳ ಅಧ್ಯಾಯಗಳನ್ನು ಓದುತ್ತಿದ್ದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಬೆಂಗಳೂರು – ಮೈಸೂರು ಭಾಗದ ಬೆಳವಣಿಗೆ ಹೇಗಾಯ್ತು ಎಂಬ ಚಿಕ್ಕ ಚಿತ್ರಣವೂ ಸಿಗುತ್ತದೆ. ಏಕೆಂದರೆ ಯಾದವರಾವ್ ಜೋಶಿಯವರ ಪ್ರಭಾವದಿಂದ ಸಂಘಕಾರ್ಯ ಬೆಳೆಯುತ್ತಿದ್ದ ಸಂದರ್ಭದಲ್ಲೇ ಜಯದೇವರೂ ಸೇರಿದಂತೆ ಹಲವರು ಸಂಘಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟರು. ಅದರಲ್ಲೂ ಮೈಸೂರಿನಿಂದ ಬೆಂಗಳೂರಿಗೆ ಬಂದ ಇಂತಹ ಪ್ರಚಾರಕರ ಸಂಖ್ಯೆ ಗಮನಾರ್ಹ.

ಆದರೆ ಜಯದೇವರು ತುರ್ತು ಪರಿಸ್ಥಿತಿಯ ನಂತರ ರಾಷ್ಟ್ರೋತ್ಥಾನದ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಮೇಲೆ ಅವರ ಅಳಿದುಳಿದ ವೈಯಕ್ತಿಕ ಬದುಕೂ ಇಲ್ಲವಾಯಿತು. ಭಾರತದಲ್ಲೇ ರಾಷ್ಟ್ರೋತ್ಥಾನ ಪರಿಷತ್ ಒಂದು ಅದ್ವಿತೀಯ ಸಂಘಟನೆ, ಸಂಸ್ಥೆ, ಆಂದೋಲನ ಎಲ್ಲವೂ ಆಗಿ ಬೆಳೆದ ಪರಿ ಗಮನಾರ್ಹ. ಜಯದೇವರ ಬದುಕೆಂದರೆ ರಾಷ್ಟ್ರೋತ್ಥಾನದ ಪುಟಗಳೇ ಆಗಿವೆ. 1997ರವರೆಗೆ ಪ್ರಚಾರಕರಾಗದೆಯೇ ಪ್ರಚಾರಕ ಜೀವನ ನಡೆಸಿದ ಅವರು ನಂತರದ ಎರಡು ದಶಕಗಳ ಕಾಲ(ಎರಡನೆಯ ಸಲ) ಪ್ರಚಾರಕರಾಗಿದ್ದರು. ಈ ಐವತ್ತೂ ವರ್ಷಗಳಲ್ಲಿ ಅವರ ವೈಯಕ್ತಿಕ ಘಟನೆಗಳು ಸಿಗುವುದೇ ಕಷ್ಟವಾಯಿತು. 'ಇರುವುದನ್ನು ಜೋಡಿಸಿ ಬರಿ' ಎಂದು ಎಸ್ ಆರ್ ರಾಮಸ್ವಾಮಿಯವರು ನನಗೆ ಬರವಣಿಗೆಯ ಆರಂಭದಲ್ಲಿ ಹೇಳಿದ ಮಾತೇ ಕೊನೆಗೂ ನಿಜವಾಯಿತು! ಇದಕ್ಕೆ ಮುಖ್ಯವಾದ ಕಾರಣವೆಂದರೆ ಜಯದೇವರು ಸಂಘದ ಇತರೆ ಸಹಸ್ರಾರು ಪ್ರಚಾರಕರಂತೆಯೇ ಸೂಚಿಸಿದ ಕೆಲಸ ಮಾಡಿಕೊಂಡೇ ಇದ್ದರು.

ಹೀಗೆ ತಮ್ಮ ಅಧಿಕೃತ ಹೊಣೆಗಾರಿಕೆಗಳ ನಡುವೆಯೂ ಅವರು ಬೆಂಗಳೂರಿನ ಪರಂಪರೆಯ ಸಾಕ್ಷಿಗಳಂತಿದ್ದರೂ ದುರ್ಬಲವಾಗಿದ್ದ ಪ್ರತಿಷ್ಠಿತ ಸಂಘ ಸಂಸ್ಥೆಗಳನ್ನು ಅವುಗಳ ಕಾರ್ಯೋದ್ದೇಶಗಳಿಗೆ ಒಂದಿನಿತೂ ಭಂಗ ತಾರದಂತೆ ಪುನರುಜ್ಜೀವನಗೊಳಿಸಿದರು. ಈಗಿನ ಸಂದರ್ಭದಲ್ಲಿ ಹೇಳುವುದಾದರೆ ಅವರೊಬ್ಬ 'ಮಲ್ಟಿ ಟಾಸ್ಕರ್'. ಸಂಸ್ಥೆಗಳನ್ನು ಭೌತಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ ಕಟ್ಟುವಲ್ಲಿ ಅವರು ಹೊಂದಿದ್ದ ಕುಶಲತೆ ಅಸಾಮಾನ್ಯ. ಐದು ದಶಕಗಳ ಹಿಂದೆಯೇ ದ ಮಿಥಿಕ್ ಸೊಸೈಟಿಯ ಮರುಹುಟ್ಟಿಗೆ ಕಾರಣರಾದ ಜಯದೇವರು ನಂತರದ ದಿನಗಳಲ್ಲಿ ಗೋಖಲೆ ಸಾರ್ವಜನಿಕ ವಿಚಾರಗಳ ಸಂಸ್ಥೆ, ಅಬಲಾಶ್ರಮ, ಅನಾಥ ಶಿಶುನಿವಾಸ– ಇವುಗಳ ಸಬಲೀಕರಣದಲ್ಲಿ ಯಶ ಸಾಧಿಸಿದ





ಝಲಕ್ ಕೂಡಾ ಇಲ್ಲಿ ದಾಖಲಾಗಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕ ಜೀವನ ಚರಿತ್ರೆಗಳೆಂದರೆ ಸಂಘಕಾರ್ಯದಲ್ಲಿ ತೊಡಗಿದ ಅಸಂಖ್ಯ ಪ್ರಚಾರಕ ಪ್ರಾತಿನಿಧಿಕ ಜೀವನ ಚರಿತ್ರೆಗಳೇ ಆಗುತ್ತವೆ. ಹಾಗೆ ನೋಡಿದರೆ ಸಂಘದ ಎಲ್ಲ ಪ್ರಮುಖ ಪ್ರಚಾರಕರೂ ಮಾದರಿ ವ್ಯಕ್ತಿತ್ವಗಳೇ! ಹೀಗಿದ್ದೂ ಮೈ ಚ ಜಯದೇವರಂತಹ ವ್ಯಕ್ತಿತ್ವಗಳನ್ನು ಪ್ರಾತಿನಿಧಿಕವಾಗಿ ಪರಿಚಯಿಸುವುದು ಸಂಘವನ್ನು ಬಲ್ಲವರಿಗೂ, ತಿಳಿಯದವರಿಗೂ ಅಗತ್ಯವಾಗಿತ್ತು ಎಂದು ಪುಸ್ತಕ ಬರೆದಾದ ಮೇಲೆ ನನಗನ್ನಿಸಿದೆ. ಮುಖ್ಯವಾಗಿ ಸಂಘಕಾರ್ಯವನ್ನು ಗಂಭೀರವಾಗಿ ತೆಗೆದುಕೊಂಡವರು ಈ ಪುಸ್ತಕದಿಂದ ತಿಳಿಯಬಹುದಾದ ಹಲವಾರು ಅಂಶಗಳಿವೆ.

ಐದು ದಶಕಗಳನ್ನೂ ಮೀರಿ ಒಂದು ಸಂಸ್ಥೆಯ ಹುಟ್ಟು ಬೆಳವಣಿಗೆಯಲ್ಲಿ ಸಂಪೂರ್ಣ ಜೀವನವನ್ನೇ ತೊಡಗಿಸಿಕೊಂಡ ಜಯದೇವರು ಕರ್ನಾಟಕದ ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ರಂಗದ ರಾಷ್ಟ್ರಮುಖೀ ಚಟುವಟಿಕೆಗಳನ್ನು ಬಿತ್ತಿ ಬೆಳೆಸಿದರು. ಸಿದ್ಧಾಂತಗಳ ಒಲವು–ನಿಲುವುಗಳನ್ನು ಮೀರಿ ನಾಡಿನ ಎಲ್ಲ ಲೇಖಕರನ್ನು, ಚಿಂತಕರನ್ನು ರಾಷ್ಟ್ರೋತ್ಥಾನದ ವೇದಿಕೆಗೆ ಕರೆತಂದರು. ಅವರ ಈ ಐತಿಹಾಸಿಕ ಕೊಡುಗೆಯ ಬಗ್ಗೆ ಇನ್ನೂ ಸಂಶೋಧನೆ ಮಾಡಬಹುದಾಗಿದೆ ಎನ್ನಿಸಿದೆ.

ರಾಷ್ಟ್ರೀಯ ವಿಚಾರಧಾರೆಯನ್ನು ಕರ್ನಾಟಕದ ಮಟ್ಟಿಗೆ ಪ್ರಭಾವಿಯಾಗಿ ಹಬ್ಬಿಸಿದ ಧ್ಯೇಯಜೀವಿಯೊಬ್ಬರ ಬದುಕಿನ ಪುಟಗಳನ್ನು ಬರೆದ ಸಂತಸ ನನ್ನದು.

ಕಿರುಸುದ್ದಿ

ಉದ್ಯೋಗಾವಕಾಶ: ಮೇ 16 ರಂದು ನೇರ ಸಂದರ್ಶನ

• **ಮಂಗಳೂರು:** ಎಕ್ಸ್‌ಪರ್ಟ್ ಕಾಲೇಜು ಹಾಗೂ ಮಾಂಡೊವಿ ಮೋಟಾರ್ಸ್ ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿಯಿರುವ ಫಿಸಿಕ್ಸ್ ಲ್ಯಾಬ್ ಇನ್‌ಸ್ಟ್ರಕ್ಟರ್ ಹಾಗೂ ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ನೇರ ಸಂದರ್ಶನವನ್ನು ಮೇ 16 ರಂದು ಪಡೀಲ್ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30 ರವರೆಗೆ ಆಯೋಜಿಸಲಾಗಿದೆ. ಸಂದರ್ಶನದಲ್ಲಿ ಫಿಸಿಕ್ಸ್ ಲ್ಯಾಬ್ ಇನ್‌ಸ್ಟ್ರಕ್ಟರ್ ಹುದ್ದೆಗೆ ಬಿ.ಎಸ್.ಸಿ (ಫಿಸಿಕ್ಸ್ ಒಂದು ವಿಷಯವಾಗಿ ಅಭ್ಯಸಿಸಿರುವ) ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಭಾಗವಹಿಸಬಹುದು. ಮತ್ತು ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಹುದ್ದೆಗೆ ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮಾ ಅಥವಾ ಯಾವುದೇ ಪದವಿ ವಿದ್ಯಾರ್ಹತೆಯೊಂದಿಗೆ ವಾಹನ ಚಾಲನಾ ಪರವಾನಿಗೆ ಹೊಂದಿರುವ ಪುರುಷ ಅಭ್ಯರ್ಥಿಗಳು ಸ್ವ-ವಿವರವುಳ್ಳ ಬಯೋಡೇಟಾದೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಶುಪಾಲನಾ ಚಟುವಟಿಕೆಗಳ ಬಗ್ಗೆ ತರಬೇತಿ

• **ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯ ಆಸಕ್ತ ರೈತರಿಗೆ ಪಶುಪಾಲನಾ ಇಲಾಖೆಯ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ ವತಿಯಿಂದ ಮೇ ತಿಂಗಳಲ್ಲಿ ಪಶುಪಾಲನಾ ಚಟುವಟಿಕೆಗಳ ಬಗ್ಗೆ ತರಬೇತಿಯನ್ನುಏರ್ಪಡಿಸಲಾಗಿದೆ.

ತರಬೇತಿ ವಿವರ: ರೈತರಿಗೆ ಕೋಳಿ ಸಾಕಾಣಿಕೆತರಬೇತಿ ಮೇ 21 ರಿಂದ 22 ರವರೆಗೆ ನಡೆಯಲಿದೆ. ರೈತರಿಗೆ ಆಧುನಿಕ ಹೈನುಗಾರಿಕೆ ತರಬೇತಿ ಮೇ 29 ರಿಂದ 30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಆಸಕ್ತ ರೈತ ಬಾಂಧವರು ತಮ್ಮತಾಲೂಕಿನ ಅಧಿಕಾರಿಗಳನ್ನು (ದೂರವಾಣಿ ಸಂಖ್ಯೆ: ಮಂಗಳೂರು ತಾಲೂಕು– 9243306956/ 0824–2950369, ಉಳ್ಳಾಲ ತಾಲೂಕು– 9880424077, ಮುಲ್ಕಿ ತಾಲೂಕು– 8971024282, ಮೂಡಬಿದ್ರೆತಾಲೂಕು– 7204271943, ಬಂಟ್ವಾಳ ತಾಲೂಕು– 9448253010, ಬೆಳ್ತಂಗಡಿ ತಾಲೂಕು– 9481963820, ಪುತ್ತೂರು ತಾಲೂಕು– 9483920208, ಕಡಬ ತಾಲೂಕು– 9483922594, ಸುಳ್ಯ ತಾಲೂಕು– 9844995078) ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಬೇಕು ಎಂದು ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲೆಕ್ಟ್ರಿಕ್ ಆಟೋರಿಕ್ಷಾ ಪರವಾನಿಗೆ: ಅರ್ಜಿ ಸಲ್ಲಿಸಲು ಸೂಚನೆ

• **ಮಂಗಳೂರು:** ಮಂಗಳೂರು ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ (ಕೆಎ-19) ನೋಂದಣಿಗೊಂಡಿರುವ ಎಲ್ಲಾ ಇಲೆಕ್ಟ್ರಿಕ್ ಆಟೋ ರಿಕ್ಷಾಗಳ ಸಂಖ್ಯೆ:3551 ಇದ್ದು, ಅದರಲ್ಲಿ 2162 ಇ-ಆಟೋ ರಿಕ್ಷಾ ಪರವಾನಿಗೆಗಾಗಿ ಅರ್ಜಿಗಳು ಈ ಕಚೇರಿಗೆ ಬಂದಿವೆ. ಇನ್ನು 1389



ಅರ್ಜಿಗಳನ್ನು ಈ ಕಚೇರಿಗೆ ಸಲ್ಲಿಸಿಲ್ಲ. ಆದ್ದರಿಂದ ಈ ಕೂಡಲೇ ಬಾಕಿ ಉಳಿದಿರುವ 1389 ಇಲೆಕ್ಟ್ರಿಕ್ ಆಟೋರಿಕ್ಷಾ ಮಾಲಕರು ಪರವಾನಿಗೆಯನ್ನು ಪಡೆಯಲು ಅರ್ಜಿ ಸಲ್ಲಿಬೇಕು. ವಿಳಂಬ ಮಾಡಿದರೆ ಮೋಟಾರು ವಾಹನ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ (ಪ್ರಭಾರ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೊಡಗು ಜಿಲ್ಲೆಯ ಪ್ರಮುಖ ಜಲಾಶಯವಾದ ಹಾರಂಗಿ ಅಣೆಕಟ್ಟೆಗೆ ಜಾರ್ಖಂಡ್ ರಾಜ್ಯದ ಹಣಕಾಸು ಸಚಿವ ರಾಧಾಕೃಷ್ಣ ಕಿಶೋರ್ ಮತ್ತು ಅವರ ಪತ್ನಿ ಭೇಟಿ ನೀಡಿದರು. ಅಣೆಕಟ್ಟೆಯ ವೀಕ್ಷಣೆಯ ನಂತರ ಅವರು ಸಮೀಪದಲ್ಲಿರುವ ಸಾಕಾನೆ ಶಿಬಿರದ ವೀಕ್ಷಣೆ ಮಾಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಈ ಸಂದರ್ಭ ಕುಶಾಲನಗರ ತಾಲೂಕು ತಹಶೀಲ್ದಾರ್ ಕಿರಣ್ ಜಿ. ಗೌರಯ್ಯ, ನೀರಾವರಿ ಇಲಾಖೆಯ ಸಹಾಯಕ ಇಂಜಿನಿಯರ್ ಡಿ.ಡಿ. ಕಿರಣ್, ಸೌಮ್ಯ ಉಪಸ್ಥಿತರಿದ್ದರು.

ಸನಾತನ ಧರ್ಮದ ವಿರುದ್ಧ ಉದಯನಿಧಿ ಸ್ಟಾಲಿನ್ ಹೇಳಿಕೆ
ವಿಶ್ವ ಹಿಂದೂ ಪರಿಷತ್ ಖಂಡನೆ

• **ಮಂಗಳೂರು:** ತಮಿಳುನಾಡು ವಿಧಾನಸಭೆಯಂತಹ ಪವಿತ್ರ ಸದನದಲ್ಲಿ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮದ ವಿರುದ್ಧ ನೀಡಿರುವ ಅತ್ಯಂತ ಕೀಳುಮಟ್ಟದ ಮತ್ತು ಪ್ರಚೋದನಾತ್ಮಕ ಹೇಳಿಕೆಯನ್ನು ವಿಶ್ವ ಹಿಂದೂ ಪರಿಷತ್ ತೀವ್ರವಾಗಿ ಖಂಡಿಸುತ್ತದೆ ಎಂದು ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪುವೆಲ್ ಹೇಳಿದ್ದಾರೆ.



ರಾಜಕೀಯ ಲಾಭಕ್ಕಾಗಿ ಕೋಟ್ಯಂತರ ಜನರ ನಂಬಿಕೆಯಾಗಿರುವ ಸನಾತನ ಧರ್ಮದ ನಿರ್ಮೂಲನೆಯ ಬಗ್ಗೆ ಮಾತನಾಡುವುದು ಸಂವಿಧಾನ ವಿರೋಧಿ ನಡವಳಿಕೆಯಾಗಿದ್ದು, ಸದನದ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಸನಾತನ ಧರ್ಮದ ವಿರುದ್ಧದ ಈ ವಿಷಪೂರಿತ ಮಾತುಗಳನ್ನು ವಿಧಾನಸಭೆಯ ಅಧಿಕೃತ ನಡಾವಳಿಗಳಿಂದ ಕೂಡಲೇ ತೆಗೆದುಹಾಕಲು ತಮಿಳುನಾಡು ಸರಕಾರಕ್ಕೆ ಆಗ್ರಹಿಸುತ್ತೇನೆ. ಇತಿಹಾಸದುದ್ದಕ್ಕೂ ಸನಾತನ ಧರ್ಮವನ್ನು ಅಳಿಸಲು ಹೊರಟ ಎಷ್ಟೋ ಶಕ್ತಿಗಳು ತಾವೇ ಅಳಿದು ಹೋಗಿವೆ. ಸನಾತನ ಧರ್ಮವು ಸೂರ್ಯನಂತೆ ಶಾಶ್ವತ ಮತ್ತು ಪ್ರಬಲವಾಗಿದ್ದು ಇಂತಹ ಹೇಳಿಕೆಗಳಿಂದ ಅದನ್ನು ಕುಗ್ಗಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಸನಾತನ ಧರ್ಮವು ಕೇವಲ ಒಂದು ಆಚರಣೆಯಲ್ಲ, ಅದು ಈ ದೇಶದ ಜೀವಾಳ ಮತ್ತು ಸಂಸ್ಕೃತಿಯ ಪ್ರತಿಬಿಂಬ. ತುಷ್ಟೀಕರಣ ರಾಜಕಾರಣದಿಂದ – ಕೇವಲ ಒಂದು ವರ್ಗದ ಮತಗಳ ಓಲೈಕೆಗಾಗಿ ಸನಾತನ ಧರ್ಮದ ವಿರುದ್ಧ ವಿಷ ಕಾರುವುದು ಹೇಡಿತನದ ಲಕ್ಷಣ. ಉದಯನಿಧಿ ಅವರ ಹೇಳಿಕೆಗಳು ಕೇವಲ ರಾಜಕೀಯ ಪ್ರೇರಿತವಲ್ಲ, ಅದು ಹಿಂದೂ ವಿರೋಧಿ ಮನಸ್ಥಿತಿಯ ದ್ಯೋತಕ. ಜಗತ್ತಿನ ಪ್ರಾಚೀನ ಧರ್ಮವನ್ನು ಅಳಿಸಲು ಈ ಹಿಂದೆಯೂ ಅನೇಕ ಆಕ್ರಮಣಕಾರರು ಪ್ರಯತ್ನಿಸಿ ವಿಫಲರಾಗಿದ್ದಾರೆ. ಸನಾತನ ಧರ್ಮದ ವಿರುದ್ಧ ಈ ರೀತಿ ಮಾತನಾಡುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳೂರು ಉತ್ತರ ಸರ್ಕಾರಿ, ಪಿಎಂಶ್ರೀ ಶಾಲೆಗಳ ಹೊಸ ಹೆಜ್ಜೆ
ದಾಖಲಾತಿ ಆಂದೋಲನ

• **ಮಂಗಳೂರು:** ಎಲ್ಲ ಸರ್ಕಾರಿ ಮತ್ತು ಪಿಎಂಶ್ರೀ ಶಾಲೆಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾತಿ ಹೆಚ್ಚಿಸುವ ಉದ್ದೇಶದಿಂದ ಮಂಗಳೂರು ಉತ್ತರ ವಲಯದ ತಾಲೂಕು ಕಚೇರಿ, ತಾ.ಪಂ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಹಭಾಗಿತ್ವದಲ್ಲಿ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಮಂಗಳೂರು ಉತ್ತರ ವಲಯದ ಬಿಇಒ ಜೇಮ್ಸ್ ಕುಟಿನ್ಹೋ, ಆಂದೋನಲದ ಅಂಗವಾಗಿ ಶಾಲಾ ದಾಖಲಾತಿ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಮೇ 13ರಿಂದ ಮನೆ ಮನೆಗೆ ಭೇಟಿ ನೀಡಿ ಶಾಲೆಗಳಿಂದ ಹೊರಗುಳಿದ ಮಕ್ಕಳು ಹಾಗೂ 1ರಿಂದ 5ನೇ ತರಗತಿವರೆಗಿನ ಮಕ್ಕಳ ದಾಖಲಾತಿಗೆ ವಿಶೇಷ ಒತ್ತು ನೀಡಲಾಗುತ್ತಿದೆ ಎಂದರು.

ಮೇ 15ರಂದು ಬೈಕಂಪಾಡಿಯ ದ.ಕ. ಜಿ.ಪಂ ಸರಕಾರಿ ಪ್ರೌಢಶಾಲೆಯಲ್ಲಿ ಬೆಳಗ್ಗೆ 8.30ಕ್ಕೆ, ಸಂಜೆ 4ರಿಂದ ಸದಾಶಿವ ನಗರ ಪಿಎಂಶ್ರೀ ಶಾಲೆಗಳಲ್ಲಿ ಜಾಥಾ, ಜಾಗೃತಿ ಕಾರ್ಯಕ್ರಮ ಜರಗಲಿದೆ. ಮೇ 18ರಂದು ಮಂಗಳೂರು, ಸುರತ್ಕಲ್ ಮತ್ತು ಮೂಲ್ಕಿ ಕೇಂದ್ರಗಳ ಆಯ್ದ ಶಾಲೆಗಳಲ್ಲಿ ಅಭಿಯಾನ



ನಡೆಯಲಿದೆ. ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಈ ವರ್ಷದಿಂದ 1ರಿಂದ 5ನೇ ತರಗತಿಗಳಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡೂ ಬೋಧನೆ ಆರಂಭಗೊಳ್ಳಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಂಗಳೂರು ದಕ್ಷಿಣ ವಲಯದ ಬಿಇಒ ಎಚ್.ಆರ್. ಈಶ್ವರ್, ಸಮಗ್ರ ಶಿಕ್ಷಣ ಕರ್ನಾಟಕದ ಸಹ ಯೋಜನಾ ಸಮನ್ವಯಾಧಿಕಾರಿ ವಿದ್ಯಾ ಶೆಟ್ಟಿ, ದಕ್ಷಿಣ ವಲಯ ಕ್ಷೇತ್ರ ಸಮನ್ವಯಾಧಿಕಾರಿ ಸುಷ್ಮಾ ವಿ. ಕಿಣಿ, ಮಂಗಳೂರು ಉತ್ತರ ಕ್ಷೇತ್ರ ಸಮನ್ವಯಾಧಿಕಾರಿ ವೇದಾವತಿ, ದಕ್ಷಿಣ ವಲಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ತಹಸೀನ್, ಉತ್ತರ ವಲಯ ಬಿಐಇಆರ್‌ಟಿ ನಾಗರಾಜ್ ಎಂ. ಉಪಸ್ಥಿತರಿದ್ದರು.

ಸರಕಾರಿ ಸವಲತ್ತುಗಳ ಪ್ರಯೋಜನ ಪಡೆಯಿರಿ

ಸರ್ಕಾರಿ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ಬಿಸಿಯೂಟ, ಪೌಷ್ಟಿಕ ಆಹಾರ, ವಿವಿಧ ವಿದ್ಯಾರ್ಥಿ ವೇತನ, ಮಕ್ಕಳಿಗೆ ಕರ್ನಾಟಕ ದರ್ಶನ, ಎಸ್ಸೆಸ್ಸೆಲ್ಸಿ ಟಾಪರ್‌ಗಳಿಗೆ ತಲಾ 50 ಸಾವಿರ ರೂ.ಗಳ ಲ್ಯಾಪ್‌ಟಾಪ್, ಹೆಣ್ಮಕ್ಕಳಿಗೆ ಕರಾಟೆ, ಇಕೋ ಕ್ಲಬ್, ಉತ್ತಮ ಎಸ್‌ಡಿಎಂಸಿಗೆ ಪುರಸ್ಕಾರ, ಕೇಂದ್ರ, ರಾಜ್ಯ ಸರ್ಕಾರಗಳ ವಿವಿಧ ಶಿಕ್ಷಣ ಕಾರ್ಯಕ್ರಮಗಳ ಅನುಷ್ಠಾನ ಇತ್ಯಾದಿಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಈ ವರ್ಷದಿಂದ 1ರಿಂದ 5ನೇ ತರಗತಿಗಳಿಗೆ ದ್ವಿಭಾಷಾ ಬೋಧನೆ (ಕನ್ನಡ ಮತ್ತು ಇಂಗ್ಲಿಷ್) ಆರಂಭಗೊಳ್ಳಲಿದೆ. ಅಲ್ಲದೆ ಎಲ್‌ಕೆಜಿ, ಯುಕೆಜಿ ಕೂಡ ಇರಲಿದ್ದು, ಮಕ್ಕಳು ಚಿಕಂದಿನಿಂದಲೇ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಕಲಿಯಲಿದ್ದಾರೆ ಎಂದು ಮಂಗಳೂರು ದಕ್ಷಿಣ ಬಿಇಒ ಎಚ್.ಆರ್.ಈಶ್ವರ್ ವಿವರ ನೀಡಿದರು.

ದೇಶದ ಆರ್ಥಿಕತೆ ಬಲಿಷ್ಠಗೊಳಿಸಲು ಮೋದಿ ಒತ್ತು: ಎಸ್.ಎಸ್.ನಾಯಕ್



• **ಮಂಗಳೂರು:** ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮೇ 10ರಂದು ನೀಡಿದ ಸಲಹೆಗಳು ಭಾರತದ ಆರ್ಥಿಕತೆಯನ್ನು ಬಲಿಷ್ಠಗೊಳಿಸುವಂತದ್ದಾಗಿದೆ. ಸ್ವಾವಲಂಬಿ ಹಾಗೂ ಭವಿಷ್ಯದ ದೂರದೃಷ್ಟಿಯಕ್ರಮವಾಗಿದೆ ಎಂದು ಬಿಜೆಪಿ ಆರ್ಥಿಕ ಪ್ರಕೋಷ್ಠದ ಜಿಲ್ಲಾ ಸಂಚಾಲಕ ಎಸ್.ಎಸ್. ನಾಯಕ್ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಯುದ್ಧ ಇನ್ನಿತರ ಕಠಿಣ ಪರಿಸ್ಥಿತಿಗಳ ಸಂದರ್ಭಗಳಲ್ಲಿ ದೇಶವನ್ನು ಸ್ಥಿರ ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಧಾನಿಯವರು ಪ್ರಯತ್ನಿಸುತ್ತಿದ್ದಾರೆ. ಅದಕ್ಕಾಗಿ ವಿದೇಶಿ ವಿನಿಮಯ ಕಡಿಮೆ ಮಾಡಿ ಎಂದಿದ್ದಾರೆ. ಇದನ್ನೂ ಟೀಕಿಸುವುದು ಸಮಂಜಸವಲ್ಲ.ದೇಶದ ಪ್ರಗತಿಯ ಹಿನ್ನೆಲೆಯಲ್ಲಿ ಪ್ರಧಾನಿಯವರು ನೀಡಿರುವ ಸಲಹೆಯನ್ನು ಪಾಲಿಸುವುದು ಜವಾಬ್ದಾರಿಯುತ ನಾಗರಿಕರ ಕರ್ತವ್ಯ ಎಂದರು.

2025–26ರಲ್ಲಿ 775 ಬಿಲಿಯನ್ ಡಾಲರ್‌ನಷ್ಟು ಸೊತ್ತುಗಳನ್ನು ಭಾರತ ಆಮದು ಮಾಡಿಕೊಂಡಿದೆ. ಸಿಂಗಾಪುರ, ಜರ್ಮನಿ, ಚೀನಾ, ಶ್ರೀಲಂಕಾ, ಪಾಕಿಸ್ಥಾನಗಳಲ್ಲಿ ಪೆಟ್ರೋಲ್, ಡೀಸೆಲ್ ದರ ದುಪ್ಪಟ್ಟು, ಅದಕ್ಕಿಂತಲೂ ಅಧಿಕವಿದೆ. ಆರ್ಥಿಕ ಶಿಸ್ತು, ಜವಾಬ್ದಾರಿಯ ಕಾರ್ಯಗಳಿಂದ ಇದು ಸಾಧ್ಯವಾಗಿದೆ. ಜಾಗತಿಕವಾಗಿ ವಿದೇಶಿ ಕಂಪೆನಿಗಳು ಭಾರತಕ್ಕೆ ಆಕರ್ಷಿತವಾಗುತ್ತಿದೆ. ಬಂಡವಾಳ ಹೂಡಿಕೆಗೂ ಮುಂದೆ ಬರುತ್ತಿದೆ ಎಂದರು.

ಜನತೆಯ ಹಿತದೃಷ್ಟಿಯಿಂದ ಪ್ರಧಾನಿಯವರು ನೀಡಿರುವ ಸಲಹೆಗಳನ್ನು ಪಾಲಿಸಬೇಕು. ಸದಾ ದೇಶದ ಹಿತದ ಬಗ್ಗೆ ಯೋಚಿಸುವ ಪ್ರಧಾನಿಯವರನ್ನು ಎಲ್ಲರೂ ಬೆಂಬಲಿಸಬೇಕು ಎಂದವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆರ್ಥಿಕ ಪ್ರಕೋಷ್ಠದ ಸಹಸಂಚಾಲಕ ಜಿ. ಯೋಗೀಶ್ ಪೈ, ಸದಸ್ಯರಾದ ರಾಜೇಶ್ ರಾವ್ ಎಂ., ಸಿಎ ಶ್ರೀಕೃಷ್ಣಭಟ್ ಕೊಕ್ಕಡ, ವಸಂತಶೆಟ್ಟಿ ಮತ್ತು ಡಾ. ಎಸ್.ಎಂ. ಶಿವಪ್ರಕಾಶ್ ಉಪಸ್ಥಿತರಿದ್ದರು.

ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್: ಹೊಸಕೋಟೆ ಗ್ರಾಮದ ಗೋಷಿಕ್‌ಗೆ ಈಗ ಐಬಿಆರ್ ಸಾಧಕ ಗೌರವ

• **ನಾಪೋಕ್ಲು:** ಹೊಸಕೋಟೆ ಗ್ರಾಮದ ಗೋಷಿಕ್ ಬಿ.ಎಸ್ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ 2026ರ ಐಬಿಆರ್ ಸಾಧಕ ಗೌರವಕ್ಕೆ ಪಾತ್ರರಾಗಿದ್ದಾರೆ.

ವಿರಾಜಪೇಟೆ ತಾಲೂಕು ಬಿಳಿಗುಂದ ಅಂಚೆ, ಹೊಸಕೋಟೆ ಗ್ರಾಮದ ಬಾರಿಕೆ ಶ್ರೀಕಾಂತ್ ಹಾಗೂ ದಿವ್ಯಜೋತಿ ಅವರ ಪುತ್ರ ತನ್ನ 2 ವರ್ಷ 5 ತಿಂಗಳ ವಯಸ್ಸಿನಲ್ಲಿ 8 ಹಣ್ಣುಗಳು, 5 ತರಕಾರಿಗಳು, 7 ಪಕ್ಷಿಗಳು, 7 ಸಾಕು ಪ್ರಾಣಿಗಳು, 5 ಕಾಡು ಪ್ರಾಣಿಗಳು, 4 ಜಲಚರ ಪ್ರಾಣಿಗಳು, 3 ಕೀಟಗಳು, 10 ವಾಹನಗಳು, ದೇಹದ 12 ಅಂಗಗಳು, 3 ಸರಿಸೃಪಗಳು, 10 ಕ್ರಿಯೆಗಳು ಹಾಗೂ



16 ಉಡುಪುಗಳ ಹೆಸರನ್ನು ಗುರುತಿಸಿ ಹೇಳುವಲ್ಲಿ ಸಾಧನೆ ಮಾಡಿದ್ದಾರೆ.

ಇದರ ಜೊತೆಗೆ ಎಯಿಂದ ಝೆಡ್ ವರೆಗೆ ಇಂಗ್ಲಿಷ್ ಅಕ್ಷರಮಾಲೆಯನ್ನು 23 ಅಕ್ಷರ ಪದಗಳೊಂದಿಗೆ ಪಠಿಸುವುದು, 1 ರಿಂದ 4 ರವರೆಗೆ ಸಂಖ್ಯೆಗಳ ಎಣಿಕೆ ಮಾಡುವುದು ಹಾಗೂ 5 ವಾಹನಗಳ ಮತ್ತು 4 ಪ್ರಾಣಿಗಳ ಶಬ್ದಗಳನ್ನು ಅನುಕರಿಸುವ ವಿಶೇಷ ಪ್ರತಿಭೆಯನ್ನು ಪ್ರದರ್ಶಿಸಿರುವುದಕ್ಕಾಗಿ, ಅವರಿಗೆ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ 2026ರ ಐಬಿಆರ್ ಸಾಧಕ ಗೌರವ ಎಂಬ ಗೌರವ ನೀಡಿ 2026ರ ಏಪ್ರಿಲ್ 21 ರಂದು ದೃಢೀಕರಿಸಲಾಗಿದೆ.

ಕಂಟೈನರ್‌ಗೆ ಬಸ್ ಡಿಕ್ಕಿ: ಸಂಚಾರ ಅಸ್ತವ್ಯಸ್ತ

• **ಮುಲ್ಕಿ:** ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಬಸ್ ನಿಲ್ದಾಣದ ಬಳಿ ತಡೆರಹಿತ ಬಸ್ಸೊಂದು ಕಂಟೈನರ್ ಹಿಂಭಾಗಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು ಬಸ್ಸಿನಲ್ಲಿದ್ದ ಚಾಲಕ ಹಾಗೂ ಪ್ರಯಾಣಿಕರು ಪಾರಾಗಿದ್ದಾರೆ. ಮಂಗಳೂರಿನಿಂದ ಉಡುಪಿ ಕಡೆಗೆ ಹೋಗುತ್ತಿದ್ದ ಕಂಟೈನರ್ ಮುಲ್ಕಿ ಬಸ್ ನಿಲ್ದಾಣ ತಲುಪುತ್ತಿದ್ದಂತೆ ಎದುರು ಭಾಗದಲ್ಲಿ ಅದೇ ದಿಕ್ಕಿನಲ್ಲಿ ಚಲಿಸುತ್ತಿದ್ದ ಕಾರ್ ಚಾಲಕ ಏಕಾ ಏಕಿ ಬ್ರೇಕ್ ಹಾಕಿದ್ದು ಹಿಂಭಾಗದಲ್ಲಿದ್ದ ಕಂಟೈನರ್ ಚಾಲಕ ಕೂಡ ತನ್ನ ವಾಹನವನ್ನು ನಿಧಾನ ಮಾಡಿದ್ದಾನೆ. ಈ ಸಂದರ್ಭ ಮಂಗಳೂರಿನಿಂದ ಉಡುಪಿ ಕಡೆಗೆ ಹೋಗುತ್ತಿದ್ದ ಖಾಸಗಿ ತಡೆರಹಿತ ಬಸ್, ಮುಲ್ಕಿ ಬಸ್ ನಿಲ್ದಾಣ ಸಮೀಪ ಕೆಟ್ಟು ನಿಂತಿದ್ದ ಬಸ್ಸನ್ನು ಓವರ್ ಟೇಕ್ ಮಾಡಿ ಬಂದು ಚಾಲಕನ ನಿಯಂತ್ರಣ ತಪ್ಪಿ ಕಂಟೈನರ್ ಹಿಂಭಾಗಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ.

ಅಪಘಾತದಿಂದ ಕೆಲ ಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಯಿತು. ಕೂಡಲೇ ಸ್ಥಳೀಯ ಸಾಮಾಜಿಕ ಕಾರ್ಯಕರ್ತರಾದ ಶಿವಾನಂದ ಆರ್ ಕೆ,ರಫೀಕ್ ಮತ್ತು ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸ್ ಎಎಸ್‌ಐ ಮಾಧವ ನೇತೃತ್ವದಲ್ಲಿ ಎರಡು ವಾಹನಗಳನ್ನು ಸ್ಥಳದಿಂದ ತೆರವುಗೊಳಿಸಿ ಹೆದ್ದಾರಿ ವಾಹನ ಸಂಚಾರ ಸುಗಮಗೊಳಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆಗೆ ಕೇಂದ್ರ ಹೊಣೆ: ರೈ

• **ಮಂಗಳೂರು:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಗಂಭೀರ ವಿಚಾರವಾಗಿದೆ. ಈ ವೈಫಲ್ಯಕ್ಕೆ ಕೇಂದ್ರ ಸರ್ಕಾರವೇ ನೇರ ಹೊಣೆ ಎಂದು ಮಾಜಿ ಸಚಿವ ಬಿ.ರಮಾನಾಥ ರೈ ಆರೋಪಿಸಿದರು.



ಬುಧವಾರ ಮಂಗಳೂರಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 23 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಕನಸು ಇದು. ವಿದ್ಯಾರ್ಥಿಗಳು ಹಗಲು ರಾತ್ರಿ ಪರೀಕ್ಷೆಗೆ ತಯಾರಿ ನಡೆಸಿ, ಪರೀಕ್ಷೆ ಬರೆದರೂ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಭಾರಿ ಲೋಪ. ಇಡೀ ಪರೀಕ್ಷೆ ವ್ಯವಸ್ಥೆ ಕುಸಿದು ಬಿದ್ದಿರುವುದು ಆತಂಕಕಾರಿ ಎಂದರು.

ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಕೇಂದ್ರ ಸರ್ಕಾರದ ಶಿಕ್ಷಣ ಕ್ಷೇತ್ರದ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಈ ಹಿಂದೆಯೂ ಮೂರ್ನಾಲ್ಕು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾದಾಗಲೂ ಯಾರ ಮೇಲೂ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿಲ್ಲ. ಇದು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಕೇಂದ್ರ ಸರ್ಕಾರ ಚೆಲ್ಲಾಟ ಆಡಿದಂತಾಗಿದೆ. ಸೋರಿಕೆಯ ಕುರಿತಂದೆ ಸಿಬಿಐ ತನಿಖೆ ನಡೆಸುವುದಾಗಿ ಕೇಂದ್ರ ಹೇಳಿದರೂ ಈ ವರೆಗಿನ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಯಾರಿಗೂ ಶಿಕ್ಷೆಯಾಗಿಲ್ಲ, ಹಾಗಾಗಿ ಈ ತನಿಖೆ ನಂಬಿಕೆ ಕಳೆದುಕೊಂಡಿದೆ ಎಂದರು.

ದೇಶಾದ್ಯಂತ ಹಲವು ಕೋಚಿಂಗ್ ಕೇಂದ್ರಗಳಿದ್ದು, ಎಲ್ಲವೂ ಐಎಎಸ್, ಐಪಿಎಸ್ ಹಾಗೂ ಮಂತ್ರಿಗಳ ನೆರಳಿನಡಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳಿಗೂ ಪ್ರಶ್ನೆ ಪತ್ರಿಕೆ ಸೋರಿಕೆಗೂ ಸಂಬಂಧ ಇರುವ ಸಾಧ್ಯತೆ ಇದೆ ಎಂದು ರಮಾನಾಥ ರೈ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಗಟ್ಟಿ, ಮುಖಂಡರಾದ ಶಶಿಧರ ಹೆಗ್ಡೆ, ಜಯಶೀಲ ಅಡ್ಯಂತಾಯ, ಬೇಬಿ ಕುಂದರ್, ಎನ್‌ಎಸ್‌ಯುಐ ಅಧ್ಯಕ್ಷ ಸುಹಾನ್ ಆಳ್ವ, ವಿಕಾಸ್ ಶೆಟ್ಟಿ, ಸುಬೋಧ್ ಆಳ್ವ, ಅಪ್ಪಿ, ಯೋಗೀಶ್, ಶಬೀರ್ ಸಿದ್ಧಕಟ್ಟೆ, ನಝೀರ್ ಬಜಾಲ್ ಉಪಸ್ಥಿತರಿದ್ದರು.

ಪರೀಕ್ಷೆ ಹಿನ್ನೆಲೆ: ನಿಷೇಧಾಜ್ಞೆ ಜಾರಿ

• **ಮಡಿಕೇರಿ:** ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2, ಮೇ 18ರಿಂದ 25ರವರೆಗೆ ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ ಮತ್ತು ವೀರಾಜಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ ಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿನ ಪ್ರದೇಶ ವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆದೇಶಿಸಿದ್ದಾರೆ.

ಬೋಳಾರ ವಾರ್ಡ್‌ನ ಕೆಲ ಪ್ರದೇಶಗಳಿಗೆ ಡ್ರೈನೇಜ್ ವ್ಯವಸ್ಥೆಯಿಲ್ಲ | ದೇವರಾಜ ಕಂಪೌಂಡ್‌ಗೆ ಟ್ಯಾಂಕರ್ ಮೂಲಕ ನೀರು
ಬೋಳಾರ: ರೇಷನಿಂಗ್ ಬಳಿಕ ನೀರು ಸರಾಗ

▸ **ಹರೀಶ ಕುಲ್ಕುಂದ**

ದಿಗಂತ ವಾಟರ್ ಚೆಕ್

ಮಂಗಳೂರು: ನೇತ್ರಾವತಿ ನದಿ ತಟದ ಸರಹದ್ದಿನಲ್ಲಿ ವ್ಯಾಪಿಸಿಕೊಂಡಿರುವ ಬೋಳಾರ ವಾರ್ಡ್‌ನಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ನೀರಿನ ಸಮಸ್ಯೆ ಇದೆ.

ಮುಳಿಹಿತ್ಲು ಒಂದು ಭಾಗ, ಗುಜ್ಜರಕೆರೆ, ಮಹಾಕಾಳಿಪಡ್ಪು, ಮಂಗಳೂರು ಕ್ಲಬ್, ಮೋರ್ಗನ್ಸ್‌ಗೇಟ್, ಜಪ್ಪು ಮಾರ್ಕೆಟ್, ಮಾರಿಗುಡಿ, ಕರ್ಕೇರ ಗಾರ್ಡನ್ ರೋಡ್ ಪ್ರದೇಶಗಳನ್ನು ಒಳಗೊಂಡಿರುವ ಈ ವಾರ್ಡ್‌ನ ಕೆಲ ಪ್ರದೇಶಗಳಿಗೆ ಪ್ರೆಶರ್ ಕೊರತೆಯಿಂದ ನೀರಿನ ಅಭಾವ ಉಂಟಾಗಿತ್ತು. ಮಾರಿಗುಡಿ, ದೇವರಾಜ ಕಂಪೌಂಡ್, ಮುಳಿಹಿತ್ಲು, ಮೋರ್ಗನ್ಸ್ ಗೇಟ್ ಪ್ರದೇಶಗಳಿಗೆ ನೀರು ಬರುತ್ತಿದ್ದರೂ, ಸಾಕಾಗುತ್ತಿಲ್ಲ, ದೇವರಾಜ ಕಂಪೌಂಡ್ ಎತ್ತರದ ಪ್ರದೇಶವಾಗಿರುವ ಕಾರಣ ಇಲ್ಲಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಪೂರೈಕೆ ಆಗುತ್ತಿಲ್ಲ ಎಂಬ ದೂರುಗಳಿದ್ದವು. ಆದರೆ, ನೀರು ಪೂರೈಕೆಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೇಷನಿಂಗ್ ವ್ಯವಸ್ಥೆ ಜಾರಿಗೊಳಿಸಿದ ಬಳಿಕ ಈ ಪ್ರದೇಶಗಳಿಗೆ ಉತ್ತಮ ಪ್ರೆಶರ್‌ನೊಂದಿಗೆ ನೀರು ಬರುತ್ತಿದೆ. ನೀರು ಪೂರೈಕೆಯಾಗುವ ಸಮಯದಲ್ಲಿ ಸಮಪ್ರಮಾಣದಲ್ಲಿ ನೀರಿನ ಹಂಚಿಕೆಯಾಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಬೋಳಾರ ವಾರ್ಡ್‌ಗೆ ಪಡೀಲ್ ಹಾಗೂ ಬೆಂದೂರುವೆಲ್ ಟ್ಯಾಂಕ್‌ನಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಪ್ರತಿದಿನ ಬೆಳಗ್ಗೆಯಿಂದ ಮಧ್ಯಾಹ್ನವರೆಗೆ ಹಾಗೂ ಎರಡು ದಿನಕ್ಕೊಮ್ಮೆ ಸಂಜೆ ವೇಳೆಗೆ ನೀರು ಒದಗಿಸಲಾಗುತ್ತಿತ್ತು. ರೇಷನಿಂಗ್ ಆರಂಭಗೊಂಡ ಬಳಿಕ ಎರಡು ದಿನಕ್ಕೊಮ್ಮೆ ಬೆಳಗ್ಗೆಯಿಂದ ರಾತ್ರಿವರೆಗೆ ನೀರು ಸರಬರಾಜು ಮಾಡಲಾಗುತ್ತಿದೆ.

ನೀರಿನ ಕೊರತೆ ಅನುಭವಿಸುತ್ತಿರುವ ದೇವರಾಜ ಕಂಪೌಂಡ್ ಪ್ರದೇಶದ ಜನತೆಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಅಗತ್ಯ ಇರುವ ಸಂದರ್ಭಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ಜಪ್ಪು ಮಾರ್ಕೆಟ್ ಬಳಿ ಸರಕಾರಿ ಬಾವಿ ಇದೆ. ಆದರೆ, ಬಾವಿಯಿಂದ ನೀರು ತೆಗೆಯಲು ವ್ಯವಸ್ಥೆಗಳಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿಗಳಿಲ್ಲ.

ಬೋಳಾರ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿ ಶೇ. 75ರಷ್ಟು ಪೂರ್ಣಗೊಂಡಿದೆ. ಪೈಪ್‌ಲೈನ್ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗಿದೆ. ಮೈನ್ ಪೈಪ್‌ಲೈನ್ ಆಗಿದೆ. ಮುಳಿಹಿತ್ಲು, ಮೋರ್ಗನ್ಸ್ ಗೇಟ್‌ನ ಕೆಲ ಪ್ರದೇಶಗಳಲ್ಲಿ ನೀರಿನ ಸಂಪರ್ಕ ಒದಗಿಸಲಾ ಗಿದೆ. ಮಂಗಳೂರು ಕ್ಲಬ್ ಬಳಿ ಟ್ಯಾಂಕ್ ನಿರ್ಮಾಣಗೊಂಡಿದ್ದು, ನೀರಿನ ಸಂಪರ್ಕ ಆಗಿಲ್ಲ.

ಗೈಲ್ ಗ್ಯಾಸ್ ಪೈಪ್‌ಲೈನ್ ಕಾಮಗಾರಿ ಬೋಳಾರ ವಾರ್ಡ್‌ನಲ್ಲಿ ನಿಧಾನ ಗತಿಯಲ್ಲಿ ಸಾಗುತ್ತಿದೆ. ಎರಡು ವರ್ಷದಿಂದ ಕೆಲಸ ಆಗುತ್ತಿಲ್ಲ. ಮುಖ್ಯ ಪೈಪ್‌ಲೈನ್ ಆಗಿಲ್ಲ. ಮನೆಮನೆಗೆ ಮೀಟರ್ ಅಳವಡಿಸಲಾಗಿದ್ದು, ಕೆಲವೆಡೆ ಅದನ್ನೂ ವಾಪಸ್ ತೆಗೆಯಲಾಗುತ್ತಿದೆ.



ವಾರ್ಡ್ ನಂಬರ್ 58
ಬೋಳಾರ

ಬೋಳಾರ ವಾರ್ಡಿನ ಗುಜ್ಜರಕೆರೆ ಅಭಿವೃದ್ಧಿಪಡಿಸಲಾಗಿದೆ.

ಕೆಲವೆಡೆ ಒಳಚರಂಡಿ ವ್ಯವಸ್ಥೆ ಇಲ್ಲ

ಬೋಳಾರ ವಾರ್ಡ್‌ನ ಕೆಲವೆಡೆ ಇದುವರೆಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಶೆಟ್ಟಿಬೆಟ್ಟು, ಮುಳಿಹಿತ್ಲು ಒಂದು ಭಾಗ, ಮಹಾಕಾಳಿ ಪಡ್ಪು ಪ್ರದೇಶಗಳಲ್ಲಿ ಯುಜಿಡಿ ವ್ಯವಸ್ಥೆ ಇಲ್ಲ. ಇಲ್ಲಿ ಟಾಯ್ಲೆಟ್ ಪಿಟ್‌ಗಳಿವೆ. ಮುಳಿಹಿತ್ಲುವಿನ ಒಂದು ಭಾಗದಲ್ಲಿ ಡ್ರೈನೇಜ್ ಓವರ್‌ಫ್ಲೋ ಆಗುತ್ತಿದ್ದು, ಇಲ್ಲಿ ಮಳೆನೀರು ಹರಿಯುವ ತೋಡಿನಲ್ಲಿ ಒಳಚರಂಡಿ ಕೊಳಚೆ ನೀರು ಹರಿಯುತ್ತಿದೆ. ಜಪ್ಪು ಮಾರ್ಕೆಟ್, ಗುಜ್ಜರಕೆರೆ ಪ್ರದೇಶದಲ್ಲಿ ರಾಜಕಾಲುವೆಯಿದ್ದು, ಈ ಬಾರಿ ಹೂಳು ತೆಗೆಯಲಾಗಿದೆ. ಸಣ್ಣ ತೋಡುಗಳ ಹೂಳು ತೆಗೆಯಲು ಬಾಕಿ ಇದೆ.

ಬೋಳಾರ ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ. ವಾರ್ಡ್‌ನ ಕೆಲ ಪ್ರದೇಶಗಳಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ನೀರಿನ ಕೊರತೆ ಕಾಣಿಸಿಕೊಂಡಿತ್ತು. ರೇಷನಿಂಗ್ ಆದ ಬಳಿಕ ನೀರು ಬರುತ್ತಿಲ್ಲ ಎಂಬ ದೂರು ಕೇಳಿ ಬಂದಿಲ್ಲ. ನೀರಿನ ಕೊರತೆ ಎದುರಿಸುತ್ತಿದ್ದ ದೇವರಾಜ ಕಂಪೌಂಡ್ ಪ್ರದೇಶಕ್ಕೆ ಮಂಗಳೂರು ಮಹಾನಗರ ಪಾಲಿಕೆ ಟ್ಯಾಂಕರ್ ಮೂಲಕ ನೀರು ಒದಗಿಸಿದೆ. ಬೋಳಾರ ವಾರ್ಡ್‌ನ ಯುಜಿಡಿ ವ್ಯವಸ್ಥೆ ಇಲ್ಲದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಶಾಸಕರ ನೇತೃತ್ವದಲ್ಲಿ ಪ್ರಯತ್ನ ನಡೆದಿದೆ. ಈ ಬಗ್ಗೆ ಅಂದಾಜುಪಟ್ಟಿ ತಯಾರಿಸಲಾಗಿದ್ದು, ಮಂಗಳೂರು ಮಹಾನಗರ ಪಾಲಿಕೆ ಮುಂದೆ ಪ್ರಸ್ತಾವನೆಯಿದೆ. ಮುಂದಿನ ನವೆಂಬರ್ ಬಳಿಕ ಡ್ರೈನೇಜ್ ಕೆಲಸ ನಡೆಸಲು ಪ್ರಯತ್ನಿಸಲಾಗುತ್ತಿದೆ. ವಾರ್ಡ್‌ನ ಗುಜ್ಜರಕೆರೆ, ಮೊಯಿಲಿ ಕೆರೆ ಅಭಿವೃದ್ಧಿಪಡಿಸಲಾಗಿದೆ. ಜಪ್ಪು ಮಹಾಕಾಳಿಪಡ್ಪು ಅಂಡರ್‌ಪಾಸ್ ನಿರ್ಮಾಣವಾಗಿದೆ. ಮೋರ್ಗನ್ಸ್ ಗೇಟ್–ಪಾಲೆಮಾರ್ ಗಾರ್ಡನ್ ರಸ್ತೆ, ಮೋರ್ಗನ್ಸ್‌ಗೇಟ್ ಜಪ್ಪು ಮಾರ್ಕೆಟ್ ರಸ್ತೆ, ಶೆಟ್ಟಿಬೆಟ್ಟು– ಮೋರ್ಗನ್ಸ್‌ಗೇಟ್ ರಸ್ತೆ ಕಾಂಕ್ರೀಟ್ ಆಗಿದೆ. ಪಿಎಲ್ ಕಾಲನಿಯಲ್ಲಿ ಡ್ರೈನೇಜ್ ವ್ಯವಸ್ಥೆ ಕಲ್ಪಿಸಲಾಗಿದೆ. ಮಂಗಳೂರು ಕ್ಲಬ್ ಬಳಿ ಪಾರ್ಕ್ ಅಭಿವೃದ್ಧಿಪಡಿಸಲಾಗಿದೆ.



■ **ಭಾನುಮತಿ ಪಿ.ಎಸ್.** ಬೋಳಾರ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಕರ್ನಾಟಕ

ಗುರುವಾರ
14 ಮೇ 2026
ಮಂಗಳೂರು

ರಾಮ ಬಾಣ



ಮಿತವ್ಯಯ ಅಲೆ

ಪುಟ ೧➡ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಮ್ಮ ಹಾಗೂ ಸಚಿವರ ಬೆಂಗಾವಲು ವಾಹನಗಳನ್ನು ಶೇ.50ರಷ್ಟು ಕಡಿತಗೊಳಿಸುವಂತೆ ಆದೇಶಿಸಿದ್ದಾರೆ. ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ವಾಹನ ರ್‍ಯಾಲಿಗಳಿಗೆ ಬ್ರೇಕ್ ಹಾಕಿದ್ದು, ಸಚಿವರಿಗೆ ಕನಿಷ್ಠ ವಾಹನ ಬಳಕೆಯ ಸೂಚನೆ ನೀಡಿದ್ದಾರೆ.

ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಸಚಿವರು ಹಾಗೂ ಶಾಸಕರ ಅಧಿಕೃತ ವಾಹನ ಬಳಕೆಗೆ ಮಿತಿ ವಿಧಿಸಿದ್ದು, ಸಾರ್ವಜನಿಕ ಸಾರಿಗೆ ಹಾಗೂ ಕಾರ್‌ಪೂಲಿಂಗ್‌ಗೆ ಉತ್ತೇಜನ ನೀಡಿದ್ದಾರೆ. ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಸಹ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಸೂಚಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಪೂರ್ವಾನುಮತಿ ಇಲ್ಲದೆ, ಅಧಿಕೃತ ವಿಮಾನ ಪ್ರಯಾಣ ನಡೆಸಬಾರದು ಎಂದು ಸಚಿವರಿಗೆ ಸೂಚಿಸಿದ್ದಾರೆ. ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ವಿದ್ಯುತ್ ವಾಹನ ಬಳಕೆಗೆ ಮುಂದಾಗಿದ್ದು, ಶಿವಸೇನೆ ಸಚಿವರಿಗೆ ಅನಗತ್ಯ ಪ್ರವಾಸಗಳನ್ನು ಕಡಿಮೆ ಮಾಡಲು ಸೂಚಿಸಲಾಗಿದೆ. ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಹೆಲಿಕಾಪ್ಟರ್, ವಿಮಾನಗಳ ಬದಲು ರೈಲು ಹಾಗೂ ಸಾರ್ವಜನಿಕ ಸಾರಿಗೆ ಬಳಸುವುದಾಗಿ ಘೋಷಿಸಿದ್ದಾರೆ. ಗುಜರಾತ್ ಉಪ ಮುಖ್ಯಮಂತ್ರಿ ಹರ್ಷ ಸಂಘವಿ ಅಮೆರಿಕ ಪ್ರವಾಸವನ್ನೇ ರದ್ದು ಮಾಡಿದ್ದಾರೆ. ಬಿಹಾರ ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಚೌಧರಿ ತಮ್ಮ ವಾಹನ ಬಳಕೆಯನ್ನು ಅರ್ಧಕ್ಕಿಳಿಸಿದ್ದರೆ, ಛತ್ತೀಸ್‌ಗಢ ಮುಖ್ಯಮಂತ್ರಿ ವಿಷ್ಣುದೇವ ಸಾಯಿ ಬೆಂಗಾವಲು ವಾಹನಗಳನ್ನು ಕಡಿತಗೊಳಿಸಿ ವಿದ್ಯುತ್ ವಾಹನ ಬಳಕೆಗೆ ಆದ್ಯತೆ ನೀಡಿದ್ದಾರೆ. ಹಿಮಾಚಲ ಪ್ರದೇಶ ರಾಜ್ಯಪಾಲ ಕವಿಂದರ್ ಗುಪ್ತಾ ರಾಜಭವನವನ್ನು 'ಇಂಧನ ಸಂರಕ್ಷಣಾ ವಲಯ'ವೆಂದು ಘೋಷಿಸಿ ವಿಶೇಷ ಅಭಿಯಾನ ಆರಂಭಿಸಿದ್ದಾರೆ.

ಕೇಂದ್ರ ಸಚಿವರ ಮಟ್ಟದಲ್ಲಿಯೂ ಮಿತವ್ಯಯ ಕ್ರಮಗಳು ಆರಂಭವಾಗಿವೆ. ಅನೇಕ ಸಚಿವರು ತಮ್ಮ ವಾಹನಪಡೆಗಳನ್ನು ಕಡಿಮೆ ಮಾಡಿಕೊಂಡಿದ್ದು, ಅನಗತ್ಯ ವಿದೇಶ ಪ್ರವಾಸಗಳನ್ನು ಮುಂದೂಡಲು ತೀರ್ಮಾನಿಸಿರುವ ಮಾಹಿತಿ ಹೊರಬಿದ್ದಿದೆ. ಕೇಂದ್ರ ಸರ್ಕಾರದ ಈ ಸಂದೇಶವು ಇದೀಗ ಆಡಳಿತ ಯಂತ್ರದ ಮೂಲಕ ಜನಸಾಮಾನ್ಯರಿಗೂ ತಲುಪುವ ಪ್ರಯತ್ನ ನಡೆಯುತ್ತಿದೆ.

ಅನಗತ್ಯ ವೆಚ್ಚ ಕಡಿತ ಮಾಡಿ; ಸಚಿವರಿಗೆ ಪ್ರಧಾನಿ ಸೂಚನೆ

ಪುಟ ೧➡ ಸಚಿವರು ತಮ್ಮ ಬೆಂಗಾವಲು ಪಡೆ ಗಾತ್ರವನ್ನು ಕಡಿಮೆ ಮಾಡುವುದು, ಅಗತ್ಯವಿಲ್ಲದ ವಿದೇಶಿ ಪ್ರವಾಸಗಳನ್ನು ತಗ್ಗಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಅವರು ಸಲಹೆ ನೀಡಿದರು. ಸರ್ಕಾರದ ಮೂಲಗಳ ಪ್ರಕಾರ, ಇದು ಮಿತವ್ಯಯ ನೀತಿ ಅಲ್ಲ; ಬದಲಾಗಿ ಇಂಧನ ಉಳಿತಾಯ, ಆಮದು ಅವಲಂಬನೆ ಕಡಿತ ಹಾಗೂ ವಿದೇಶಿ ವಿನಿಮಯ ವ್ಯಯವನ್ನು ನಿಯಂತ್ರಿಸುವ ಉದ್ದೇಶ ಹೊಂದಿದೆ. ಮೂಲಸೌಕರ್ಯ, ಕಲ್ಯಾಣ ಯೋಜನೆಗಳು ಅಥವಾ ಸಬ್ಸಿಡಿಗಳ ವೆಚ್ಚದಲ್ಲಿ ಯಾವುದೇ ಕಡಿತ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ರಾಜ್ಯದಲ್ಲಿ ಕುರ್ಚಿಗಳು ಅಲುಗಾಡುತ್ತಿವೆ ಎನ್ನುವುದು ಸರಿಯಲ್ಲ –ಡಿಕೆಶಿ
–ಹೌದು, ಹಾಗೆ ಹೇಳೋ ಬದಲು ಕುರ್ಚಿಯ ಕೆಳಗಿನ ನೆಲವೇ ನಡುಗುತ್ತಿದೆ ಅಂತ ಹೇಳಿದರೆ ಹೆಚ್ಚು ಸರಿಯಾದೀತು!

ದಿನ ಭವಿಷ್ಯ

ಮೇಷ ಕೆಲ ದಿನಗಳ ಅಡೆತಡೆ ಬಳಿಕ ಇಂದು ದಿನವು ಸುಗಮವಾಗಿ ಸಾಗಲಿದೆ. ಕೆಲಸ ನಿರ್ವಿಘ್ನವಾಗಿ ಪೂರ್ಣ. ನಿಮ್ಮ ಸುತ್ತಲಿನ ಪರಿಸರ ಶಾಂತಿಯುತ.

ವೃಷಭ ವೃತ್ತಿಯಲ್ಲಿ ಸಫಲತೆ. ಹಿರಿಯರು ನಿಮ್ಮ ಕಾರ್ಯ ಮೆಚ್ಚಿಕೊಳ್ಳುವರು. ಮಾನಸಿಕ ತುಮುಲ ಇಂದು ನಿವಾರಣೆ ಕಾಣಲಿದೆ. ನಿರಾಳತೆ.

ಮಿಥುನ ಮಾನಸಿಕ ಬೇಗುದಿ. ಅದಕ್ಕೆ ನಿರ್ದಿಷ್ಟ ಕಾರಣ ವೆಂಬುದಿಲ್ಲ. ಎಲ್ಲರೂ ನಿಮಗೆ ವಿರೋಧಿಗಳು ಎಂಬಂಥ ಭಾವ. ಮನೋನಿಗ್ರಹ ಇರಲಿ.

ಕಟಕ ಲಾಭ–ನಷ್ಟ ಎರಡೂ ಉಂಟಾಗಲಿದೆ. ಕೆಲ ವಿಷಯ ಉದ್ವಿಗ್ನತೆ ಸೃಷ್ಟಿ. ಆಪ್ತರ ಅಸಹಕಾರ. ಉಷ್ಣಸಂಬಂಧಿ ಬಾಧೆ ಉಂಟಾದೀತು.

ಸಿಂಹ ನೀವು ಕೈಗೊಳ್ಳುವ ಕ್ರಮ ಉತ್ತಮ ಫಲ ನೀಡುವುದು. ವೃತ್ತಿಯಲ್ಲಿ ತೃಪ್ತಿ. ಕೌಟುಂಬಿಕ ಭಿನ್ನಮತ ನಿವಾರಣೆ. ಮೆದು ಮಾತು ಒಳಿತು.

ಕನ್ಯಾ ವೃತ್ತಿಯೊತ್ತಡ ಹೆಚ್ಚು. ಕೆಲವರ ಅಸಹಕಾರ. ಮನೆಯಲ್ಲಿ ಸಣ್ಣ ವಿಷಯಕ್ಕೆ ವಾಗ್ವಾದ ನಡೆದೀತು. ಸಹನೆಯಿಂದ ನಡೆಕೊಳ್ಳಿ. ಧ್ಯಾನ ಸಹಕಾರಿ.

ತುಲಾ ನಿಮ್ಮ ಪಾಲಿಗೆ ಅತ್ಯಂತ ಯಶಸ್ವೀ ದಿನ. ಆಪ್ತರಿಂದ ಅಚ್ಚರಿಯ ವಿಷಯ ಕೇಳುವಿರಿ. ಹಳೆಯ ಹೂಡಿಕೆ ಈಗ ಲಾಭ ತರಬಹುದು.

ವೃಶ್ಚಿಕ ಸಹನೆ ಅತಿ ಮುಖ್ಯ. ನಿಮಗೆ ಪಥ್ಯವಾಗದ ಬೆಳವಣಿಗೆ ನಡೆದೀತು. ವಿರೋಧಿಸದೆ ಹೊಂದಿಕೊಂಡು ಸಾಗಿ. ಆಪ್ತರ ಅಸಹಕಾರ.

ಧನು ನಿಮ್ಮ ಕುರಿತಾದ ತಪ್ಪುಕಲ್ಪನೆ ನೀಗಲು ಆದ್ಯತೆ ಕೊಡಿ. ಇಲ್ಲವಾದರೆ ಅದು ಸಂಬಂಧದ ಮೇಲೆ ಪರಿಣಾಮ ಬೀರಬಹುದು. ಟೀಕೆ ಕಡೆಗಣಿಸಿ.

ಮಕರ ವೃತ್ತಿಯಲ್ಲಿ ಅಡ್ಡಿ. ವೃತ್ತಿಗೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳದಿರಿ. ಆತ್ಮೀಯರ ಜತೆ ಮನ ಬಿಚ್ಚಿ ಮಾತಾಡಿ. ಮುಚ್ಚುಮರೆ ಬೇಡ.

ಕುಂಭ ಹೊಸ ವ್ಯವಹಾರ ಆರಂಭಕ್ಕೆ ಸಕಾಲ. ಎಲ್ಲ ನಿಮಗೆ ಪೂರಕವಾಗಿ ಸಾಗುವುದು. ಅಜೀರ್ಣ ಸಮಸ್ಯೆ. ಮಿತಾಹಾರ ಒಳ್ಳೆಯದು.

ಮೀನ ಸಕಾಲದಲ್ಲಿ ಕಾರ್ಯ ಮುಗಿಸಿ. ಮುಂದೆ ಹಾಕುತ್ತಾ ಹೋಗಬೇಡಿ. ಅನಿರೀಕ್ಷಿತ ಧನಗಳಿಕೆ. ಬಂಧು ಜತೆಗಿನ ಮನಸ್ತಾಪ ಅಂತ್ಯ.

ರಾಹುಕಾಲ: 1.30–3.00
ಗುಳಿಕಕಾಲ: 9.00–10.30

ಅದೃಷ್ಟ ಸಂಖ್ಯೆ :3,8,2,7

ಕೇಂದ್ರಕ್ಕೆ ಸಚಿವ ದಿನೇಶ್ ಗುಂಡೂರಾವ್ ಪ್ರಸ್ತಾವನೆ ಸಲ್ಲಿಕೆ

ಮೈಸೂರು ಯೋಗ ಜಿಲ್ಲೆ

• **ಬೆಂಗಳೂರು:** ಸಾಂಸ್ಕೃತಿಕ ನಗರಿ ಮೈಸೂರು ಜಿಲ್ಲೆಯನ್ನು ಯೋಗ ಜಿಲ್ಲೆಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟಿದೆ. ಶೀಘ್ರದಲ್ಲೇ ಯೋಗ ಜಿಲ್ಲೆಯನ್ನಾಗಿ ಮೈಸೂರು ಘೋಷಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬುಧವಾರ ನಗರದ ಆರೋಗ್ಯಸೌಧದಲ್ಲಿ ಆಯುಷ್ ಇಲಾಖೆ ವತಿಯಿಂದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗದ ರಾಜಧಾನಿ ಮೈಸೂರು. ಇಲ್ಲಿ ಅತಿ ಹೆಚ್ಚು ಜನ ವಿಶ್ವಮಟ್ಟದ ಪ್ರಖ್ಯಾತಿಯಾಗಿದ್ದಾರೆ. ಅಲ್ಲದೇ, ಯೋಗಾಭ್ಯಾಸದ ಬಗ್ಗೆ ತಿಳಿದುಕೊಳ್ಳಲು ಜನ ಮೈಸೂರು ಬರುತ್ತಾರೆ. ಇದು ಕರ್ನಾಟಕ ರಾಜ್ಯದ ಹೆಮ್ಮೆಯ ವಿಚಾರವಾಗಿದೆ ಎಂದರು.

ತಾಲೂಕುಮಟ್ಟದಲ್ಲಿ ವಿವಿಧ ಪ್ರತಿ ಮನೆಗೆ ಯೋಗ ತಲುಪಿಸಲಾಗುತ್ತಿದೆ. ಯೋಗ ಜಿಲ್ಲೆಯನ್ನಾಗಿ ಮೈಸೂರು ಘೋಷಿಸುವುದಾಗಿ ಪ್ರಸ್ತಾವನೆ ನೀಡಿದ್ದೆವು. ಅದಕ್ಕೆ ಇದೀಗ ಕೇಂದ್ರ ಅನುಮೋದನೆ ನೀಡಿದ್ದು, ಒಟ್ಟು 1 ಕೋಟಿ ರೂ. ಅನುದಾನವೂ ಲಭ್ಯವಾಗಿದೆ. ಯೋಗ ಜಿಲ್ಲೆಯಾಗಿ ಮೈಸೂರು ಘೋಷಣೆಯಾದ ಬಳಿಕ ದರ ಪರಿಣಾಮ ನೋಡಿಕೊಂಡು ರಾಜ್ಯದ ಇತರೆ ಜಿಲ್ಲೆಗಳಿಗೂ ಯೋಗವನ್ನು ವಿಸ್ತರಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಮಾಹಿತಿ ನೀಡಿದರು.

ಪ್ರತಿ ವರ್ಷ ಜೂ 21ಕ್ಕೆ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಈ ಬಾರಿ ಆರೋಗ್ಯ, ಜ್ಞಾನ ಮತ್ತು ವಿಶ್ವಶಾಂತಿಗಾಗಿ ಯೋಗ ಪರಿಕಲ್ಪನೆ ಅಡಿ ಆಯುಷ್ ಇಲಾಖೆಯಿಂದ ವಿಧಾನಸೌಧ ಆವರಣದಲ್ಲಿ ಜೂ. 21 ರ ಬೆಳಗ್ಗೆ 6 ರಿಂದ 8 ಗಂಟೆವರೆಗೆ ಯೋಗ ದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರಾಜ್ಯಪಾಲ ಥಾವರ ಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಅಂದಾಜು 5 ಸಾವಿರಕ್ಕೂ ಅಧಿಕ ಯೋಗಪಟುಗಳು ಆಗಮಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯವು ಯೋಗ ಆಚರಿಸಲು ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಆಯುಷ್ ಇಲಾಖೆಯು ಆರೋಗ್ಯ, ಜ್ಞಾನ ಮತ್ತು ವಿಶ್ವಶಾಂತಿಗಾಗಿ ಯೋಗ ಘೋಷವಾಕ್ಯದ ಅಡಿ ಅನೇಕ ವಿನೂತನ ಕಾರ್ಯಕ್ರಮದ ಮೂಲಕ ಯೋಗೋತ್ಸವ ಆಚರಿಸಲು ಸಂಕಲ್ಪ ಮಾಡಿದ್ದೇವೆ ಎಂದು ಸಚಿವರು ವಿವರಿಸಿದರು. ಇದೇ ವೇಳೆ ಸಚಿವರು ಯೋಗ ಅಂಚೆ ಚೀಟಿ ಮತ್ತು ಕೈಪಿಡಿ ಬಿಡುಗಡೆ ಮಾಡಿದರು. ಇಲಾಖೆ ಆಯುಕ್ತ ಸುನೀಲ್ ಪನ್ವಾರ್, ಭಾರತೀಯ ಅಂಚೆ ಇಲಾಖೆಯ ಹಿರಿಯ ಸೂಪರಿಂಟೆಂಡೆಂಟ್ ಹರೀಶ್ ಇದ್ದರು.



ಯೋಗ ಕಾರ್ಯಕ್ರಮಗಳು

ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಗ್ರಾಮೀಣ ಯೋಗ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನ ಯೋಗ, ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯಲ್ಲಿ ಕಾರ್ಸಿನೋ ಯೋಗ, ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಕಾರ್ಡಿಯೋ ಯೋಗ, ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದಲ್ಲಿ ರಾಷ್ಟ್ರೀಯ ಯೋಗ ಮತ್ತು ವಿದ್ಯಾರ್ಥಿ ಯೋಗ ಕಾರ್ಯಕ್ರಮಗಳು ನಡೆಯಲಿವೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಸ್ಪೀಕರ್‌ಗೆ ಘೇರಾವ್: ದೂರು ದಾಖಲು

• **ಉಳ್ಳಾಲ:** ಕುತ್ತಾರು ಜಂಕ್ಷನ್‌ನಲ್ಲಿ ಕೊರಗಜ್ಜನ ವೃತ್ತ ನಿರ್ಮಾಣದ ವಿಚಾರದಲ್ಲಿ ಭದ್ರತಾ ಸಿಬ್ಬಂದಿಯನ್ನು ತಳ್ಳಿ ಸ್ಪೀಕರ್ ಯು.ಟಿ.ಖಾದರ್ ಅವರಿಗೆ ಘೇರಾವ್ ಹಾಕಿ ತರಾಟೆಗೈದ ಮದನಿ ನಗರದ ಜುನೈದ್ ಮತ್ತು ಆತನ ಹತ್ತು ಜನ ಸಹಚರರ ವಿರುದ್ಧ ಉಳ್ಳಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸ್ಪೀಕರ್ ಯು.ಟಿ.ಖಾದರ್ ಅವರ ಅಂಗ ರಕ್ಷಕ ಸಿಎಸ್‌ಆರ್ ಘಟಕದ ಸಿಬ್ಬಂದಿ ಮೊಹಮ್ಮದ್ ಯಾಸೀನ ಇನಾಮದಾರ ನೀಡಿರುವ ದೂರಿನ ಆಧಾರದಡಿ ಉಳ್ಳಾಲ ಠಾಣೆಯಲ್ಲಿ ಹನ್ನೊಂದು ಜನ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ಕಳೆದ ಮೇ 7 ರ ಗುರುವಾರ ರಾತ್ರಿ 10 ಗಂಟೆ ವೇಳೆ ಸ್ಪೀಕರ್ ಯು.ಟಿ.ಖಾದರ್ ಅವರು ಉಳ್ಳಾಲ ಮಾಸ್ತಿಕಟ್ಟೆಯ ರೆಸಾರ್ಟ್ ಒಂದರಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಿಂತಿರುಗುವ ವೇಳೆ ಮದನಿ ನಗರದ ಜುನೈದ್ ಹಾಗೂ ಇತರ ಹತ್ತು ಮಂದಿ ಏಕಾಏಕಿ ಸ್ಪೀಕರ್ ಬಳಿ ಹೋಗುವಾಗ ಅಂಗರಕ್ಷಕರಾದ ಮೊಹಮ್ಮದ್ ಯಾಸೀನ ಅವರನ್ನು ತಡೆದಿದ್ದು, ಈಗಾಗಲೇ ಬಹಳ ತಡವಾಗಿದೆ ಎಂದು ಹೇಳಿ ಸ್ಪೀಕರ್ ಭೇಟಿಗೆ ಅವಕಾಶ ನಿರಾಕರಿಸಿದ್ದರು. ಈ ವೇಳೆ ಜುನೈದ್ ಹಾಗೂ ಸಹಚರರು ಅಂಗರಕ್ಷಕ ಯಾಸೀನ್ ಅವರನ್ನು ತಳ್ಳಿ ಮುನ್ನುಗ್ಗಿದ್ದು, ಸ್ಪೀಕರ್ ಖಾದರ್ ಅವರನ್ನು ಘೇರಾವ್ ಹಾಕಿ ಏರು ಧ್ವನಿಯಲ್ಲಿ ಕುತ್ತಾರು ಕೊರಗಜ್ಜನ ವೃತ್ತದ ವಿಚಾರದಲ್ಲಿ ತರಾಟೆಗೈದಿದ್ದಲ್ಲದೆ, ಅದರ ವೀಡಿಯೋವನ್ನು ಆಕ್ಷೇಪಾರ್ಹ ಬರಹಗಳೊಂದಿಗೆ ಜಾಲತಾಣಗಳಲ್ಲಿ ಹರಿಯಬಿಟ್ಟಿರುವುದಾಗಿ ಗನ್ ಮ್ಯಾನ್ ಮೊಹಮ್ಮದ್ ಯಾಸೀನ ಅವರು ತನ್ನ ಮೇಲಾಧಿಕಾರಿಗಳ ಸೂಚನೆಯಂತೆ ಮೇ 9 ರಂದು ತಡವಾಗಿ ಉಳ್ಳಾಲ ಠಾಣೆಗೆ ದೂರು ನೀಡಿದ್ದಾರೆ.

ಚಿನ್ನ, ಬೆಳ್ಳಿಯ ಆಮದು ಸುಂಕ ಶೇ.15ಕ್ಕೆ ಹೆಚ್ಚಳ

ಪುಟ ೧➡ ಆದರೆ, ಈ ಕ್ರಮದಿಂದ ಕಳ್ಳಸಾಗಣೆ ಹಾಗೂ ಬೂದು ಮಾರುಕಟ್ಟೆ ಚಟುವಟಿಕೆ ಹೆಚ್ಚುವ ಸಾಧ್ಯತೆಯಿದೆ ಎಂದು ಆಭರಣ ಉದ್ಯಮ ಎಚ್ಚರಿಸಿದೆ. ಸರ್ಕಾರದ ಮೂಲಗಳ ಪ್ರಕಾರ, ಇದು ತಾತ್ಕಾಲಿಕ ಮತ್ತು ಮುನ್ನೆಚ್ಚರಿಕಾ ಕ್ರಮವಾಗಿದ್ದು, ಅನಗತ್ಯ ಆಮದು ಕಡಿಮೆ ಮಾಡಿ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು ಇದರ ಉದ್ದೇಶವಾಗಿದೆ.

ಭೂ ಗ್ಯಾರಂಟಿಯಲ್ಲಿ ವಿನಾಯ್ತಿ, ರಿಯಾಯ್ತಿ

ಪುಟ ೧➡ ಮೇ 16ರಿಂದ ಇದಕ್ಕೆ ಚಾಲನೆ ನೀಡಲಾಗುವುದು. ಬೆಳಗ್ಗೆ 10ಕ್ಕೆ ಪ್ರಾರಂಭವಾಗಿ ಸಂಜೆಯವರೆಗೆ ನಡೆಯುವ ಈ ಅಭಿಯಾನದ ಸ್ಥಳಗಳನ್ನು ಮುಂಚಿತವಾಗಿ ತಿಳಿಸಲಾಗುವುದು ಎಂದರು.

ಸುರಕ್ಷಿತ ಡಿಜಿಟಲ್ ಆಸ್ತಿ ಹಕ್ಕು: ಇ ಖಾತಾ ಆಂದೋಲನ ಭಾರತದ ಅತಿದೊಡ್ಡ ಸಮಗ್ರ ಡಿಜಿಟಲ್ ನಗರ ಆಸ್ತಿ ದಾಖಲೆ ವ್ಯವಸ್ಥೆಯಾಗಿದೆ. 23 ಲಕ್ಷಕ್ಕೂ ಅಧಿಕ ಆಸ್ತಿ ದಾಖಲೆಗಳನ್ನು ಆನ್‌ಲೈನ್ ಮೂಲಕ ನೇರವಾಗಿ ನಾಗರಿಕರ ಕೈಗೆ ತಲುಪಿಸಲಾಗಿದೆ. ನಗರದಲ್ಲಿ ದಾಖಲೆಗಳು ಸರಿ ಇರುವ ಸುಮಾರು 16 ಲಕ್ಷ ಎ ಖಾತೆಗಳಿವೆ. 7 ಲಕ್ಷ ಬಿ ಖಾತೆಗಳಿವೆ. ಭೂ ಗ್ಯಾರಂಟಿ ಮೂಲಕ ಬೆಂಗಳೂರಿನ ಪ್ರತಿಯೊಬ್ಬ ನೈಜ ಆಸ್ತಿ ಮಾಲೀಕರಿಗೂ ಸುರಕ್ಷಿತ, ವಿಶ್ವಾಸಾರ್ಹ ಹಾಗೂ ಎಲ್ಲೆಡೆಯೂ ಲಭ್ಯವಾಗುವ ಡಿಜಿಟಲ್ ಆಸ್ತಿ ದಾಖಲೆಗಳನ್ನು ಒದಗಿಸಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕಟ್ಟಡ ಉಲ್ಲಂಘನೆ ವಿನಾಯಿತಿ ಮಿತಿ ಹೆಚ್ಚಳ: ಕಟ್ಟಡದ ಉಲ್ಲಂಘನೆ ವಿನಾಯಿತಿ ಮಿತಿಯನ್ನು ಶೇ.5 ರ ಬದಲಾಗಿ ಶೇ.15ಕ್ಕೆ ಹೆಚ್ಚಿಸಲಾಗಿದೆ. ಶೇ.15ರಷ್ಟು ಪ್ರಮಾಣದ ಉಲ್ಲಂಘನೆಗಳಿಗೆ ದಂಡ ಪಾವತಿಸಿಕೊಂಡು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಲು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

100 ದಿನಗಳಲ್ಲಿ ಶುಲ್ಕ ಪಾವತಿ ಮಾಡಿದರೆ ಶೇ.60 ರಿಯಾಯ್ತಿ

ಬಿ ಖಾತೆಯಿಂದ ಎ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದವರು ಗೈಡೆನ್ಸ್ ವ್ಯಾಲ್ಯೂನ ಶೇ.5 ರಷ್ಟು ಕಟ್ಟಬೇಕಿದೆ. ಆದರೆ ಮೇ 16ರಿಂದ ಅನ್ವಯವಾಗುವಂತೆ 100 ದಿನಗಳ ಒಳಗಾಗಿ ಶುಲ್ಕ ಪಾವತಿಸಿದರೆ ಶೇ.2ರಷ್ಟು ಕಟ್ಟಿದರೆ ಸಾಕು. ಅಂದರೆ ಶೇ.60 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. 1 ಕೋಟಿ ರೂ. ಆಸ್ತಿಯ ಬೆಲೆ ಇದ್ದರೆ 5 ಲಕ್ಷ ರೂ. ಶುಲ್ಕ ಪಾವತಿ ಮಾಡಬೇಕಿತ್ತು. ಈಗ 2 ಲಕ್ಷ ರೂ. ಕಟ್ಟಿದರೆ ಸಾಕು. ಇದರಿಂದ 7 ಲಕ್ಷ ರೂ. ಆಸ್ತಿ ಮಾಲೀಕರಿಗೆ ಉಪಯೋಗವಾಗಲಿದೆ. 100 ದಿನಗಳಲ್ಲಿ ಇದರ ಉಪಯೋಗ ಪಡೆಯಲಿಲ್ಲ ಎಂದರೆ ನಂತರ ಶೇ.5ರಷ್ಟೇ ಶುಲ್ಕ ಪಾವತಿ ಮಾಡಬೇಕಾಗುತ್ತದೆ ಎಂದು ಶಿವಕುಮಾರ್ ತಿಳಿಸಿದರು.

ನೀಟ್ ತನಿಖೆ ಚುರುಕು; ಐವರನ್ನು ಬಂಧಿಸಿದ ಸಿಬಿಐ

ಪುಟ ೧➡ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್), ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಸಾರ್ವಜನಿಕ ಪರೀಕ್ಷೆಗಳ ಕಾಯ್ದೆ 2024ರ ಅನ್ವಯ ಕ್ರಿಮಿನಲ್ ಪಿತೂರಿ ಮತ್ತು ವಂಚನೆ ಪ್ರಕರಣ ದಾಖಲಿಸಲಾಗಿದೆ. ಸಿಬಿಐ ಅಧಿಕಾರಿಗಳು ಬುಧವಾರ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಪ್ರಧಾನ ಕಚೇರಿಗೆ ಭೇಟಿ ನೀಡಿ ಪರೀಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ, ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಪತ್ರಿಕೆ ಸೋರಿಕೆಗೆ ಬಳಸಲಾದ ಮೆಸೇಜಿಂಗ್ ಆ್ಯಪ್‌ಗಳ ಗುಂಪುಗಳನ್ನು ಏಜೆನ್ಸಿ ಪರಿಶೀಲಿಸುತ್ತಿದೆ. ರಾಜಸ್ಥಾನ ಪೊಲೀಸರ ಎಸ್‌ಒಜಿ ವರದಿಯ ಪ್ರಕಾರ, ಪರೀಕ್ಷೆಗೂ ಮೊದಲು ಹಂಚಿಕೆಯಾದ ಗೆಸ್ ಪೇಪರ್‌ನಲ್ಲಿದ್ದ ಸುಮಾರು 120 ಪ್ರಶ್ನೆಗಳು ಅಸಲಿ ಪತ್ರಿಕೆಯೊಂದಿಗೆ ತಾಳೆಯಾಗಿವೆ. ದೇಶದ 551 ನಗರಗಳು ಮತ್ತು ವಿದೇಶದ 14 ಕೇಂದ್ರಗಳಲ್ಲಿ ನಡೆದ ನೀಟ್–ಯುಜಿ 2026 ಪರೀಕ್ಷೆಗೆ ಸುಮಾರು 23 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು.

ಯಾರಿದು ಶುಭಂ ಖೈರ್ನಾರ್?

30 ವರ್ಷದ ಶುಭಂ ಖೈರ್ನಾರ್ ನಾಸಿಕ್ ಜಿಲ್ಲೆಯ ನಂದಗಾಂವ್ ನಿವಾಸಿಯಾಗಿದ್ದು, ಬಿಎಎಂಎಸ್ ವಿದ್ಯಾರ್ಥಿ. ಈತ ಸೋರಿಕೆಯಾದ ನೀಟ್ ಪ್ರಶ್ನೆಪತ್ರಿಕೆಯನ್ನು 10 ಲಕ್ಷ ರೂ.ಗೆ ಖರೀದಿಸಿ, ಅಭ್ಯರ್ಥಿಗಳಿಗೆ 15 ಲಕ್ಷ ರೂ.ಗೆ ಮಾರಾಟ ಮಾಡುತ್ತಿದ್ದ ಎನ್ನಲಾಗಿದೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಈತ ತನ್ನ ಕೂದಲನ್ನು ಕತ್ತರಿಸಿ ಗುರುತು ಮರೆಮಾಚಲು ಯತ್ನಿಸಿದ್ದರೂ, ಹಳೆಯ ಫೋಟೋಗಳ ಸಹಾಯದಿಂದ ಇಂದ್ರನಗರದಲ್ಲಿ ಈತನನ್ನು ಬಂಧಿಸಿದ್ದಾರೆ. ನ್ಯಾಯಾಲಯ ಈತನನ್ನು ಸಿಬಿಐ ಟ್ರಾನ್ಸಿಟ್ ರಿಮಾಂಡ್‌ಗೆ ಒಪ್ಪಿಸಿದೆ.

ಶುದ್ಧ ಪ್ರೀತಿಗೆ ವಿರೋಧವಿಲ್ಲ, ಲವ್ ಜಿಹಾದ್ ಆತಂಕಕಾರಿ

ಪುಟ ೧➡ ಎರಡು ವ್ಯಕ್ತಿಗಳ ನಡುವೆ ನಿಜವಾದ ಪ್ರೀತಿ ಇದ್ದರೆ ಅಲ್ಲಿ ಧರ್ಮ, ಜಾತಿ ಅಥವಾ ರಾಷ್ಟ್ರೀಯತೆ ಅಡ್ಡಿಯಾಗುವುದಿಲ್ಲ. ಆದರೆ ಅದು ನಿರ್ದಿಷ್ಟ ಕಾರ್ಯಸೂಚಿ ಅಥವಾ ಸಂಚಿನ ರೂಪ ಪಡೆದರೆ ಸಮಸ್ಯೆಯಾಗುತ್ತದೆ ಎಂದರು.

ಹಿಂದು–ಮುಸ್ಲಿಮರು ಒಂದೇ ಡಿಎನ್‌ಎ ಹೊಂದಿದ್ದಾರೆ ಎಂಬ ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ ಅವರು, ಒಂದೇ ಡಿಎನ್‌ಎ ಎಂದು ಹೇಳಿ ಹುಡುಗಿಯರನ್ನು ಅಪಹರಿಸುವುದನ್ನು ಸಮರ್ಥಿಸಲಾಗುವುದಿಲ್ಲ. ಅದು ಪ್ರೀತಿ ಅಲ್ಲ ಎಂದು ಹೇಳಿದರು. ತಾವು ಕೇವಲ ಹಿಂದು ಯುವತಿಯರ ಕುರಿತು ಮಾತ್ರ ಮಾತನಾಡುತ್ತಿಲ್ಲ ಎಂದು ಹೇಳಿದ ಹೊಸಬಾಳೆ, ಯಾವುದೇ ಸಮುದಾಯದ ಹುಡುಗಿಯ ಮೇಲಾದರೂ ಬಲವಂತ ಅಥವಾ ಮೋಸ ಸರಿಯಾದುದಲ್ಲ, ಸ್ವೀಕಾರ ಮಾಡಲು ಸಾಧ್ಯವಿಲ್ಲ ಎಂದರು.

ಅಂತರಧರ್ಮ ವಿವಾಹಗಳ ಕುರಿತು ಸ್ಪಷ್ಟನೆ ನೀಡಿದ ಅವರು, ಸಂಘದ ಅನೇಕ ಕುಟುಂಬಗಳಲ್ಲಿ ಜಾತಿ, ಸಮುದಾಯ ಮತ್ತು ಧರ್ಮ ಮೀರಿ ವಿವಾಹಗಳು ನಡೆದಿವೆ. ನಾವು ಅದನ್ನು ಪ್ರಚಾರ ಮಾಡಿಲ್ಲ, ಸಹಜ ವಿಷಯವಾಗಿ ಸ್ವೀಕರಿಸಿದ್ದೇವೆ ಎಂದು ಹೇಳಿದರು.

ವಿಶ್ವಾಸಮತ ಪರೀಕ್ಷೆ ಗೆದ್ದ ಸಿಎಂ ವಿಜಯ್

ಪುಟ ೧➡ ಇಂದೀಗ ಬಹುತೇಕ ಎಐಎಡಿಎಂಕೆಯ ಶಾಸಕರ ಬೆಂಬಲದಿಂದ ಸಂಖ್ಯೆ 144 ದಾಟಿದೆ. ಮುಖ್ಯಮಂತ್ರಿ ವಿಜಯ್ ಮತ್ತು ಇವರ ಸಂಪುಟದ ಕೆಲವು ಸಚಿವರು ಮೇ 10ರಂದು ಪ್ರಮಾಣವಚನ ಸ್ವೀಕರಿಸಿದ್ದರು. 22 ಶಾಸಕರು ವಿಜಯ್ ವಿರುದ್ಧ ಮತ ಹಾಕಿದ್ದಾರೆ. ಐವರು ಶಾಸಕರು ವಿಶ್ವಾಸ ಮತಯಾಚನೆ ಪರೀಕ್ಷೆಯಿಂದ ದೂರ ಉಳಿದಿದ್ದರು.

ಡಿಎಂಕೆ ಸಭಾತ್ಯಾಗ: ವಿಜಯ್ ವಿಶ್ವಾಸ ಮತ ಸಾಬೀತು ವೇಳೆ ಡಿಎಂಕೆಯ 59 ಶಾಸಕರು ಸದನದಿಂದ ಹೊರ ನಡೆದಿದ್ದರು. ನಮ್ಮ 47 ಶಾಸಕರು ವಿಜಯ್ ವಿರುದ್ಧ ಮತ ಚಲಾಯಿಸುವರು ಎಂದು ಎಐಎಡಿಎಂಕೆ ಹೇಳಿತ್ತಾದರೂ, ಪಕ್ಷದ 24 ಶಾಸಕರು ವಿಜಯ್ ಪರ ಮತ ಹಾಕಿದ್ದಾರೆಂದು ವರದಿಗಳು ತಿಳಿಸಿವೆ.



ನಟ, ನಿರ್ಮಾಪಕ ದಿಲೀಪ್‌ರಾಜ್ ವಿಧಿವಶ

ಪುಟ ೧➡ ಬುಧವಾರ ಸಂಜೆ ರಾಮನಗರ ಮತ್ತು ಕನಕಪುರ ಮುಖ್ಯರಸ್ತೆಯಲ್ಲಿರುವ ಅವರದೇ ಫಾರಂ ಹೌಸ್‌ನಲ್ಲಿ ಲಿಂಗಾಯತ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನಗಳನ್ನು ಅವರ ಅಣ್ಣನ ಮಗ ನೆರವೇರಿಸಿದರು. ದಿಲೀಪ್ ರಾಜ್ ಕನ್ನಡದಲ್ಲಿ 25ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. 2005ರಲ್ಲಿ ತೆರೆಕಂಡ ಬಾಯ್ ಫ್ರೆಂಡ್ ಅವರ ಮೊದಲ ಚಿತ್ರ. ಪುನೀತ್ ರಾಜಕುಮಾರ್ ಜತೆ ಮಿಲನ ಚಿತ್ರದಲ್ಲಿ ಅವರು ಖಳನಾಯಕನಾಗಿ ನಟಿಸಿದ್ದರು. ಇದರೊಂದಿಗೆ ಯು ಟರ್ನ್, ಆರ್ಕೆಸ್ಟ್ರಾ ಮೈಸೂರು, ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು, 7 ಓ ಕ್ಲಾಕ್, ಕ್ಷಣ ಕ್ಷಣ, ಲವ್ ಮಾಕ್ಟೇಲ್ 3 ಇವರು ನಟಿಸಿದ ಪ್ರಮುಖ ಚಿತ್ರಗಳು, ಕಂಬದಮನೆ ದಿಲೀಪ್‌ರಾಜ್ ನಟಿಸಿದ ಮೊದಲ ಧಾರಾವಾಹಿ. ಹಿಟ್ಲರ್ ಕಲ್ಯಾಣದಲ್ಲಿ ಅವರೇ ನಾಯಕನಾಗೂ ನಟಿಸಿದ್ದರು, ಹಾಗೇ ಪಾರು, ನಾ ನಿನ್ನ ಬಿಡಲಾರೆ, ಬ್ರಹ್ಮಗಂಟು ಅಲ್ಲದೆ ಇತ್ತೀಚೆಗಷ್ಟೇ ಕೃಷ್ಣರುಕ್ಕು ಎಂಬ ಹೊಸ ಸೀರಿಯಲ್ ಆರಂಭಿಸಿದ್ದರು. 1978ರ ಸೆ.2ರಂದು ಜನಿಸಿದ ದಿಲೀಪ್ ರಾಜ್ ಮೂಲತಃ ಅರಸಿಕೆರೆಯವರು. ಹುಟ್ಟಿದ್ದು ಬೆಳೆದದ್ದು ಮಾತ್ರ ಬೆಂಗಳೂರಲ್ಲಿ. ದಿಲೀಪ್‌ರಾಜ್ ಅವರ ನಿಧನಕ್ಕೆ ಸುಧಾರಾಣಿ, ಅಭಿನಯ, ಅನುಶ್ರೀ, ವಿಜಯ ರಾಘವೇಂದ್ರ ಸೇರಿದಂತೆ ಕನ್ನಡ ಚಿತ್ರರಂಗ ಹಾಗೂ ಕಿರುತೆರೆಯ ಹಲವಾರು ಕಲಾವಿದರು ಕಂಬನಿ ಮಿಡಿದಿದ್ದಾರೆ.



ಭತ್ತ, ತೊಗರಿ ಸೇರಿ 14 ಬೆಳೆಗಳ ಎಂಎಸ್‌ಪಿ ಹೆಚ್ಚಳ

ಪುಟ ೧➡ ಹತ್ತಿಗೆ ಈ ಬಾರಿ ದೊಡ್ಡ ಮಟ್ಟದ ಏರಿಕೆ ಸಿಕ್ಕಿದ್ದು, ಮಧ್ಯಮ ತಳಿಯ ಹತ್ತಿಗೆ ಕ್ವಿಂಟಾಲ್‌ಗೆ 557 ರೂ. ಹೆಚ್ಚಳದೊಂದಿಗೆ 8,267 ರೂ. ಹಾಗೂ ಉತ್ತಮ ತಳಿಗೆ 8,667 ರೂ. ಎಂಎಸ್‌ಪಿ ನಿಗದಿಯಾಗಿದೆ. ಸೂರ್ಯಕಾಂತಿ ಬೀಜಕ್ಕೆ ಅತಿ ಹೆಚ್ಚು 622 ರೂ. ಏರಿಕೆ ದೊರೆತು, ಕ್ವಿಂಟಾಲ್‌ಗೆ 8,343 ರೂ. ಆಗಿದೆ.

ಗುರೆಳ್ಳು (ನೈಜರ್‌ಸೀಡ್) ಬೆಲೆ 515 ರೂ. ಏರಿಕೆಯಾಗಿ 10,052 ರೂ.ಗೆ, ಎಳ್ಳು 500 ರೂ. ಹೆಚ್ಚಳದೊಂದಿಗೆ 10,346 ರೂ.ಗೆ ತಲುಪಿದೆ. ಸೋಯಾಬೀನ್(ಹಳದಿ) ಬೆಲೆ 380 ರೂ. ಹೆಚ್ಚಳದೊಂದಿಗೆ 5,708 ರೂ. ಆಗಿದ್ದರೆ, ನೆಲಗಡಲೆ 254 ರೂ. ಏರಿಕೆಯಾಗಿ 7,517 ರೂ. ನಿಗದಿಯಾಗಿದೆ.

ದ್ವಿದಳ ಧಾನ್ಯಗಳಲ್ಲಿ ತೊಗರಿಗೆ 450 ರೂ. ಹೆಚ್ಚಳದೊಂದಿಗೆ 8,450 ರೂ., ಉದ್ದಿನ ಬೇಳೆಗೆ 400 ರೂ. ಹೆಚ್ಚಳದೊಂದಿಗೆ 8,200 ರೂ. ಎಂಎಸ್‌ಪಿ ಘೋಷಿಸಲಾಗಿದೆ. ಹೆಸರುಬೇಳೆ ಬೆಲೆಯಲ್ಲಿ 12 ರೂ. ಏರಿಕೆ ಮಾಡಿ 8,780 ರೂ.ಗೆ ನಿಗದಿಪಡಿಸಲಾಗಿದೆ.

ಇತರೆ ಧಾನ್ಯಗಳಲ್ಲಿ ಜೋಳ(ಹೈಬ್ರಿಡ್) ಬೆಲೆ 324 ರೂ. ಹೆಚ್ಚಳದೊಂದಿಗೆ 4,023 ರೂ. ಹಾಗೂ ಮಾಲ್ದಂಡಿ ಜೋಳಕ್ಕೆ 4,073 ರೂ. ನಿಗದಿಯಾಗಿದೆ. ಸಜ್ಜೆ ಕ್ವಿಂಟಾಲ್‌ಗೆ 125 ರೂ. ಹೆಚ್ಚಳದೊಂದಿಗೆ 2,900 ರೂ., ರಾಗಿ 319 ರೂ. ಏರಿಕೆಯೊಂದಿಗೆ 5,205 ರೂ. ಮತ್ತು ಮೆಕ್ಕೆಜೋಳ 10 ರೂ. ಹೆಚ್ಚಳದೊಂದಿಗೆ 2,410 ರೂ. ಆಗಿದೆ.

ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಅವರ ಪ್ರಕಾರ, ರೈತರಿಗೆ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ ಶೇ.50 ದೊರೆಯುವಂತೆ ಮಾಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಹೆಸರುಕಾಳಿಗೆ ಶೇ.61, ಸಜ್ಜೆ ಹಾಗೂ ಮೆಕ್ಕೆಜೋಳಕ್ಕೆ ಶೇ.56 ಮತ್ತು ತೊಗರಿಗೆ ಶೇ.54ರಷ್ಟು ಲಾಭ ಸಿಗಲಿದೆ ಎಂದು ಅಂದಾಜಿಸಲಾಗಿದೆ.

ಈ ಬೆಳೆಗಳ ಖರೀದಿಗಾಗಿ ಕೇಂದ್ರ ಸರ್ಕಾರ ಸುಮಾರು 2.60 ಲಕ್ಷ ಕೋಟಿ ರೂಪಾಯಿ ಮೀಸಲಿಟ್ಟಿದ್ದು, ವಾರ್ಷಿಕ ಸಂಗ್ರಹಣೆ 824.41 ಲಕ್ಷ ಟನ್ ತಲುಪುವ ನಿರೀಕ್ಷೆಯಿದೆ.

ಹಿಜಾಬ್ ನಿಷೇಧ ವಾಪಸ್

ಪುಟ ೧➡ ಯಾವುದೇ ಧರ್ಮ ಅಥವಾ ಸಂಪ್ರದಾಯದ ಆಚರಣೆಯು ವಿದ್ಯಾರ್ಥಿಯ ಶಿಕ್ಷಣದ ಹಕ್ಕಿಗೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬುಧವಾರ ಸಮಗ್ರ ಶಿಕ್ಷಣ ಕರ್ನಾಟಕದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಅವರೊಂದಿಗಿನ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು, ಕಳೆದ ಏ.24ರಂದು ಸಿಇಟಿಯಲ್ಲಿ ಅಧಿಕಾರಿಗಳು ವಿದ್ಯಾರ್ಥಿಯ ಜನಿವಾರ ತೆಗೆಸಿದ್ದು ಸರಿಯಲ್ಲ. ಮುಖ್ಯಮಂತ್ರಿಗಳು ಕೂಡ ಈ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದರು. ಮಕ್ಕಳ ಹಿತದೃಷ್ಟಿಯಿಂದ ಜನಿವಾರ ವಿಚಾರದಲ್ಲಿ ಕಠಿಣ ಕಾನೂನು ತರಲು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಏಕರೂಪ ನಿಯಮ ತಂದಿದ್ದೇವೆ. ಜನಿವಾರ, ಪೇಟ, ಹಿಜಾಬ್, ಸ್ಕಾರ್ಫ್ ಎಲ್ಲದರ ಬಗ್ಗೆ ನಿಯಮ ಮಾಡಿದ್ದೇವೆ ಎಂದರು.

> ಶಾಲೆಗಳಲ್ಲಿ ಸಂಪ್ರದಾಯದ ವಿಚಾರದಲ್ಲಿ ಆಗುತ್ತಿದ್ದ ತಾರತಮ್ಯಕ್ಕೆ ಈ ಆದೇಶ ಕಡಿವಾಣ ಹಾಕಲಿದ್ದು, ಎಲ್ಲ ಧರ್ಮಕ್ಕೆ ಸೇರಿದ ಆದೇಶವಾಗಿದೆ.
> ■ ರಿಜ್ವಾನ್ ಅರ್ಷದ್, ಶಾಸಕ

ರಾಜ್ಯದಲ್ಲಿ ಹಿಜಾಬ್ ವಿವಾದ ತಾರಕಕ್ಕೆ ಏರಿದಾಗ ಹಿಂದು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜ್‌ಗೆ ಬರಲು ಆರಂಭಿಸಿದ್ದರು. ಕೇಸರಿ ಶಾಲು, ಮುಸಲ್ಮಾನರು ಧರಿಸುವ ಟೋಪಿಯ ಧಾರಣೆಯ ಬಗ್ಗೆ ಆದೇಶದಲ್ಲಿ ಅವಕಾಶ ಉಲ್ಲೇಖವಿಲ್ಲ. ಈ ಹಿನ್ನೆಲೆಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಸಚಿವರುಗಳು ಸ್ಪಷ್ಟ ಉತ್ತರ ನೀಡದೆ ನುಣುಚಿಕೊಂಡರು. ಆದರೆ, ನಿಯಮಗಳಲ್ಲಿ ಅಗತ್ಯಬಿದ್ದರೆ ಮುಖ್ಯಮಂತ್ರಿಗಳ ಜತೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಆದೇಶದಲ್ಲಿ ಏನೆಲ್ಲಾ ಧಾರಣೆಗೆ ಅವಕಾಶ

ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತಗಳ ಅನ್ವಯ ಸಾಮಾನ್ಯವಾಗಿ ಧರಿಸುವ ಪೇಟ/ಟರ್ಬನ್, ಜನಿವಾರ, ಪವಿತ್ರ ದಾರ, ಶಿವದಾರ, ರುದ್ರಾಕ್ಷಿ, ತಲೆವಸ್ತ್ರ/ಹಿಜಾಬ್ ಮುಂತಾದವನ್ನು ಸರ್ಕಾರ ಸೇರಿಸಿದೆ. ಜತೆಗೆ ಇತರೆ ಯಾವುದೇ ಸಮಾನ ಸ್ವರೂಪದ ಸಾಂಪ್ರದಾಯಿಕ ಹಾಗೂ ಪದ್ಧತಿ ಆಧಾರಿತವಾದ ಸಂಕೇತಗಳು ಸೇರಿರಬಹುದು ಎಂದು ಹೇಳಿದೆ. ಆದರೆ ಇವು ಶಿಸ್ತು, ಸುರಕ್ಷತೆ ಮತ್ತು ವಿದ್ಯಾರ್ಥಿಯ ಗುರುತಿಸುವಿಕೆಗೆ ಅಡ್ಡಿಯಾಗಬಾರದು ಎಂದು ಹೇಳಿದೆ. ಉಳಿದಂತೆ ನಾಮ, ತಿಲಕ ಧಾರಣೆಗೆ ಅವಕಾಶ ನೀಡಲಾಗಿದೆ. ಯಾವುದೇ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆ ಹಾಗೂ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ನಿರಾಕರಿಸುವಂತಿಲ್ಲ. ಧಾರ್ಮಿಕ ಸಂಕೇತ ಧರಿಸುವಂತೆ ವಿದ್ಯಾರ್ಥಿಯನ್ನ ಒತ್ತಾಯಿಸುವಂತಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 14 ಮೇ 2026, ಮಂಗಳೂರು

ಧರ್ಮ ಬದಲಾದರೂ ರಾಷ್ಟ್ರೀಯತೆ ಬದಲಾಗುವುದಿಲ್ಲ

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸಂದರ್ಶನ

ಭಾರತ ಹಿಂದು ರಾಷ್ಟ್ರವೇ, ನಾವು ಹೊಸದಾಗಿ ನಿರ್ಮಿಸುತ್ತಿಲ್ಲ



ಭಾರತವನ್ನು ಹಿಂದು ರಾಷ್ಟ್ರವನ್ನಾಗಿ ಮಾಡಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಎನ್ನುವುದು ತಪ್ಪು. ಭಾರತ ಎಂದಿಗೂ ಹಿಂದು ರಾಷ್ಟ್ರವೇ ಆಗಿತ್ತು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಹೇಳಿದ್ದಾರೆ. ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಇಲ್ಲಿ ಬ್ರಿಟಿಷರ ಆಳ್ವಿಕೆ ಇತ್ತು. ಆಗಲೂ ಇದು ಹಿಂದು ರಾಷ್ಟ್ರವೇ ಆಗಿತ್ತು, ಬ್ರಿಟಿಷ್ ರಾಷ್ಟ್ರವಾಗಿರಲಿಲ್ಲ ಎಂದು ಸ್ಪಷ್ಟಪಡಿಸಿದರು. ಅಲ್ಪಸಂಖ್ಯಾತ ಸಮುದಾಯಗಳಿಗೆ ಭಯ ಹುಟ್ಟಿಸುವಂತ ರಾಜಕೀಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ಹೊಸಬಾಳೆ ಅವರು, ಎಲ್ಲರಿಗೂ ಒಂದೇ ಮೂಲ, ಒಂದೇ ಪೂರ್ವಜರು, ಒಂದೇ ಡಿಎನ್‌ಎ. ಹೀಗಿರುವಾಗ ಯಾರು ಬೇರೆ ಬೇರೆ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ವಸುಧೈವ ಕುಟುಂಬಕಂ ಹೇಳುವವರು ಭೇದ ಮಾಡುವುದಿಲ್ಲ

ಲೋಕವೇ ಒಂದು ಕುಟುಂಬ ಎಂದು ನಂಬುವವರು ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸಲು ಸಾಧ್ಯವೇ ಇಲ್ಲ ಎಂದರು. ಬೇರೆ ಧರ್ಮ ಆಚರಿಸುವ ವ್ಯಕ್ತಿ, ಇನ್ನೊಬ್ಬರ ನಂಬಿಕೆಗೆ ಅಡ್ಡಿಯಾಗಬಾರದು ಅಷ್ಟೇ ಎಂದು ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಮಿತವ್ಯಯ ದೇಶದ ಹಿತಕ್ಕಾಗಿ

ಪ್ರಧಾನಿ ಕರೆ ನೀಡಿರುವ ಮಿತವ್ಯಯ ಕ್ರಮಗಳ ಕುರಿತು ಪ್ರತಿಕ್ರಿಯಿಸಿದ ಹೊಸ ಬಾಳೆ ಅವರು, ಇಂತಹ ಕ್ರಮಗಳನ್ನು ಹಿಂದೆ ಕೂಡ ಜಾರಿಗೆ ತರಲಾಗಿತ್ತು. ದೇಶದ ಹಿತದೃಷ್ಟಿ ಯಿಂದ ಪ್ರಧಾನಿ ಮಿತವ್ಯಯಕ್ಕೆ ಕರೆ ನೀಡಿರುವುದು ಸರಿಯಾದ ನಿರ್ಧಾರ ಎಂದರು.

ಅಲ್ಪಸಂಖ್ಯಾತ ಪರಿಕಲ್ಪನೆಗೆ ಆಧಾರವೇ ಇಲ್ಲ

ಭಾರತದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರೆಂಬ ಪರಿಕಲ್ಪನೆಗೆ ದೃಢವಾದ ಆಧಾರವಿಲ್ಲ ಎಂದು ಹೊಸಬಾಳೆ ಅವರು ಅಭಿಪ್ರಾಯಪಟ್ಟರು. ಒಬ್ಬ ವ್ಯಕ್ತಿ ತನ್ನ ಆರಾಧನೆಯ ವಿಧಾನವನ್ನು ಬದಲಾಯಿಸಿಕೊಂಡಿದ್ದಾನೆ ಅಷ್ಟೇ. ಧರ್ಮ ಬದಲಾದರೆ ರಾಷ್ಟ್ರೀಯತೆ ಬದಲಾಗುವುದಿಲ್ಲ. ನಾವು ಎಲ್ಲರೂ ಒಂದೇ ಜನ, ಒಂದೇ ಪರಂಪರೆ ಹೊಂದಿರುವವರು ಎಂದು ಹೇಳಿದರು. ಆರ್‌ಎಸ್‌ಎಸ್‌ನಲ್ಲಿ ವಿವಿಧ ಧಾರ್ಮಿಕ ಸಮುದಾಯಗಳವರೂ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದೂ ಅವರು ತಿಳಿಸಿದರು. ಅವರು ನಮ್ಮಲ್ಲಿ ಕೇವಲ ಪ್ರದರ್ಶನದ ವಸ್ತುಗಳಲ್ಲ. ಸಮಾನವಾಗಿ ಸಂಘದ ಕಾರ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳಿದರು.

ಭಯ ಎಲ್ಲಿ? ಸಂಖ್ಯೆಯೇನು ಕಡಿಮೆಯಾಯಿತೇ?: ಹಿಂದುತ್ವ ಹಾಗೂ ಹಿಂದು ರಾಷ್ಟ್ರದ ವಿಚಾರಗಳಿಂದ ಅಲ್ಪಸಂಖ್ಯಾತರಲ್ಲಿ ಭಯ ಉಂಟಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ ಅವರು, ಈ ಪ್ರಶ್ನೆಯನ್ನು ಸಂಘ ಸ್ಥಾಪನೆಯಾದ ನೂರು ವರ್ಷಗಳಿಂದ ಕೇಳಲಾಗುತ್ತಿದೆ ಎಂದರು. ಮುಸ್ಲಿಮರ ಸಂಖ್ಯೆ ಕಡಿಮೆಯಾಯಿತೇ? ಅವರು ದೇಶ ಬಿಟ್ಟು ಓಡಿಹೋಗಬೇಕಾಯಿತೇ? ಅವರನ್ನು ಎರಡನೇ ದರ್ಜೆ ಪ್ರಜೆಗಳಂತೆ ನಡೆಸಲಾಗುತ್ತಿದೆಯೇ? ಎಂದು ಪ್ರತಿಪ್ರಶ್ನೆ ಹಾಕಿದರು. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶದಂತಹ ಬಿಜೆಪಿ ಆಡಳಿತದ ರಾಜ್ಯಗಳನ್ನು ಉಲ್ಲೇಖಿಸಿದ ಅವರು, ಸರ್ಕಾರದ ಯೋಜನೆಗಳು ಬೇರೆ ಧರ್ಮದವರಿಗೆ ತಲುಪುತ್ತಿಲ್ಲವೇ? ಎಂದು ಪ್ರಶ್ನಿಸಿದರು.

ಧರ್ಮ ಆಧಾರಿತ ರಾಜಕೀಯ ಪಕ್ಷಗಳ ಬಗ್ಗೆ

ಮುಸ್ಲಿಮರಿಗೆ ಪ್ರತ್ಯೇಕ ನಾಯಕತ್ವ ಅಗತ್ಯವಿಲ್ಲವೆಂದು ಭಾವಿಸುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರತಿ ಸಮುದಾಯಕ್ಕೂ ತನ್ನದೇ ನಾಯಕತ್ವ ಇರಬಹುದು. ಆದರೆ ರಾಜಕೀಯ ಪಕ್ಷಗಳು ಮತೀಯ ಆಧಾರದ ಮೇಲೆ ನಿರ್ಮಾಣವಾಗಬಾರದು ಎಂದು ಹೇಳಿದರು.ಭಾರತೀಯ ಸಂವಿಧಾನವು ವಿವಿಧ ರೀತಿಯ ಸಂಘಟನೆಗಳಿಗೆ ಅವಕಾಶ ನೀಡುತ್ತದೆ. ಆದರೆ ಮತಾಧಾರಿತ ಮೇಲೆ ರಾಜಕೀಯ ನಡೆಯಲು ಆರಂಭವಾದಾಗ ಸಮಸ್ಯೆಗಳು ಉದ್ಭವಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ಕೇರಳದಲ್ಲಿ ಕ್ರೈಸ್ತ ಸಮುದಾಯ ಕೇಂದ್ರೀಕೃತ ಪಕ್ಷಗಳಿವೆ. ಸಿಖ್ ಧರ್ಮ ಆಧಾರಿತ ಪಕ್ಷವೂ ಇದೆ. ಜನಪ್ರತಿನಿಧಿತ್ವ ಕಾಯ್ದೆಯ ನಿಯಮಗಳನ್ನು ಪಾಲಿಸಿದರೆ ಯಾವುದೇ ರಾಜಕೀಯ ಪಕ್ಷ ಸ್ಥಾಪಿಸಬಹುದು. ಮುಸ್ಲಿಂ ಲೀಗ್ ಕೂಡ ಇದೆ. ಹಿಂದು ಮಹಾಸಭೆಯೂ ಇತ್ತು ಎಂದು ಹೇಳಿದರು.

ಅಲ್ಪಸಂಖ್ಯಾತ ನಾಯಕರೊಂದಿಗೆ ಸಂವಾದ

ಅಲ್ಪಸಂಖ್ಯಾತ ಸಮುದಾಯಗಳ ನಾಯಕರೊಂದಿಗೆ ಆರ್‌ಎಸ್‌ಎಸ್ ನಿರಂತರ ಸಂವಾದ ನಡೆಸುತ್ತಿದೆ ಎಂದು ಹೊಸಬಾಳೆ ಹೇಳಿದರು. ರಾಷ್ಟ್ರ–ರಾಜ್ಯದ ಪರಿಕಲ್ಪನೆ ಕುರಿತು ದೇಶದ ಬೌದ್ಧಿಕ ವಲಯ ಹಾಗೂ ಅಕಾಡೆಮಿಕ್ ಕ್ಷೇತ್ರದಲ್ಲಿ ಸಮಗ್ರ ಚರ್ಚೆ ನಡೆಯಬೇಕು ಎಂದೂ ಅಭಿಪ್ರಾಯಪಟ್ಟರು.

ಮುಸ್ಲಿಮರಲ್ಲಿ ರಾಷ್ಟ್ರೀಯತಾವಾದಿ ನಾಯಕತ್ವ ಅಪರೂಪ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮುಸ್ಲಿಂ ಸಮುದಾಯದಲ್ಲಿ ರಾಷ್ಟ್ರೀಯತಾವಾದಿ ನಾಯಕತ್ವ ಇತ್ತಾದರೂ, ಈಗ ಅಂತಹ ನಾಯಕತ್ವ ಅಪರೂಪದ ವಸ್ತುವಾಗಿದೆ ಎಂದು ಹೊಸಬಾಳೆ ಅವರು ಹೇಳಿದ್ದಾರೆ. ಇಂದಿಗೂ ಕೆಲ ರಾಷ್ಟ್ರೀಯತಾವಾದಿ ಮುಸ್ಲಿಂ ನಾಯಕರು ಇದ್ದರೂ ಅವರಿಗೆ ಸಮುದಾಯದ ಬೆಂಬಲ ದೊರೆಯುತ್ತಿಲ್ಲ ಎಂದು ಹೇಳಿದರು. ಎಐಎಂಐಎಂ ನಾಯಕ ಅಸಾದುದ್ದೀನ್ ಓವೈಸಿ ಅವರು, ಇತ್ತೀಚೆಗೆ ಮುಸ್ಲಿಮರು ತಮ್ಮದೇ ನಾಯಕತ್ವ ಹಾಗೂ ರಾಜಕೀಯ ಪಕ್ಷ ರೂಪಿಸಬೇಕಾದ ಕಾಲ ಬಂದಿದೆ ಎಂದು ಹೇಳಿದ್ದ ಬಗ್ಗೆ ಪ್ರಶ್ನಿಸಿದಾಗ, ಅದು ಅವರ ಅಭಿಪ್ರಾಯ. ಅವರ ಸಮುದಾಯ ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ ಎಂದು ಹೊಸಬಾಳೆ ಅವರು ಪ್ರತಿಕ್ರಿಯಿಸಿದರು. ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಮುಸ್ಲಿಂ ಸಮುದಾಯದಲ್ಲಿ ರಾಷ್ಟ್ರಭಕ್ತ ನಾಯಕತ್ವವಿತ್ತು. ಆದರೆ ಪಾಕಿಸ್ತಾನ ರಚನೆಯ ಬಳಿಕ ದೇಶದ ರಾಜಕೀಯದಲ್ಲಿ ಕ್ರಮೇಣ ಬದಲಾವಣೆಗಳು ನಡೆದವು. ಅದರ ಪರಿಣಾಮವಾಗಿ ಹುಸಿ–ಧರ್ಮನಿರಪೇಕ್ಷ ನೀತಿಗಳು ಬಲ ಪಡೆದವು ಎಂದು ಅವರು ಆರೋಪಿಸಿದರು. ಇದೀಗ ರಾಷ್ಟ್ರೀಯತಾವಾದಿ ಮುಸ್ಲಿಂ ನಾಯಕರು ಇದ್ದರೂ ಅವರಿಗೆ ಬೆಂಬಲ ಸಿಗುತ್ತಿಲ್ಲ. ಪ್ರತ್ಯೇಕತಾವಾದಿ ಮನೋಭಾವ ಹೊಂದಿದವರಿಗಷ್ಟೇ ಸಮುದಾಯದ ಬೆಂಬಲ ದೊರೆಯುತ್ತಿದೆ ಎಂದು ಹೊಸಬಾಳೆ ಅವರು ಹೇಳಿದರು.

ರಾಷ್ಟ್ರದ ಮೂಲ ಮೌಲ್ಯಗಳ ಬಗ್ಗೆ ಒಮ್ಮತ ಅಗತ್ಯ

ದೇಶದ ರಾಷ್ಟ್ರೀಯತೆ ಮತ್ತು ಮೂಲಭೂತ ಮೌಲ್ಯಗಳ ವಿಚಾರದಲ್ಲಿ ಸಾಮರಸ್ಯ ಮುಖ್ಯ ಎಂದು ಹೊಸಬಾಳೆ ಅವರು ಒತ್ತಿ ಹೇಳಿದರು. ಈ ದೇಶದ ರಾಷ್ಟ್ರೀಯತೆ, ರಾಷ್ಟ್ರದ ಮೂಲ ಮೌಲ್ಯಗಳ ಬಗ್ಗೆ ಒಮ್ಮತ ಇರಬೇಕಾಗಿದೆ. ಈ ವಿಷಯಗಳನ್ನು ಜವಾಹರಲಾಲ್ ನೆಹರು, ಮಹಾತ್ಮಾ ಗಾಂಧಿ ಹಾಗೂ ಸಂಪೂರ್ಣಾನಂದಜೀ ಮೊದಲಾದವರು ಕೂಡ ಪ್ರಸ್ತಾಪಿಸಿದ್ದರು ಎಂದರು. ಆಧ್ಯಾತ್ಮಿಕ ಕ್ಷೇತ್ರದ ಶ್ರೀಅರವಿಂದೋ ಅಥವಾ ಸ್ವಾಮಿ ವಿವೇಕಾನಂದ ಅವರ ಬಗ್ಗೆ ಅಲ್ಲ, ರಾಜಕೀಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ನಾಯಕರ ವಿಚಾರವನ್ನು ಉಲ್ಲೇಖಿಸುತ್ತಿದ್ದೇನೆ ಎಂದು ಅವರು ಸ್ಪಷ್ಟಪಡಿಸಿದರು.

ಧರ್ಮ ಚರ್ಚೆ ಅಪವಿತ್ರ ಎನ್ನುವ ಮನೋಭಾವ ತಪ್ಪು

ಧರ್ಮ ಅಥವಾ ರಾಷ್ಟ್ರೀಯ ಮೌಲ್ಯಗಳ ಬಗ್ಗೆ ಚರ್ಚೆ ಮಾಡುವುದು ಧರ್ಮನಿರಪೇಕ್ಷತೆಯ ವಿರುದ್ಧ ಎಂಬ ಮನೋಭಾವ ದೇಶದಲ್ಲಿ ದೀರ್ಘಕಾಲ ಬೆಳೆಸಲ್ಪಟ್ಟಿದೆ ಎಂದು ಹೊಸಬಾಳೆ ಅವರು ಟೀಕಿಸಿದರು. ಧರ್ಮ ಸೇರಿದಂತೆ ಇಂತಹ ವಿಚಾರಗಳ ಬಗ್ಗೆ ಚರ್ಚಿಸುವುದೇ ಅಪವಿತ್ರ, ಕಳಂಕ ಎನ್ನುವ ವಾತಾವರಣ ನಿರ್ಮಾಣವಾಗಿದೆ. ಅದು ಇರಬಾರದು ಎಂದು ಅವರು ಹೇಳಿದರು.

ವಿಶ್ವಶಾಂತಿಗೆ ಭಾರತದಿಂದ ಸಕಾರಾತ್ಮಕ ಪಾತ್ರ

ಕಳೆದ ಒಂದು ದಶಕದಲ್ಲಿ ಜಾಗತಿಕ ವೇದಿಕೆಯಲ್ಲಿ ಭಾರತದ ಸ್ಥಾನಮಾನವು ಬಹಳವಾಗಿ ಬದಲಾಗಿದ್ದು, ಇಂದು ಭಾರತವನ್ನು ವಿಶ್ವ ರಾಷ್ಟ್ರಗಳು ಗೌರವದಿಂದ ಕಾಣುತ್ತಿವೆ. ಇದೇ ಕಾರಣಕ್ಕೆ ವಿಶ್ವಶಾಂತಿ, ಜವಾಬ್ದಾರಿ ಹಾಗೂ ರಾಷ್ಟ್ರಗಳ ನಡುವೆ ಸಕಾರಾತ್ಮಕ ಸಂವಾದಕ್ಕೆ ಭಾರತ ಮಹತ್ವದ ಪಾತ್ರ ವಹಿಸಬಹುದಾಗಿದೆ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು. ಆರ್‌ಎಸ್‌ಎಸ್ ಭಾರತದ ವಿದೇಶಾಂಗ ನೀತಿಗೆ ಅಧಿಕೃತವಾಗಿ ಸಲಹೆ ನೀಡುವುದಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಅನುಸರಿಸುತ್ತಿರುವ ನೀತಿಗಳಲ್ಲಿ ಆರ್‌ಎಸ್‌ಎಸ್‌ನ ಚಿಂತನೆಗಳ ಅಂಶಗಳು ಕಂಡುಬರುತ್ತವೆ ಎಂದು ಹೇಳಿದರು.

ವಿಶ್ವದಲ್ಲಿ ಭಾರತದ ಮಾತಿಗೆ ಮೌಲ್ಯ

ಭಾರತದ ಜಾಗತಿಕ ಪ್ರಭಾವದ ಕುರಿತು ಮಾತನಾಡಿದ ಅವರು, ಇಂದು ವಿಶ್ವ ನಕ್ಷೆಯಲ್ಲಿ ಭಾರತವನ್ನು ಗಮನದಿಂದ ಕೇಳಲಾಗುತ್ತಿದೆ, ಗುರುತಿಸಲಾಗುತ್ತಿದೆ ಹಾಗೂ ಗೌರವಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಗಳು ಮತ್ತು ನಾಯಕರಲ್ಲಿ ಸದುದ್ದೇಶ, ಸಂವಾದ ಹಾಗೂ ಶಾಂತಿಯ ಮನೋಭಾವ ಮೂಡಿಸಲು ಭಾರತ ಪ್ರಮುಖ ಪಾತ್ರವಹಿಸಬಹುದು ಎಂದು ಹೇಳಿದರು. ಜನರನ್ನು ಸಕಾರಾತ್ಮಕ ಚರ್ಚೆ ಮತ್ತು ಸಂವಾದದಲ್ಲಿ ತೊಡಗಿಸಿಕೊಳ್ಳುವುದು ಅಗತ್ಯ ಎಂದೂ ಅವರು ಅಭಿಪ್ರಾಯಪಟ್ಟರು.

ವಿದೇಶಗಳಲ್ಲಿ ದೇವಾಲಯ ನಿರ್ಮಾಣ ವಿವಾದ ಅಲ್ಲ

ವಿದೇಶಗಳಲ್ಲಿ ಭಾರತೀಯರು ದೇವಸ್ಥಾನಗಳನ್ನು ನಿರ್ಮಿಸುತ್ತಿರುವುದು ಸ್ಥಳೀಯರೊಂದಿಗೆ ಘರ್ಷಣೆಗೆ ಕಾರಣವಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ ಅವರು, ಅವರು ದೇವಸ್ಥಾನ ಅಥವಾ ಹನುಮಾನ್ ಪ್ರತಿಮೆ ನಿರ್ಮಿಸಿರುವುದು ಕಾನೂನುಬಾಹಿರವಾಗಿ ಅಲ್ಲ. ಭಾರತದ ಜನರು ಸಾಮಾನ್ಯವಾಗಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಿಲ್ಲ. ಅವರ ಅಪರಾಧ ಪ್ರಮಾಣವೂ ಅತ್ಯಂತ ಕಡಿಮೆ ಇದೆ ಎಂದು ಸ್ಪಷ್ಟಪಡಿಸಿದರು.

ವಿದೇಶದಲಿದ್ದರೂ ಸ್ಥಳೀಯ ಸಮಾಜದ ಬಗ್ಗೆ ಹೊಣೆಗಾರಿಕೆ ಇರಲಿ

ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ಸಂದೇಶ ನೀಡಿದ ಹೊಸಬಾಳೆ ಅವರು, ಯಾವ ದೇಶದಲ್ಲಿ ಜೀವನ ಸಾಗಿಸುತ್ತೀರೋ ಆ ಸಮಾಜದ ಬಗ್ಗೆ ಜವಾಬ್ದಾರಿ ಇರಬೇಕು. ಆ ದೇಶದ ಮೇಲಿನ ನಿಷ್ಠೆ ಪ್ರಶ್ನೆಗೆ ಒಳಪಡುವಂತಿರಬಾರದು. ಭಾರತ ಜತೆಗಿನ ನಂಟು ಸಹಜ, ಆದರೆ ತಾವು ಬದುಕುತ್ತಿರುವ ಸಮಾಜದ ಕಲ್ಯಾಣದ ಕುರಿತೂ ಕಾಳಜಿ ಇರಬೇಕು ಎಂದು ಹೇಳಿದರು.

ಶಿಕ್ಷಣದ ಮೂಲಕ ಜಾಗೃತಿ ಅಗತ್ಯ

ಸಾವಿರ ವರ್ಷಗಳಿಂದ ಬಂದಿರುವ ಸಮಸ್ಯೆಗಳನ್ನು 10 ವರ್ಷಗಳಲ್ಲಿ ಸರಿಪಡಿಸಲಾಗುವುದಿಲ್ಲ. ಶಿಕ್ಷಣ ಸಂಸ್ಥೆಗಳು, ಕುಟುಂಬಗಳು ಹಾಗೂ ಸ್ಥಳೀಯ ಸಮುದಾಯಗಳ ಮೂಲಕ ಮೌಲ್ಯಗಳನ್ನು ಬೆಳೆಸಬೇಕು. ಪರಿಸರದತ್ತ ಹೊಣೆಗಾರಿಕೆ ಬಗ್ಗೆ ಜಾಗೃತಿ ಮೂಡಿಸಬೇಕು. ಇದಕ್ಕೆ ಸಮಯ ಬೇಕಾಗುತ್ತದೆ ಎಂದು ಹೇಳಿದರು.

ಬಿಜೆಪಿ ಬೆಳವಣಿಗೆ ಸ್ವೀಕೃತಿಯ ಸಂಕೇತ

ಹಿಮಂತ ಬಿಸ್ವಾ ಶರ್ಮಾ, ಸಾಮ್ರಾಟ್ ಚೌಧರಿ ಹಾಗೂ ಸುವೇಂದು ಅಧಿಕಾರಿ ಮೊದಲಾದವರು ಬೇರೆ ಪಕ್ಷಗಳಿಂದ ಬಂದು ಬಿಜೆಪಿ ನೇತೃತ್ವಕ್ಕೆ ಏರಿರುವುದು ಆರ್‌ಎಸ್‌ಎಸ್‌ಗೆ ಅಸಮಾಧಾನವೇ ಅಥವಾ ಸಂತೋಷವೇ ಎಂಬ ಪ್ರಶ್ನೆಗೆ, ನಾವು ಸಂತೋಷದಲ್ಲಿದ್ದೇವೆ. ಬಿಜೆಪಿ ಬೆಳೆಯುತ್ತಿದೆ. ಅಂದರೆ ಅದರ ಸ್ವೀಕೃತಿ ಹೆಚ್ಚುತ್ತಿದೆ ಎಂಬುದೇ ಅರ್ಥ ಎಂದು ಹೇಳಿದರು. ಹೊಸ ನಾಯಕರು ಕಾಲಕ್ರಮೇಣ ಆರ್‌ಎಸ್‌ಎಸ್‌ನ ಚಿಂತನೆ ಮತ್ತು ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳುತ್ತಾರೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಇವರು ಈಗಾಗಲೇ ವೈಚಾರಿಕ ಕುಟುಂಬದ ಭಾಗ

ಬಿಜೆಪಿಗೆ ಸೇರುವ ಹೊಸ ಮುಖಗಳನ್ನು ಆರ್‌ಎಸ್‌ಎಸ್‌ಗೆ ಸೇರಲು ಪ್ರೋತ್ಸಾಹಿಸುವಿರಾ ಎಂಬ ಪ್ರಶ್ನೆಗೆ, ಅವರು ಈಗಾಗಲೇ ನಮ್ಮ ವೈಚಾರಿಕ ಕುಟುಂಬದ ಭಾಗವೇ ಆಗಿದ್ದಾರೆ ಎಂದು ಹೊಸಬಾಳೆ ಅವರು ಹೇಳಿದರು. ಆರ್‌ಎಸ್‌ಎಸ್‌ನಲ್ಲಿ ಯಾವುದೇ ಅಧಿಕೃತ ಸದಸ್ಯತ್ವವಿಲ್ಲ. ನಾನು ಕೂಡ ಯಾವುದೇ ಫಾರ್ಮಲ್ ಸದಸ್ಯತ್ವ ಪಡೆದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಬಂಗಾಳದಲ್ಲಿ ಹಿಂದು ಸಮಾಜದ ಹೋರಾಟ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜಯದಲ್ಲಿ ಆರ್‌ಎಸ್‌ಎಸ್ ಮತ್ತು ಸ್ವಯಂಸೇವಕರ ಪಾತ್ರ ಕುರಿತು ಮಾತನಾಡಿದ ಅವರು, ಪ್ರಜೆಗಳಾಗಿ ಅವರು ಮಾಡಬೇಕಾದದ್ದನ್ನೆಲ್ಲ ಮಾಡಿದ್ದಾರೆ ಎಂದರು. ಕಮ್ಯುನಿಸ್ಟ್ ಆಡಳಿತದ ಕಾಲದಿಂದಲೇ, ನಂತರ ತೃಣಮೂಲ ಕಾಂಗ್ರೆಸ್ ಆಡಳಿತದಲ್ಲಿಯೂ ಸ್ವಯಂಸೇವಕರು ದಾಳಿಗೆ ಒಳಗಾಗುತ್ತಿದ್ದರು. ಸನಾತನ ಹಿಂದೂ ಮೌಲ್ಯಗಳ ಬಗ್ಗೆ ಮಾತನಾಡುವುದು, ಶಾಖೆಗಳನ್ನು ನಡೆಸುವುದು, ರಾಷ್ಟ್ರಭಕ್ತರನ್ನು ಬೆಳೆಸುವವರ ಮೇಲೆ ಸರ್ಕಾರ ಅಥವಾ ಸರ್ಕಾರಪ್ರೋತ್ಸಾಹಿತ ಗುಂಪುಗಳಿಂದ ಹಲ್ಲೆ ನಡೆಯುತ್ತಿತ್ತು ಎಂದು ಆರೋಪಿಸಿದರು. ಇದು ಕೇವಲ ಸ್ವಯಂಸೇವಕರ ಹೋರಾಟವಲ್ಲ, ಸಂಪೂರ್ಣ ಹಿಂದು ಸಮಾಜದ ಹೋರಾಟವಾಗಿತ್ತು ಎಂದ ಅವರು, ಬಂಗಾಳದಲ್ಲಿ ಪ್ರತಿಯೊಬ್ಬ ಹಿಂದು ಮತದಾರನೇ ಹಿಂದು ಕಾರ್ಯಕರ್ತನಾದ. ಅದು ನಾಗರಿಕತೆಯ ಪ್ರಶ್ನೆಯಾಗಿತ್ತು ಎಂದು ಹೇಳಿದರು.

ಆರ್‌ಎಸ್‌ಎಸ್ ಶತಮಾನೋತ್ಸವದ ಜಾಗತಿಕ ಸಂಪರ್ಕ

ಆರ್‌ಎಸ್‌ಎಸ್ ಶತಮಾನೋತ್ಸವದ ಹಿನ್ನೆಲೆಯಲ್ಲಿ ಕೈಗೊಂಡ ಜಾಗತಿಕ ಸಂಪರ್ಕ ಕಾರ್ಯಕ್ರಮಗಳ ಬಗ್ಗೆ ಹೊಸಬಾಳೆ ಅವರು ಮಾಹಿತಿ ನೀಡಿದರು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಪ್ರಭಾವಿ ವ್ಯಕ್ತಿಗಳನ್ನು ಹಾಗೂ ಸ್ಥಳೀಯ ಜನರನ್ನು ಭೇಟಿಯಾಗುವ ಉದ್ದೇಶದಿಂದ ಹಲವು ದೇಶಗಳಿಗೆ ಭೇಟಿ ನೀಡಿದ್ದೆ. ಆರ್‌ಎಸ್‌ಎಸ್‌ನ ತತ್ವಚಿಂತನೆ ಭಾರತದ ಪೌರಾಣಿಕ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಯಿಂದ ಪ್ರೇರಿತವಾಗಿದೆ ಎಂಬುದನ್ನು ವಿವರಿಸುವ ಅವಕಾಶ ದೊರಕಿತು ಎಂದು ಹೇಳಿದರು.

ಭಾರತೀಯರ ಯಶಸ್ಸಿನ ಮೇಲಿನ ಆತಂಕವೇ ಕಾರಣ

ಕೆಲವು ದೇಶಗಳಲ್ಲಿ ಭಾರತೀಯರ ಪರಿಶ್ರಮ ಮತ್ತು ಸಾಧನೆಗಳಿಂದ ಸ್ಥಳೀಯರಿಗೆ ಉದ್ಯೋಗ ಕಳೆದುಕೊಳ್ಳುವ ಭಯ ಉಂಟಾಗುತ್ತಿದೆ. ಭಾರತೀಯರ ಆರ್ಥಿಕ ಯಶಸ್ಸೇ ಕೆಲವೊಮ್ಮೆ ಇಂಥ ಅಸಮಾಧಾನಕ್ಕೆ ಕಾರಣವಾಗುತ್ತಿದೆ ಎಂದು ಹೇಳಿದರು. ಗಲ್ಫ್ ರಾಷ್ಟ್ರಗಳಲ್ಲಿ ನಿರ್ಮಾಣವಾಗಿರುವ ಭವ್ಯ ಸ್ವಾಮಿನಾಥನ್ ದೇವಾಲಯವನ್ನು ಉಲ್ಲೇಖಿಸಿದ ಅವರು, ಅದು ಅಲ್ಲಿನ ಸರ್ಕಾರದ ಸಹಕಾರದಿಂದ ನಿರ್ಮಾಣವಾಗಿದೆ ಎಂದರು.

ಪಾಶ್ಚಾತ್ಯೀಕರಣದ ನಡುವೆ ಕುಟುಂಬ ಮೌಲ್ಯ ಕಳೆದುಕೊಳ್ಳಬಾರದು


ಪಾಶ್ಚಾತ್ಯೀಕರಣ ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ಭಾರತೀಯ ಕುಟುಂಬ ಮೌಲ್ಯಗಳು ಹಾಗೂ ಸಾಮಾಜಿಕ ಹೊಣೆಗಾರಿಕೆ ಕುಗ್ಗಬಾರದು ಎಂದು ಹೊಸಬಾಳೆ ಅವರು ಅಭಿಪ್ರಾಯಪಟ್ಟಿದ್ದಾರೆ. ಇಂದು ನಾವು ಹೆಚ್ಚು ಹೆಚ್ಚು ಪಾಶ್ಚಾತ್ಯೀಕರಣದತ್ತ ಸಾಗುತ್ತಿದ್ದೇವೆ. ಆದರೆ ಮುಖ್ಯವಾದುದು ಮನುಷ್ಯನ ಮೌಲ್ಯಗಳು. ಕುಟುಂಬದಿಂದ ಸಮಾಜದವರೆಗೆ ಇತರರೊಂದಿಗೆ ಹೇಗೆ ನಡೆದುಕೊಳ್ಳಬೇಕು, ಪ್ರಕೃತಿಯೊಂದಿಗೆ ಹೇಗೆ ವರ್ತಿಸಬೇಕು ಎಂಬುದೇ ನಿಜವಾದ ಸಂಸ್ಕೃತಿ ಎಂದು ಹೇಳಿದರು. ಉಡುಗೆ, ಜೀವನಶೈಲಿ, ಹೊರಗಿನ ಆಚಾರ–ವಿಚಾರ ಬದಲಾಗಬಹುದು. ಆದರೆ ಹಿರಿಯರಿಗೆ ಗೌರವ ನೀಡುವುದು, ಕುಟುಂಬವನ್ನು ಒಗ್ಗೂಡಿಸಿಕೊಂಡು ಹೋಗುವುದು, ಸಮಾಜದತ್ತ ಹೊಣೆಗಾರಿಕೆ ಹೊಂದಿರುವುದು, ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವುದು ಇವು ಉಳಿಯಲೇಬೇಕು ಎಂದು ಅವರು ತಿಳಿಸಿದರು.

ವಿವೇಕಾನಂದರ ಉದಾಹರಣೆ

100 ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರಿಗೆ ಪಾಶ್ಚಾತ್ಯ ದೇಶಗಳಿಂದ ಏನು ಕಲಿಯಬೇಕು ಎಂದು ಕೇಳಿದಾಗ ಅವರು ಸಂಘಟನೆ ಎಂದು ಉತ್ತರಿಸಿದ್ದರು ಎಂದು ಹೊಸಬಾಳೆ ಅವರು ನೆನಪಿಸಿದರು. ಭಾರತದಲ್ಲಿ ರಸ್ತೆ ಸಂಸ್ಕೃತಿ ಕುರಿತು ಮಾತನಾಡಿದ ಅವರು, ದೊಡ್ಡ ವಾಹನ ಹೊಂದಿದವರಿಗೇ ರಸ್ತೆ ಸೇರಿದೆ ಎನ್ನುವ ಮನೋಭಾವ ಇದೆ. ಇದು ಬದಲಾಗಬೇಕು. ಪಾದಚಾರಿಗಳಿಗೆ ಗೌರವ ನೀಡುವ ಸಂಸ್ಕೃತಿ ಬೆಳೆಯಬೇಕು ಎಂದರು.

ಕುಟುಂಬಕ್ಕೆ ಸೇರಲು ಸದಸ್ಯತ್ವ ಫಾರ್ಮ್ ಬೇಕಿಲ್ಲ

ಇನ್ನು ಪಶ್ಚಿಮ ಬಂಗಾಳದ ನೂತನ ಸಿಎಂ ಸುವೇಂದು ಅಧಿಕಾರಿ ಅವರನ್ನು ದತ್ತಾತ್ರೇಯ ಹೊಸಬಾಳೆ ಅವರು ನಮ್ಮ ಮಗ ಎಂದು ಬಣ್ಣಿಸಿದ್ದು, ಆರ್‌ಎಸ್‌ಎಸ್ ಕುಟುಂಬಕ್ಕೆ ಸೇರಲು ಯಾವುದೇ ಅಧಿಕೃತ ಸದಸ್ಯತ್ವ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಅಂದರೆ, ಕುಟುಂಬಕ್ಕೆ ಸೊಸೆ ಬಂದರೆ ಫಾರ್ಮ್ ತುಂಬಬೇಕಾಗುವುದಿಲ್ಲ. ಸಹಜವಾಗಿಯೇ ಆಕೆ ಕುಟುಂಬದ ಭಾಗವಾಗುತ್ತಾಳೆ. ಆರ್‌ಎಸ್‌ಎಸ್ ಕೂಡ ಅಂತಹ ಕುಟುಂಬ ವ್ಯವಸ್ಥೆಯಂತೆಯೇ ಕಾರ್ಯನಿರ್ವಹಿಸುತ್ತದೆ ಎಂದು ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಬೇರೆ ಪಕ್ಷಗಳಿಂದ ಬಿಜೆಪಿ ಸೇರ್ಪಡೆಗೊಂಡು ಮುಖ್ಯಮಂತ್ರಿಗಳಾದ ನಾಯಕರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ ಅವರು, ಎಲ್ಲರೂ ಬಾಲ್ಯದಲ್ಲೇ ಆರ್‌ಎಸ್‌ಎಸ್‌ಗೆ ಸೇರುತ್ತಾರೆ ಎನ್ನುವುದಿಲ್ಲ. ಅನೇಕರು ನಂತರದ ಹಂತದಲ್ಲಿ ಕೂಡ ಸೇರುತ್ತಾರೆ ಎಂದರು. ಸುವೇಂದು ಅಧಿಕಾರಿ ಅಳಿಯ ರೀತಿಯವರೇ ಎಂಬ ಪ್ರಶ್ನೆಗೆ ನಗುತ್ತಲೇ ಪ್ರತಿಕ್ರಿಯಿಸಿದ ಹೊಸಬಾಳೆ ಅವರು, ನಾವು ಈ ಮಗನ ಬಗ್ಗೆ ಹೆಮ್ಮೆಪಡುತ್ತೇವೆ ಎಂದರು.



ವಿದೇಶದಲ್ಲಿದ್ದರೂ ಭಾರತೀಯ ಮೌಲ್ಯ ಮರೆಯಬೇಡಿ

ವಿದೇಶಗಳಲ್ಲಿ ವಾಸಿಸುವ ಭಾರತೀಯರು ಭಾರತೀಯ ಸಂಸ್ಕೃತಿ ಹಾಗೂ ಮೌಲ್ಯಗಳಿಗೆ ಬದ್ಧರಾಗಿಯೇ ಅಲ್ಲಿನ ಸ್ಥಳೀಯ ಸಮಾಜದೊಂದಿಗೆ ಇನ್ನಷ್ಟು ಬೆರೆತು ಬದುಕಬೇಕು ಎಂದು ಹೊಸಬಾಳೆ ಅವರು ಕರೆ ನೀಡಿದ್ದಾರೆ. ವಿದೇಶದಲ್ಲಿರುವ ಭಾರತೀಯರು ತಮ್ಮ ಧಾರ್ಮಿಕ, ಭಾಷಾ ಹಾಗೂ ಜಾತಿ ವೈಮನಸ್ಸುಗಳನ್ನು ಅಲ್ಲಿಗೂ ಕೊಂಡೊಯ್ಯಬಾರದು ಎಂದು ಸಲಹೆ ನೀಡಿದರು. ತೆಲುಗು, ಪಂಜಾಬಿ, ತಮಿಳು ಎಂಬ ಪ್ರತ್ಯೇಕ ಗುಂಪುಗಳ ಬದಲು ಒಗ್ಗಟ್ಟಿನ ಭಾರತೀಯ ಸಮುದಾಯವಾಗಿ ಗುರುತಿಸಿಕೊಳ್ಳಬೇಕು ಎಂದರು. ರೋಮ್‌ನಲ್ಲಿದ್ದರೆ ರೋಮನ್ನರಂತೆ ನಡೆದುಕೊಳ್ಳಬೇಕು ಎಂಬ ಮಾತಿದೆ. ಅದನ್ನು ಪಾಲಿಸಲೇಬೇಕು ಎಂದು ಹೊಸಬಾಳೆ ಅವರು ಹೇಳಿದರು.

ಅಮೆರಿಕದಲ್ಲಿ 175 ಶಾಖೆಗಳು

ವಿದೇಶಗಳಲ್ಲಿ ಆರ್‌ಎಸ್‌ಎಸ್ ಮಾದರಿಯಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಹಿಂದು ಸ್ವಯಂಸೇವಕ ಸಂಘ (ಎಚ್‌ಎಸ್‌ಎಸ್) ಅಮೆರಿಕದ ವಿವಿಧ ಭಾಗಗಳಲ್ಲಿ ಸುಮಾರು 175 ಶಾಖೆಗಳನ್ನು ನಡೆಸುತ್ತಿದೆ ಎಂದು ಹೊಸಬಾಳೆ ಅವರು ಹೇಳಿದರು. ಅಲ್ಲಿ ಸಂಘದ ಶಾಖೆಗೆ ಬಂದಾಗ ಭಾಷೆ, ಜಾತಿ ಮೊದಲಾದ ಭೇದಗಳು ಮಾಯವಾಗುತ್ತವೆ. ಅದನ್ನೇ ನಾವು ಪ್ರಯತ್ನಿಸಿದ್ದೇವೆ ಎಂದರು. ಅಮೆರಿಕದಲ್ಲಿರುವ ಸುಮಾರು 54 ಲಕ್ಷ ಭಾರತೀಯರನ್ನು ಎಚ್‌ಎಸ್‌ಎಸ್‌ಗೆ ಸೇರಿಸುವ ಉದ್ದೇಶವಿದೆಯೇ ಎಂಬ ಪ್ರಶ್ನೆಗೆ, ಎಲ್ಲರನ್ನು ಸಂಘಟನೆಯೊಳಗೆ ತರಲು ಸಾಧ್ಯವಿಲ್ಲ. ಅದು ಪ್ರಾಯೋಗಿಕವೂ ಅಲ್ಲ. ಆದರೆ ಪ್ರಭಾವ ಬೀರುವ ಸಾಮರ್ಥ್ಯ ಎಚ್‌ಎಸ್‌ಎಸ್‌ಗೆ ಇದೆ. ಪರಸ್ಪರ ಜಾಲತಾಣ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಸನಾತನ ಧರ್ಮವನ್ನು ಅಳಿಸಲಾಗದು

ಸನಾತನ ಧರ್ಮವನ್ನು ನಿರ್ಮೂಲನ ಮಾಡಬೇಕು ಎಂದು ಪದೇ ಪದೇ ಕರೆ ನೀಡುತ್ತಿರುವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು, ಸ್ಟಾಲಿನ್ ಅವರು ಸನಾತನ ಧರ್ಮ ಕೊನೆಗೊಳ್ಳಬೇಕು ಎಂದು ಬಯಸಿದ ಮಾತ್ರಕ್ಕೆ ಅದು ಮಾಯವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸನಾತನ ಧರ್ಮ ಎನ್ನುವುದು ರಾಜಕೀಯ ಟೀಕೆಗಳಿಂದ ಅಳಿಸಿಹಾಕಲಾಗದ ನಾಗರಿಕತೆಯ ಶಾಶ್ವತ ಮೌಲ್ಯವಾಗಿದೆ. ಅದು ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ, ಬದಲಾಗಿ ಭಾರತದ ಆತ್ಮ ಮತ್ತು ವಿಶ್ವದೃಷ್ಟಿಯ ಪ್ರತಿನಿಧಿ ಎಂದು ಹೊಸಬಾಳೆ ಬಣ್ಣಿಸಿದರು. ಬೆಳಕು ಇರಬಾರದು ಅಥವಾ ನದಿಗಳು ಇರಬಾರದು ಎಂದು ನಾನು ಭಾವಿಸಿದ ಮಾತ್ರಕ್ಕೆ ಅವು ಮಾಯವಾಗುವುದಿಲ್ಲ ಎಂದು ಅವರು ಮಾರ್ಮಿಕವಾಗಿ ನುಡಿದರು.



ಪಾಕ್ ನಾಯಕತ್ವದ ಮೇಲೆ ವಿಶ್ವಾಸ ಉಳಿದಿಲ್ಲ

ಭಾರತ–ಪಾಕಿಸ್ತಾನ ಸಂಬಂಧಗಳ ಕುರಿತು ಮಾತನಾಡಿದ ಹೊಸಬಾಳೆ ಅವರು, 26/11 ಮುಂಬೈ ಮಾರಣಹೋಮ, ಪುಲ್ವಾಮಾ ಹಾಗೂ ಪಹಲ್ಗಾಮ್ ದಾಳಿ ಸೇರಿದಂತೆ ಪುನರಾವರ್ತಿತ ಭಯೋತ್ಪಾದಕ ಕೃತ್ಯಗಳ ಕಾರಣದಿಂದಾಗಿ ಪಾಕಿಸ್ತಾನದ ರಾಜಕೀಯ ಮತ್ತು ಸೇನಾ ನಾಯಕತ್ವದ ಮೇಲೆ ಭಾರತಕ್ಕೆ ಯಾವುದೇ ವಿಶ್ವಾಸ ಉಳಿದಿಲ್ಲ ಎಂದು ಸ್ಪಷ್ಟಪಡಿಸಿದರು. ಭಾರತದ ಭದ್ರತೆ ಮತ್ತು ಆತ್ಮಗೌರವವನ್ನು ಯಾವುದೇ ಕಾರಣಕ್ಕೂ ಕಾಪಾಡಿಕೊಳ್ಳಬೇಕು ಎಂದು ಒತ್ತಿಹೇಳಿದ ಅವರು, ಆದರೂ ಸಂವಾದದ ಮಾರ್ಗಗಳು ಸಂಪೂರ್ಣವಾಗಿ ಮುಚ್ಚಿಹೋಗಬಾರದು ಎಂದು ಅಭಿಪ್ರಾಯಪಟ್ಟರು. ಇದಕ್ಕಾಗಿ ನೆರೆಯ ರಾಷ್ಟ್ರದೊಂದಿಗೆ ವ್ಯಾಪಾರ, ವೀಸಾ ಮತ್ತು ರಾಜತಾಂತ್ರಿಕ ಸಂಪರ್ಕ ಮುಂದುವರಿಯಬೇಕು. ಆ ಮೂಲಕ ಸಂವಹನದ ಬಾಗಿಲುಗಳು ಸಂಪೂರ್ಣ ಮುಚ್ಚಿಹೋಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯುದ್ಧಗಳ ಹಿಂದೆ ದುರಾಸೆ, ಅಹಂಕಾರ

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕುರಿತು ಮಾತನಾಡಿದ ಹೊಸಬಾಳೆ ಅವರು, ಯುದ್ಧಗಳು ಸಾಮಾನ್ಯವಾಗಿ ದುರಾಸೆ, ಅಹಂಕಾರ ಮತ್ತು ಸಂಪನ್ಮೂಲಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಬಯಕೆಯಿಂದ ಉದ್ಭವಿಸುತ್ತವೆ ಎಂದರು. ಪ್ರಸ್ತುತ ಉದ್ವಿಗ್ನತೆಗಳು ನಾಗರಿಕತೆಗಳ ಸಂಘರ್ಷಕ್ಕಿಂತಲೂ ಹೆಚ್ಚಾಗಿ ತೈಲ ಸೇರಿದಂತೆ ಕಾರ್ಯತಂತ್ರಾತ್ಮಕ ಹಾಗೂ ಆರ್ಥಿಕ ಹಿತಾಸಕ್ತಿಗಳಿಂದ ನಡೆಯುತ್ತಿವೆ ಎಂದು ಅವರು ವಿಶ್ಲೇಷಿಸಿದರು. ಮುಂದಿನ ದಿನಗಳಲ್ಲಿ ನೀರಿಗಾಗಿ ಯುದ್ಧಗಳಾಗಬಹುದು ಎಂಬ ಭವಿಷ್ಯವಾಣಿಗಳನ್ನು ಉಲ್ಲೇಖಿಸಿದ ಅವರು, ಯುದ್ಧಗಳು ಮಾನವ ಜೀವನವನ್ನು ಪುನರ್ರೂಪಿಸುತ್ತಲೇ ಇರುತ್ತವೆ, ಆದರೆ ಅವು ಮಾನವತೆಯನ್ನು ಸಂಪೂರ್ಣವಾಗಿ ನಾಶ ಮಾಡಲಾರವು ಎಂದು ಎಚ್ಚರಿಸಿದರು.

ಸಂಪಾದಕೀಯ

ಏನಾಸಂ ದಿಕ್ಕಿನಲ್ಲಿ ಅಸ್ಸಾಂ ಹೆಜ್ಜೆ

ಭಾರತದ ಸಂವಿಧಾನದಲ್ಲಿ ರಾಜ್ಯದ ನಿರ್ದೇಶಕ ತತ್ವಗಳ ಅಡಿಯಲ್ಲಿ ಉಲ್ಲೇಖಗೊಂಡಿರುವ ಏಕರೂಪ ನಾಗರಿಕ ಸಂಹಿತೆ (ಏನಾಸಂ) ವಿಚಾರವು ದಶಕಗಳಿಂದ ರಾಜಕೀಯ, ಸಾಮಾಜಿಕ ಹಾಗೂ ವೈಚಾರಿಕ ಚರ್ಚೆಯ ಕೇಂದ್ರಬಿಂದುವಾಗಿಯೇ ಉಳಿದಿದೆ. ಇದೀಗ ಅಸ್ಸಾಂ ಸರ್ಕಾರ ತನ್ನ ಸಚಿವ ಸಂಪುಟ ಸಭೆಯಲ್ಲಿ ಯುಸಿಸಿ ಜಾರಿಗೆ ಒಪ್ಪಿಗೆ ನೀಡಿರುವುದು ಕೇವಲ ಆಡಳಿತಾತ್ಮಕ ನಿರ್ಧಾರವಾಗಿರದೇ ಅದು ರಾಷ್ಟ್ರದ ಕಾನೂನು ಸಮಾನತೆಯ ಚರ್ಚೆಗೆ ಹೊಸ ಚೈತನ್ಯ ನೀಡಿದ ಹೆಜ್ಜೆಯಾಗಿದೆ. ಮುಖ್ಯವಾಗಿ, ಬುಡಕಟ್ಟು ಸಮುದಾಯಗಳನ್ನು ಇದರ ವ್ಯಾಪ್ತಿಯಿಂದ ಹೊರಗಿಟ್ಟಿರುವ ಅಸ್ಸಾಂ ಮಾದರಿ, ವೈವಿಧ್ಯತೆಯ ಗೌರವ ಮತ್ತು ಕಾನೂನು ಸಮಾನತೆಯ ಸಮತೋಲನ ಸಾಧಿಸುವ ಪ್ರಯತ್ನವಾಗಿದೆ.

ಇದುವರೆಗೆ ಭಾರತದಲ್ಲಿ ವೈಯಕ್ತಿಕ ಕಾನೂನುಗಳು ಧರ್ಮಾಧಾರಿತವಾಗಿ ವಿಭಜಿತವಾಗಿದ್ದವು. ವಿವಾಹ, ವಿಚ್ಛೇದನ, ಆಸ್ತಿ ಹಂಚಿಕೆ, ದತ್ತು, ಪೋಷಣೆ ಮೊದಲಾದ ವಿಷಯಗಳಲ್ಲಿ ವಿಭಿನ್ನ ಸಮುದಾಯಗಳಿಗೆ ವಿಭಿನ್ನ ಕಾನೂನು ವ್ಯವಸ್ಥೆಗಳಿದ್ದವು. ಇದರಿಂದ ನಾಗರಿಕರ ಮೂಲಭೂತ ಹಕ್ಕುಗಳ ವಿಷಯದಲ್ಲಿ ಸಮಾನತೆಯ ಪ್ರಶ್ನೆ ಅನೇಕ ಬಾರಿ ಉದ್ಭವಿಸಿತು. ವಿಶೇಷವಾಗಿ ಮಹಿಳೆಯರ ಹಕ್ಕುಗಳು, ಬಹುಪತ್ನಿತ್ವ, ಅಪ್ರಾಪ್ತ ವಯಸ್ಸಿನ ವಿವಾಹ, ಆಸ್ತಿ ಹಕ್ಕುಗಳ ವಿಚಾರಗಳಲ್ಲಿ ಕಾನೂನು ವೈಷಮ್ಯ ಸ್ಪಷ್ಟವಾಗಿ ಗೋಚರಿಸಿತು.

ಅಸ್ಸಾಂ ಸರ್ಕಾರ ಪ್ರಸ್ತಾಪಿಸಿರುವ ಯುಸಿಸಿಯ ವ್ಯಾಪ್ತಿಯಲ್ಲಿ ಕನಿಷ್ಠ ವಿವಾಹ ವಯಸ್ಸು, ಬಹುಪತ್ನಿತ್ವ ನಿಷೇಧ, ಪುತ್ರಿಯರಿಗೆ ಸಮಾನ ಆಸ್ತಿ ಹಕ್ಕು ಹಾಗೂ ಲಿವ್-ಇನ್ ಸಂಬಂಧಗಳ ನಿಯಂತ್ರಣ ಮೊದಲಾದ ಅಂಶಗಳು ಸೇರಿವೆ. ಇವುಗಳಲ್ಲಿ ಯಾವುದೂ ಧಾರ್ಮಿಕ ಆಚರಣೆಗಳ ಮೇಲೆ ದಾಳಿ ಮಾಡುವ ಸ್ವರೂಪದ್ದಲ್ಲ. ಬದಲಾಗಿ, ನಾಗರಿಕರ ಹಕ್ಕುಗಳನ್ನು ಸಮಾನವಾಗಿ ಪರಿಗಣಿಸುವ ಆಧುನಿಕ ಕಾನೂನು ವ್ಯವಸ್ಥೆಯ ಭಾಗವಾಗಿದೆ. ವಿವಾಹದ ಧಾರ್ಮಿಕ ವಿಧಿವಿಧಾನಗಳಿಗೆ ಯಾವುದೇ ಧಕ್ಕೆಯಾಗುವುದಿಲ್ಲವೆಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸ್ಪಷ್ಟಪಡಿಸಿರುವುದು ಈ ಕುರಿತು ಹರಡಲಾಗುತ್ತಿರುವ ಭೀತಿಗಳಿಗೆ ಉತ್ತರವಾಗಿದೆ. ವಾಸ್ತವವಾಗಿ, ಯುಸಿಸಿ ವಿರುದ್ಧದ ಪ್ರಮುಖ ಆಕ್ಷೇಪಣೆಯೇ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಎಂಬುದು. ಆದರೆ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯ ಎಂದರೆ ಕಾನೂನು ಸಮಾನತೆಯನ್ನು ನಿರಾಕರಿಸುವ ಹಕ್ಕು ಅಲ್ಲ. ಸಂವಿಧಾನದ ಮೂಲಭೂತ ತತ್ವವೇ ಎಲ್ಲ ನಾಗರಿಕರಿಗೂ ಸಮಾನ ನ್ಯಾಯ. ಒಂದು ಸಮುದಾಯದ ಮಹಿಳೆಗೆ ದೊರೆಯದ ಹಕ್ಕು ಮತ್ತೊಂದು ಸಮುದಾಯದ ಮಹಿಳೆಗೆ ದೊರೆಯುತ್ತಿದ್ದರೆ, ಅದನ್ನು ನ್ಯಾಯಯುತ ವ್ಯವಸ್ಥೆ ಎಂದು ಹೇಗೆ ಕರೆಯಲು ಸಾಧ್ಯ? ಧರ್ಮದ ಹೆಸರಿನಲ್ಲಿ ಸಾಮಾಜಿಕ ಅನ್ಯಾಯ ಮುಂದುವರಿಯಬಾರದು ಎಂಬುದು ಪ್ರಜಾಸತ್ತಾತ್ಮಕ ರಾಷ್ಟ್ರದ ಮೂಲಭೂತ ಬದ್ಧತೆ. ಇಲ್ಲಿ ಇನ್ನೊಂದು ಮುಖ್ಯ ಸಂಗತಿ ಗಮನಿಸಬೇಕಿದೆ. ಯುಸಿಸಿ ವಿಚಾರವನ್ನು ಅನೇಕ ರಾಜಕೀಯ ಪಕ್ಷಗಳು ಮತಬ್ಯಾಂಕ್ ರಾಜಕಾರಣದ ಕಣ್ಣಿನಿಂದ ಮಾತ್ರ ನೋಡುತ್ತಿವೆ. ಸಮಾಜದ ದುರ್ಬಲ ವರ್ಗಗಳಿಗೆ ಸಮಾನ ಹಕ್ಕು ಸಿಗಬೇಕೆಂಬ ಪ್ರಶ್ನೆಗಿಂತ, ಧಾರ್ಮಿಕ ಧ್ರುವೀಕರಣದ ಲಾಭ-ನಷ್ಟಗಳ ಲೆಕ್ಕಾಚಾರವೇ ಹೆಚ್ಚಾಗಿ ನಡೆಯುತ್ತಿದೆ. ಆದರೆ ಅಸ್ಸಾಂ ಸರ್ಕಾರ ಕೈಗೊಂಡಿರುವ ಕ್ರಮವು ಈ ಚರ್ಚೆಯನ್ನು ಹೊಸ ದಿಕ್ಕಿಗೆ ಕೊಂಡೊಯ್ಯುವ ಸಾಧ್ಯತೆಯಿದೆ.

ಸಂಕಷ್ಟದ ಕಾಲದಲ್ಲಿ ಇಷ್ಟೇ ಕೇಳೋದು, ದೇಶದ ಜತೆ ನಿಲ್ಲಿ

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಕೆಲವೊಮ್ಮೆ ತಪ್ಪುಗಳು ನಮ್ಮವು ಆಗದಿದ್ದರೂ, ಅದರಿಂದಾಗುವ ಪರಿಣಾಮಗಳಿಗೆ ಮಾತ್ರ ನಾವು ತಲೆಕೊಡುವ ಪ್ರಸಂಗಗಳು ಎದುರಾಗುತ್ತವೆ. ಈಗ ಆಗಿರುವುದು ಅದೇ, ಅಲ್ಲೆಲ್ಲೋ ಆಗುತ್ತಿರುವ ಯುದ್ಧಗಳಿಂದಾಗಿ ನಾವು ಕಷ್ಟ ಅನುಭವಿಸುತ್ತಿದ್ದೇವೆ. ಈಗಾಗಲೇ ಅಡುಗೆ ಅನಿಲ, ಎಲ್‌ಪಿಜಿ ಕೊರತೆ ಈಗಾಗಲೇ ಭಾರತವನ್ನು ಕಾಡಿದೆ. ಹಾಗೆಯೇ ಮುಂದಿನ ದಿನಗಳಲ್ಲಿ ತೈಲದ ಕೊರತೆ ಕೂಡ ತಲೆದೋರುವ ಎಲ್ಲ ಲಕ್ಷಣಗಳು ಇವೆ.

ಇಂಥ ಕ್ಷಣಗಳಲ್ಲಿ ಆಡಳಿತ ನಡೆಸುವಂಥವರು ಜನಪ್ರಿಯತೆಯ ರಾಜಕಾರಣವನ್ನು ಬದಿಗಿಟ್ಟು ಕಠಿಣ ಸತ್ಯಗಳನ್ನು ಹೇಳಬೇಕಾಗುತ್ತದೆ. ಜನರು ಸಹ ಸೌಲಭ್ಯಗಳ ಮೋಹವನ್ನು ತ್ಯಜಿಸಿ ರಾಷ್ಟ್ರಹಿತಕ್ಕಾಗಿ ಸ್ವಲ್ಪ ಅಡ್ಡಿ – ತೊಂದರೆಗಳನ್ನು ಸ್ವೀಕರಿಸಬೇಕಾಗುತ್ತದೆ. ಯುದ್ಧ, ಜಾಗತಿಕ ಆರ್ಥಿಕ ಅಸ್ಥಿರತೆ, ಇಂಧನ ಸಂಕಷ್ಟ, ಆಹಾರ ಕೊರತೆ, ಇವೆಲ್ಲವೂ ಕೇವಲ ಅಂಕಿ–ಅಂಶಗಳ ವಿಷಯಗಳಲ್ಲ, ಅವು ರಾಷ್ಟ್ರದ ಮನೋಬಲವನ್ನು ಪರೀಕ್ಷಿಸುವ ಕಾಲಗಳು.

ಇಂತಹ ಸಂದರ್ಭಗಳಲ್ಲಿ ಸರ್ಕಾರಗಳು ತೆಗೆದುಕೊಳ್ಳುವ ನಿಯಂತ್ರಣ ಕ್ರಮಗಳು ಕೆಲವರಿಗೆ ಅಸಹಜವಾಗಿ ಕಾಣಬಹುದು. ಆದರೆ ಇತಿಹಾಸದ ಪುಟಗಳನ್ನು ತೆರೆಯುವುದಾದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಭಾರತದ ಪ್ರತಿಯೊಂದು ಸರ್ಕಾರವೂ ಸಂಕಷ್ಟದ ಸಂದರ್ಭದಲ್ಲಿ ಜನರಿಗೆ ಶಿಸ್ತು, ತ್ಯಾಗ ಮತ್ತು ನಿಯಂತ್ರಣದ ಪಾಠವನ್ನೇ ಹೇಳಿದೆ. ಇಂದು ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ನೀಡಿರುವ ಕರೆ ಸಹ ಅದೇ ಪರಂಪರೆಯ ಮುಂದುವರಿಕೆ. ಇದನ್ನೇನು ಹೊಸದಾಗಿ ಮಾಡಿದ್ದಾರೆ ಅಂತೇನೂ ಭಾವಿಸಬೇಕಾಗಿಲ್ಲ.

ಅನಗತ್ಯ ಇಂಧನ ಬಳಕೆ ಕಡಿಮೆ ಮಾಡಿ, ಅವಶ್ಯಕತೆ ಇಲ್ಲದ ಪ್ರಯಾಣಗಳನ್ನು ತಗ್ಗಿಸಿ, ವರ್ಕ್ ಫ್ರಮ್ ಹೋಮ್ ಮಾದರಿಯನ್ನು ಸಾಧ್ಯವಾದಷ್ಟು ಬಳಸಿ, ಚಿನ್ನದ ಖರೀದಿಯನ್ನು ನಿಯಂತ್ರಿಸಿ ಎಂಬಂಥ ಪ್ರಧಾನಿ ಅವರ ಈ ಕರೆಗಳನ್ನು ಕೆಲವರು ರಾಜಕೀಯ ಕಣ್ಣಿನಿಂದ ನೋಡುತ್ತಿದ್ದಾರೆ. ಆದರೆ ರಾಷ್ಟ್ರಜೀವನದ ದೊಡ್ಡ ಪರಿಧಿಯಲ್ಲಿ ನೋಡಿದರೆ ಇದು ಕೇವಲ ಆರ್ಥಿಕ ಸಲಹೆಯಲ್ಲ, ಇದು ರಾಷ್ಟ್ರೀಯ ಹೊಣೆಗಾರಿಕೆಯ ಘೋಷಣೆ.

ಪಶ್ಚಿಮ ಏಷ್ಯಾದ ಉದ್ವಿಗ್ನತೆ ಏರಿದಾಗ ಅದರ ಹೊಡೆತ ಮೊದಲು ತೈಲ ಮಾರುಕಟ್ಟೆಗೆ ಬೀಳುತ್ತದೆ. ಭಾರತವು ತನಗೆ ಬೇಕಾದ ಕಚ್ಚಾ ತೈಲದ ಶೇ.85ರಷ್ಟನ್ನು ಆಮದು ಮಾಡಿಕೊಳ್ಳುವ ದೇಶವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ತೈಲದ ಬೆಲೆ ಏರಿದರೆ ಅದರ ಪ್ರತಿಧ್ವನಿ ದೇಶದ ಪ್ರತಿಯೊಂದು ಅಡುಗೆಮನೆಗೆ ತಲುಪುತ್ತದೆ. ಸಾರಿಗೆ ದುಬಾರಿಯಾಗುತ್ತದೆ. ಆಹಾರ ಪದಾರ್ಥಗಳ ಬೆಲೆ ಏರುತ್ತದೆ. ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ. ಸರ್ಕಾರದ ಹಣಕಾಸು ಸಮತೋಲನ ಕುಸಿಯುತ್ತದೆ. ಇಂತಹ ಸಂದರ್ಭದಲ್ಲಿ ಆಡಳಿತದ ಮೊದಲ ಕರ್ತವ್ಯ ಜನರನ್ನು ಮುಂಚಿತವಾಗಿ ಎಚ್ಚರಿಸುವುದೇ ಹೊರತು ಸಮಸ್ಯೆ ಬಾಗಿಲು ಒಡೆದು ಒಳಬಂದ ನಂತರ ಕೈಕಟ್ಟಿ ಕುಳಿತುಕೊಳ್ಳುವುದಲ್ಲ.

ಆದರೆ ವಿಷಾದದ ಸಂಗತಿ ಏನೆಂದರೆ, ಭಾರತದಲ್ಲಿ ರಾಷ್ಟ್ರೀಯ ಸಂಕಷ್ಟಗಳನ್ನೂ ರಾಜಕೀಯ ವ್ಯಂಗ್ಯದ ವಿಷಯವನ್ನಾಗಿ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ. ಪ್ರಧಾನಿಯ ಮುನ್ನೆಚ್ಚರಿಕೆ ಕ್ರಮಗಳನ್ನು 'ವಿಫಲತೆಯ ಒಪ್ಪಿಗೆ' ಎಂದು ಕರೆಯುವವರು ಇತಿಹಾಸವನ್ನು ಓದಿಲ್ಲವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದರಲ್ಲೂ ಹಿಂದಿನ ಕ್ರಮ ತೆಗೆದುಕೊಂಡವರಲ್ಲಿ ಇಬ್ಬರು ತಮ್ಮದೇ ಪಕ್ಷದ ಮತ್ತು ಕುಟುಂಬಕ್ಕೆ ಸೇರಿದವರು ಎಂಬುದನ್ನೂ ಮರೆತಿದ್ದಾರೆ.

1962ರ ಚೀನಾ ಯುದ್ಧವನ್ನು ನೆನಪಿಸಿಕೊಳ್ಳಿ. ದೇಶದ ಆರ್ಥಿಕತೆ ನಡುಗಿತ್ತು. ವಿದೇಶಿ ವಿನಿಮಯದ ಸ್ಥಿತಿ ದುರ್ಬಲವಾಗಿತ್ತು. ಆಗಿನ ಪ್ರಧಾನಿ ಜವಾಹರ್ ಲಾಲ್ ನೆಹರು ಅವರು ದೇಶದ ಜನರಿಗೆ ಚಿನ್ನದ ದೇಣಿಗೆ ನೀಡುವಂತೆ ಮನವಿ ಮಾಡಿದರು. ಅದು ಕೇವಲ ಆರ್ಥಿಕ ಕ್ರಮವಾಗಿರಲಿಲ್ಲ, ಅದು ರಾಷ್ಟ್ರೀಯ ಮನೋಭಾವದ ಪರೀಕ್ಷೆಯಾಗಿತ್ತು. ಭಾರತದ ಮಹಿಳೆಯರು ತಮ್ಮ ಮಂಗಳಸೂತ್ರಗಳವರೆಗೂ ರಾಷ್ಟ್ರರಕ್ಷಣೆಗೆ ಸಮರ್ಪಿಸಿದರು. ಇಂದಿನ ಪೀಳಿಗೆಗೆ ಅದು ಕಥೆಯಂತೆ ಕಾಣಬಹುದು. ಆದರೆ ಆ ಕಾಲದಲ್ಲಿ ಜನರು ರಾಷ್ಟ್ರವನ್ನು ತಮ್ಮ ವೈಯಕ್ತಿಕ ಸಂಪತ್ತಿಗಿಂತ ಮೇಲಾಗಿ ನೋಡಿದ್ದರು. ಆಗಿನ ಕೇಂದ್ರ ಸರ್ಕಾರ ಇದನ್ನು ರಾಷ್ಟ್ರಭಕ್ತಿಯ ಆಂದೋಲನ ಎಂದು ಕರೆದಿತ್ತು.

ಅದರ ಜೊತೆಗೆ ಗೋಲ್ಡ್ ಕಂಟ್ರೋಲ್ ಆ್ಯಕ್ಟ್ ಜಾರಿಗೊಂಡಿತು. ಚಿನ್ನದ ವ್ಯಾಪಾರಕ್ಕೆ ಮಿತಿ ವಿಧಿಸಲಾಯಿತು. ಚಿನ್ನದ ಸಾಲಗಳನ್ನು ವಾಪಸ್ ಪಡೆಯಲು ಬ್ಯಾಂಕುಗಳಿಗೆ ಸೂಚನೆ ನೀಡಲಾಯಿತು. ಹೆಚ್ಚಿನ ಕ್ಯಾರೆಟ್ ಆಭರಣಗಳ ಉತ್ಪಾದನೆಗೆ ನಿರ್ಬಂಧ ಹೇರಲಾಯಿತು. ನಂತರ ಸಾಮಾನ್ಯ ನಾಗರಿಕರು ಚಿನ್ನದ ಬಾರ್ ಮತ್ತು ನಾಣ್ಯಗಳನ್ನು ಹೊಂದುವುದಕ್ಕೂ ಮಿತಿ ಬಂತು. ಒಂದು ವೇಳೆ 14 ಕ್ಯಾರೆಟ್ ಗಿಂತ ಹೆಚ್ಚು ಚಿನ್ನದ ಆಭರಣವನ್ನು ಮಾಡಿದರೆ ಅದನ್ನು ಅಪರಾಧ ಕೃತ್ಯ ಎಂದು ಕರೆಯಲಾಗುತ್ತಿತ್ತು. ಚಿನ್ನ ಬೆಳ್ಳಿ ಕೆಲಸಗಾರರೂ 100 ಗ್ರಾಂಗಿಂತ ಹೆಚ್ಚು ಬಂಗಾರ ಇರಿಸಿಕೊಳ್ಳುವಂತೆ ಇರಲಿಲ್ಲ. ಇವೆಲ್ಲವೂ ಜನಪ್ರಿಯ ಕ್ರಮಗಳಾಗಿರಲಿಲ್ಲ. ಆದರೆ ರಾಷ್ಟ್ರದ ವಿದೇಶಿ ವಿನಿಮಯ ಉಳಿಸಬೇಕಾದ ಅನಿವಾರ್ಯತೆ ಇತ್ತು. ಸರ್ಕಾರ ಜನರಿಗೆ ಸತ್ಯ ಹೇಳಿತು. ಜನರು ಸಹಕರಿಸಿದರು. ಪರಿಣಾಮವಾಗಿ ಆರ್ಥಿಕ ಒತ್ತಡವನ್ನು ಒಂದು ಮಟ್ಟಿಗೆ ತಡೆಯಲು ಸಾಧ್ಯವಾಯಿತು.

1965ರ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ದೇಶಕ್ಕೆ ನೀಡಿದ ಸಂದೇಶ ಇನ್ನೂ ಭಾರತೀಯ ರಾಜಕೀಯ ಇತಿಹಾಸದ ನೈತಿಕ ಶಿಖರಗಳಲ್ಲಿ ಒಂದಾಗಿದೆ. ಪ್ರತಿ ಸೋಮವಾರ ಒಂದು ಊಟ ಬಿಟ್ಟುಬಿಡಿ ಎಂಬ ಅವರ ಮನವಿ ಕೇವಲ ಆಹಾರ ಉಳಿಸುವ ಕ್ರಮವಾಗಿರಲಿಲ್ಲ, ಅದು ರಾಷ್ಟ್ರದೊಂದಿಗೆ ಆತ್ಮೀಯ ಸಂಬಂಧ ಬೆಳೆಸುವ ಕರೆಯಿತ್ತು. ದೇಶ ಆಹಾರ ಕೊರತೆಯಿಂದ ಬಳಲುತ್ತಿದ್ದಾಗ ಅವರು ಜನರಿಗೆ ಉಪದೇಶ ಕೊಟ್ಟು ತಾವು ವೈಭವದಲ್ಲಿ ಬದುಕಲಿಲ್ಲ. ತಮ್ಮ ಕುಟುಂಬದಲ್ಲೂ ಅದೇ ನಿಯಮ ಅನುಸರಿಸಿದರು. ಇದೇ ನಾಯಕತ್ವದ ನೈತಿಕ ಶಕ್ತಿ.

ಇದೇ ರೀತಿ 2013ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಭಾರತದ ಆರ್ಥಿಕ ಪರಿಸ್ಥಿತಿ ಗಂಭೀರ ಸವಾಲಿನಲ್ಲಿತ್ತು. ಕರೆಂಟ್ ಅಕೌಂಟ್ ಡೆಫಿಸಿಟ್ ಅಪಾಯದ ಮಟ್ಟ ತಲುಪಿತ್ತು. ಚಿನ್ನದ ಆಮದು ದೇಶದ ಹಣಕಾಸಿನ ಮೇಲೆ ಭಾರೀ ಒತ್ತಡ ತರುತ್ತಿತ್ತು. ಆಗಿನ ಹಣಕಾಸು ಸಚಿವ ಪಿ.ಚಿದಂಬರಂ ಜನರಿಗೆ ಚಿನ್ನದ ಖರೀದಿಯನ್ನು ಕಡಿಮೆ ಮಾಡಲು ಮನವಿ ಮಾಡಿದರು. ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು 'ಹಣ ಮರಗಳಲ್ಲಿ ಬೆಳೆಯುವುದಿಲ್ಲ' ಎಂದು ಹೇಳಿ ಸಬ್ಸಿಡಿಗಳ ಮಿತಿಯ ಬಗ್ಗೆ ಸ್ಪಷ್ಟಪಡಿಸಿದ್ದರು. ಹಾಗಾದರೆ ಇಂದು ಪ್ರಧಾನಿ ಮೋದಿ ನೀಡುತ್ತಿರುವ ಸಲಹೆಗಳು ಏಕೆ ಏಕಾಏಕಿ 'ಆರ್ಥಿಕ ತುರ್ತು ಪರಿಸ್ಥಿತಿ'ಯ ಸಂಕೇತಗಳಾಗಿ ಚಿತ್ರಿಸಲ್ಪಡುತ್ತಿವೆ? ಕಾರಣ ಸ್ಪಷ್ಟ. ಭಾರತೀಯ ರಾಜಕೀಯದಲ್ಲಿ ಪ್ರತಿಪಕ್ಷಗಳ ಒಂದು ಭಾಗವು ರಾಷ್ಟ್ರೀಯ ಪ್ರಶ್ನೆಗಳನ್ನೂ ತಾತ್ಕಾಲಿಕ ರಾಜಕೀಯ ಲಾಭದ ಕಣ್ಣಿನಿಂದ ನೋಡಲು ಆರಂಭಿಸಿದೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸರ್ಕಾರವನ್ನು ಪ್ರಶ್ನಿಸುವುದು ಅವರ ಹಕ್ಕು ಮಾತ್ರವಲ್ಲ, ಕರ್ತವ್ಯವೂ ಹೌದು. ಆದರೆ ಸಂಕಷ್ಟದ ಸಂದರ್ಭದಲ್ಲಿ ಜನರ ಮನಸ್ಸಿನಲ್ಲಿ ಭಯ ಮತ್ತು ಅವಿಶ್ವಾಸ ಹುಟ್ಟಿಸುವುದು ಜವಾಬ್ದಾರಿಯುತ ಪ್ರತಿಪಕ್ಷದ ಲಕ್ಷಣವಲ್ಲ. ಯುದ್ಧದ ನೆರಳು ಕಾಣುವಾಗ ದೇಶದೊಳಗೆ ಮಾನಸಿಕ ಸ್ಥೈರ್ಯ ಉಳಿಸುವುದು ಅತ್ಯಗತ್ಯ. ರಾಷ್ಟ್ರದ ಆತ್ಮವಿಶ್ವಾಸ ಕುಸಿದರೆ ಆರ್ಥಿಕತೆಯೂ ಕುಸಿಯುತ್ತದೆ.

ಇಂತಹ ಸಂದರ್ಭಗಳಲ್ಲಿ ಜನರ ಪಾತ್ರವೂ ಅಷ್ಟೇ ಮಹತ್ವದ್ದು. ನಾಗರಿಕತೆ ಅಂದರೆ ಕೇವಲ ಹಕ್ಕುಗಳ ಪಟ್ಟಿ ಅಲ್ಲ. ಅದು ಕರ್ತವ್ಯಗಳ ಸಂಸ್ಕೃತಿ. ಅನಗತ್ಯ ಇಂಧನ ಬಳಕೆ ಕಡಿಮೆ ಮಾಡುವುದು, ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ನೀಡುವುದು, ಅತಿಯಾದ ಉಪಭೋಗದ ಜೀವನಶೈಲಿಯನ್ನು ಮರುಪರಿಶೀಲಿಸುವಂಥ ಕ್ರಮಗಳು ದೇಶಸೇವೆಯೇ ಪರಿಧಿಯೊಳಗೇ ಬರುತ್ತವೆ ಎಂಬುದನ್ನು ಮನಸ್ಸಿನೊಳಗೆ ಗಟ್ಟಿಯಾಗಿ ಅಳವಡಿಸಿಕೊಳ್ಳಬೇಕು.

ಒಂದು ಸಮಾಜ ಯಾವಾಗ ದುರ್ಬಲವಾಗುತ್ತದೆ ಗೊತ್ತೇ? ಅದು ತ್ಯಾಗದ ಮೌಲ್ಯವನ್ನು ಮರೆತಾಗ. ಸ್ವಾತಂತ್ರ್ಯವನ್ನು ಕೇವಲ ಉಪಭೋಗದ ಹಕ್ಕು ಎಂದು ಅರ್ಥೈಸಿದಾಗ. ಆದರೆ ಭಾರತ ಎಂಬ ನಾಗರಿಕತೆ ಸಾವಿರಾರು ವರ್ಷಗಳಿಂದ ಸಂಕಷ್ಟಗಳನ್ನು ತಾಳಿರುವುದು ಅದರ ತ್ಯಾಗದ ಸಂಸ್ಕೃತಿಯಿಂದಲೇ. ಯುದ್ಧಗಳ ಕಾಲದಲ್ಲಿ ಭಾರತೀಯ ಸಮಾಜ ತನ್ನ ವೈಯಕ್ತಿಕ ಸೌಲಭ್ಯಕ್ಕಿಂತ ಸಮೂಹ ಹಿತವನ್ನು ಮೇಲುಗೈಗೊಳಿಸಿದೆ.

ಇಂದು ಭಾರತ ವಿಶ್ವಶಕ್ತಿಯಾಗುವ ಕನಸು ಕಾಣುತ್ತಿದೆ. ವಿಶ್ವಶಕ್ತಿಯಾಗುವುದು ಕೇವಲ ದೊಡ್ಡ ಜಿಡಿಪಿಯಿಂದ ಸಾಧ್ಯವಲ್ಲ. ಸಂಕಷ್ಟದ ಸಮಯದಲ್ಲಿ ಶಿಸ್ತು ಪಾಲಿಸುವ ಸಮಾಜವೇ ನಿಜವಾದ ಶಕ್ತಿರಾಷ್ಟ್ರವಾಗುತ್ತದೆ. ಪೆಟ್ರೋಲ್ ದರ ಏರಿದಾಗ ಗದ್ದಲ ಮಾಡುವ ಸಮಾಜಕ್ಕಿಂತ, ಸ್ವಲ್ಪ ದೂರ ನಡೆದು ರಾಷ್ಟ್ರದ ಮೇಲಿನ ಹೊರೆ ಕಡಿಮೆ ಮಾಡುವ ಸಮಾಜವೇ ಬಲಿಷ್ಠ.

ಆದ್ದರಿಂದ ಪ್ರಧಾನಿ ಮೋದಿ ನೀಡಿರುವ ಕರೆಗಳನ್ನು ಕೇವಲ ಆಡಳಿತಾತ್ಮಕ ಸೂಚನೆಗಳೆಂದು ನೋಡಬಾರದು. ಅವು ಭಾರತೀಯ ಸಮಾಜದ ರಾಷ್ಟ್ರೀಯ ಪ್ರೌಢತೆಯನ್ನು ಪರೀಕ್ಷಿಸುವ ಕ್ಷಣಗಳು. ನೆಹರು ಕಾಲದಲ್ಲಿ ಜನರು ಚಿನ್ನ ಕೊಟ್ಟರು. ಶಾಸ್ತ್ರಿ ಕಾಲದಲ್ಲಿ ಊಟ ಬಿಟ್ಟರು. ಮನಮೋಹನ್ ಸಿಂಗ್ ಕಾಲದಲ್ಲಿ ನಿಯಂತ್ರಣಗಳನ್ನು ಒಪ್ಪಿಕೊಂಡರು. ಇಂದು ಮೋದಿ ಕಾಲದಲ್ಲಿ ದೇಶ ಮತ್ತೆ ಒಂದು ಪ್ರಶ್ನೆ ಕೇಳುತ್ತಿದೆ, 'ರಾಷ್ಟ್ರಹಿತಕ್ಕಾಗಿ ಸ್ವಲ್ಪ ತ್ಯಾಗ ಮಾಡಲು ನಾವು ಸಿದ್ಧವೇ?'

ಏಕೆಂದರೆ, ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಹುತೇಕ ಆಡಳಿತ ಪಕ್ಷದ ನಾಯಕರು ತಮ್ಮ ಬೆಂಗಾವಲು ವಾಹನ ಕಡಿತ ಮಾಡಿಕೊಂಡಿದ್ದಾರೆ, ಹೆಲಿಕಾಪ್ಟರ್ ಸಂಚಾರ ಬಿಟ್ಟಿದ್ದಾರೆ. ಅನಗತ್ಯ ವಿದೇಶಿ ಸಂಚಾರವನ್ನೂ ತ್ಯಜಿಸಿದ್ದಾರೆ. ಇನ್ನೂ ಕೆಲವರು ಬಸ್‌ನಲ್ಲೇ ಓಡಾಡುವುದಾಗಿ ಹೇಳಿದ್ದಾರೆ. ಈಗ ಮುಂದೆ ತಾನೇನು ಮಾಡಬೇಕು ಎಂಬುದನ್ನು ನಾಗರಿಕ ನಿರ್ಧರಿಸಬೇಕು.

ಕೆಲಸದಲ್ಲಿ ಶ್ರದ್ಧೆ ಇರಲಿ

ಯೋ ಬಂಭ್ರಮೀತಿ ಸತತಂ ಗಗನೇ ಹಿಮಾಂಶುಃ।
ಯೋ ಜಾಜ್ವಲೀತಿ ಸವಿತಾ ಚ ಹವ್ಯವಾಹಃ।
ಯಾ ವಾವಹೀತಿ ಜನಜೀವನಮಿಲಾ ಸಮಸ್ತಾಂ।
ತೇಷಾಂ ನ ವಿಶ್ರಮ ಕಥಾಸ್ತಿ ಸದಾ ಕ್ರಿಯಾಸು॥ -ಸುಭಾಷಿತಶತಕಮ್

ಯಾವ ಚಂದ್ರನು ಬಾನಿನಲ್ಲಿ ಸತತವಾಗಿ ಸಂಚರಿಸುವನೋ, ಹೋಮಗಳಲ್ಲಿ ಯಾವ ಅಗ್ನಿಯು ಪ್ರಜ್ವಲಿಸುವನೋ, ಯಾವ ಭೂಮಿಯು ಕೋಟ್ಯಂತರ ಜನರನ್ನು ಹೊತ್ತುಕೊಂಡಿರುವುದೋ ಅವರಾರಿಗೂ ವಿಶ್ರಾಂತಿಯ ಕಥೆಯೇ ಇಲ್ಲ. ಯಾವಾಗಲೂ ಅವರಿಗೆ ಕೆಲಸದಲ್ಲಿ ಶ್ರದ್ಧೆ – ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್

'ಶ್ರದ್ಧಾಂ ಹಿ ಪರಮಾ ಗತಿಃ' ಶ್ರದ್ಧೆಯೇ ಪರಮ ಗತಿ ಅರ್ಥಾತ್ ಶ್ರೇಷ್ಠ ಮಾರ್ಗ ಎಂಬುದು ಸೂಕ್ತಿಯ ಅರ್ಥ. ನಾವು ಮಾಡುವ ಕೆಲಸದಲ್ಲಿ ಅಪಾರವಾದ ಶ್ರದ್ಧೆ ಇದ್ದರೆ ಅದು ಮುಂದಿನ ಸುಖಮಯ ಬದುಕಿಗೆ ನಾಂದಿಯಾಗುತ್ತದೆ. ಆದ್ದರಿಂದ ಹಿಡಿದ ಕೆಲಸವನ್ನು ಶ್ರದ್ಧೆಯಿಂದ ಪೂರ್ಣಗೊಳಿಸಬೇಕು.

ಶ್ರೀಮದ್ ಭಗವದ್ಗೀತೆಯಲ್ಲಿ 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬುದಾಗಿ ಗೀತಾಚಾರ್ಯನೇ ಉಪದೇಶಿಸಿದ್ದಾನೆ. ಶ್ರದ್ಧೆಯುಳ್ಳವನಿಗೆ ಜ್ಞಾನ ಲಭಿಸುತ್ತದೆ ಎಂಬುದು ಇದರ ಅರ್ಥ. ಸಂಯತೇಂದ್ರಿಯನಾಗಿ ಶ್ರದ್ಧೆಯಿಂದ ಕರ್ತವ್ಯ ಪಥದಲ್ಲಿ ಸಾಗಿದರೆ ಸೋಲೆಂಬುದಿಲ್ಲ. ಒಟ್ಟಿನಲ್ಲಿ ನಾವು ಮಾಡುವ ಕೆಲಸದಲ್ಲಿ ಶ್ರದ್ಧೆ ಇರಬೇಕು. ಶ್ರದ್ಧೆಯಿದ್ದಲ್ಲಿ ಆಲಸ್ಯ ಸುಳಿಯುವುದಿಲ್ಲ, ಶ್ರಮ ಬಾಧಿಸುವುದಿಲ್ಲ. ಶ್ರದ್ಧಾವುಳ್ಳವರಿಗೆ ವಿಶ್ರಾಂತಿಯ ಕಲ್ಪನೆ ಇರುವುದಿಲ್ಲ. ಪೂರ್ಣವಾದ ಕೆಲಸಗಳನ್ನು ಒಂದಾದ ನಂತರ ಇನ್ನೊಂದನ್ನು ಮಾಡುತ್ತ ವಿಶ್ರಾಂತಿಯ ಪರಿಕಲ್ಪನೆ ಇಲ್ಲದಂತೆ ನೆಮ್ಮದಿಯಿಂದ ಬದುಕನ್ನು ನಿರ್ವಹಿಸುತ್ತಾರೆ.

ಶ್ರದ್ಧೆಯಿಂದ ಕೆಲಸ ಮಾಡುವ ಪರಿಯನ್ನು ಮೂರು ದೃಷ್ಟಾಂತಗಳ ಮೂಲಕ ಪ್ರಕೃತ ಸುಭಾಷಿತದಲ್ಲಿ ಸೂಚಿಸಲಾಗಿದೆ. ಚಂದ್ರನು ಮೊದಲ ದೃಷ್ಟಾಂತ. ಒಂದು ಕ್ಷಣವನ್ನೂ ಆಲಸಿಯಾಗಿ ಕಳೆಯದೇ ಬಾನಿನ ಉದ್ದಗಲಕ್ಕೂ ನಿತ್ಯವೂ ಸಂಚರಿಸುತ್ತಾನೆ. ಆತನು ವಿರಾಮ ಪಡೆಕೊಂಡ ದಾಖಲೆಯಾಗಲಿ, ಆಲಸಿಯಾಗಿ ಕುಳಿತ ಕ್ಷಣವಾಗಲಿ ಇಲ್ಲವೇ ಇಲ್ಲ. ಯಾವಾಗಲೂ ಕರ್ತವ್ಯ ನಿರತ. ತಾನು ಮಾಡುವ ಕೆಲಸದಲ್ಲಿ ಅಷ್ಟೊಂದು ಶ್ರದ್ಧೆಯುಳ್ಳವರಿಂದಲೇ ಲೋಕ ಪೂಜ್ಯನಾಗಿದ್ದಾನೆ. ಸರ್ವಮಾನ್ಯನಾಗಿದ್ದಾನೆ.

ಹೋಮವಿಧಿಗಳಲ್ಲಿ ಹಾಗೂ ಇತರ ಸಂದರ್ಭಗಳಲ್ಲಿ ಅಗ್ನಿ ಶ್ರದ್ಧೆಯಿಂದ ಉರಿಯುತ್ತಾನೆ. ಪ್ರಜ್ವಲಿಸುತ್ತಾನೆ. ತನ್ನ ಕರ್ತವ್ಯವನ್ನು ತಪ್ಪದೆ ನೆರವೇರಿಸುತ್ತಾನೆ. ತನ್ನ ಕೆಲಸದಲ್ಲಿ ಆಲಸ್ಯವೆಂಬುದು ಲೇಶಮಾತ್ರವೂ ಇಲ್ಲ. ಆದ್ದರಿಂದಲೇ 'ಶ್ರದ್ಧಯಾಗ್ನಿಃ ಸಮಿಧ್ಯತೇ' ಎಂದು ವೇದದಲ್ಲಿ ಕೊಂಡಾಡಿದ್ದಾರೆ. ಒಂದೇ ಒಂದು ಕ್ಷಣ ಅಗ್ನಿಯು ಕರ್ತವ್ಯ ವಿಮುಖನಾದರೆ ಲೋಕ ವ್ಯವಹಾರ ನಿಂತೇ ಹೋಗುತ್ತದೆ.

ಕೋಟ್ಯಂತರ ಜನರನ್ನು, ಪ್ರಾಣಿ, ಪಕ್ಷಿಗಳನ್ನು, ನಗ ನದಿಗಳನ್ನು ಹೊತ್ತುಕೊಂಡ ಭೂಮಾತಾಯಿಗೆ ವಿಶ್ರಾಂತಿ ಎಂಬುದಿಲ್ಲ. ಆಲಸ್ಯವೆಂಬ ಮಾತೇ ಇಲ್ಲ. ಒಂದೊಮ್ಮೆ ಆಲಸ್ಯ ಆದರೆ ಏನೂ ಉಳಿಯಲಾರದು.

ಶ್ರಮವರಿಯದೆ ನಿತ್ಯ ನಿರಂತರ ಕರ್ತವ್ಯದ ಮಾರ್ಗದಲ್ಲಿ ನಡೆಯುವ ಸಂದೇಶವಿತ್ತ ಈ ದೃಷ್ಟಾಂತಗಳು ನಮಗೆ ಪ್ರೇರಣೆಯಾಗಬೇಕು. ಆಲಸ್ಯವಿಲ್ಲದೆ ಕರ್ತವ್ಯವನ್ನು ಕೈಗೊಳ್ಳುವ ಆಸಕ್ತಿಯನ್ನು ಪಡೆದುಕೊಳ್ಳಬೇಕು. ಶ್ರದ್ಧೆಯೇ ನಮ್ಮೆಲ್ಲ ಬಯಕೆಗಳ ತಾಯಿ. ಆದ್ದರಿಂದ ಶ್ರದ್ಧೆಯನ್ನು ಉಳಿಸಿಕೊಳ್ಳೋಣ, ಬೆಳೆಸಿಕೊಳ್ಳೋಣ.

ಅಸಾಧಾರಣ ನೇತಾರನಿಗೆ ಶತಕಯೋಗ ಸಿದ್ಧಿಸಲಿ

ಇದೀಗ ರಾಜಕೀಯದಲ್ಲಿ ಜೀವನದ ಐವತ್ತು ಸಂವತ್ಸರ ಪೂರೆಸುತ್ತಿರುವ ನಾಡಿನ ರಾಜಕೀಯದ ಮಹಾ ನೇತಾರ ಬಿ.ಎಸ್ ಯಡಿಯೂರಪ್ಪ ನವರು ಹಲವು ನೆಲೆಗಳಲ್ಲಿ ಪ್ರತ್ಯೈಕ್ಯಕ ಪ್ರಭೆಯ ನಾಯಕಮಣಿ.

ಸತತ ಕ್ರಿಯಾಶೀಲತೆ, ಹೋರಾಟದ ಮನೋಧರ್ಮ, ಆಶ್ಚರ್ಯಕರ ಆರೋಗ್ಯ, ಸದಾಕಾಲವೂ ಜನಪರ ಚಿಂತನೆ, ಸೋಲೊಪ್ಪದ ಛಲಗಳಲ್ಲಿ ಒಂದು ರಾಷ್ಟ್ರೀಯ ಮಾದರಿ. ಗ್ರಹಣ ಶಕ್ತಿಯ ಅಚ್ಚು ಅಚ್ಚರಿ.

ಪತ್ರ ಮಿತ್ರ

ಮುಖಮುದ್ರೆ ಗಂಭೀರ, ವಿಚಿತ್ರ ಮೌನಗ್ರಹದ, ಅಚ್ಚು, ನೆನಪು, ಕಂಪ್ಯೂಟರ್ ಮಿದುಳು...

ಯಾರನ್ನೂ ಓಲೈಸಿ ಒಲಿಸುವ ಧೋರಣೆ. ಮಾತು ಕಡಿಮೆ.ಇವರೇನು ಹೀಗೆ ಎಂದು ಕಾಣುವಷ್ಟು ವಿಚಿತ್ರ.ಆದರೆ ಮುಂದಿನ ವರ್ತನೆಯೇ ಸಂದೇಶ.

ಒಬ್ಬನನ್ನು ಗುರುತಿಸುವಾಗಲೂ ಹಾಗೆಯೆ. ಧ್ವನಿಪೂರ್ಣವಾಗಿ ಸಿಡಿದು ಬರುವ ಅತಿ ಇಲ್ಲದ ಮೆಚ್ಚುಗೆ...ಇದು ನನ್ನ ಸ್ವಾನುಭವ.

ಅವರು ವಿಧಾನಸಭೆಯಲ್ಲಿ ಮಾಡಿದ ವಿದಾಯ ಭಾಷಣ... ಅದು ಕಾವ್ಯ..

ಆಯಾಸವಿರದ ಈ ನಾಯಕನಿಗೆ ದಣಿವಿರದೆ ವಿಶ್ರಾಂತಿ ಇಲ್ಲದ ಸಂತಸದ ದುಡಿಮೆಯ ಶತಕ ಸಿದ್ಧಿಸಲಿ. ಯಡಿಯೂರು ಶ್ರೀ ಸಿದ್ಧಲಿಂಗೇಶ್ವರ, ಕ್ಷಾತ್ರಬ್ರಾಹ್ಮ ವರ್ಚಸ್ಸಿನ ಕಡಲತಡಿ ಕೊಡಲಿರಾಮ ಶಕ್ತಿ ಕೊಡಲಿ.

-ಡಾ.ಎಂ. ಪ್ರಭಾಕರಜೋಶಿ, ಮಂಗಳೂರು

ಇನ್ನೂ ಸತ್ಯ ಅರಗಿಸಿಕೊಳ್ಳದ 'ಲಿಬರಲ್' ಮಾಧ್ಯಮಗಳು

ಕೆಲವು ರಾಜಕೀಯ ವಿಶ್ಲೇಷಕರು, ಲಿಬರಲ್ ಮಾಧ್ಯಮಗಳು ಮಮತಾ ಸೋಲಿನ ನೈಜ ಕಾರಣ ಅರಿಯುವ ಪ್ರಯತ್ನ ಇನ್ನೂ ಮಾಡಿಲ್ಲ. ಅವರಿನ್ನೂ ತಾವೇ ಸೃಷ್ಟಿಸಿದ ಭ್ರಮೆಯಲ್ಲೇ ಇದ್ದಾರೆ.

▸ ಶೆಫಾಲಿ ವೈದ್ಯ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿ ಟಿಎಂಸಿ ನಾಮಾವಶೇಷಗೊಂಡರೂ ಮಮತಾ ಬ್ಯಾನರ್ಜಿ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ನೀಡಲು ನಿರಾಕರಿಸಿದರು. ರಾಜ್ಯದ ಶೇ.92 ಜನರು ಮತ ಚಲಾಯಿಸಿ, ಮಮತಾ ಸರಕಾರವನ್ನು ಕಿತ್ತೊಗೆಯುವ ತೀರ್ಪು ನೀಡಿದ್ದರೂ, ಈ ಫಲಿತಾಂಶವು ಜನಾಭಿಪ್ರಾಯವಲ್ಲ, ಇದು ಚುನಾವಣಾ ವಂಚನೆ ಎಂದು ಅವರು ಪ್ರಲಾಪಿಸುತ್ತಿದ್ದಾರೆ.

ಈ ಬಗೆಯ ಫಲಿತಾಂಶವು ಟಿಎಂಸಿಯಲ್ಲಿ ಹಾಗೂ ಟಿಎಂಸಿಯನ್ನು ಬೆಂಬಲಿಸುವ ಮಾಧ್ಯಮಗಳು ಮತ್ತು ರಾಜಕೀಯ ವಿಶ್ಲೇಷಕರಲ್ಲಿ ಆತ್ಮವಿಶ್ಲೇಷಣೆಗೆ ಕಾರಣವಾದೀತು ಎಂದು ನೀವು ಭಾವಿಸಿದ್ದರೆ ಅದು ತಪ್ಪು. ಚುನಾವಣಾ ಫಲಿತಾಂಶದ ಬಳಿಕ ಕೆಲವಾರು ಪತ್ರಿಕೆಗಳಲ್ಲಿನ ಲೇಖನಗಳನ್ನು, ಟಿವಿಗಳಲ್ಲಿನ ಸಂದರ್ಶನಗಳನ್ನು ಮತ್ತು ಸಂವಾದಗಳನ್ನು ವೀಕ್ಷಿಸಿದರೆ ಅವರೆಲ್ಲಾ ಇನ್ನೂ ವಸ್ತುಸ್ಥಿತಿ ಅರಿಯಲು ನಿರಾಕರಿಸುತ್ತಿರುವುದು ಕಂಡುಬರುತ್ತದೆ. ಬಿಜೆಪಿ ಚುನಾವಣಾ ಆಯೋಗವನ್ನು ಬಳಸಿಕೊಂಡು ಗೆಲುವು ಸಾಧಿಸಿದೆ, ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಮಮತಾ ಪಕ್ಷದ ಸೋಲಿಗೆ ಕಾರಣ, ಹಿಂದು ಮತ ಧ್ರುವೀಕರಣಗೊಂಡದ್ದು ಟಿಎಂಸಿಯನ್ನು ಸೋಲಿಸಿತು, ಚುನಾವಣಾ ಆಯೋಗ ಮತ್ತು ಕೇಂದ್ರ ಮೀಸಲು ಪಡೆಗಳು ನ್ಯಾಯಯುತ ಮತದಾನ ನಡೆಯಲು ಬಿಡಲಿಲ್ಲ ಮುಂತಾಗಿ ಅವರೆಲ್ಲಾ ಬಣ್ಣಿಸುತ್ತಿದ್ದಾರೆ. ಮಮತಾ ಪಕ್ಷದ ಸೋಲಿಗೆ ನಿಜವಾದ ಕಾರಣವೊಂದನ್ನು ಬಿಟ್ಟು ಉಳಿದೆಲ್ಲಾ ಕುಂಟು ನೆಪಗಳನ್ನು ಅವರು ನೀಡುತ್ತಿದ್ದಾರೆ. ಇವರ ಈ ವಿವರಣೆಗಳೆಲ್ಲ ಖಂಡಿತ ರಾಜಕೀಯ ವಿಶ್ಲೇಷಣೆಯಲ್ಲ. ಇವೆಲ್ಲ ಮಮತಾ ದುರಾಡಳಿತವನ್ನು ಬಣ್ಣದ ಮಾತುಗಳಿಂದ ಸಮರ್ಥಿಸುವ ಪರಿ.

ಮಮತಾ ಅವರ ಟಿಎಂಸಿ ಸೋಲಲು ಒಂದೆರಡು ಕಾರಣಗಳಿದ್ದುದಲ್ಲ. ಹಲವಾರು ಕಾರಣಗಳಿದ್ದವು.... ಈ ಹಲವಾರು ಕಾರಣಗಳಿಂದಾಗಿ ಜನರು ಮಮತಾ ಪಕ್ಷವನ್ನು ತಿರಸ್ಕರಿಸಿದರೆಂಬುದು ಸತ್ಯ.

ಭ್ರಷ್ಟಾಚಾರ

ಮಮತಾ ಸರಕಾರ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿತ್ತು. ಅದರಲ್ಲಿ ಅನುಮಾನವೇ ಇಲ್ಲ. 2022ರಲ್ಲಿ ಮಮತಾರ ಬಲಗೈ ಬಂಟ ಹಾಗೂ ಶಿಕ್ಷಣ ಸಚಿವ ಪಾರ್ಥ ಚಟರ್ಜಿಯನ್ನು ಅನುಷ್ಠಾನ ನಿರ್ದೇಶನಾಲಯವು ಶಾಲಾ ಸಿಬ್ಬಂದಿ ನೇಮಕಾತಿ ಹಗರಣದಲ್ಲಿ ಬಂಧಿಸಿತ್ತು. ಅವರ ಆಪ್ತ ಸಹಾಯಕನ ಮನೆಯಲ್ಲಿ 27.9 ಕೋಟಿ ರೂ. ನಗದು ಹಾಗೂ ಕೋಟ್ಯಂತರ ಮೌಲ್ಯದ ಚಿನ್ನಾಭರಣಗಳು ಪತ್ತೆಯಾಗಿದ್ದವು. ಈ ಹಗರಣದ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ 2016ರ ನೇಮಕಾತಿ ಪ್ರಕ್ರಿಯೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿ 25,752 ನೇಮಕಾತಿಗಳನ್ನು ತಕ್ಷಣವೇ ರದ್ದುಪಡಿಸಿತು. ಮಮತಾ ಸರಕಾರವು ಉದ್ಯೋಗಗಳನ್ನು 'ಮಾರಿದ' ಕಾರಣದಿಂದಾಗಿ ಇವರೆಲ್ಲಾ ಒಂದೇ ದಿನದಲ್ಲಿ ನಿರುದ್ಯೋಗಿಗಳಾಗಬೇಕಾಯಿತು. ಅವರು ಹಾಗೂ ಅವರ ಕುಟುಂಬಗಳು ಈ ಬಾರಿಯ ಚುನಾವಣೆಯಲ್ಲಿ ಯಾರಿಗೆ ಮತ ಹಾಕಿರಬಹುದು ಎಂದು ಊಹಿಸುವುದು ಕಷ್ಟವಲ್ಲ.

ನ್ಯಾಯಾಲಯದ ತೀರ್ಪು ಬಂದಾಗ ಮಮತಾ ಕ್ಷಮಾಪಣೆ ಕೇಳಲಿಲ್ಲ. ಆಕೆ ಸಿಪಿಎಂ ಮತ್ತು ಬಿಜೆಪಿ ಮೇಲೆ ಆರೋಪ ಹೊರಿಸಿ ನ್ಯಾಯಾಂಗದ ಆದೇಶವನ್ನೇ ಧಿಕ್ಕರಿಸಿದರು. 'ನಾನು ಈ ತೀರ್ಪನ್ನು ಒಪ್ಪಿಕೊಳ್ಳುವುದಿಲ್ಲ' ಎಂದು ಘೋಷಿಸಿದರು. ನ್ಯಾಯಾಂಗದ ನ್ಯಾಯಪರತೆಯನ್ನೇ ಧಿಕ್ಕರಿಸಿದ ಮಮತಾರನ್ನು ಬೆಂಬಲಿಸುವ ಮತ್ತು ಅವರನ್ನು ಸಮರ್ಥಿಸುವ ಲಿಬರಲ್‌ಗಳು, ಬುದ್ಧಿಜೀವಿಗಳು ಬಿಜೆಪಿಯು ಸಾಂವಿಧಾನಿಕ ಸಂಸ್ಥೆಗಳ ನಾಶಕ್ಕೆ ಕಾರಣವಾಗುತ್ತಿದೆ ಎಂದು ಆರೋಪಿಸುವುದು ಎಷ್ಟು ಹಾಸ್ಯಾಸ್ಪದ!

ಸ್ವಜನ ಪಕ್ಷಪಾತ

ಸ್ವಜನ ಪಕ್ಷಪಾತಕ್ಕೆ ಮತ್ತೊಂದು ಹೆಸರು ಮಮತಾ ಬ್ಯಾನರ್ಜಿ. ಅವಿವಾಹಿತೆಯಾಗಿರುವ ಮಮತಾ ಬ್ಯಾನರ್ಜಿ ತಮ್ಮ ಸೋದರಳಿಯ ಅಭಿಷೇಕ್ ಬ್ಯಾನರ್ಜಿಯನ್ನು ಟಿಎಂಸಿ ಪ್ರಧಾನ ಕಾರ್ಯದರ್ಶಿ ಹುದ್ದೆಗೇರಿಸಿದರು. ಆತ ಪಕ್ಷದಲ್ಲಿ ನಿರಂಕುಶ ರಾಜನಂತೆ ಕಾರ್ಯಾಚರಿಸತೊಡಗಿದ. ಮಮತಾ ಆತನಿಗೆ ಕೇವಲ ಪಕ್ಷದ ಸ್ಥಾನವನ್ನಷ್ಟೇ ನೀಡಿದ್ದಲ್ಲ. ಇಡೀ ಪಕ್ಷವನ್ನೇ ಆತನ ವಶಕ್ಕೊಪ್ಪಿಸಿದರು. ಅಭ್ಯರ್ಥಿಗಳ ಆಯ್ಕೆ, ಪ್ರಚಾರ ತಂತ್ರ, ಬೂತ್ ನಿರ್ವಹಣೆ ಎಲ್ಲವೂ ಅಭಿಷೇಕ್ ಮೂಲಕ ನಡೆಯಲಾರಂಭಿಸಿತು.

ಅಭಿಷೇಕ್ ಬ್ಯಾನರ್ಜಿಯ ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಂತೂ ಆತನದು ಕಬ್ಬಿಣದ ಹಸ್ತದ ಆಡಳಿತ. ಇತ್ತೀಚಿನ ಚುನಾವಣೆಯಲ್ಲಿ ಕೂಡಾ ಈ ಕ್ಷೇತ್ರದ ಹಲವಾರು ಬೂತ್‌ಗಳಲ್ಲಿ ಇವಿಎಂನಲ್ಲಿ ಬಿಜೆಪಿ ಹೆಸರಿನ ಮೇಲೆ ಟೇಪ್ ಅಂಟಿಸಲಾಗಿತ್ತು. ಇವಿಎಂಗಳನ್ನು ಇಟ್ಟಿದ್ದ ಸ್ಟ್ರಾಂಗ್ ರೂಮನ್ನು ಕೂಡ ಬಲವಂತವಾಗಿ ತೆರೆದು ಒಳಪ್ರವೇಶಿಸಲಾಯಿತು. ಇದೆಲ್ಲ ಅಭಿಷೇಕ್‌ನ



ಸೂಚನೆಯಂತೆ ನಡೆದುದು.

ಪ್ರಚಾರದ ವೇಳೆ ಅಭಿಷೇಕ್ ಬ್ಯಾನರ್ಜಿ "ತಮ್ಮ ಪಕ್ಷಕ್ಕೆ ಮತ ಹಾಕದವರು ಮುಂದಕ್ಕೆ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಮತದಾರರಿಗೆ ನೇರವಾಗಿ ಬೆದರಿಕೆಯೊಡ್ಡಿದ್ದರು. ಟಿಎಂಸಿಗೆ ಮತ ಹಾಕಿದರೆ ಮಾತ್ರ ಮತದಾರರಿಗೆ ಉಳಿಗಾಲ ಎಂಬುದಾಗಿ ಪ್ರತಿ ಚುನಾವಣೆಯಲ್ಲೂ ಜನರನ್ನು ಬೆದರಿಸಲಾಗುತ್ತದೆ.

ಗೂಂಡಾ ರಾಜ್ಯ

ಮಮತಾ ಕಾಲದಲ್ಲಿ ಪಶ್ಚಿಮ ಬಂಗಾಳದಲ್ಲಿದ್ದುದು ಗೂಂಡಾ ರಾಜ್ಯ. ಟಿಎಂಸಿ ಗೂಂಡಾಗಳದ್ದೇ ಅಧಿಪತ್ಯ. ಫಾಲ್ಟಾ ಕ್ಷೇತ್ರದಲ್ಲಂತೂ ಇದು ಮೇರೆ ಮೀರಿತ್ತು.ಅದಕ್ಕಾಗಿಯೇ ಅಲ್ಲೀಗ ಮರುಚುನಾವಣೆ ಆದೇಶಿಸಲಾಗಿದೆ. ಆದರೆ ನಮ್ಮ ರಾಜಕೀಯ ವಿಶ್ಲೇಷಕರಿಗೆ ಅದು ಕಾಣಿಸುತ್ತಿಲ್ಲ.

ಫಾಲ್ಟಾದ ಟಿಎಂಸಿ ಅಭ್ಯರ್ಥಿ ಜಹಂಗೀರ್‌ಖಾನ್ ಪೊಲೀಸ್ ಅಧಿಕಾರಿ ಅಜಯ್ ಶರ್ಮಾ ಅವರಿಗೆ ಬಹಿರಂಗವಾಗಿ ಸವಾಲು ಹಾಕಿದ್ದ. "ನೀವು ಆಟ ಆರಂಭಿಸಿದ್ದೀರಿ. ನಾನು ಅದನ್ನು ಮುಗಿಸುತ್ತೇನೆ "ಎಂದು ಬೆದರಿಸಿದ್ದ. ಟಿಎಂಸಿಗೆ ಅಡ್ಡ ಬಂದರೆ ಕೇಂದ್ರ ಮೀಸಲು ಪಡೆಯನ್ನೇ ಸ್ಫೋಟಿಸುವುದಾಗಿ ಆತ ಹೇಳಿದ್ದ. ಕೆಲವು ಗ್ರಾಮಗಳಿಗೆ ಭೇಟಿ ನೀಡಿದ್ದ ಜಹಂಗೀರ್ ಖಾನ್ ಅಲ್ಲಿನ ನಿವಾಸಿಗಳಲ್ಲಿ "ಟಿಎಂಸಿ ಅಧಿಕಾರಕ್ಕೆ ಬಂದರೆ ನಿಮ್ಮ ಮಹಿಳೆಯರನ್ನು ಅತ್ಯಾಚಾರ ಮಾಡಲಾಗುವುದು. ಹಾಗೂ ಪುರುಷರನ್ನು ಕೊಲ್ಲಲಾಗುವುದು ಎಂದು ಬೆದರಿಕೆಯೊಡ್ಡಿದ್ದ" ಎಂಬುದಾಗಿ ಆ ಗ್ರಾಮ ನಿವಾಸಿಗಳೇ ಪತ್ರಕರ್ತರಲ್ಲಿ ತಿಳಿಸಿದ್ದರು.

ಹೀಗೆ ದೂರಿಕೊಂಡವರು ಬಿಜೆಪಿ ಕಾರ್ಯಕರ್ತರಲ್ಲ. ಅವರು ಸಾಮಾನ್ಯ ಬಂಗಾಳಿ ಮತದಾರರು. ಆದರಲ್ಲಿಯೂ ಟಿಎಂಸಿಗೇ ಮತ ಹಾಕುತ್ತಾ ಬಂದವರು. ಅವರು ತಮಗೆ ರಕ್ಷಣೆ ಬೇಕೆಂದು ಪೊಲೀಸರಲ್ಲಿ ಕೋರುತ್ತಿದ್ದರು. ಇದು ಮಮತಾ ಬ್ಯಾನರ್ಜಿ ಆಡಳಿತ ಕಾಲದ ಪಶ್ಚಿಮ ಬಂಗಾಳದ ಪರಿಸ್ಥಿತಿ. ಪಶ್ಚಿಮ ಬಂಗಾಳದಲ್ಲಿ ಗ್ರಾಮ ಪಂಚಾಯತ್ ಮುಖ್ಯಸ್ಥರನ್ನು ಚುನಾವಣೆ ಮೂಲಕ ಆರಿಸುತ್ತಿರಲಿಲ್ಲ. ಟಿಎಂಸಿ ತನಗೆ ಬೇಕಾದವರನ್ನು ನೇಮಿಸುತ್ತಿತ್ತು.

ಪ.ಬಂಗಾಳದಲ್ಲಿ ಕ್ರಿಮಿನಲ್ ಅಭ್ಯರ್ಥಿಗಳು ಮತದಾರರಿಗೇ ಅತ್ಯಾಚಾರದ ಬೆದರಿಕೆಯೊಡ್ಡುತ್ತಾರೆ. ಚುನಾವಣಾ ವೀಕ್ಷಕರಿಗೆ ಎಲ್ಲರೆದುರೇ ಬೆದರಿಕೆ ಒಡ್ಡಲಾಗುತ್ತದೆ. ಇವೆಲ್ಲದರ ಮಧ್ಯೆ ಮಮತಾರವರು ಜಹಾಂಗೀರ್‌ಖಾನ್‌ನನ್ನು ಸಮರ್ಥಿಸಿ ಮಾತನಾಡುತ್ತಾರೆ.

ಇದೀಗ ಚುನಾವಣಾ ಆಯೋಗವು ಫಾಲ್ಟಾದ ಮತದಾನವನ್ನು ರದ್ದುಪಡಿಸಿ ಮೇ 21ರಂದು ಮರುಮತದಾನಕ್ಕೆ ಆದೇಶಿಸಿದೆ. ಪಶ್ಚಿಮ ಬಂಗಾಳದ ಇತಿಹಾಸದಲ್ಲಿ ಇಡೀ ಕ್ಷೇತ್ರದ ಚುನಾವಣೆಯನ್ನೇ ರದ್ದುಪಡಿಸಿದ್ದು ಇದೇ ಮೊದಲು. ಆದರೆ ಇವೆಲ್ಲವೂ ಮಮತಾ ಪರ ವಿಶ್ಲೇಷಕರ ಕಣ್ಣಿಗೆ ಬೀಳುವುದಿಲ್ಲ. ಅವರೆಲ್ಲ ಬಿಜೆಪಿ ಗೆಲುವಿಗೆ ಅದರ ಹಿಂದುತ್ವ ಪ್ರಚಾರವೇ ಕಾರಣ ಎನ್ನುತ್ತಾರೆ. ಮಮತಾ ಕಾಲದ ದುರಾಡಳಿತದಿಂದ ಜನರು ರೋಸಿದ್ದರು ಎಂದು ಒಪ್ಪಿಕೊಳ್ಳುವುದಿಲ್ಲ.

ಮಮತಾ ಆಘಾತಕಾರಿ ಮಾತು

ಚುನಾವಣೆಗಿಂತ ಮೊದಲು ಎಸ್‌ಐಆರ್ ವಿರುದ್ಧ ಧರಣಿ ನಡೆಸಿದ ಮಮತಾ ಬ್ಯಾನರ್ಜಿ ಬಂಗಾಳಿ ಹಿಂದುಗಳೇ ತುಂಬಿದ್ದ ಸಭೆಯಲ್ಲಿ ಮಾತನಾಡುತ್ತಾ "ನಾವು ಇರುವುದರಿಂದಲೇ ನೀವು ಸುರಕ್ಷಿತರಾಗಿದ್ದೀರಿ. ನಾವಿಲ್ಲದಿದ್ದರೆ ಒಂದು ಸಮುದಾಯವು ಒಟ್ಟಾಗಿ ಬಂದು ನಿಮ್ಮನ್ನು ಸುತ್ತುವರಿದು ನಿಮ್ಮನ್ನು ಒಂದೇ ಕ್ಷಣದಲ್ಲಿ ಮುಗಿಸಿ ಬಿಡುತ್ತದೆ" ಎಂದು ಹೇಳಿದ್ದರು. ಅಂದರೆ ಹಿಂದುಗಳನ್ನು ಮುಗಿಸಿ ಬಿಡಲು ಒಂದು ಸಮುದಾಯ ಸಿದ್ಧವಾಗಿದೆ, ಆದರೆ ತಾನು ಅದನ್ನು ಸದ್ಯಕ್ಕೆ ತಡೆದಿದ್ದೀನೆ ಎಂಬುದು ಮಮತಾ ಮಾತಿನರ್ಥ.

ಇದು ಯಾರೋ ಬಿಜೆಪಿ ಮುಖಂಡ ಹೇಳಿದ ಮಾತಲ್ಲ. ಆರೆಸ್ಸೆಸ್ ಪ್ರಚಾರವೂ ಅಲ್ಲ. ಇದು ಜಾತ್ಯತೀತ ನಾಯಕಿಯೆಂದು ಕೆಲವು ಮಾಧ್ಯಮಗಳು ಹಾಡಿಹೊಗಳುವ ಮಹಿಳಾ ಮುಖ್ಯಮಂತ್ರಿಯೊಬ್ಬರಿಂದ ಉದುರಿದ ಮಾತು. ತಮ್ಮ ರಾಜ್ಯದಲ್ಲಿ ಒಂದು ಸಮುದಾಯವು ಹಿಂದುಗಳನ್ನು ಮುಗಿಸಿ ಬಿಡಲು ಕಾದಿದೆ ಎಂದು ಅವರು ನಿರ್ಲಜ್ಜವಾಗಿ ನುಡಿಯುತ್ತಾರೆ.

ಕಳೆದ 15 ವರ್ಷಗಳ ಆಳ್ವಿಕೆಯಲ್ಲಿ ಮಮತಾ ಬ್ಯಾನರ್ಜಿ ಬಹಳಷ್ಟು ಈದ್ ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ಅಲ್ಲಿ ಅವರು ಮಾತನಾಡುವುದು ಬಂಗಾಳಿ ಭಾಷೆಯಲ್ಲ. ಉರ್ದು! ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಹಲವಾರು ಉರ್ದು ಪದಗಳಿವೆ. ಶಾಲೆಗಳಲ್ಲಿ, ಸರಕಾರಿ ಕಚೇರಿಗಳಲ್ಲಿ ಅಧಿಸೂಚನೆ ನೀಡಲು ಉರ್ದುವನ್ನು ಅಧಿಕೃತ ಭಾಷೆಯನ್ನಾಗಿಸುವ ಭರವಸೆಯನ್ನೂ ನೀಡಲಾಗಿದೆ. ಇಂದು ಬಂಗಾಳಿ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ರೀತಿಯೆ?

ಮಹುವಾ ಮೊಯಿತ್ರಾ, ದಾರ್ಷ್ಟ್ಯ

ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಕೂಡಾ ದಾರ್ಷ್ಟ್ಯದ ಹೇಳಿಕೆ ನೀಡುವುದರಲ್ಲಿ ಹಿಂದೆ ಬಿದ್ದಿಲ್ಲ. ಚುನಾವಣಾ ಪ್ರಚಾರವೊಂದರಲ್ಲಿ ಆಕೆ "ಬಂಗಾಳಿಗಳು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಸಿದ್ದರು. ಆದರೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಒಬ್ಬನೇ ಒಬ್ಬ ಗುಜರಾತಿಯನ್ನು ನೀವು ಹೆಸರಿಸಬಲ್ಲಿರಾ?" ಎಂದು ಪ್ರಶ್ನಿಸಿದ್ದರು. ಆದೊಂದು ಹೇಳಿಕೆಯಿಂದಲೇ ಆಕೆ ಮಹಾತ್ಮಾಗಾಂಧಿ, ಸರ್ದಾರ್ ಪಟೇಲ್, ಶ್ಯಾಮ್‌ಜೀ ಕೃಷ್ಣವರ್ಮ ಮುಂತಾದ ಸ್ವಾತಂತ್ರ್ಯ ವೀರರನ್ನು ನಗಣ್ಯ ಮಾಡಿಬಿಟ್ಟಿದ್ದರು. ಮಹಾರಾಷ್ಟ್ರದ ಸಾವರ್ಕರ್‌ರನ್ನು ಆಕೆ ಗುಜರಾತಿನವರು ಎಂದು ಬಣ್ಣಿಸಿದ್ದರು. ಬಳಿಕ ಈ ಹೇಳಿಕೆಗಾಗಿ ಮಮತಾ ಬ್ಯಾನರ್ಜಿ ಕ್ಷಮಾಪಣೆ ಕೇಳಿದ ಪ್ರಸಂಗ ನಡೆದಿತ್ತು. ಇಂತಹ ಮಹಿಳೆಯನ್ನು ನಮ್ಮ ಲಿಬರಲ್ ಮಾಧ್ಯಮಗಳು 'ಬುದ್ಧಿವಂತ ಸಂಸದೆ', 'ಉತ್ತಮ ಸಂಸದೀಯ ಪಟು' ಎಂದು ಎಂದು ಬಣ್ಣಿಸುತ್ತವೆ. ಎಂಥಾ ವಿಡಂಬನೆ !

ಮೊಹುವಾ ಇಂತಹ ಹೇಳಿಕೆ ನೀಡಿದ್ದು ಭವಾನಿಪುರದಲ್ಲಿ. ಅಲ್ಲಿ ಮಮತಾ ಬ್ಯಾನರ್ಜಿ ಅವರೇ ಸ್ಪರ್ಧಿಯಾಗಿದ್ದರು. ವಿಪರ್ಯಾಸವೆಂದರೆ ಅದೇ ಕ್ಷೇತ್ರದಲ್ಲಿ ಶೇ.30ಕ್ಕಿಂತ ಹೆಚ್ಚು ಗುಜರಾತಿಗಳಿದ್ದರು. ಅವರೆಲ್ಲ ಮತದಾನ ದಿನದಂದು ಮೊಹುವಾ ಹೇಳಿಕೆಯನ್ನು ಮರೆಯಲಿಲ್ಲ....

ಮತದಾರರು

ದಿಲ್ಲಿಯಲ್ಲಿ ಮನೆಕೆಲಸ ಮಾಡುವ ಸೀಮಾದಾಸ್ ಎಂಬಾಕೆ ಮತದಾನ ಮಾಡಲು ಎರಡು ದಿನ ರೈಲಿನಲ್ಲಿ ಪ್ರಯಾಣಿಸಿ ಪಶ್ಚಿಮ ಬಂಗಾಳಕ್ಕೆ ಬಂದಿದ್ದಳು. ಆಕೆ ಯಾವಾಗಲೂ ಟಿಎಂಸಿಗೆ ಮತ ಹಾಕುವಾಕೆ. ಆದರೆ ಈ ಬಾರಿ ಬಿಜೆಪಿಗೆ ಮತ ಹಾಕಿದ್ದಳು. ಮಮತಾ ಯಾವಾಗಲೂ ಮುಸ್ಲಿಮರ ಪರವಾಗಿದ್ದಾರೆ ಎಂಬುದು ಆಕೆಯ ದೂರು.

ಕೆಲವು ಮಾಧ್ಯಮಗಳು ಇದು ಬಿಜೆಪಿಯು ಮತದಾರರನ್ನು ಕೋಮು ನೆಲೆಯಲ್ಲಿ ಪ್ರಭಾವಿಸುತ್ತಿರುವುದರ ಪರಿಣಾಮ ಎಂದು ಬಣ್ಣಿಸಿದವು. ಆದರೆ ಪಶ್ಚಿಮ ಬಂಗಾಳದ ಮತದಾರರು ಮೂರ್ಖರಲ್ಲ. ಅವರು ಮಮತಾರ ಆಡಳಿತವನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಗೂಂಡಾ ರಾಜ್ಯವನ್ನು ಕಂಡಿದ್ದಾರೆ. ಅಲ್ಪಸಂಖ್ಯಾತ ಓಲೈಕೆಯಿಂದ ರೋಸಿದ್ದಾರೆ. ಕಾನೂನು ವ್ಯವಸ್ಥೆ ಕುಸಿದು ಬಿದ್ದಿರುವುದನ್ನು ಗಮನಿಸಿದ್ದಾರೆ.

ಮತದಾನ ಮುಗಿದು ಮತ ಎಣಿಕೆಗೆ ಕಾಯುವ ಅವಧಿಯಲ್ಲಂತೂ ಮಮತಾ, ಮೊಹುವಾ, ಅಭಿಷೇಕ್ ಬ್ಯಾನರ್ಜಿ, ಡೆರೆಕ್ ಓ ಬ್ರಿಯಾನ್ ಸೇರಿದಂತೆ ಟಿಎಂಸಿ ನಾಯಕರಿಂದ ಬಿಜೆಪಿ ಮುಖಂಡರೆಡೆಗೆ ಮತ್ತಷ್ಟು ಬೆದರಿಕೆಯ ಸಂದೇಶಗಳು ರವಾನಿಸಲ್ಪಟ್ಟವು. ಫಲಿತಾಂಶದ ಬಳಿಕ ನಿಮ್ಮೆಲ್ಲರನ್ನು ನೋಡಿಕೊಳ್ಳುತ್ತೇವೆ ಎಂದು ಅವರು ಬಿಜೆಪಿಗರಿಗೆ ಬಹಿರಂಗ ಬೆದರಿಕೆ ಹಾಕಿದರು.

ಮಾಧ್ಯಮಗಳ ಕುರುಡುಗಣ್ಣು

ಲಿಬರಲ್ ಮಾಧ್ಯಮಗಳು, ಹಲವಾರು ರಾಜಕೀಯ ವಿಶ್ಲೇಷಕರು ತಮ್ಮ ವಿಶ್ಲೇಷಣೆಯಲ್ಲಿ ಈ ಮುಂದಿನದನ್ನೆಲ್ಲ ಹೇಳಲಿಲ್ಲ– 15 ವರ್ಷಗಳ ಕಾಲ ಮಮತಾ ತಾವೇ ಒಂದು ಸಂಸ್ಥೆಯಾಗಿದ್ದರು, ಆಕೆಯೇ ಸರಕಾರವಾಗಿದ್ದರು, ಆಕೆ ಪ್ರತಿಯೊಂದು ಪಂಚಾಯತ್‌ನ್ನು ಕೂಡಾ ತಮ್ಮ ಬೆಂಬಲಿಗರಿಂದಲೇ ತುಂಬಿದ್ದರು, ಶಾಲೆಗಳಲ್ಲಿ ಖರೀದಿಸಿದ ಸಿಬ್ಬಂದಿಗಳನ್ನು ನೇಮಿಸಿದ್ದರು, ಆಕೆ ಅಪರಾಧಿ ಅಭ್ಯರ್ಥಿಗಳನ್ನು ರಕ್ಷಿಸಲು ಪೊಲೀಸರನ್ನು ಬಳಸಿಕೊಂಡರು, ಹಿಂದು ಮತದಾರರಿಗೆ ಅಲ್ಪಸಂಖ್ಯಾತರಿಂದ ಬೆದರಿಕೆ ಬಂದಾಗ ಮೌನವಾಗುಳಿದರು...

ಈ ಕುರಿತಂತೆ ಅವರದು ಕುರುಡುಗಣ್ಣು!

ಇವೆಲ್ಲದರ ಬದಲಾಗಿ ಅವರೆಲ್ಲ ಬಿಜೆಪಿ ಚುನಾವಣಾ ಅಕ್ರಮವೆಸಗಿತು ಎಂದರು. ಹಿಂದುತ್ವದ ಕುರಿತಂತೆ ಟೀಕಿಸಿದರು. ಚುನಾವಣಾ ಆಯೋಗವನ್ನು ನಿಂದಿಸಿದರು.

ಇವರದು ಬೌದ್ಧಿಕ ವೈಫಲ್ಯವಲ್ಲ. ಇದು ಅವರ ಬೌದ್ಧಿಕ ಆಯ್ಕೆ. ಅವರು ಇಂತಹುದನ್ನಷ್ಟೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಆದರೆ ಬಂಗಾಳದ ಸಾಮಾನ್ಯ ಜನರು ಅವರಿಗಿಂತ ಬುದ್ಧಿವಂತರು. ದುಡ್ಡಿಗಾಗಿ ಮಮತಾ ಪರವಾಗಿ ಬರೆಯುವ ಈ ವಿಶ್ಲೇಷಕರಿಗಿಂತ ಸಾಮಾನ್ಯ ಜನರು ಚೆನ್ನಾಗಿ ರಾಜ್ಯದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದರು.

ಫಾಲ್ಟಾದಲ್ಲೀಗ ಮರುಚುನಾವಣೆ ನಡೆಯಲಿದೆ. ಮಹಿಳೆಯರ ಮೇಲೆ ಅತ್ಯಾಚಾರದ ಬೆದರಿಕೆ ಹಾಕಿದ, ಜನರನ್ನು ಕೊಲ್ಲುವುದಾಗಿ ನುಡಿದ ಜಹಾಂಗೀರ್ ಖಾನ್ ಈಗಲೂ ಟಿಎಂಸಿ ಅಭ್ಯರ್ಥಿ. ಮಮತಾ ಆತನನ್ನು ಕಣದಿಂದ ಹಿಂದಕ್ಕೆ ಸರಿಸಿಲ್ಲ. ಮಮತಾ ಪರವಾದ ರಾಜಕೀಯ ವಿಶ್ಲೇಷಕರು, ಲಿಬರಲ್‌ಗಳು ಇದು ಹಿಂದುತ್ವ ಮತ್ತು ಜಾತ್ಯತೀತತೆಯ ನಡುವಿನ ಹೋರಾಟ ಎಂದು ಬಣ್ಣಿಸಿಯಾರು. ಆದರೆ ಕಾದುನೋಡಿ, ಫಾಲ್ಟಾದ ಜನರು ನಿಜವಾದ ಕತೆ ಏನು ಎಂಬುದನ್ನು ಮತದಾನದಂದು ಸಾರಿ ಹೇಳಲಿದ್ದಾರೆ.

2039ರ ವೇಳೆಗೆ ಅಂ. ನಿಲ್ದಾಣ ಆಧುನೀಕರಣ

ಶೀಘ್ರವೇ ಪ್ರಥಮ ಸೆಮಿ-ಸ್ಪೀಡ್ ರೈಲು

• **ಹೊಸದಿಲ್ಲಿ:** ಹೊಸ ರೈಲ್ವೆ ಲೇನ್‌ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರ ಕುರಿತ ಸಂಪುಟ ಸಮಿತಿ ಮಂಜೂರಾತಿ ನೀಡಿದ್ದು, ಗಂಟೆಗೆ 220 ಕಿ.ಮೀ. ವೇಗದಲ್ಲೋಡುವ ರೈಲು ಗಳಿಗೆ ಭಾರತೀಯ ರೈಲ್ವೆ ಶೀಘ್ರ ಹಸಿರು ನಿಶಾನೆ ತೋರಲಿದೆ. ಅಹಮ್ಮದಾಬಾದ್ (ಸರ್ಖೇಜ್) ಧೊಲೇರಾ ಸೆಮಿ ಹೈಸ್ಪೀಡ್ ಡಬಲ್ ಲೈನ್ ಯೋಜನೆಗೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಬುಧವಾರ ಮಂಜೂರಾತಿ ನೀಡಿದೆ. ಹೊಸ ರೈಲ್ವೆ ಲೈನ್‌ನಿಂದ ಸಾಬರಮತಿಯಿಂದ ಧೊಲೇರಾಗೆ ಪ್ರಯಾಣ ಅವಧಿ 48 ನಿಮಿಷ ಕಡಿಮೆಯಾಗಲಿದೆ ಎಂದು ರೈಲ್ವೆ ಸಚಿವ ತಿಳಿಸಿದ್ದಾರೆ. 20,667 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ ಎಂದು ಸಚಿವರು ಹೇಳಿದ್ದಾರೆ.

ನಾಗ್ಪುರ ವಿ.ನಿಲ್ದಾಣ ಅಭಿವೃದ್ಧಿಗೆ ಅಸ್ತು: ಸಾರ್ವಜನಿಕ-ಖಾಸಗಿ ಪಾಲು ದಾರಿಕೆ (ಪಿಪಿಪಿ) ಮಾದರಿಯಲ್ಲಿ ನಾಗ್ಪುರ ಅಂ. ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಮತ್ತು ಆಧುನೀಕರಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಮಂಜೂರಾತಿ ನೀಡಿದೆ.

ಮಿಹಾನ್ ಇಂಡಿಯಾ ಲಿಮಿಟೆಡ್(ಎಂಐಎಲ್)ಗೆ ಗುತ್ತಿಗೆ ಮೇಲೆ ನೀಡಲಾಗಿರುವ ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಭೂಮಿಯ ಗುತ್ತಿಗೆ ಅವಧಿಯನ್ನು 2039ರ ಆ.6ರ ತನಕ ವಿಸ್ತರಿಸಲು ಸಚಿವ ಸಂಪುಟ ಸಮ್ಮತಿಸಿದೆ. ಗುತ್ತಿಗೆ ಅವಧಿ ವಿಸ್ತರಣೆಯಿಂದ ಜಿಎಂಆರ್ ನಾಗ್ಪುರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಜಿಎನ್‌ಐಎಎಲ್)ಕ್ಕೆ ಲೈಸೆನ್ಸ್ ನೀಡಲು ಎಂಐಎಲ್‌ಗೆ ಹಾದಿ ಸುಗಮವಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ವಿಮಾನ ನಿಲ್ದಾಣದ ಮೇಲ್ದರ್ಜೆಗೇರಿಸುವಿಕೆ, ಆಧುನೀಕರಣಕ್ಕೆ ಕೇಂದ್ರ ಸಚಿವ ಸಂಪುಟ ಮಂಜೂರಾತಿ ನೀಡಿದೆ. ಇದೀಗ ಗುತ್ತಿಗೆ ಅವಧಿ ವಿಸ್ತರಣೆಯಿಂದ, ಗುತ್ತಿಗೆಯ ಅವಧಿಯು ಜಿಎನ್‌ಐಎಎಲ್‌ಗೆ ಈಗಾಗಲೇ ನೀಡಿರುವ 30 ವರ್ಷಗಳ ವಿನಾಯಿತಿ ಅವಧಿಯೊಂದಿಗೆ ಜಾಸ್ತಿಯಾಗಲಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಸರಕಾರದ ಪ್ರಸ್ತುತ ನಿರ್ಧಾರದಿಂದ ನಾಗಪುರ ವಿಮಾನ ನಿಲ್ದಾಣವು ಬೆಳವಣಿಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಹೊಸ ಘಟ್ಟಕ್ಕೆ ನಾಂದಿ ಹಾಡೋ ನಿರೀಕ್ಷೆಯಿದೆ ಎಂದು ನಾಗರಿಕ ವಿಮಾನಯಾನ ಖಾತೆ ವಿಶ್ವಾಸ ವ್ಯಕ್ತಪಡಿಸಿದೆ.

ಕಲ್ಲಿದ್ದಲು ಅನಿಲಕ್ಕಾಗಿ 37,500 ಕೋಟಿ ರೂ.

37,500 ಕೋಟಿ ಅಂದಾಜು ವೆಚ್ಚದಲ್ಲಿ ಮೇಲ್ಮೈ ಕಲ್ಲಿದ್ದಲು ಅಥವಾ ಲಿಗ್ನೈಟ್‌ನಿಂದ ಅನಿಲವೆತ್ತುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಮಂಜೂರಾತಿ ನೀಡಿದೆ. 2030ರ ವೇಳೆ 100 ಮಿಲಿಯನ್ ಟನ್ ಕಲ್ಲಿದ್ದಲಿನಿಂದ ಅನಿಲ ಉತ್ಪಾದನೆಯ ರಾಷ್ಟ್ರೀಯ ಟಾರ್ಗೆಟ್‌ನ ವಿಸ್ತರಣೆ ಜತೆ ಇಂಧನ ಭದ್ರತೆಯ ಬಲವರ್ಧನೆ, ಎಲ್‌ಎನ್‌ಜಿ (ಶೇ.50ಕ್ಕಿಂತ ಜಾಸ್ತಿ ಆಮದು), ಯೂರಿಯಾ(ಶೇ.20 ಆಮದು), ಅಮೋನಿಯಾ (100ಶೇ. ಆಮದು), ಮೆಥನಾಲ್ (80ರಿಂದ 90ಶೇ. ಆಮದು)ಇತ್ಯಾದಿ ಪ್ರಮುಖ ಉತ್ಪನ್ನಗಳ ಆಮದು ಮೇಲಿನ ಅವಲಂಬನೆ ಕುಗ್ಗಿಸುವುದು ಪ್ರಸ್ತುತ ಯೋಜನೆಯ ಮೂಲಾಶಯವಾಗಿವೆ. ಯೋಜನೆಯು 3ಲಕ್ಷ ಕೋಟಿ ಹೂಡಿಕೆಗಳನ್ನು ಆಕರ್ಷಿಸಲಿದೆ ಮತ್ತು 50,000 ಉದ್ಯೋಗಾವಕಾಶ ಸೃಷ್ಟಿಯಾಗಲಿವೆ ಎಂದು ಮೂಲಗಳು ತಿಳಿಸಿವೆ.

ರಷ್ಯಾ ಸೈತಾನನ ಆರ್ಭಟ...!



ಅಣ್ವಸ್ತ್ರ ಪೈಪೋಟಿಗೆ ನಾಂದಿ ಹಾಡಿದ ಸಾರ್ಮತ್ ಕ್ಷಿಪಣಿ ಪರೀಕ್ಷೆ

ಜಾಗತಿಕ ಉದ್ವಿಗ್ನತೆ ಮತ್ತು ಪ್ರಮುಖ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳ ಪತನವಾಗಿರುವ ಹೊತ್ತಲ್ಲೇ, ರಷ್ಯಾ ತನ್ನ ಮುಂದಿನ ಪೀಳಿಗೆಯ ಖಂಡಾಂತರ ಕ್ಷಿಪಣಿ (ಐಎಸ್‌ಬಿಎಂ) ಆರ್ ಎಸ್-28 ಸಾರ್ಮತ್ ಅನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಪಾಶ್ಚಿಮಾತ್ಯ ದೇಶಗಳು ಸೈಟನ್ (ಸೇಟನ್ 2) ಎಂದು ಕರೆಯುವ ಈ ಕ್ಷಿಪಣಿಯ ಪರೀಕ್ಷೆ, ಪುಟಿನ್ ನೇತೃತ್ವದ ರಷ್ಯಾ, ತನ್ನ ಅಣ್ವಸ್ತ್ರ ಬಲವನ್ನು ಆಧುನೀಕರಿಸುವಲ್ಲಿ ಇಟ್ಟಿರುವ ಬಲವಾದ ಹೆಜ್ಜೆ ಎಂದು ವಿಶ್ಲೇಷಿಸಲಾಗುತ್ತಿದೆ. ಉತ್ತರ ರಷ್ಯಾದ ಪ್ಲೆಸೆಟ್ಸ್ಕ್ ಕಾಸ್ಮೋಡ್ರೋಮ್ ನಿಂದ ಈ ಪರೀಕ್ಷೆ ನಡೆಸಲಾಗಿದೆ.

ಏನಿದು ಸೈಟನ್ ಕ್ಷಿಪಣಿ?

ಆರ್‌ಎಸ್-28 ಸಾರ್ಮತ್ ಒಂದು ಭಾರೀ ಖಂಡಾಂತರ ಕ್ಷಿಪಣಿಯಾಗಿದ್ದು, ಸೋವಿಯತ್ ಕಾಲದ ಆರ್-36ಎಂ ವೊಯೆವೊಡಾ ವ್ಯವಸ್ಥೆಯನ್ನು ಬದಲಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಇದರ ಅಭಿವೃದ್ಧಿ 2011ರಲ್ಲಿ ಆರಂಭವಾಯಿತು. ರಷ್ಯಾದ ಅಣ್ವಸ್ತ್ರ ಟ್ರಯಾಡ್‌ಗಳ ಆಧುನೀಕರಣದಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಪಾಶ್ಚಿಮಾತ್ಯ ವಿಶ್ಲೇಷಕರು ಇದನ್ನು ಸೈಟನ್ ಎಂದು ಹೆಸರಿಸಲು ಕಾರಣ ಇದರ ವಿನಾಶಕಾರಿ ಶಕ್ತಿ. ಇದು ಇದುವರೆಗೆ ನಿರ್ಮಿಸಲಾದ ಅತ್ಯಂತ ಶಕ್ತಿಶಾಲಿ ಅಣ್ವಸ್ತ್ರ ವಿತರಣಾ ವ್ಯವಸ್ಥೆಗಳಲ್ಲಿ ಒಂದಾಗಿದೆ. ಈ ಕ್ಷಿಪಣಿ ಮಲ್ಟಿಪಲ್ ಇಂಡಿಪೆಂಡೆಂಟ್ಲಿ ಟಾರ್ಗೆಟಬಲ್ ಮ್ಯಾನುವರಬಲ್ ರೀ-ಎಂಟ್ರಿ ವೆಹಿಕಲ್ಸ್ (ಎಂಐಆರ್‌ವಿ) ಅನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದ್ದು, ಏಕಕಾಲದಲ್ಲಿ ಹಲವು ಗುರಿಗಳ ಮೇಲೆ ಅಣ್ವಸ್ತ್ರ ದಾಳಿ ನಡೆಸಬಲ್ಲದು.

ಪ್ರಮುಖ ಸಾಮರ್ಥ್ಯ ಮತ್ತು ವಿಶೇಷತೆಗಳು


ಅಧ್ಯಕ್ಷ ಪುಟಿನ್ ಪ್ರಕಾರ, ಸಾರ್ಮತ್ 35,000 ಕಿಲೋಮೀಟರ್‌ಗಳಿಗೂ ಹೆಚ್ಚು ದೂರ ಕ್ರಮಿಸುವ ಸಾಮರ್ಥ್ಯ ಹೊಂದಿದೆ. ಇದು ಸಾಂಪ್ರದಾಯಿಕ ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ತಪ್ಪಿಸಲು ಉಪ-ಕಕ್ಷೆಯ ಹಾರಾಟದ ಹಾದಿಗಳನ್ನು ಬಳಸುತ್ತದೆ. ದಕ್ಷಿಣ ಧ್ರುವದ ಮೂಲಕವೂ ಗುರಿ ತಲುಪಬಲ್ಲ ಇದರ ಸಾಮರ್ಥ್ಯ, ಶತ್ರು ರಾಷ್ಟ್ರಗಳ ರಕ್ಷಣಾ ವ್ಯವಸ್ಥೆಯನ್ನು ದಿಕ್ಕುತಪ್ಪಿಸುತ್ತದೆ. ಈ ಕ್ಷಿಪಣಿಯ ಪೇಲೋಡ್ ಸಾಮರ್ಥ್ಯ ಪಾಶ್ಚಿಮಾತ್ಯ ಕ್ಷಿಪಣಿಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಶಕ್ತಿಶಾಲಿ, ಎಂದು ವರದಿಯಾಗಿದೆ. ಅಲ್ಲದೆ, ಶಬ್ದದ ವೇಗಕ್ಕಿಂತ 27 ಪಟ್ಟು ವೇಗವಾಗಿ ಚಲಿಸುವ ಅವಂಗಾರ್ಡ್ ಹೈಪರ್‌ಸಾನಿಕ್ ಗ್ಲೈಡ್ ವಾಹನಗಳನ್ನು ನಿಯೋಜಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ಪುಟಿನ್ ಸಂದೇಶ ಮತ್ತು ಕಾರ್ಯತಂತ್ರ

ಈ ಪರೀಕ್ಷೆಯ ನಂತರ ಮಾತನಾಡಿದ ಪುಟಿನ್, ಸಾರ್ಮತ್ ವಿಶ್ವದ ಅತ್ಯಂತ ಶಕ್ತಿಶಾಲಿ ಕ್ಷಿಪಣಿ ಎಂದು ಬಣ್ಣಿಸಿದರು. ವರ್ಷದ ಅಂತ್ಯದೊಳಗೆ ಇದು ರಕ್ಷಣಾ ಸೇವೆಗೆ ಸೇರ್ಪಡೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಉಕ್ರೇನ್ ಯುದ್ಧದ ಆರಂಭದಿಂದಲೂ ಪುಟಿನ್ ಅಣ್ವಸ್ತ್ರದ ಎಚ್ಚರಿಕೆ ನೀಡುತ್ತಲೇ ಬಂದಿದ್ದು, ಈ ಹೊಸ ಪರೀಕ್ಷೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರಷ್ಯಾದ ಶಕ್ತಿಯ ಪ್ರದರ್ಶನ ಎಂದೇ ಬಣ್ಣಿಸಲಾಗಿದೆ.

ಜಾಗತಿಕ ಆತಂಕ ಮತ್ತು ಪ್ರತಿಕ್ರಿಯೆಗಳು

ಈ ಪರೀಕ್ಷೆ, ಪಾಶ್ಚಿಮಾತ್ಯ ದೇಶಗಳಲ್ಲಿ ಆತಂಕ ಮೂಡಿಸಿದೆ. ಅಮೆರಿಕ ಮತ್ತು ನ್ಯಾಟೋ ಮಿತ್ರರಾಷ್ಟ್ರಗಳು ರಷ್ಯಾದ ಈ ಅಣ್ವಸ್ತ್ರ ಆಧುನೀಕರಣವನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ. ವಿಶೇಷವಾಗಿ, ರಷ್ಯಾ ಮತ್ತು ಅಮೆರಿಕ ನಡುವಿನ ಕೊನೆಯ ಪ್ರಮುಖ ಅಣ್ವಸ್ತ್ರ ಒಪ್ಪಂದ ಫೆಬ್ರವರಿ 2026ರಲ್ಲಿ ಮುಕ್ತಾಯಗೊಂಡಿದ್ದು, ಈಗ ಜಗತ್ತಿನ ಎರಡು ದೊಡ್ಡ ಅಣ್ವಸ್ತ್ರ ರಾಷ್ಟ್ರಗಳ ಶಸ್ತ್ರಾಸ್ತ್ರಗಳ ಮೇಲೆ ಯಾವುದೇ ಮಿತಿ ಇಲ್ಲದಂತಾಗಿದೆ. ಇದು ಜಾಗತಿಕ ಅಣ್ವಸ್ತ್ರ ಪೈಪೋಟಿಯನ್ನು ಮತ್ತಷ್ಟು ತೀವ್ರಗೊಳಿಸುವ ಸಾಧ್ಯತೆಯಿದೆ.



ರಷ್ಯಾದ ಬೃಹತ್ ಶಸ್ತ್ರಾಸ್ತ್ರ ಕಾರ್ಯಕ್ರಮ

ಸಾರ್ಮತ್, ಪುಟಿನ್ ಅವರ 2018ರ ಬೃಹತ್ ಶಸ್ತ್ರಾಸ್ತ್ರ ಯೋಜನೆಯ ಒಂದು ಭಾಗವಷ್ಟೇ. ಇದರಲ್ಲಿ ಅವಂಗಾರ್ಡ್ ಹೈಪರ್‌ಸಾನಿಕ್ ವಾಹನ, ಪೋಸೈಡನ್ ಅಣುಶಕ್ತಿ ಚಾಲಿತ ನೀರೊಳಗಿನ ಡ್ರೋನ್ ಮತ್ತು ಬುರೆವೆಸ್ನಿಕ್ ಅಣುಶಕ್ತಿ ಚಾಲಿತ ಕ್ರೂಸ್ ಕ್ಷಿಪಣಿಗಳು ಸೇರಿವೆ. ಇತ್ತೀಚೆಗೆ ರಷ್ಯಾ ಒರೆಶ್ನಿಕ್ ಎಂಬ ಮಧ್ಯಂತರ ವ್ಯಾಪ್ತಿಯ ಕ್ಷಿಪಣಿಯನ್ನೂ ಉಕ್ರೇನ್ ವಿರುದ್ಧ ಬಳಸಿ ತನ್ನ ಕ್ಷಿಪಣಿ ತಂತ್ರಜ್ಞಾನದ ಅಭಿವೃದ್ಧಿಯನ್ನು ಪ್ರದರ್ಶಿಸಿದೆ.

ಈ ಪರೀಕ್ಷೆಯ ಪ್ರಾಮುಖ್ಯತೆ ಏನು?

ಉಕ್ರೇನ್ ವಿರುದ್ಧದ ಕದನ ನಿರ್ಣಾಯಕ ಹಂತ ತಲುಪಿದೆ, ಎಂದು ರಷ್ಯಾ ಹೇಳಿಕೊಳ್ಳುತ್ತಿರುವ ಸಮಯದಲ್ಲಿ ಈ ಪರೀಕ್ಷೆ ನಡೆದಿದೆ. ಯಾವುದೇ ಸಕ್ರಿಯ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳು ಇಲ್ಲದ ಈ ಕಾಲಘಟ್ಟದಲ್ಲಿ, ರಷ್ಯಾ ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಕಾಯ್ದುಕೊಳ್ಳಲು ಕಾರ್ಯ ನಿರತವಾಗಿದೆ ಎಂಬ ಸಂದೇಶ ರವಾನಿಸಿದೆ. ಅಮೆರಿಕದ ಕ್ಷಿಪಣಿ ರಕ್ಷಣಾ ಕವಚಗಳ ಬಗ್ಗೆ ರಷ್ಯಾದ ಹಳೆಯ ಆತಂಕಕ್ಕೆ ಸಾರ್ಮತ್ ಒಂದು ಪ್ರಬಲ ಉತ್ತರ ಎನ್ನಲಾಗಿದೆ.



ನ್ಯಾಟೋ ಪ್ರತಿಕ್ರಿಯೆ

ನ್ಯಾಟೋ ಈ ಪರೀಕ್ಷೆಯನ್ನು ಜವಾಬ್ದಾರಿಯಿಲ್ಲದ ಪ್ರಚೋದನೆ ಎಂದು ಕರೆದಿದೆ. ರಷ್ಯಾ ತನ್ನ ಅಣ್ವಸ್ತ್ರಗಳನ್ನು ಪ್ರದರ್ಶಿಸುವ ಮೂಲಕ ಅಂತರಾಷ್ಟ್ರೀಯ ಭದ್ರತೆಯನ್ನು ಅಪಾಯಕ್ಕೆ ತಳ್ಳುತ್ತಿದೆ ಮತ್ತು ಇದು ಬೆದರಿಸುವ ತಂತ್ರ ಎಂದು ನ್ಯಾಟೋ ಅಧಿಕಾರಿಗಳು ಟೀಕಿಸಿದ್ದಾರೆ.

ಸಾರ್ಮತ್ ಎಂಬ ರಾಕ್ಷಸ ಕ್ಷಿಪಣಿ!

ಆರ್‌ಎಸ್-28 ಸಾರ್ಮತ್ ಮುಂದಿನ ಪೀಳಿಗೆಯ ಭಾರೀ ಐಸಿಬಿಎಂ ಆಗಿದ್ದು, ವೊಯೆವೊಡಾ ಕ್ಷಿಪಣಿಯನ್ನು ಬದಲಿಸಲಿದೆ. ಇದು 35,000 ಕಿ.ಮೀ ಗಿಂತ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿದೆ ಮತ್ತು ಏಕಕಾಲಕ್ಕೆ ಸುಮಾರು 10 ಟನ್‌ಗಳಷ್ಟು ಭಾರವನ್ನು ಹೊತ್ತೊಯ್ಯಬಲ್ಲದು. ಇದರಲ್ಲಿ 10ರಿಂದ 15ರವರೆಗಿನ ಭಾರೀ ಅಣ್ವಸ್ತ್ರಗಳನ್ನು ಅಥವಾ ಹೈಪರ್‌ಸಾನಿಕ್ ಗ್ಲೈಡ್ ವಾಹನಗಳನ್ನು ಅಳವಡಿಸಬಹುದು. ಇದು ಉಪ-ಕಕ್ಷೆಯ ಹಾರಾಟದ ಮೂಲಕ ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ವಂಚಿಸುವ ಸಾಮರ್ಥ್ಯ ಹೊಂದಿದೆ. ಇದು ಶಬ್ದದ ವೇಗಕ್ಕಿಂತ ಸುಮಾರು 20 ಪಟ್ಟು ಹೆಚ್ಚು ವೇಗದಲ್ಲಿ ಚಲಿಸಬಲ್ಲದು (ಗಂಟೆಗೆ 25,000 ಕಿ.ಮೀ). ಉಡಾವಣಾ ಸಮಯದಲ್ಲಿ ಈ ಕ್ಷಿಪಣಿಯ ಒಟ್ಟು ತೂಕ ಸುಮಾರು 208 ಮೆಟ್ರಿಕ್ ಟನ್‌ಗಳು!

ಯುರೋಪಿಯನ್ ಒಕ್ಕೂಟಕ್ಕೆ ಆತಂಕ

ಯುರೋಪಿಯನ್ ರಾಷ್ಟ್ರಗಳು, ವಿಶೇಷವಾಗಿ ಪೋಲೆಂಡ್ ಮತ್ತು ಬಾಲ್ಟಿಕ್ ದೇಶಗಳು, ಇದನ್ನು ತಮ್ಮ ಭದ್ರತೆಗೆ ನೇರ ಬೆದರಿಕೆ ಎಂದು ಪರಿಗಣಿಸಿವೆ. ರಷ್ಯಾ ಜಾಗತಿಕ ಅಣ್ವಸ್ತ್ರ ಒಪ್ಪಂದಗಳಿಂದ ಹೊರಬರುತ್ತಿರುವುದು ಇಡೀ ಯುರೋಪಿನ ಸ್ಥಿರತೆಗೆ ಧಕ್ಕೆ ತರುತ್ತದೆ ಎಂದು ಯುರೋಪಿಯನ್ ನಾಯಕರು ಕಳವಳ ವ್ಯಕ್ತಪಡಿಸಿದ್ದಾರೆ. ಇನ್ನು ಅಮೆರಿಕದ ರಕ್ಷಣಾ ಇಲಾಖೆ (ಪೆಂಟಗನ್) ಈ ಪರೀಕ್ಷೆ ಹಳೆಯ ಅಣ್ವಸ್ತ್ರಗಳನ್ನು ಆಧುನೀಕರಿಸುವ ರಷ್ಯಾದ ದೀರ್ಘಕಾಲದ ಯೋಜನೆಯ ಭಾಗವಾಗಿದ್ದರೂ, ಪ್ರಸ್ತುತ ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಇದು ಅಗತ್ಯವಿಲ್ಲದ ಉದ್ವಿಗ್ನತೆಯನ್ನು ಸೃಷ್ಟಿಸುತ್ತದೆ ಎಂದು ಹೇಳಿದೆ. 2000ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಪುಟಿನ್ ರಷ್ಯಾದ ಅಣ್ವಸ್ತ್ರಗಳ ಆಧುನೀಕರಣಕ್ಕೆ ಆದ್ಯತೆ ನೀಡಿದ್ದಾರೆ.

ಕೇರಳ ನಾಯಕರೊಂದಿಗೆ ಚರ್ಚಿಸಿದ ಕಾಂಗ್ರೆಸ್ ಹೈಕಮಾಂಡ್

ಇಂದು ಕೇರಳ ಸಿಎಂ ಘೋಷಣೆ!

• **ತಿರುವನಂತಪುರಂ:** ದಿಲ್ಲಿಯಲ್ಲಿ ಪಕ್ಷದ ಹೈಕಮಾಂಡ್ ಜತೆಗಿನ ಅಂತಿಮ ಸುತ್ತಿನ ಸಮಾಲೋಚನೆಯ ನಂತರ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇಂದು ಕೇರಳದ ಮುಂದಿನ ಮುಖ್ಯಮಂತ್ರಿಯನ್ನು ಘೋಷಿಸಲಿದೆ.

ಅಭ್ಯರ್ಥಿಯ ಆಯ್ಕೆಯ ಕುರಿತಾದ ಚರ್ಚೆಗಳು ಪೂರ್ಣಗೊಂಡಿವೆ, ಎಂದು ಹಿರಿಯ ನಾಯಕ ಜೈರಾಮ್ ರಮೇಶ್ ಖಚಿತಪಡಿಸಿದ್ದಾರೆ. 140 ಸದಸ್ಯ ಬಲದ ವಿಧಾನಸಭೆಯಲ್ಲಿ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಬಹುಮತ ಪಡೆದ 10 ದಿನಗಳ ನಂತರ ಈ ನಿರ್ಧಾರ ಹೊರ ಬಿದ್ದಿದೆ. ಮುಖ್ಯಮಂತ್ರಿ ಸ್ಥಾನದ ರೇಸ್‌ನಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ವಿ.ಡಿ. ಸತೀಶನ್, ಕೆ.ಸಿ. ವೇಣುಗೋಪಾಲ್ ಮತ್ತು ರಮೇಶ್ ಚೆನ್ನಿತ್ತಲ ಹೆಸರಿದೆ. ವೇಣುಗೋಪಾಲ್ ಅವರಿಗೆ ಬಹುಪಾಲು ಶಾಸಕರ ಬೆಂಬಲವಿದ್ದರೆ, ಸತೀಶನ್ ಅವರಿಗೆ ಪಕ್ಷದ ಕಾರ್ಯಕರ್ತರು ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಬೆಂಬಲ ನೀಡಿದೆ ಎಂದು ವರದಿಯಾಗಿದೆ.

ಸೋನಿಯಾ ಗಾಂಧಿಯವರ ವೈದ್ಯಕೀಯ ತಪಾಸಣೆಯಿಂದಾಗಿ ಘೋಷಣೆ ವಿಳಂಬವಾಗಿದೆ, ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸನ್ನಿ ಜೋಸೆಫ್ ತಿಳಿಸಿದ್ದಾರೆ. ಈ ಮಧ್ಯೆ, ಪ್ರಮುಖ ನಾಯಕರ ಬೆಂಬಲಿಗರು ಅವರ ನಿವಾಸಗಳ ಮುಂದೆ ಜಮಾಯಿಸಿದ್ದಾರೆ. ನಾಯಕತ್ವ ಆಯ್ಕೆಯ ವಿಳಂಬ ಕಾರ್ಯಕರ್ತರಲ್ಲಿ ಅಸಮಾಧಾನ ಮೂಡಿಸಿದೆ. ಹೀಗಾಗಿ ಇಂದಿನ ಘೋಷಣೆ ಕುತೂಹಲ ಮೂಡಿಸಿದೆ.

ಈಗಾಗಲೇ ವಯನಾಡಿನಲ್ಲಿ ವೇಣುಗೋಪಾಲ್ ಆಯ್ಕೆಯನ್ನು ವಿರೋಧಿಸಿ ಪೋಸ್ಟರ್‌ಗಳು ಕಾಣಿಸಿಕೊಂಡಿವೆ. ಇಂದಿನ ಅಧಿಕೃತ ಘೋಷಣೆಯೊಂದಿಗೆ ಕಾಂಗ್ರೆಸ್ ಮುಜುಗರದಿಂದ ಬಚಾವಾಗಿ ನೂತನ ಸರ್ಕಾರ ರಚನೆ ಪ್ರಕ್ರಿಯೆಗೆ ಚಾಲನೆ ನೀಡುವ ಲೆಕ್ಕಾಚಾರದಲ್ಲಿದೆ.

ಕಿರುಸುದ್ದಿ

ಪ್ರಧಾನಿ ಹೆಜ್ಜೆ ಗುರುತಿನಲ್ಲಿ ಮುಖ್ಯಮಂತ್ರಿ ಸುವೇಂದು

• **ಕೋಲ್ಕತ:** ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪ್ರಧಾನಿ ನರೇಂದ್ರ ಮೋದಿಯವರ ಹೆಜ್ಜೆ ಗುರುತಿನಲ್ಲಿ ಸಾಗುತ್ತಿದ್ದಾರೆ. ಬುಧವಾರ ವಿಧಾನಸಭೆಗೆ ಪ್ರವೇಶಿಸುವ ಮುನ್ನ ವಿಧಾನಸಭೆಯ ಮೆಟ್ಟಿಲುಗಳಿಗೆ ದಂಡವತ್ ಪ್ರಣಾಮ ಸಲ್ಲಿಸಿದರು. ಹೊಸಾಗಿ ಆಯ್ಕೆಯಾದ ಬಿಜೆಪಿ ಶಾಸಕರ ಪ್ರಮಾಣ ವಚನ ಸಮಾರಂಭಕ್ಕಾಗಿ ವಿಧಾನಸಭೆಗೆ ಬಂದಿದ್ದ ಅಧಿಕಾರಿ, ಸಭಾಂಗಣಕ್ಕೆ ಪ್ರವೇಶಿಸುವ ಮುನ್ನ



ವಿಧಾನಸಭೆಯ ಮೆಟ್ಟಿಲುಗಳಿಗೆ ಗೌರವ ಸಲ್ಲಿಸಿದರು. ಮೇ 9ರಂದು, ಹೊಸ ಪಶ್ಚಿಮ ಬಂಗಾಳ ಸರ್ಕಾರದ ಪ್ರಮಾಣ ವಚನದ ವೇಳೆ ಪ್ರಧಾನಿ ಮೋದಿಯವರು ಕೋಲ್ಕತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಜನತೆಗೆ ಕೃತಜ್ಞತೆ ಸಲ್ಲಿಸಲು ವೇದಿಕೆಯಲ್ಲಿ ದಂಡವತ್ ಪ್ರಣಾಮ ಮಾಡಿದ್ದರು. ಭವಾನಿಪುರ ಉಳಿಸಿಕೊಂಡ ಸಿಎಂ: ಮಮತಾ ಬ್ಯಾನರ್ಜಿ ಅವರನ್ನು ಸೋಲಿಸಿದ್ದ ಭವಾನಿಪುರ ಕ್ಷೇತ್ರವನ್ನು ಉಳಿಸಿಕೊಂಡ ಮುಖ್ಯಮಂತ್ರಿ ಸುವೇಂದು, ನಂದಿಗ್ರಾಮ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಮುಲಾಯಂ ಪುತ್ರ ಪ್ರತೀಕ್ ಯಾದವ್ ನಿಧನ

• **ಲಖ್ನೋ:** ಸಮಾಜವಾದಿ ಪಕ್ಷದ ಸ್ಥಾಪಕ ದಿವಂಗತ ಮುಲಾಯಂ ಸಿಂಗ್ ಯಾದವ್ ಪುತ್ರ ಪ್ರತೀಕ್ ಯಾದವ್ (38) ಬುಧವಾರ ಲಖನೌನಲ್ಲಿ ನಿಧನರಾದರು. ಕೆಲಕಾಲದಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರೆಂದು ಕುಟುಂಬ ಮೂಲಗಳು ತಿಳಿಸಿವೆ. ಪ್ರತೀಕ್ ಅವರು ಮುಲಾಯಂ ಅವರ ಎರಡನೇ ಪತ್ನಿ ಸಾಧನಾ ಗುಪ್ತಾ ಅವರ ಪುತ್ರರಾಗಿದ್ದರು. ಅವರು ಅಖಿಲೇಶ್ ಯಾದವ್ ಅವರಿಗೆ ಸಂಬಂಧದಲ್ಲಿ ಕಿರಿಯ ಸಹೋದರರಾಗಿದ್ದರು. ಕೆಲವು ವಾರಗಳ ಹಿಂದೆ ಪ್ರತೀಕ್‌ರನ್ನು ಲಖನೌನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ವೇಳೆ ಅಖಿಲೇಶ್ ಕೂಡ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದರು. ಪ್ರತೀಕ್ ಪತ್ನಿ ಅಪರ್ಣಾ ಯಾದವ್ ಭಾರತೀಯ ಜನತಾ ಪಕ್ಷದ ಸಕ್ರಿಯ ನಾಯಕಿಯಾಗಿದ್ದಾರೆ. ಪೋಸ್ಟ್‌ಮಾರ್ಟಂ ವರದಿ ಪ್ರಕಾರ, ಭಾರೀ ಪಲ್ಮನರಿ ಥ್ರೊಂಬೊಎಂಬೊಲಿಸಮ್‌ನಿಂದ ಉಂಟಾದ ಕಾರ್ಡಿಯೊರೆಸ್ಪಿರೇಟರಿ ಕುಸಿತವೇ ಸಾವಿಗೆ ಕಾರಣವಾಗಿದೆ ಎಂದು ವೈದ್ಯಕೀಯ ವರದಿಯಲ್ಲಿ ತಿಳಿಸಲಾಗಿದೆ.

ರಾಜಸ್ಥಾನಕ್ಕೆ ಪ್ರಶ್ನೆ ಪತ್ರಿಕೆ ಕಳುಹಿಸಿದ ಕೇರಳ ವಿದ್ಯಾರ್ಥಿ

• **ಜೈಪುರ:** ಮೇ 3ರಂದು ನಡೆದ ನೀಟ್-ಯುಜಿ 2026 ಪರೀಕ್ಷೆಯ ಪ್ರಶ್ನೆಗಳನ್ನು ಹೋಲುವ ಗೆಸ್ ಪೇಪರ್ ಅನ್ನು ಕೇರಳದಲ್ಲಿ ಎಂಬಿಬಿಎಸ್ ಓದುತ್ತಿರುವ ರಾಜಸ್ಥಾನದ ಸಿಕಾರ್ ಮೂಲದ ವಿದ್ಯಾರ್ಥಿಯೊಬ್ಬ ತನ್ನ ಸ್ನೇಹಿತರು ಮತ್ತು ಹಾಸ್ಟೆಲ್ ಮಾಲೀಕರಿಗೆ ಕಳುಹಿಸಿರುವುದು ತನಿಖೆಯಿಂದ ತಿಳಿದುಬಂದಿದೆ.

ತನಿಖೆಯ ಅಂಶಗಳು: ರಾಜಸ್ಥಾನದ ವಿಶೇಷ ಕಾರ್ಯಾಚರಣೆ ತಂಡ (ಎಸ್‌ಒಜಿ) ಈ ಪತ್ರಿಕೆ, ಗುರುಗ್ರಾಮ ಮತ್ತು ನಾಸಿಕ್ ಮೂಲದಿಂದ ಬಂದಿರಬಹುದು ಎಂದು ಗುರುತಿಸಿದೆ. 45 ರಸಾಯನಶಾಸ್ತ್ರ ಮತ್ತು 90 ಜೀವಶಾಸ್ತ್ರ ಪ್ರಶ್ನೆಗಳನ್ನು ಒಳಗೊಂಡಿದ್ದ ಈ ದಾಖಲೆಯನ್ನು ಪ್ರೈವೇಟ್ ಮಾಫಿಯಾ ಎಂಬ ಸಾಮಾಜಿಕ ಗುಂಪಿನಲ್ಲಿ ಪಾಸ್‌ವರ್ಡ್ ಸಂರಕ್ಷಿತ ಪಿಡಿಎಫ್ ರೂಪದಲ್ಲಿ ಹಂಚಿಕೊಳ್ಳಲಾಗಿತ್ತು. ಸೀಕರ್‌ನ ಹಾಸ್ಟೆಲ್ ಮಾಲೀಕರೊಬ್ಬರು ಈ ಕಡತವನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ನಂತರ, ಪೊಲೀಸರು ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ (ಎನ್‌ಟಿಎ) ಮಾಹಿತಿ ನೀಡಿದ್ದಾರೆ.

ಅಧಿಕೃತ ಕ್ರಮಗಳು: ಜೈಪುರ, ಸಿಕಾರ್ ಮತ್ತು ಅಳ್ವಾರ್ ಸೇರಿದಂತೆ ವಿವಿಧೆಡೆ ಸುಮಾರು 150ಕ್ಕೂ ಹೆಚ್ಚು ಅಭ್ಯರ್ಥಿಗಳು ಮತ್ತು ಪೋಷಕರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಮೇ 8ರಂದು ಎಸ್‌ಒಜಿ ತಂಡ, ಮೂಲ ಪ್ರಶ್ನೆಪತ್ರಿಕೆಯೊಂದಿಗೆ ಈ ಗೆಸ್ ಪೇಪರ್ ಅನ್ನು ತಾಳೆ ಮಾಡಿ ನೋಡಿದಾಗ ಪ್ರಶ್ನೆಗಳು ಹೊಂದಾಣಿಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪರೀಕ್ಷೆಯನ್ನು ರದ್ದುಗೊಳಿಸಿದೆ. ಕೇಂದ್ರ ತನಿಖಾ ದಳ(ಸಿಬಿಐ) ಮಂಗಳವಾರ ಸಂಜೆ ಪ್ರಕರಣವನ್ನು ಕೈಗೆತ್ತಿಕೊಂಡಿದ್ದು, 2 ಡಜನ್ ಶಂಕಿತರನ್ನು, ಸಾಕ್ಷ್ಯಗಳನ್ನು ವಶಕ್ಕೆ ಪಡೆದಿದೆ. ರಾಜಸ್ಥಾನದಲ್ಲಿ ಈವರೆಗೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ.

ಸನಾತನ ನಿಂದಿಸುವ ಡಿಎಂಕೆ ನಾಯಕ ಅಪ್ರಬುದ್ಧ: ವಿಎಚ್‌ಪಿ

• **ಹೊಸದಿಲ್ಲಿ:** ಅಪ್ರಬುದ್ಧನಂತೆ ಸನಾತನ ಧರ್ಮವನ್ನು ಪದೇ ಪದೇ ನಿಂದಿಸುತ್ತಿರುವ ಡಿಎಂಕೆ ನಾಯಕ ಉದಯನಿಧಿಗೆ, ಇತರ ಮತ-ಧರ್ಮಗಳನ್ನು ಇದೇ ರೀತಿ ನಿರಂತರ ಹೀಯಾಳಿಸುವ, ನಿಂದಿಸುವ ಕೆಚ್ಚೆದೆ, ಉದ್ಧಟತನ ಇದೆಯೇ? ಎಂದು ತೀಕ್ಷ್ಣ ಸವಾಲೆಸೆದಿರುವ ವಿಶ್ವ ಹಿಂದು ಪರಿಷತ್(ವಿಎಚ್‌ಪಿ)ನ ಅಂತಾರಾಷ್ಟ್ರೀಯ ಅಧ್ಯಕ್ಷ, ಹಿರಿಯ ವಕೀಲ ಅಲೋಕ್ ಕುಮಾರ್, ಡಿಎಂಕೆ ನಾಯಕನ ಎಲ್ಲೆ ಮೀರಿದ ದುರಹಂಕಾರವನ್ನು ಆತ್ಯುಗ್ರವಾಗಿ ಖಂಡಿಸಿದ್ದಾರೆ.

ದೇವಸ್ಥಾನಗಳಿಂದ ಲಾಭ ಪಡೆದವರಿಂದಲೇ ಸನಾತನ ಅಳಿಸುವ ಯತ್ನ: ವಿಎಚ್‌ಪಿ

ಭಾರತದ ಮಾತೃ ಸಮಾನ ಸನಾತನ ಹಿಂದು ಧರ್ಮ, ಹಿಂದು ನಂಬಿಕೆ-ಶ್ರದ್ಧೆಯನ್ನು ನಿರಂತರ ಅಪಮಾನಿಸುವುದು ಪ್ರಜಾತಾಂತ್ರಿಕ, ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾದುದು. ಉದಯನಿಧಿ ಹೇಳಿಕೆಯನ್ನು ಸದನದ ಕಡತಗಳಿಂದ ಕಿತ್ತು ಹಾಕಬೇಕೆಂದು ಅಲೋಕ್ ಕುಮಾರ್ ತ.ನಾಡಿನ ಹೊಸ ಸರಕಾರವನ್ನು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ತಮ್ಮ ನಿಲುವು ವ್ಯಕ್ತಪಡಿಸಲಿ: ದುರುದ್ದೇಶಪೂರಿತ ಹಿಂದು ವಿರೋಧಿ ಹೇಳಿಕೆಗಳನ್ನು ಬೆಂಬಲಿಸುವುದೋ ಎಂಬ ಬಗ್ಗೆ ಹೊಸ ಮುಖ್ಯಮಂತ್ರಿ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಅಲೋಕ್ ಆಗ್ರಹಿಸಿದ್ದಾರೆ.

ಧರ್ಮ ವಿರೋಧಿ ವೈಚಾರಿಕತೆ ಉಳಿದಿಲ್ಲ: ಸನಾತನ ಹಿಂದು ಧರ್ಮ ತಮಿಳುನಾಡು ಸಹಿತ ಸಮಗ್ರ ಭಾರತದ ಸಾಂಸ್ಕೃತಿಕ ಆತ್ಮವಾಗಿದೆ. ಸನಾತನ ಧರ್ಮ ನಾಶಕ್ಕೆ ಯತ್ನಿಸಿದ ಹಲವು ವೈಚಾರಿಕತೆಗಳು ಅಥವಾ ಸಿದ್ಧಾಂತಗಳು ಸ್ವಯಂ ನಾಶವಾಗಿರುವುದಕ್ಕೆ ಚರಿತ್ರೆಯೇ ಸಾಕ್ಷಿ ಎಂದವರು ಹೇಳಿದರು.

ಏನಾಸಂ ಕರಡು: ಅಸ್ಸಾಂ ಸಂಪುಟ ಅನುಮೋದನೆ

• **ಗುವಾಹಟಿ:** ಅಸ್ಸಾಂನ ನೂತನ ಸರ್ಕಾರದ ಮೊದಲ ಸಚಿವ ಸಂಪುಟ ಸಭೆ ಬುಧವಾರ ನಡೆದಿದ್ದು, ಏಕರೂಪ ನಾಗರಿಕ ಸಂಹಿತೆ (ಏನಾಸಂ) ಕರಡು ಮತ್ತು ಮುಂದಿನ ಐದು ವರ್ಷಗಳಲ್ಲಿ ಎರಡು ಲಕ್ಷ ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆಗೆ ಅನುಮೋದನೆ ನೀಡಿದೆ.

ಪ್ರಮುಖ ನಿರ್ಧಾರಗಳು: ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮಾತನಾಡಿ, ಏನಾಸಂ ಮಸೂದೆಯನ್ನು ಮೇ 26 ರಂದು ವಿಧಾನಸಭೆಯಲ್ಲಿ ಮಂಡಿಸಲಾಗುವುದು. ಈ ಕಾಯ್ದೆ ಬಹುಪತ್ನಿತ್ವವನ್ನು ನಿಷೇಧಿಸುತ್ತದೆ ಮತ್ತು ವಿವಾಹ ಹಾಗೂ ವಿಚ್ಛೇದನಗಳ ನೋಂದಣಿಯನ್ನು ಕಡ್ಡಾಯಗೊಳಿಸುತ್ತದೆ. ಆದರೆ, ಬುಡಕಟ್ಟು ಜನಸಂಗತಿ ಮತ್ತು ಧಾರ್ಮಿಕ ವಿಧಿವಿಧಾನಗಳನ್ನು ಈ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಉದ್ಯೋಗ ಸೃಷ್ಟಿಯ ವಿಧಾನಗಳನ್ನು ರೂಪಿಸಲು ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಕಾರ್ಯಪಡೆಯೊಂದನ್ನು ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಆಡಳಿತ ಮತ್ತು ಮಿತವ್ಯಯ ಕ್ರಮ: ಬಿಜೆಪಿಯ ಸಂಕಲ್ಪ ಪತ್ರವನ್ನು ಸರ್ಕಾರದ ಅಧಿಕೃತ ನೀತಿ ನಿರೂಪಣೆಯ ಆಧಾರವಾಗಿ ಸಂಪುಟ ಅಂಗೀಕರಿಸಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮಿತವ್ಯಯ ಕ್ರಮಗಳನ್ನು ಘೋಷಿಸಲಾಗಿದ್ದು, ಹೊಸ ಕಾರುಗಳ ಖರೀದಿ ಮತ್ತು ಸಚಿವರ ವಿದೇಶಿ ಪ್ರವಾಸಗಳನ್ನು ನಿರ್ಬಂಧಿಸಲಾಗಿದೆ.

ಏ.9ರಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟ 126 ಸ್ಥಾನಗಳ ಪೈಕಿ 102 ಸ್ಥಾನಗಳನ್ನು ಗೆದ್ದು ಸತತ ಮೂರನೇ ಬಾರಿಗೆ ಅಧಿಕಾರ ಹಿಡಿದ ನಂತರ ಈ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.


ಹಿಂದಿ ರೂಸಿ ಭಾಯಿ ಭಾಯಿ: ಲಾವ್ರೊವ್

• **ಹೊಸದಿಲ್ಲಿ:** ಭಾರತ, ರಷ್ಯಾ ನಡುವಿನ ಸಂಬಂಧ ಕೇವಲ ರಾಜಕೀಯ ಘೋಷಣೆಯಲ್ಲ, ಅದು ರಷ್ಯಾದ ಸಂಸ್ಕೃತಿಯ ಅವಿಭಾಜ್ಯ ಅಂಗ, ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಹೇಳಿದ್ದಾರೆ. ಲಾವ್ರೊವ್ ಈ ವಾರ ದಿಲ್ಲಿಗೆ ಭೇಟಿ ನೀಡಲಿದ್ದು, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಜತೆ ಮಾತುಕತೆ ನಡೆಸಲಿದ್ದಾರೆ. ಇದರೊಂದಿಗೆ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯಲ್ಲೂ ಅವರು ಭಾಗವಹಿಸಲಿದ್ದಾರೆ. ರಷ್ಯಾ ಟುಡೇ-ಇಂಡಿಯಾಗೆ ನೀಡಿದ ಸಂದರ್ಶನದಲ್ಲಿ ಲಾವ್ರೊವ್ ಹಿಂದಿ ರೂಸಿ ಭಾಯಿ ಭಾಯಿ (ಭಾರತೀಯರು ಮತ್ತು ರಷ್ಯನ್ನರು ಸಹೋದರರು) ಎಂಬ ನುಡಿಗಟ್ಟು ಸಾಂಸ್ಕೃತಿಕ ಅಂಶವಾಗಿ ಮಾರ್ಪಟ್ಟಿದೆ ಎಂದು ವಿವರಿಸಿದ್ದಾರೆ. ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಬಾಂಧವ್ಯ ಅತ್ಯಂತ ಸಮೃದ್ಧವಾಗಿದ್ದು, ಎರಡೂ ದೇಶಗಳ ಹಾದಿಗಳು ಬೇರೆಯಾಗಲು ಸಾಧ್ಯವಿಲ್ಲ ಎಂದು ಲಾವ್ರೊವ್ ಅಭಿಪ್ರಾಯಪಟ್ಟಿದ್ದಾರೆ. ಈ ಭೇಟಿ, ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಮತ್ತು ಕಾರ್ಯತಂತ್ರದ ಸಂಬಂಧಗಳನ್ನು ವೃದ್ಧಿಸುವ ಗುರಿ ಹೊಂದಿದೆ.

ಪೋರ್ಚುಗಲ್‌ನಿಂದ ನಾರ್ಕೋ-ಭಯೋತ್ಪಾದಕನ ಹಸ್ತಾಂತರ

ಮೋಸ್ಟ್ ವಾಂಟೆಡ್ ಇಕ್ಬಾಲ್‌ಸಿಂಗ್ ಸೆರೆ

• **ಹೊಸದಿಲ್ಲಿ:** ಪೋರ್ಚುಗಲ್‌ನಿಂದ ಹಸ್ತಾಂತರಿಸಲ್ಪಟ್ಟ ಮೋಸ್ಟ್ ವಾಂಟೆಡ್ ನಾರ್ಕೋ- ಭಯೋತ್ಪಾದಕ ಇಕ್ಬಾಲ್ ಸಿಂಗ್ ಅಲಿಯಾಸ್ ಶೇರಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬುಧವಾರ ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ.



ಪಂಜಾಬ್‌ನ ಅಮೃತಸರ ಮೂಲದ ಶೇರಾ, 2020ರಲ್ಲಿ ಭಾರತದಿಂದ ಪರಾರಿಯಾಗಿದ್ದ. ಪಾಕಿಸ್ತಾನದಿಂದ ಹೆರಾಯಿನ್ ಸಾಗಿಸುವ ಭಾರತ ಮೂಲದ ನಾರ್ಕೋ-ಭಯೋತ್ಪಾದಕ ಮಾಡ್ಯೂಲ್‌ನ ಪ್ರಮುಖ ಸಂಚುಕೋರ ಮತ್ತು ಹ್ಯಾಂಡ್ಲರ್ ಆಗಿದ್ದ ಎಂದು ಎನ್‌ಐಎ ತಿಳಿಸಿದೆ. ಮಾದಕವಸ್ತುಗಳ ಸಾಗಣೆ ಮತ್ತು ವಿತರಣೆಯನ್ನು ಈತ ಮೇಲ್ವಿಚಾರಣೆ ಮಾಡುತ್ತಿದ್ದ. ಅಲ್ಲದೆ, ಹವಾಲಾ ನೆಟ್‌ವರ್ಕ್‌ಗಳ ಮೂಲಕ ಹಣವನ್ನು ಪಾಕಿಸ್ತಾನ ಮತ್ತು ಕಾಶ್ಮೀರ ಮೂಲದ ಹಿಜ್ಬುಲ್ ಮುಜಾಹಿದ್ದೀನ್ (ಹೆಚ್‌ಎಂ) ಭಯೋತ್ಪಾದಕರಿಗೆ ತಲುಪಿಸಿ ಭಯೋತ್ಪಾದಕ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿದ್ದ.

ಪ್ರಕರಣದ ಹಿನ್ನೆಲೆ: ಹಿಜ್ಬುಲ್ ಮುಜಾಹಿದ್ದೀನ್ ಕಾರ್ಯಕರ್ತ, ಮೃತ ಉಗ್ರ ಕಮಾಂಡರ್ ರಿಯಾಜ್ ಅಹ್ಮದ್ ನಾಯ್ಕೂನ ಸಹಚರ ಹಿಲಾಲ್ ಅಹ್ಮದ್ ಶೇರ್ಗೋಜ್ರಿಯನ್ನು ಪಂಜಾಬ್ ಪೊಲೀಸರು ಬಂಧಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿತ್ತು. ಶೇರ್ಗೋಜ್ರಿಯಿಂದ 29 ಲಕ್ಷ ರೂ. ಮತ್ತು ಇತರ ಸದಸ್ಯರಿಂದ 32 ಲಕ್ಷ ರೂ. ಅಕ್ರಮ ಹಣವನ್ನು ವಶಪಡಿಸಲಾಗಿತ್ತು.

ಈ ಜಾಲವನ್ನು ನಾಶ ಮಾಡಲು ಮತ್ತು ಶೇರಾನನ್ನು ಹಸ್ತಾಂತರಿಸಲು ಎನ್‌ಐಎ ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡಿತ್ತು. ಶೇರಾ ಭಯೋತ್ಪಾದಕ ಗ್ಯಾಂಗ್ ರಚಿಸಿಕೊಂಡು ಮಾದಕವಸ್ತು ಹಣವನ್ನು ದೇಶವಿರೋಧಿ ಚಟುವಟಿಕೆಗಳಿಗೆ ಬಳಸುತ್ತಿದ್ದ ಎಂದು ಆರೋಪಿಸಲಾಗಿದೆ.

ಕಾನೂನು ಪ್ರಕ್ರಿಯೆಗಳು

ಶೇರಾ ವಿರುದ್ಧ 2020ರ ಅಕ್ಟೋಬರ್‌ನಲ್ಲಿ ಜಾಮೀನು ರಹಿತ ವಾರಂಟ್ ಮತ್ತು 2021ರ ಜೂನ್‌ನಲ್ಲಿ ಇಂಟರ್‌ಪೋಲ್ ನೋಟಿಸ್ ಜಾರಿ ಮಾಡಲಾಗಿತ್ತು. ದಿಲ್ಲಿಗೆ ಬಂದಿಳಿದ ತಕ್ಷಣ ಈತನನ್ನು ವಶಕ್ಕೆ ಪಡೆದ ಎನ್‌ಐಎ ತಂಡ, ಪಟಿಯಾಲ ಹೌಸ್ ನ್ಯಾಯಾಲಯಕ್ಕೆ ಹಾಜರುಪಡಿಸಿತು. ನ್ಯಾಯಾಧೀಶ ಪಿತಾಂಬರ್ ದತ್, ಆರೋಪಿಯನ್ನು ಪಂಜಾಬ್‌ನ ಮೊಹಾಲಿಗೆ ಕರೆದೊಯ್ಯಲು ಎನ್‌ಐಎಗೆ ಎರಡು ದಿನಗಳ ಟ್ರಾನ್ಸಿಟ್ ರಿಮಾಂಡ್ ಮಂಜೂರು ಮಾಡಿದ್ದಾರೆ.

ಅಧ್ಯಕ್ಷ ಕ್ಸಿ ಜಿನ್‌ಪಿಂಗ್‌ರೊಂದಿಗೆ ಮಹತ್ವದ ಮಾತುಕತೆ

ಚೀನಾಗೆ ಬಂದಿಳಿದ ಅಧ್ಯಕ್ಷ ಟ್ರಂಪ್

• **ಬೀಜಿಂಗ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಚೀನಾಕ್ಕೆ ಆಗಮಿಸಿದ್ದು, 3 ದಿನಗಳ ಕಾಲ ಅಲ್ಲಿಯೇ ಉಳಿದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ವ್ಯಾಪಾರ ಮತ್ತು ಪ್ರಾದೇಶಿಕ ಭದ್ರತೆಯ ಕುರಿತು ಉನ್ನತ ಮಟ್ಟದ ಚರ್ಚೆ ನಡೆಸಲಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಚೀನಾದ ಉಪಾಧ್ಯಕ್ಷ ಹಾನ್ ಝೆಂಗ್, ಅಧ್ಯಕ್ಷ ಟ್ರಂಪ್‌ರನ್ನು ಸ್ವಾಗತಿಸಿದರು. ಇಂದು ಇಬ್ಬರು ನಾಯಕರ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯಲಿದ್ದು, ಶುಕ್ರವಾರ ಮಧ್ಯಾಹ್ನ ಔಪಚಾರಿಕ ಭೋಜನಕೂಟದ ಜೊತೆಗೆ ಚರ್ಚೆ ಮುಂದುವರಿಯಲಿದೆ. ಇದು 2025ರ ಅಕ್ಟೋಬರ್ ನಂತರ ಈ ಇಬ್ಬರು ನಾಯಕರ ನಡುವೆ ನಡೆಯುತ್ತಿರುವ ಏಳನೇ ಮುಖಾಮುಖಿ ಭೇಟಿಯಾಗಿದೆ.

ಆರ್ಥಿಕ ಗುರಿಗಳು: ಟೆಸ್ಲಾ ಮುಖ್ಯಸ್ಥ ಎಲೋನ್ ಮಸ್ಕ್ ಮತ್ತು ಆಪಲ್ ಸಿಇಒ ಟಿಮ್ ಕುಕ್ ಸೇರಿದಂತೆ ಪ್ರಮುಖ ಉದ್ಯಮಿಗಳ ತಂಡ ಟ್ರಂಪ್ ಜೊತೆಗಿದೆ. 525 ಬಿಲಿಯನ್ ಡಾಲರ್ ರಫ್ತಿನ ಮೇಲೆ ಪರಿಣಾಮ ಬೀರಿದ ಸುಂಕದ ವಿವಾದ ಬಗೆಹರಿಸಲು ಮತ್ತು ಅಮೆರಿಕದ ಆಹಾರ ಹಾಗೂ ವಿಮಾನಗಳ ಮಾರಾಟಕ್ಕೆ ಸಂಬಂಧಿಸಿದಂತೆ ಹೊಸ ಒಪ್ಪಂದಗಳಿಗೆ ಸಹಿ ಹಾಕುವ ಗುರಿ ಟ್ರಂಪ್‌ರದ್ದಾಗಿದೆ. ಅಲ್ಲದೆ, ಉಭಯ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಬೋರ್ಡ್ ಆಫ್ ಟ್ರೇಡ್ ಸ್ಥಾಪಿಸುವ ಯೋಜನೆಯೂ ಇದೆ.



ಪ್ರಾದೇಶಿಕ ಸಮಸ್ಯೆಗಳು: ಇರಾನ್ ಯುದ್ಧ, ಪಶ್ಚಿಮ ಏಷ್ಯಾದ ಭದ್ರತೆ ಮತ್ತು ಹಾರ್ಮುಜ್ ಜಲಸಂಧಿಯ ದಿಗ್ಬಂಧನದ ಕುರಿತು ಈ ಶೃಂಗಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗಲಿದೆ. ಚೀನಾ ಇರಾನ್ ತೈಲದ ಅತಿದೊಡ್ಡ ಆಮದುದಾರ ರಾಷ್ಟ್ರವಾಗಿದ್ದು, ಜಲಸಂಧಿಯನ್ನು ಆದಷ್ಟು ಬೇಗ ಪುನಃ ತೆರೆಯುವಂತೆ ಇರಾನ್‌ಗೆ ಕರೆ ನೀಡಿದೆ. ಇದರೊಂದಿಗೆ ತೈವಾನ್ ಸಮಸ್ಯೆ, ಅಮೆರಿಕದ ಶಸ್ತ್ರಾಸ್ತ್ರ ಮಾರಾಟ, ಕೃತಕ ಬುದ್ಧಿಮತ್ತೆ(ಎಐ) ಮತ್ತು ಪೂರೈಕೆ ಸರಪಳಿಗಳ ಬಗ್ಗೆಯೂ ಚರ್ಚೆಗಳು ನಡೆಯಲಿವೆ. ಟ್ರಂಪ್ ಒಂಬತ್ತು ವರ್ಷಗಳ ನಂತರ ಚೀನಾಕ್ಕೆ ಭೇಟಿ ನೀಡುತ್ತಿದ್ದಾರೆ. ಇದೇ ವರ್ಷದ ಕೊನೆಯಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ಅಮೆರಿಕಕ್ಕೆ ಭೇಟಿ ನೀಡುವ ಯೋಜನೆಯೂ ಇದೆ.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

CHAMARAJANAGAR INSTITUTE OF MEDICAL SCIENCES
(An Autonomous Institute of Govt of Karnataka)
Sy. No:124, Yadapura Village, Kasaba Hobli,
Chamarajanagar-571313.
E-Mail: directorcimsernagara@gmail.com Tel: 08226-226701,
Website: https://cimsernagara.karnataka.gov.in

ಸಂ. ಸಿಮ್ಸ್/ಕಾಂಟ್ರಾಸ್ಟ್/06/2026-27 ದಿನಾಂಕ : 18.04.2026

ಟೆಂಡರ್ ಅಧಿಸೂಚನೆ

ಈ ವಿದ್ಯಾಲಯದ ಬೋಧನಾ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸಾ ಅನುಕೂಲಕ್ಕಾಗಿ ಅತ್ಯಾವಶ್ಯಕವಾಗಿರುವ ಕಾಂಟ್ರಾಸ್ಟ್ ಮತ್ತು ಬಿ.ಎಂ.ಡಬ್ಲ್ಯು, ಕವರ್‌ಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ರಂತೆ ಅಧಿನಿಯಮ 2000 ರಂತೆ ಇ-ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ಕರೆಯಲಾಗಿದೆ. ಆಸಕ್ತ ಟೆಂಡರ್‌ದಾರರು ದಿನಾಂಕ :25.05.2026 ರಂದು 5.00 ಗಂಟೆಯೊಳಗೆ ನಿಗಧಿತ ಇ.ಎಂ.ಡಿ. ಪಾವತಿಸಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ.

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕಾರ್ಯನಿರತ ದಿನವನ್ನು ಕಡೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರನ್ನು ಕಛೇರಿ ವೇಳೆಯಲ್ಲಿ ಭೇಟಿ ಮಾಡಬಹುದಾಗಿರುತ್ತದೆ.

ಸಹಿ/- ನಿರ್ದೇಶಕರು ಹಾಗೂ ಡೀನ್
ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಚಾಮರಾಜನಗರ.

ಸಂ.ವಾಸಾಸಂಇ:ಚಾ.ನಗರ : 104:2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ-03/2026-27/619 ದಿನಾಂಕ: 11.05.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ-1&2) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 18-05-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 19-05-2026 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 20-05-2026 17.00 ಗಂಟೆವರೆಗೆ

ಕಾಮಗಾರಿಯ ಹೆಸರು: H/Ac 5054-80-190-0-01-132KRDCL(Foot Bridge) During 2025-26 ವರ್ಕ ಇಂಡೆಂಟ್ (1) PWD/2026-27/BG/WORK_INDENT35367 (2) PWD/2026-27/BG/WORK_INDENT35368 (3) PWD/2026-27/BG/WORK_INDENT35369 (4) PWD/2026-27/BR/WORK_INDENT35568

(ಕೆಡಬ್ಲೂ-1,2) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "https://kppp.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/KWR/KSMCA/126/26-27 dt. 11.05.2026

ಪ್ರಣವ ಸೌಹಾರ್ದ ಸಹಕಾರಿ ಸಂಘ (ನಿ.)

ನೋಂದಾವಣೆ ಸಂಖ್ಯೆ: ಡಿಆರ್‌ಪಿ/ಎಸ್.9/ಆರ್.ಜಿ.ಎನ್./3364/2014-15
ಡೋರ್ ನಂ. 3-3/9, 3-3/11, ಪ್ರಥಮ ಮಹಡಿ, ಜಯರಾಮ ಪ್ರಸಾದ್,
ಏರ್‌ಪೋರ್ಟ್ ರೋಡ್, ವೋಕ್ಸ್‌ವ್ಯಾಗನ್ ಶೋರೂಮ್ ಎದುರುಗಡೆ, ಯೆಯ್ಯಾಡಿ,
ಕೊಂಚಾಡಿ ಪೋಸ್ಟ್, ಮಂಗಳೂರು -575008, ಫೋನ್: 0824-2987088,
Email: mangaluru@pranavasouhardasahakari.com,
Web: www.pranavasouhardasahakari.com

ನಮ್ಮ ಸಂಸ್ಥೆಯ ವಾರ್ಷಿಕ ಮಹಾಸಭೆ

ದಿನಾಂಕ: 17.05.2026ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 10.30ಕ್ಕೆ ಸರಿಯಾಗಿ ಬೆನಕ ಸಭಾಂಗಣ ಪದವಿನಂಗಡಿ ಇಲ್ಲಿ ಜರಗಲಿರುವುದು. ಈಗಾಗಲೇ ಸದಸ್ಯರಿಗೆ ವೈಯಕ್ತಿಕವಾಗಿ ನೋಟೀಸ್‌ನ್ನು ಅಂಚೆ ಮುಖೇನ ಕಳುಹಿಸಲಾಗಿದ್ದು, ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಾಗಬೇಕಾಗಿ ವಿನಂತಿ. ಕಾರಣಾಂತರಗಳಿಂದ ಸಭೆಯ ನೋಟೀಸು ತಲುಪದೇ ಇದ್ದಲ್ಲಿ ಇದನ್ನೇ ಮಹಾಸಭೆಯ ಆಮಂತ್ರಣವೆಂದು ಪರಿಗಣಿಸುವುದು.

(ಆಡಳಿತ ಮಂಡಳಿ ಅಪ್ಪಣೆ ಮೇರೆಗೆ)

ಸ್ಥಳ: ಯೆಯ್ಯಾಡಿ ಸಹಿ/-
ದಿನಾಂಕ: 02.05.2026 ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ-ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152-200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ-2/ಟೆಂಡರ್ ಪ್ರಕಟಣೆ/333/2026-27/ ದಿನಾಂಕ:12.05.2026

ಅಲ್ಪಾವಧಿ/ಮರು ಟೆಂಡರ್ ಪ್ರಕಟಣೆ ಸಂಖ್ಯೆ: 03/2026-27/ ದಿನಾಂಕ: 12.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ-1 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 09 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಹಾಗೂ ಕನಿಷ್ಠ ಮೊತ್ತ ರೂ.7.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ-ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ದಿನಾಂಕ: 12.05.2026ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ: 22.05.2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25.05.2026ರ ಬೆಳಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:68/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಮಂಗಳೂರು

2ನೇ ಮಹಡಿ, ಜಿಲ್ಲಾ ಪಂಚಾಯತ್ ಕಟ್ಟಡ, ಕೊಟ್ಟಾರ, ಮಂಗಳೂರು-575006
ಫೋನ್: 0824-2951583 ಇ-ಮೇಲ್: eerdwsd.dk@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ನಿ.ಇ.ಗ್ರಾ.ಕು.ನೀ.ಸ&ನೈ:ವಿ:ಮಂ:ಟೆಂಡರ್:ಎಇ-1:2026-27/231 ದಿ: 13-05-2026

ಅಲ್ಪಾವಧಿ ಟೆಂಡರ್

ಕರ್ನಾಟಕ ರಾಜ್ಯಪಾಲರ ಪರವಾಗಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕಾಮಗಾರಿಗಳಿಗೆ Tender document ಆಧಾರದ ಮೇಲೆ ಕೆ.ಪಿ.ಪಿ. ವೇದಿಕೆಯ ಮೂಲಕ ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಸ್ವೀಕರಿಸಲಾಗುವುದು. ವಿವರವು ಈ ಕೆಳಗಿನಂತಿದೆ:

ಬಂಟ್ವಾಳ ತಾಲೂಕು ಕಾಮಗಾರಿಗಳು -2 ಒಟ್ಟು ಅಂದಾಜು ಮೊತ್ತ ರೂ.45.00 ಲಕ್ಷ

KPP Portal ನಲ್ಲಿ ಟೆಂಡರ್ ದಾಖಲೆಗಳನ್ನು Download ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ: 13-05-2026 ರಿಂದ 25-05-2026ರ ಸಂಜೆ 5.00 ಗಂಟೆಯವರೆಗೆ.

ಟೆಂಡರನ್ನು ತೆರೆಯುವ ದಿನಾಂಕ: 26-05-2026ರ ಸಂಜೆ 5.00 ಗಂಟೆಗೆ, ಹೆಚ್ಚಿನ ವಿವರಗಳಿಗೆ ಈ ಕಛೇರಿ ದೂರವಾಣಿ ಸಂಖ್ಯೆ: 0824-2951583ಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/-. ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ದಕ್ಷಿಣ ಕನ್ನಡ ವಿಭಾಗ, ಮಂಗಳೂರು

DIPR/DK/KSMCA/197/26-27 dt. 13.05.2026

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ-581334

ದೂರವಾಣಿ ಸಂಖ್ಯೆ: 08387-295236 E-mail: dcf.honavar@gmail.com
ಸಂ. ಎ2/ಬಜೆಟ್/ಟೆಂಡರ್/ವಿವ-3/2025-26 ದಿನಾಂಕ: 06.05.2026

ಟೆಂಡರ ಪ್ರಕಟಣೆ

(1) ಹೊನ್ನಾವರ ವಿಭಾಗದ ಭಟಕಳ ಉಪವಿಭಾಗದಲ್ಲಿ ರಕ್ಷಣಾ ಶಿಬಿರಗಳ ಕಾವಲುಗಾರರನ್ನು, ಇಲಾಖಾ ವಾಹನಗಳಿಗೆ ವಾಹನ ಚಾಲಕರನ್ನು ಮತ್ತು ಗಣಕಯಂತ್ರ ನಿರ್ವಾಹಕರನ್ನು 2026-27 & 2027-28 ನೇ ಸಾಲಿಗೆ outsource (ಹೊರಗುತ್ತಿಗೆ) ಮೂಲಕ ಪಡೆಯುವ ಕುರಿತು. ದಿನಾಂಕ: 25.05.2026 ರಂದು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

(2) ಹೊನ್ನಾವರ ವಿಭಾಗದ ಹೊನ್ನಾವರ ಉಪವಿಭಾಗದಲ್ಲಿ ನೆಡುತೋಪು ರಚನೆ, ಮಾನಸೂನ್ ಕಾಮಗಾರಿ ನೆಡುತೋಪು ನಿರ್ವಹಣೆ, ನರ್ಸರಿ ಕೆಲಸ ಮತ್ತು ಇತರೇ ಕಾಮಗಾರಿಗಳಿಗೆ 2026-27 ನೇ ಸಾಲಿಗೆ ದಿನಾಂಕ: 25.05.2026 ರಂದು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

(3) ಹೊನ್ನಾವರ ವಿಭಾಗದ ಭಟಕಳ ಉಪವಿಭಾಗದಲ್ಲಿ ನೆಡುತೋಪು ರಚನೆ, ಮಾನಸೂನ್ ಕಾಮಗಾರಿ ನೆಡುತೋಪು ನಿರ್ವಹಣೆ, ನರ್ಸರಿ ಕೆಲಸ ಮತ್ತು ಇತರೇ ಕಾಮಗಾರಿಗಳಿಗೆ 2026-27 ನೇ ಸಾಲಿಗೆ ದಿನಾಂಕ: 25.05.2026 ರಂದು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

(4) ಹೊನ್ನಾವರ ವಿಭಾಗದ ಕುಮಟಾ ಉಪವಿಭಾಗದಲ್ಲಿ ನೆಡುತೋಪು ರಚನೆ, ಮಾನಸೂನ್ ಕಾಮಗಾರಿ ನೆಡುತೋಪು ನಿರ್ವಹಣೆ, ನರ್ಸರಿ ಕೆಲಸ ಮತ್ತು ಇತರೇ ಕಾಮಗಾರಿಗಳಿಗೆ 2026-27 ನೇ ಸಾಲಿಗೆ ದಿನಾಂಕ: 25.05.2026 ರಂದು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ ಕರೆಯಲಾಗಿದೆ.

ಆಸಕ್ತ ಟೆಂಡರುದಾರರು https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387-295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ವಿಭಾಗ, ಹೊನ್ನಾವರ

DIPR/KWR/KSMCA/121/26-27 Dt.13.05.2026

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ-583101"

ಜಿನಕೋಬ / ಡಿ.ಎಮ್.ಎಫ್ / ಹೊರಗುತ್ತಿಗೆ / 2026/ 01/01 ದಿನಾಂಕ: 08.05.2026

ಟೆಂಡರ್ ಅವಧಿ ವಿಸ್ತರಣಾ ಪ್ರಕಟಣೆ (CORRIGENDUM)

ಬಳ್ಳಾರಿ ಜಿಲ್ಲೆಯ ಡಿ.ಎಂ.ಎಫ್ (DMF) ಕೋಶಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯನ್ವಯ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜುಗಳ ಪ್ರಕಾರ ಈಗಾಗಲೇ ಕೆ.ಪಿ.ಪಿ ಪೋರ್ಟಲ್ (KPPP Portal) ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು.

ಆದರೆ, ತಾಂತ್ರಿಕ ಕಾರಣಗಳಿಂದಾಗಿ ಈ ಪ್ರಕಟಣೆಯು ಪತ್ರಿಕೆಗಳಲ್ಲಿ ಸಕಾಲಕ್ಕೆ ಪ್ರಕಟವಾಗದೇ ಇರುವುದರಿಂದ, ಆಸಕ್ತ ಬಿಡ್ದಾರರಿಗೆ ಹೆಚ್ಚಿನ ಕಾಲಾವಕಾಶ ನೀಡಲು ಟೆಂಡರ್ ಸಲ್ಲಿಕೆಯ ಅವಧಿಯನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ:

ಪ್ಯಾಕೇಜ್ ಕಾಮಗಾರಿ ವಿವರ: Providing Manpower Services on outsource basis for DMF Cell of Ballari District. DMA/2025-26/SE7481. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 90.50. EMD (Rs): 1,81,000/-

ವಿವರಗಳು ದಿನಾಂಕ ಮತ್ತು ಸಮಯ

ಟೆಂಡರ್ ಕುರಿತು ವಿಚಾರಣೆ/ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 16.05.2026, ಸಂಜೆ 4:30 ರವರೆಗೆ. ತಾಂತ್ರಿಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 19.05.2026, ಸಂಜೆ 4:30 ರವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 20.05.2026, ಸಂಜೆ 5:00 ಗಂಟೆಗೆ. ಆರ್ಥಿಕ ಬಿಡ್ (Financial Bid) ತೆರೆಯುವ ದಿನಾಂಕ: 22.05.2026, ಬೆಳಿಗ್ಗೆ 11:00 ಗಂಟೆಗೆ

ಪ್ರಮುಖ ಸೂಚನೆಗಳು: 1)ಮೇಲೆ ತಿಳಿಸಿದ ದಿನಾಂಕಗಳಂದು ಸಾರ್ವಜನಿಕ ರಜೆ ಘೋಷಣೆಯಾದಲ್ಲಿ, ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.2) ಆಸಕ್ತರು ಹೆಚ್ಚಿನ ವಿವರಗಳು ಮತ್ತು ನಿಬಂಧನೆಗಳಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ಪೋರ್ಟಲ್ https://kppp.karnataka.gov.in/ ನಲ್ಲಿ ಲಾಗಿನ್ ಆಗಿ ಮಾಹಿತಿ ಪಡೆಯಬಹುದು.3)ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ (ದೂರವಾಣಿ ಸಂಖ್ಯೆ: 7760848568) ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/139

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಿಜಯಪುರ ವಿಭಾಗ, ವಿಜಯಪುರ

ಸಂಖ್ಯೆ:ಕಕರಸಾ/ವಿವಿ/ಸಂಚಾರ/ವಾಣಿಜ್ಯ/361/2026-27 ದಿನಾಂಕ:30.04.2026

ಇ-ಟೆಂಡರ್ ಪ್ರಕಟಣೆ ಸಂಖ್ಯೆ: 11/2026 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು, ಉಪಹಾರ ಗೃಹಗಳು/ತೆರೆದ ಸ್ಥಳಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕಗಳ ವಿವರ ಈ ಕೆಳಗಿನಂತೆ ಇರುತ್ತವೆ.

1) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 25.05.2026 ರ 17.28 ಗಂಟೆಯ ವರೆಗೆ.

2) ಆನ್‌ಲೈನ್ ಮೂಲಕ ಇ-ಟೆಂಡರ್ ತೆರೆಯುವ ದಿನಾಂಕ: 27.05.2026 ರಂದು ಬೆಳಿಗ್ಗೆ 10.00 ಗಂಟೆಯ ನಂತರ.

ಟೆಂಡರ್ ಪ್ರಕಟಣೆಯ ಪ್ರತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ರವರ ಹೊಸ ತಂತ್ರಾಂಶ https://kppp.karnataka.gov.in ದಿಂದ ಪಡೆಯಬಹುದಾಗಿದೆ ಅಥವಾ DTO ರವರ ದೂರವಾಣಿ ಸಂಖ್ಯೆ:7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಾಣಿಜ್ಯ ವಿಷಯ ನಿರ್ವಾಹಕರನ್ನು ಕಚೇರಿ ವೇಳೆಯಲ್ಲಿ ಬಂದು ವಿಚಾರಿಸಬಹುದಾಗಿದೆ. ಕ.ಕ.ರ.ಸಾ ನಿಗಮ ವಿಜಯಪುರ ವಿಭಾಗದ ವಿಭಾಗೀಯ ಕಚೇರಿ (ಸಂಚಾರ ಶಾಖೆ) ಯಲ್ಲಿ ಬಂದು ವಿಚಾರಿಸಬಹುದಾಗಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ ನಿಗಮ, ವಿಜಯಪುರ ವಿಭಾಗ

ವಾಸಾಸಂಇ/ವಿಜಯಪುರ/91/ಕೆಎಸ್‌ಎಂಸಿಎ/2026-27

ಮಾನ್ಯ ಜೆ.ಎಮ್.ಎಫ್.ಸಿ 4ನೇ ನ್ಯಾಯಾಲಯ ಮಂಗಳೂರು, ದ.ಕ
ಕ್ರಿಮಿನಲ್ ಮಿಸ್ ಕೇಸ್ ನಂಬ್ರ: 230/2026

ಇವರೊಳಗೆ,
ಗಿರೀಶ್ ಮತ್ತು ಇನ್ನೊಬ್ಬರು ... ಅರ್ಜಿದಾರರು
ಮತ್ತು
ಜನನ ಮರಣ ನೊಂದಣಾಧಿಕಾರಿಗಳು ...ಎದ್ರಿದಾರರು

ಸಾರ್ವಜನಿಕ ಪ್ರಕಟಣೆ

ಮೇಲಿನ ಪ್ರಕರಣದಲ್ಲಿ ಎದ್ದಿದಾರರ ಕಾರ್ಯವ್ಯಾಪ್ತಿಗೊಳಪಟ್ಟ ಮಂಗಳೂರು ತಾಲೂಕಿನ, ಪಾಂಡೇಶ್ವರ ಗ್ರಾಮದ, ಮನೆ ನಂಬ್ರ #17-13-1080/1, ಸೋಮಪ್ಪ ಕೊಟ್ಟಾರಿ ಕಾಂಪೌಂಡ್ ಎಂಬಲ್ಲಿ ದಿನಾಂಕ 15/04/1998 ರಂದು ದಿವಂಗತ ತುಕ್ರ ಕೊಟ್ಟಾರಿ ಹಾಗೂ ದಿವಂಗತ ಯಮುನಾ ಕೊಟ್ಟಾರಿಯವರ ಮಗ ಕೃಷ್ಣಪ್ಪ ಕೊಟ್ಟಾರಿ ಎಂಬವರು ಮೃತಪಟ್ಟಿದ್ದು, ಎದ್ರಿದಾರರ ಮರಣವಹಿಯಲ್ಲಿ ತಡನೋಂದಣೆ ಮಾಡುವರೆ ವಿಳಂಬ ವಿನಾಯಿತಿ ಕೋರಿ ಅರ್ಜಿದಾರರು ಮಾನ್ಯ ನ್ಯಾಯಾಲಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಈ ಬಗ್ಗೆ ಯಾರಿಗಾದರೂ ಆಕ್ಷೇಪಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ 2-6-2026ರಂದು ಪೂರ್ವಾಹ್ನ 11.00 ಗಂಟೆಗೆ ವೈಯಕ್ತಿಕವಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗತಕ್ಕದ್ದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 8ನೇ ಮೇ ತಿಂಗಳ 2026.

/ನ್ಯಾಯಾಲಯದ ಆದೇಶದ ಮೇರೆಗೆ/

ಸಹಿ/- ಮುಖ್ಯ ಲಿಪಿಕಾಧಿಕಾರಿ
ಜೆ.ಎಮ್.ಎಫ್.ಸಿ 4ನೇ ನ್ಯಾಯಾಲಯ, ಮಂಗಳೂರು
ಸಹಿ/-ಅರ್ಜಿದಾರರ ವಕೀಲರು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಹೊದಕಾನ ಗ್ರಾಮದಲ್ಲಿರುವ ಕೆಳಕಂಡ ಆಸ್ತಿಗಳನ್ನು ಶ್ರೀ ಡಿ.ಎಂ. ಕ್ಯಾಸ್ಟೆಲಿನೋ ಹಾಗೂ ಶ್ರೀಮತಿ ಲವೀನಾ ಕ್ಯಾಸ್ಟೆಲಿನೋ ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ:

ಸರ್ವೇ ನಂ.46/1ರಲ್ಲಿ 1.76 ಏಕರೆ, ಸರ್ವೇ ನಂ.46/2ರಲ್ಲಿ 0.08 ಏಕರೆ, ಸರ್ವೇ ನಂ.8/73ರಲ್ಲಿ 1.25 ಏಕರೆ, ಸರ್ವೇ ನಂ.47/1ರಲ್ಲಿ 1.04 ಏಕರೆ, ಸರ್ವೇ ನಂ.47/5ರಲ್ಲಿ 0.06 ಏಕರೆ, ಸರ್ವೇ ನಂ.47/3ರಲ್ಲಿ 0.35 ಏಕರೆ, ಸರ್ವೇ ನಂ.48ರಲ್ಲಿ 1.47 ಏಕರೆ, ಸರ್ವೇ ನಂ.47/2ರಲ್ಲಿ 0.64 ಏಕರೆ, ಸರ್ವೇ ನಂ.50/1ರಲ್ಲಿ 3.00 ಏಕರೆ, ಸರ್ವೇ ನಂ.8/21ರಲ್ಲಿ 8.30 ಏಕರೆ, ಸರ್ವೇ ನಂ.8/62ರಲ್ಲಿ 0.75 ಏಕರೆ, ಸರ್ವೇ ನಂ.47/6ರಲ್ಲಿ 0.36 ಏಕರೆ, ಸರ್ವೇ ನಂ.47/4ರಲ್ಲಿ 0.36 ಏಕರೆ ಹಾಗೂ ಸರ್ವೇ ನಂ.8/61ರಲ್ಲಿ 12.70 ಏಕರೆ.

ಮೇಲ್ಕಾಣಿಸಿದ ಆಸ್ತಿಗಳ ಕುರಿತು ಯಾರಿಗಾದರೂ ಯಾವುದೇ ಕಾನೂನುಬದ್ಧ ಹಕ್ಕು, ದಾವೆ ಅಥವಾ ಬೇಡಿಕೆ ಇದ್ದಲ್ಲಿ, ಅವರು ತಮ್ಮ ಹಕ್ಕು ಅಥವಾ ಬೇಡಿಕೆಯನ್ನು ಸಮರ್ಥಿಸುವ ಸಂಬಂಧಿತ ದಾಖಲೆಗಳೊಂದಿಗೆ ಇಂದಿನಿಂದ ಹದಿನೈದು ದಿನಗಳೊಳಗಾಗಿ ನನ್ನನ್ನು ಸಂಪರ್ಕಿಸಲು ವಿನಂತಿಸಲಾಗಿದೆ. ಇಲ್ಲವಾದಲ್ಲಿ, ನನ್ನ ಕಕ್ಷಿದಾರರು ಯಾವುದೇ ಮುಂದಿನ ನೋಟಿಸ್ ಅಥವಾ ಮಾಹಿತಿ ನೀಡದೆ ಮೇಲ್ಕಾಣಿಸಿದ ಆಸ್ತಿಗಳನ್ನು ಖರೀದಿಸುವ ಕ್ರಮ ಕೈಗೊಳ್ಳುವರು.

ಸಹಿ/- ಕೆ.ಎಂ. ಕೃಷ್ಣ ಭಟ್
ವಕೀಲರು, ಎಸ್. ಹೊಳ್ಳಾ ಕಾಂಪ್ಲೆಕ್ಸ್,
ಜಿ.ಟಿ. ಸರ್ಕಲ್, ಮಡಿಕೇರಿ - 571201.
ಮಡಿಕೇರಿ. 13.05.2026.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ-2/ಇ-ಟೆಂಡರ್ ಪ್ರಕಟಣೆ/2026-27/ 348, ದಿನಾಂಕ:12.05.2026

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2, 3 ಮತ್ತು 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿ ಶಹಾಪುರ ತಾಲೂಕಿನ (1)31071/2ನೇ ಕರೆ, (2)35311, (3) 30820/3ನೇ ಕರೆ, (4) 35888, (5) 35889 ಮತ್ತು (6) 33049 ಸುರಪೂರ ತಾಲೂಕಿನ (1)30959/2ನೇ ಕರೆ & (2)34447 ಒಟ್ಟು 8 (ಎಂಟು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. 2) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) ಪ್ರೀ ಬಿಡ್ ಮೀಟಿಂಗ್ ದಿನಾಂಕ: 18.05.2026 (11.30 ಗಂಟೆ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 21.05.2026 (01.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 26.05.2026 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:27.05.2026 (16.30 ಗಂಟೆ ನಂತರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ:29.05.2026 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ:https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/69/ಕೆ.ಎಸ್.ಎಂ.ಸಿ.&ಎ/2026-27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರ ಕಾರ್ಯಾಲಯ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ,
ಭಿಮರಾಯನಗುಡಿ-585287 ತಾ: ಶಹಾಪೂರಜಿ: ಯದಗಿರಿ. email:kbjnleesbc@gmail.com

ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ /ಯೋಶಾ/2026-27/ 86 ದಿನಾಂಕ:-11.05.2026

ತಿದ್ದುಪಡಿ/ವಿಸ್ತರಣೆ ಪ್ರಕಟಣೆ

ಉಲ್ಲೇಖ:- 1) ಈ ಕಛೇರಿ ಟೆಂಡರ್ ಪ್ರಕಟಣೆ ಸಂ:21, ದಿನಾಂಕ: 10.04.2026

ಉಲ್ಲೇಖ ಟೆಂಡರ್ ಪ್ರಕಟಣೆ ಮೂಲಕ ಈ ಕಛೇರಿಯಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ Karnal Lift Irrigation Scheme on Turnkey Basis".(Work indent no:KBJNL/2025-26/ LI/WORK_INDENT2778)" ಕಾಮಗಾರಿಯ ಟೆಂಡರ್‌ನ್ನು ಅಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಅವಧಿಯ ಘಟನಾವಳಿಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

ಕ್ರಸಂ	ವಿವರ	ಪ್ರಕಟಿತ ದಿನಾಂಕ	ಪರಿಷ್ಕೃತ ದಿನಾಂಕ
1	ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟಿನಲ್ಲಿ ಡೌನ್ ಲೋಡ್ ಮಾಡಿಕೊಳ್ಳುವುದು.	15.04.2026 ರಿಂದ	ಬದಲಾವಣೆ ಇರುವುದಿಲ್ಲಾ
2	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ.	12.04.2026 ರ ಸಂಜೆ: 5.00 ತನಕ	19.05.2026 ರ ಸಂಜೆ: 5.00 ರವರೆಗೆ
3	ಪ್ರಿ ಬಿಡ್ ಸಭೆಯ ದಿನಾಂಕ.	24.05.2026 ರಂದು ಬೆಳಿಗ್ಗೆ: 11.00 ಕ್ಕೆ	ಬದಲಾವಣೆ ಇರುವುದಿಲ್ಲಾ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ.	14.05.2026 ರಂದು ಬೆಳಿಗ್ಗೆ: 11.00 ಕ್ಕೆ	20.05.2026 ರಂದು ಸಂಜೆ: 5.30 ಗಂಟೆಗೆ
5	ಆರ್ಥಿಕ ಬಿಡ್ ತೆರೆಯುವ ದಿನಾಂಕ.	18.05.2026 ರಂದು ಬೆಳಿಗ್ಗೆ: 11.00 ಕ್ಕೆ(ತಾತ್ಕಾಲಿಕ)	25.05.2026 ರಂದು ಬೆಳಿಗ್ಗೆ: 11.00 ಗಂಟೆಗೆ ಕ್ಕೆ(ತಾತ್ಕಾಲಿಕ)

ಉಳಿದಂತೆ ಉಲ್ಲೇಖ ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿದ ಇತರೆ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಕಛೇರಿಯ ದಿನಗಳಂದು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ

ವಾ.ಸಾ.ಸಂ.ಇ/ಯಾದಗಿರ/66/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರಕಾರ
(ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ)

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ,

ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ. 574238
ಇ-ಮೈಲ್: eokukkesubrahmanya@gmail.com ವೆಬ್‌ಸೈಟ್: https://temples.karnataka.gov.in
Phone: STD: 08257 - 236200, 281224, 281423, 295400, 281700, 281265, 295300
ಕೆ.ಎಸ್.ಎಸ್.ಟಿ. ನಂ: ಸೇವಾ 06/ಮುದ್ರಣ/2026-27 ದಿನಾಂಕ: 05-05-2026

ಟೆಂಡರ್ ಪ್ರಕಟಣೆ

ಶ್ರೀ ದೇವಳಕ್ಕೆ ಈ ಕೆಳಗೆ ಕಾಣಿಸಿದ ರಶೀದಿ ಪುಸ್ತಕ, ರಿಜಿಸ್ತ್ರಿ, ಸರ್ಪಸಂಸ್ಕಾರ ಸೇವಾಲಿಸ್ಟ್‌ಗಳನ್ನು ಮುದ್ರಿಸಿಕೊಡುವ ಬಗ್ಗೆ ಮುದ್ರಣಾಲಯಗಳಿಂದ ದರ ಸೂಚಿಸುವ ಟೆಂಡರ್‌ಗಳನ್ನು ಕರೆಯಲಾಗಿದೆ. ಟೆಂಡರ್‌ಗಳು ತಲುಪಲು ಕೊನೆಯ ದಿನಾಂಕ: 29-05-2026 ಸಾಯಂಕಾಲ 4.00 ಗಂಟೆಯವರೆಗೆ. ಟೆಂಡರನ್ನು ತೆರೆಯುವ ದಿನಾಂಕ: 30-05-2026 ಪೂರ್ವಾಹ್ನ 11.00 ಗಂಟೆಗೆ.

1.	ಇಂಗ್ಲೀಷ್ / ಕನ್ನಡ ಸೇವಾ ಲಿಸ್ಟ್	1 ರ ದರ
2.	ಸರ್ಪಸಂಸ್ಕಾರ ಸೇವಾ ಮಾಹಿತಿ ಲಿಸ್ಟ್ (ಕನ್ನಡ/ ಇಂಗ್ಲೀಷ್)	1 ರ ದರ
3.	ಲಗ್ಗೇಜು ಕೊಠಡಿ ರಶೀದಿ ಪುಸ್ತಕ	1 ರ ದರ
4.	ಖಾಯಂ ಸೇವಾ ಸ್ಲಿಪ್	1 ರ ದರ
5.	10 x 7 ಖಾಕಿ ಚಿಕ್ಕ ಕವರು (Envelope)	1 ರ ದರ
6.	ರ್‍ಯಾಪರ್ ಶೀಟ್	1 ರ ದರ
7.	ಕೊಠಡಿ ಕಾದಿರಿಸುವ ಪುಸ್ತಕ	1 ರ ದರ
8.	ಪ್ರಾರ್ಥನೆ ಚೀಟಿ	1 ರ ದರ
9.	ಕವರು 9" x 4"	1 ರ ದರ

ಶರ್ತಗಳು: ಸೂಚಿಸುವ ದರವು ಎಲ್ಲಾ ತೆರಿಗೆಗಳು, ಸಾಗಾಟ ಖರ್ಚು ವಗೈರೆ ಸೇರಿರತಕ್ಕದ್ದು. ಇ.ಎಂ.ಡಿ ಮೊತ್ತ ರೂ. 10,000.00 ವನ್ನು ಕಾರ್ಯನಿರ್ವಹಣಾಧಿಕಾರಿ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಇವರ ಹೆಸರಿಗೆ ಪಡೆದ ಡಿಡಿ ಅಥವಾ ನಗದು ಮೂಲಕ ಪಾವತಿಸತಕ್ಕದ್ದು. ಹಿಂದೂಯೇತರರಿಗೆ ಭಾಗವಹಿಸಲು ಅವಕಾಶವಿರುವುದಿಲ್ಲ. ಯಾವುದೇ ಕಾರಣ ನೀಡದೇ ಟೆಂಡರ್ ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕು ಈ ಕೆಳಗೆ ಸಹಿ ಮಾಡಿದವರಿಗೆ ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ದೇವಳದ ಪ್ರಕಟಣಾ ಫಲಕದಿಂದ ತಿಳಿದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/KSMCA/199/26-27 dt.13.05.2026

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ದೂರವಾಣಿ ಸಂಖ್ಯೆ: 08262-220936 E-mail:zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:45/2025-26/3ನೇ ಕರೆ/385,
ದಿನಾಂಕ:12-05-2026

ಟೆಂಡರ್ ಪ್ರಕಟಣೆ (3ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗ, ಚಿಕ್ಕಮಗಳೂರು ರವರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ನ.ರಾ.ಪುರ ಮತ್ತು ಶೃಂಗೇರಿ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ.50.40ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:12-05-2026 ರಿಂದ ದಿನಾಂಕ:25-05-2026 ರ ವರೆಗೆ ಸಂಜೆ. 05.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:27-05-2026 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:01-06-2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಿಕ್ಕಮಗಳೂರು

ಪುತ್ತೂರು ಮಾರುಕಟ್ಟೆ ಧಾರಣೆ

13-05-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	440 - 470	ಹಳೆ ಕರಿಗೋಟು	265 - 295
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 105
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 320
ಹೊಸ ಪಟೋರ	355 - 405	ಕಾಳುಮೆಣಸು ಧಾರಣೆ	
ಹಳೆ ಪಟೋರ	375 - 405	ಕಾಳುಮೆಣಸು	450 - 690
ಹೊಸ ಉಳ್ಳಿ	140 - 300	ರಬ್ಬರ್ ಧಾರಣೆ : ಗ್ರೇಡ್	
ಹಳೆ ಉಳ್ಳಿ	130 - 300	ಆರ್‌ಎಸ್‌ಎಸ್ 1	255.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	211.00
ಹಳೆ ಕೋಕಾ	325 - 345	ಸ್ಕ್ರಾಪ್ 1	151.50
ಹೊಸ ಕರಿಗೋಟು	265 - 295	ಸ್ಕ್ರಾಪ್ 2	140.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-52) ಡ್ರಾ ಮೇ 13ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DO 183883 (PALAKKAD)

Consolation Prize Rs.5,000/-
DN 183883 DP 183883 DR 183883 DS 183883
DT 183883 DU 183883 DV 183883 DW 183883
DX 183883 DY 183883 DZ 183883

2nd Prize Rs.30,00,000/- [30 Lakhs]
DY 146031 (ERNAKULAM)

3rd Prize Rs.5,00,000/- [5 Lakhs]
DR 265833 (KANNUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0173 1798 2039 2858 3451 4054 4165 4528 6386 6513 6542 7502 7516 8317 8593 8933 9336 9485 9991


5th Prize Rs.2,000/-
0400 0781 3217 4428 6949 7791

6th Prize Rs.1,000/-
0032 0331 0596 0857 1206 1228 1328 1527 1976 2083 2342 2668 3701 4756 5638 6308 6684 7104 7106 7325 7903 7957 8021 9484 9987

7th Prize Rs.500/-
0503 0528 0634 0767 0828 0878 0885 0891 1042 1091 1519 1525 1551 1603 1860 1979 2192 2259 2394 2697 2787 3272 3340 3437 3477 3692 3731 3793 3822 3896 3924 3973 4206 4299 4302 4684 4735 4971 5079 5290 5408 5425 5484 5530 5635 5773 5899 5928 6183 6352 6844 6917 7073 7336 7384 7419 7429 7471 7600 7760 8082 8377 8515 8630 8749 8769 8913 9099 9214 9479 9515 9539 9595 9671 9826 9894

8th Prize Rs.200/-
0223 0424 0457 0622 0666 0858 0943 1012 1019 1050 1177 1186 1246 1293 1304 1367 1407 1871 2040 2109 2367 2400 2414 2418 2421 2427 2430 2501 2578 2590 2643 2718 2755 2990 3021 3037 3210 3649 3778 3779 3813 3881 3914 4179 4198 4229 4293 4295 4379 4398 4424 4536 4556 4585 4972 5123 5261 5324 5719 5741 5744 5824 5905 5918 6174 6276 6351 6696 6837 6884 6942 6971 6998 7083 7203 7251 7255 7402 7784 7812 7922 8015 8220 8243 8245 8615 8679 8693 8811 9190 9232 9434 9514 9698 9923 9954

9th Prize Rs.100/-
0050 0111 0297 0347 0383 0385 0518 0643 0722 0792 0916 1008 1045 1076 1089 1187 1261 1455 1565 1600 1617 1631 1689 1940 1968 2055 2069 2092 2237 2471 2538 2541 2587 2589 2625 2672 2728 2799 2843 2857 2865 2883 2906 3010 3119 3171 3224 3250 3283 3540 3749 3785 3811 3830 3846 3888 3909 3937 3963 3967 4042 4445 4452 4496 4637 4676 4750 4892 4953 5137 5157 5199 5211 5228 5264 5375 5380 5411 5513 5523 5526 5579 5695 5767 5786 5911 5921 6040 6568 6609 6623 6632 6674 6740 6862 6959 7057 7116 7204 7211 7234 7288 7315 7322 7396 7464 7469 7642 7681 7882 8104 8106 8155 8304 8372 8408 8553 8584 8643 8668 8689 8740 8745 8870 8997 9007 9117 9143 9348 9385 9465 9531 9593 9628 9666 9720 9761 9801



ರಾಜ್ಯದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ಮಾಜಿ ಸಚಿವ ಬಿ. ರಮಾನಾಥ ರೈ ಅವರ ಕಳ್ಳಿಗೆ ಸ್ವಗೃಹಕ್ಕೆ ಭೇಟಿ ನೀಡಿ ಸುಮಾರು ಒಂದು ತಾಸುಗಳ ಕಾಲ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಪ್ರಕಾಶ್ ಶೆಟ್ಟಿ ತುಂಬೆ, ವೆಂಕಪ್ಪ ಪೂಜಾರಿ ಬಂಟ್ವಾಳ ಮತ್ತಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಮಂಗಳೂರು ಪ್ರೆಸ್ ಕ್ಲಬ್ ಪ್ರಶಸ್ತಿಗೆ ದೀಪಕ್ ಜಿ. ಆಯ್ಕೆ

ಮಂಗಳೂರು : ಅನಾರೋಗ್ಯ ಪೀಡಿತ ಬಡವರ ಚಿಕಿತ್ಸೆಗೆ ನೆರವು, ಸೂರಿಲ್ಲದ ಬಡ ಕುಟುಂಬಗಳಿಗೆ ಮನೆ ನಿರ್ಮಾಣ, ಉಚಿತ ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ಸರ್ಕಾರಿ ಶಾಲೆಗಳ ಶೌಚಾಲಯ ಸ್ವಚ್ಛತಾ ಅಭಿಯಾನ..ಹೀಗೆ ಹತ್ತು ಹಲವು ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಬೆಳ್ತಂಗಡಿಯ ಸಮಾಜ ಸೇವಕ ದೀಪಕ್ ಜಿ.ಅವರು ಮಂಗಳೂರು ಪ್ರೆಸ್ ಕ್ಲಬ್‌ನ 2025–26ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ನೇತೃತ್ವದ ಸಮಿತಿ ಆಯ್ಕೆ ನಡೆಸಿದ್ದು, ಪ್ರಶಸ್ತಿಯು 10,001 ರೂ.ನಗದು, ಪ್ರಶಸ್ತಿ ಫಲಕ , ಸ್ಮರಣಿಕೆ ಒಳಗೊಂಡಿದೆ. ಮೇ 24ರಂದು ಮಂಗಳೂರಿನ ರೆಡ್ ಕ್ರಾಸ್ ಶತಮಾನೋತ್ಸವ ಭವನದಲ್ಲಿ ನಡೆಯಲಿರುವ ಮಂಗಳೂರು ಪ್ರೆಸ್ ಕ್ಲಬ್ ದಿನಾಚರಣೆಯಲ್ಲಿ ದೀಪಕ್ ಜಿ. ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರೆಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ಇಬ್ರಾಹಿಂ ಅಡ್ಕಸ್ಥಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದ ಆರ್ಥಿಕ ಸುರಕ್ಷತೆಗಾಗಿ ಪ್ರಧಾನಿ ರಾಷ್ಟ್ರೀಯ ಕರೆ ಸ್ವಾಗತಾರ್ಹ: ಶಶಾಂಕ್ ಶಿವತ್ತಾಯ

ಉಡುಪಿ: ಜಾಗತಿಕ ಆರ್ಥಿಕ ಅಸ್ಥಿರತೆಯ ಹಿನ್ನೆಲೆಯಲ್ಲಿ ದೇಶದ ಹಿತದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರು ಜನತೆಗೆ ನೀಡಿರುವ ಆರ್ಥಿಕ ಶಿಸ್ತಿನ ಕರೆ ಅತ್ಯಂತ ದೂರದರ್ಶಿತ್ವದ ನಡೆಯಾಗಿದೆ ಎಂದು ಬಿಜೆಪಿ ಜಿಲ್ಲಾ ಮಾಧ್ಯಮ ಪ್ರಮುಖ್ ಶಶಾಂಕ್ ಶಿವತ್ತಾಯ ತಿಳಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಮೆರಿಕಾ, ಇಸ್ರೇಲ್ ಮತ್ತು ಇರಾನ್ ನಡುವಿನ ಉದ್ವಿಗ್ನತೆಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಮೂಡಿದೆ. ಭಾರತವು ತನ್ನ ಇಂಧನ ಅಗತ್ಯದ ಶೇ. 85ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದು, ತೈಲ ದರ ಏರಿಕೆಯು ದೇಶದ ಬೊಕ್ಕಸಕ್ಕೆ ದೊಡ್ಡ ಹೊರೆಯಾಗಲಿದೆ. ಈ ಸಂದರ್ಭದಲ್ಲಿ ಅನಗತ್ಯ ಚಿನ್ನದ ಖರೀದಿ ಮುಂದೂಡುವುದು, ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡುವುದು ಮತ್ತು ಸಾಧ್ಯವಿದ್ದಲ್ಲಿ 'ವರ್ಕ್ ಫ್ರಮ್ ಹೋಮ್' ಅಳವಡಿಸಿಕೊಳ್ಳುವ ಮೂಲಕ ಇಂಧನ ಉಳಿತಾಯಕ್ಕೆ ಒತ್ತು ನೀಡಬೇಕಿದೆ. ವಾರ್ಷಿಕ 900 ಟನ್ ಚಿನ್ನ ಆಮದು ಮಾಡಿಕೊಳ್ಳಲು ಸುಮಾರು 60 ಬಿಲಿಯನ್ ಡಾಲರ್ ವಿದೇಶಿ ವಿನಿಮಯ ಖರ್ಚಾಗುತ್ತಿದೆ. ಪ್ರಧಾನಿಯವರ ಮನವಿಯಂತೆ ವೆಚ್ಚಗಳನ್ನು ನಿಯಂತ್ರಿಸಿದರೆ ವಿದೇಶಿ ವಿನಿಮಯ ಸಂಗ್ರಹ ಉಳಿದು, ರೂಪಾಯಿ ಮೌಲ್ಯ ಬಲಗೊಳ್ಳಲಿದೆ. ಇದು ಕೇವಲ ಮನವಿಯಲ್ಲ, ದೇಶಭಕ್ತಿಯ ಕರೆ ಎಂದು ಶಶಾಂಕ್ ಶಿವತ್ತಾಯ ಹೇಳಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ| ಸೇಸಿ ಎಲ್. ಶೆಡ್ತಿ ಸ್ಮರಣಾರ್ಥ ಮನೆಯವರು, ಬೆಜ್ಜೊಟ್ಟು ಹೌಸ್, ಕುಂಜತ್ತಬೈಲು.
2. ಯೋಗೀಶ್ ಭಾರ್ಗವ, ಜೆ.ಪಿ. ನಗರ, ಬೆಂಗಳೂರು– ಕಟೀಲು ಪಿ.ಯು. ಕಾಲೇಜ್ ವಠಾರದಲ್ಲಿ.
3. ಪ್ರಮೋದ್, ಅಮಿತ, ಅಡ್ದೂರು, ನೂಯಿ ವಯಾ ಪೊಳಲಿ.
4. ದಿ| ನೋಣಯ್ಯ ಶೆಟ್ರ ಸ್ಮರಣಾರ್ಥ ಪತ್ನಿ, ಮಕ್ಕಳು, ಕೆಳಗಿನ ಮನೆ, ಮುತ್ತೂರು, ಕುಳವೂರು – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
5. ರಿತೇಶ್ ಮಿಥಿಲಾ ಶೆಟ್ಟಿ, ಮಾಡೂರುಗುತ್ತು, ಕೋಟೆಕಾರ್ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
6. ಲೀಲಾ ದೇವಾಡಿಗ ಮತ್ತು ಫೇಮಿಲಿ, ಪಡುಪದವು ಹೌಸ್, ಪೆಡ್ಡಿಯಂಗಡಿ ಬಳಿ ವಯಾ ಕಾಟಿಪಳ್ಳ.
7. ಯಶೋದ ಕಾಂತಪ್ಪ ಪೂಜಾರಿ, ಬಟ್ಟಿಹಿತ್ಲು ಮನೆ, ಅಮ್ಟೂರು, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಆಲೂರು ಸೆಳೆಕೋಡು
ಪ್ರೀತಂ ಶೆಟ್ಟಿ, ಅಯ ಜಯರಾಮ ಶೆಟ್ಟಿ
ಶ್ರೀನಪ್ಪ ಶೆಟ್ಟಿ ಮನೆ, ಶ್ರೀ ದುರ್ಗಾ

ಶ್ರೀ ಪೆರ್ಡೂರು ಮೇಳ
ಪೆರ್ಡೂರು-ಪಕ್ಕಾಲಿನಲ್ಲಿ
ಪೆರ್ಡೂರು ಕ್ಷೇತ್ರ ಮಹಾತ್ಮೆ

ಶ್ರೀ ಹನುಮಗಿರಿ ಮೇಳ
ಉಪ್ಪುಂದದಲ್ಲಿ

ಶ್ರೀ ಪಾವಂಜೆ ಮೇಳ
ನಾಗವೃಜ ಕ್ಷೇತ್ರ ಪಾವಂಜೆಯಲ್ಲಿ
ಪಾರ್ಥ ಏವ ಧನುರ್ಧರಃ

ಮೂರ್ನಾಡು: ನಾಳೆಯಿಂದ ಕೊಡವ ಭಾಷಿಕ ಸಮುದಾಯಗಳ ಕ್ರೀಡಾಕೂಟ

ಮಡಿಕೇರಿ: ಕೊಡವ ಭಾಷಿಕ ಸಮುದಾಯಗಳ ಕೂಟದಿಂದ ಇದೇ ಪ್ರಥಮ ಬಾರಿಗೆ ಕೊಡವ ಭಾಷಿಕ 21 ಸಮುದಾಯಗಳನ್ನು ಒಳಗೊಂಡ ಕ್ರೀಡಾಕೂಟ ಮೇ 15 ರಿಂದ 17ರ ವರೆಗೆ ಮೂರ್ನಾಡುವಿನಲ್ಲಿ ನಡೆಯಲಿದೆ.

ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಕ್ರೀಡಾಕೂಟದ ವಿವರಗಳನ್ನು ನೀಡಿದ ಕೊಡವ ಭಾಷಿಕ ಸಮುದಾಯಗಳ ಕೂಟದ ಅಧ್ಯಕ್ಷ ಡಾ.ಮೇಚೀರ ಸುಭಾಷ್ ನಾಣಯ್ಯ ಅವರು, ಮೇ15 ರಂದು ಬೆಳಗ್ಗೆ 10 ಗಂಟೆಗೆ ಮೂರ್ನಾಡು ಪಿಯು ಕಾಲೇಜಿನ ಬಾಚೆಟ್ಟಿರ ದಿ.ಬಾಲು ಮುದ್ದಯ್ಯ ಆಟದ ಮೈದಾನದಲ್ಲಿ ಕ್ರೀಡಾಕೂಟವನ್ನು 21 ಕೊಡವ ಭಾಷಿಕ ಜನಾಂಗದ ಸಮಾಜಗಳ ಅಧ್ಯಕ್ಷರು ಉದ್ಘಾಟಿಸಲಿದ್ದಾರೆ ಎಂದರು.

21 ತಂಡಗಳ ನಡುವೆ ಕ್ರಿಕೆಟ್: ಕ್ರೀಡಾಕೂಟದಲ್ಲಿ ಪ್ರಮುಖವಾಗಿ ಕೊಡವ ಭಾಷಿಕ ಸಮುದಾಯಗಳ ತಲಾ ಒಂದು ತಂಡದಂತೆ ಒಟ್ಟು 21 ತಂಡಗಳ ನಡುವೆ 6 ಓವರ್‌ಗಳಿಗೆ ಸೀಮಿತವಾದ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಆರಂಭಿಕ ದಿನದಂದು ಪ್ರದರ್ಶನ ಪಂದ್ಯದ ಬಳಿಕ ಪಂದ್ಯಾವಳಿ ಆರಂಭಗೊಳ್ಳಲಿದೆ. ಮೇ 16ರಂದು ಕ್ರಿಕೆಟ್‌ನೊಂದಿಗೆ ಹಗ್ಗಜಗ್ಗಾಟ ಸ್ಪರ್ಧೆಗಳನ್ನು ಆಯೋಜಿಸಲಾಗಿದೆಯೆಂದು ಹೇಳಿದರು.

ಮೇ17 ರಂದು ಕೊಡವ ಭಾಷಿಕ ಜನಾಂಗದ 18 ವರ್ಷ ಮೇಲ್ಪಟ್ಟ ಪುರುಷರು ಮತ್ತು ಮಹಿಳೆಯರಿಗಾಗಿ 2 ಕಿ.ಮೀ.ನ ಮ್ಯಾರಥಾನ್ ಓಟದ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆ ಅಂದು ಬೆಳಗ್ಗೆ 8 ಗಂಟೆಗೆ ಬಾಡಗದ ನೆಲ್ಲಿಮಾನಿ ಶ್ರೀ ಈಶ್ವರ ದೇವಸ್ಥಾನದ ಮುಂಭಾಗದಿಂದ ಮೂರ್ನಾಡು ಪಿ.ಯು.ಕಾಲೇಜು ಮೈದಾನದವರೆಗೆ ನಡೆಯಲಿದೆ. ಮ್ಯಾರಥಾನ್ ಸ್ಪರ್ಧೆಯನ್ನು ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಉದ್ಘಾಟಿಸಲಿದ್ದಾರೆಂದು ತಿಳಿಸಿದರು.

ಗೋಷ್ಠಿಯಲ್ಲಿ ಕೂಟದ ಗೌರವ ಕಾರ್ಯದರ್ಶಿ ಕೂಡಂಡ ಸಾಬ ಸುಬ್ರಮಣಿ, ಉಪಾಧ್ಯಕ್ಷರಾದ ಪೊನ್ನೀರ ಗಗನ್, ಕುಡಿಯರ ಬೋಪಯ್ಯ, ಸಹ ಕಾರ್ಯದರ್ಶಿ ಬಾಳೆಕುಟ್ಟಡ ಉದಯ್ ಮಾದಪ್ಪ ಉಪಸ್ಥಿತರಿದ್ದರು.

ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ | ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಸೂಚನೆ

ಮುಂಗಾರು ಸಂದರ್ಭ ಅಗತ್ಯ ಮುನ್ನೆಚ್ಚರ

ಮಡಿಕೇರಿ: ಜೂನ್ ಮೊದಲ ಅಥವಾ ಎರಡನೇ ವಾರದಲ್ಲಿ ಕೊಡಗು ಜಿಲ್ಲೆಗೆ ಮುಂಗಾರು ಪ್ರವೇಶವಾಗುವ ಸಾಧ್ಯತೆ ಇದ್ದು, ಆ ದಿಸೆಯಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಸೂಚಿಸಿದ್ದಾರೆ.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ 'ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಕಾರ' ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಬಾರಿ ಜನವರಿಯಿಂದ ಇಲ್ಲಿಯವರೆಗೆ ಶೇ. 50ಕ್ಕಿಂತಲೂ ಕಡಿಮೆ ಮಳೆಯಾಗಿದೆ. ಆದರೂ ಮಳೆಗಾಲದ ಅವಧಿಯಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇರುವುದರಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ ವಹಿಸಬೇಕಿದೆ. ಆ ನಿಟ್ಟಿನಲ್ಲಿ ಈ ಹಿಂದಿನಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪ್ರವಾಹ ಪೀಡಿತ ಹಾಗೂ ಭೂಕುಸಿತ ಪ್ರದೇಶ ಸೇರಿದಂತೆಸೂಕ್ಷ್ಮ ಪ್ರದೇಶಗಳನ್ನುಈಗಾಗಲೇಗುರುತಿಸಲಾಗಿದ್ದು, ಅಂತಹ ಪ್ರದೇಶಗಳಲ್ಲಿ ಹೆಚ್ಚಿನ ಎಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಈಗಾಗಲೇ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ನೋಡಲ್ ಅಧಿಕಾರಿಗಳು, ತಹಶೀಲ್ದಾರರು, ತಾ.ಪಂ.ಇಒಗಳು, ಸ್ಥಳೀಯ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್, ಸ್ಥಳೀಯ ಇಂಜಿನಿಯರ್‌ಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ತಾಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ಸಭೆ ನಡೆಸಬೇಕಿದ್ದು, ಆ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿಯೂ ಸಹ ಸಭೆ ನಡೆಸಿ ಪ್ರವಾಹ ಪೀಡಿತ ಹಾಗೂ ಭೂಕುಸಿತ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರ ವಹಿಸಲು ಮಾಹಿತಿ ನೀಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಸಲಹೆ ಮಾಡಿದರು.

ಶಾಲಾ–ಕಾಲೇಜು ಹಾಗೂ ಸರ್ಕಾರಿ ಕಟ್ಟಡಗಳ ಸುಸ್ಥಿತಿ ಬಗ್ಗೆ ವರದಿ ನೀಡಬೇಕು. ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಸಹಾಯವಾಣಿ ಕೇಂದ್ರವಿದ್ದು, ತಾಲ್ಲೂಕು ಮಟ್ಟದಲ್ಲಿಯೂ ಸಹ ಸಹಾಯವಾಣಿ ಕೇಂದ್ರ ಆರಂಭಿಸಬೇಕು. ಮಳೆಗಾಲದ ಅವಯಲ್ಲಿ ಸಹಾಯವಾಣಿ ಕೇಂದ್ರದಲ್ಲಿ ದಿನದ 24 ಗಂಟೆ ಅವಯಲ್ಲಿ ಮೂರು ಪಾಳಿಯಲ್ಲಿ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಅವರು ಸೂಚಿಸಿದರು.

ಈಗಾಗಲೇ ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣಾಸಂಸ್ಥೆ(ಜಿಎಸ್‌ಐ) ನೀಡಿರುವಮಾಹಿತಿಯಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಕಂದಾಯ, ಲೋಕೋಪಯೋಗಿ, ಪಂಚಾಯತ್ ರಾಜ್, ಪೌರಾಡಳಿತ, ನಗರಾಭಿವೃದ್ಧಿ, ಸೆಸ್ಕ್, ಅರಣ್ಯ, ಹೀಗೆ ವಿವಿಧ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಹಾನಿ ಸಂಬಂಧಿಸಿದಂತೆ ಆಯಾಯ ಸಂದರ್ಭದಲ್ಲಿ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ರಸ್ತೆ ಬದಿ ಮರ ಬೀಳುವುದು, ವಿದ್ಯುತ್ ಕಂಬ ಬದಲಿಸುವುದು, ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಬೇಕು. ಪ್ರವಾಹ ಪೀಡಿತ ಹಾಗೂ ಸೂಕ್ಷ್ಮ ಪ್ರದೇಶದಲ್ಲಿನ ಕುಟುಂಬಗಳ ಬಗ್ಗೆ ಮಾಹಿತಿ ಇರಬೇಕು. ಹೆಚ್ಚಿನ ಮಳೆಯಿಂದ ಪ್ರವಾಹ ಹಾಗೂ ಭೂಕುಸಿತ ಉಂಟಾದಲ್ಲಿ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲು ಅಗತ್ಯ ಸಿದ್ಧತೆ ಮಾಡಿಕೊಂಡಿರಬೇಕು ಎಂದು ಜಿಲ್ಲಾಧಿಕಾರಿ ಅವರು ನುಡಿದರು.

ಎನ್‌ಸಿಸಿ, ಎನ್‌ಎಸ್‌ಎಸ್, ರೆಡ್‌ಕ್ರಾಸ್ ಸಂಸ್ಥೆ, ಮಾಜಿ ಸೈನಿಕರು, ಸ್ವಯಂ ಪ್ರೇರಣೆಯಿಂದ ಪ್ರಾಕೃತಿಕ ವಿಕೋಪ ನಿರ್ವಹಣಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವವರ ಸಹಕಾರವನ್ನು ಪಡೆಯುವಂತಾಗಬೇಕು ಎಂದು ಜಿಲ್ಲಾಧಿಕಾರಿ ಅವರು ಸಲಹೆ ಮಾಡಿದರು.

ಕಾಳಜಿ ಕೇಂದ್ರದಲ್ಲಿ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಶೌಚಾಲಯ ಮತ್ತಿತರ ಮೂಲ ಸೌಲಭ್ಯ ಇರಬೇಕು ಎಂದು ಅವರು ಹೇಳಿದರು.

ಕೆಲವು ಸಂದರ್ಭದಲ್ಲಿ ಮಾರುತಗಳ ಅಲೆಯಿಂದಾಗಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಈ ಬಗ್ಗೆಯು ಸಹ ಸ್ಥಳೀಯರಿಗೆ ಮಾಹಿತಿ ನೀಡುವಂತಾಗಬೇಕು. ಮಳೆಗಾಲದ ಅವಧಿಯಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಕ್ರಮವಹಿಸಬೇಕು. ಅಗತ್ಯ ಔಷಧ ದಾಸ್ತಾನು ಇರಬೇಕು ಎಂದರು.

'ಸಾಮಾಜಿಕ ಮಾಧ್ಯಮಗಳ ಮೂಲಕ ಸುಳ್ಳು ಸಂದೇಶಗಳು ಹೋಗದಂತೆ ಗಮನಹರಿಸಬೇಕು. ಆ ನಿಟ್ಟಿನಲ್ಲಿ ಜಿಲ್ಲಾಡಳಿತ ವತಿಯಿಂದ ಕಾಲ ಕಾಲಕ್ಕೆ ಮಾಹಿತಿ ನೀಡಲಾಗುವುದು ಎಂದ ಜಿಲ್ಲಾಧಿಕಾರಿ, ಜನ–ಜಾನುವಾರು ರಕ್ಷಣೆ ಅತೀ ಮುಖ್ಯವಾಗಿದ್ದು, ಆ ನಿಟ್ಟಿನಲ್ಲಿ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅವರು ಸಲಹೆ ಮಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ಮಾತನಾಡಿ, ಈಗಾಗಲೇ ಪೊಲೀಸ್ ಇಲಾಖೆಯಿಂದ ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ. ಪೊಲೀಸ್ ಇಲಾಖೆಯಿಂದ ನಾಲ್ಕು ತಂಡಗಳನ್ನು ರಚಿಸಲಾಗಿದ್ದು, ಅಗ್ನಿಶಾಮಕ, ಅರಣ್ಯ, ವಿದ್ಯುತ್ ಇಲಾಖೆ ಸೇರಿದಂತೆ ಎಲ್ಲಾ ಹಂತದ ಅಧಿಕಾರಿಗಳು ಸ್ಥಳೀಯವಾಗಿ ಪೊಲೀಸ್ ಠಾಣಾ ಅಧಿಕಾರಿ ಜೊತೆ ಸಮನ್ವಯತೆ ಸಾಧಿಸಿ ಕಾರ್ಯನಿರ್ವಹಿಸಬೇಕು ಎಂದು ಅವರು ಕೋರಿದರು.

ಮಳೆಗಾಲದಲ್ಲಿ ರಕ್ಷಣೆ ಮತ್ತು ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಗಂಬೂಟ್, ಲೈಫ್ ಜಾಕೇಟ್, ಟಾರ್ಚ್, ಮತ್ತಿತರ ವಸ್ತುಗಳು ಜೊತೆಯಲ್ಲಿ ಇರಬೇಕು. ಜೆಸಿಬಿ, ಕ್ರೇನ್, ಜೀಪು, ಮತ್ತಿತರ ಸಂಬಂಧ ಸ್ಥಳೀಯವಾಗಿ ವಾಹನ ಮಾಲೀಕರ ದೂರವಾಣಿ ಸಂಖ್ಯೆಗಳನ್ನು ಜತನ ಮಾಡಿಕೊಂಡಿರಬೇಕು. ನೋಡಲ್ ಅಧಿಕಾರಿಗಳು ಸ್ಥಳೀಯ ಪೊಲೀಸ್ ಠಾಣೆ ಅಧಿಕಾರಿಗಳ ಜೊತೆ ಸಮನ್ವಯ ಸಾಸಬೇಕು ಎಂದರು.

'ಜಿ.ಪಂ.ಸಿಇಒ ಆನಂದ ಪ್ರಕಾಶ್ ಮೀನಾ ಅವರು ಮಾತನಾಡಿ, ಈ ಬಾರಿ ಕೊಡಗು ಜಿಲ್ಲೆಯಲ್ಲಿ ಅತಿ ಕಡಿಮೆ ಮಳೆಯಾಗಿದೆ. ಒಂದು ರೀತಿ ಬಿಸಿಲಿನ ವಾತಾವರಣ ಮುಂದುವರೆದಿದ್ದು, ಒಂದು ಕಡೆ ಅನಾವೃಷ್ಠಿ, ಮುಂದಿನ ದಿನಗಳಲ್ಲಿ ಅತೀವೃಷ್ಠಿಯೂ ಸಂಭವಿಸಬಹುದು. ಹೀಗೆ ಎರಡರ ಬಗ್ಗೆಯೂ ಸಹ ಅವಲೋಕನ ಮಾಡಬೇಕಿದೆ ಎಂದು ಅವರು ತಿಳಿಸಿದರು.

ತಾಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ಕಾರ್ಯಪಡೆ ಸಮಿತಿ ಸಭೆ ನಡೆಸಿ, ಸಲಹೆ, ಮಾರ್ಗದರ್ಶನ ಪಡೆಯಬೇಕು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಸಹನಾ ಎಸ್.ಹಾದಿಮನಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಜಗನ್ನಾಥ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಕೃಷ್ಣಮೂರ್ತಿ, ಕಿರಣ್ ಗೌರಯ್ಯ, ಸಂಜನಾ, ಶ್ರೀಧರ, ಸೆಸ್ಕ್ ಇಇ ರಾಮಚಂದ್ರ, ಲೋಕೋಪಯೋಗಿ ಇಲಾಖೆ ಇಇ ಕೆ.ಟಿ.ಪ್ರಭು, ಜಿ.ಪಂ.ಇಇ ಜಿ.ಕೆ.ನಾಯಕ್, ಪೊಲೀಸ್ ಇನ್ಸ್‌ಪೆಕ್ಟರ್ ಐ.ಪಿ.ಮೇದಪ್ಪ, ತಾ.ಪಂ. ಇಒಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇತರರು ಹಲವು ಮಾಹಿತಿ ನೀಡಿದರು.

ನಂದಿನಿ ನದಿ ಮಾಲಿನ್ಯ: ಸಹಾಯಕ ಆಯುಕ್ತರ ಭೇಟಿ

ಸುರತ್ಕಲ್: ಚೇಲಾರು ಸಮೀಪದ ಖಂಡಿಗೆ ಬಳಿ ನಂದಿನಿ ನದಿಯು ಒಳಚರಂಡಿ ನೀರಿನ ಹರಿವಿನಿಂದ ಕಲುಷಿತವಾಗುತ್ತಿದ್ದು, ನಂದಿನಿ ನದಿ ಉಳಿಸಿ ಹೋರಾಟ ಸಮಿತಿ ಹೋರಾಟ ಹಾಗೂ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರ ಸೂಚನೆ ಮೇರೆಗೆ ಮಂಗಳೂರು ಸಹಾಯಕ ಆಯುಕ್ತೆ ಮೀನಾಕ್ಷಿ ಆರ್ಯ ಅವರಿಗೆ ಸ್ಥಳ ಪರಿಶೀಲನೆ ನಡೆಸುವಂತೆ ಸೂಚಿಸಿದ್ದು, ಸೂಚನೆಯಂತೆ ಸಹಾಯಕ ಆಯುಕ್ತರು ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿದರು.

ಈ ಸಂದರ್ಭ ಮಾಹಿತಿ ನೀಡಿದ ನಂದಿನಿ ನದಿ ಉಳಿಸಿ ಹೋರಾಟ ಸಮಿತಿ ಸದಸ್ಯರು, ಇತಿಹಾಸ ಪ್ರಸಿದ್ಧ ಚೇಳ್ಯೈರು ಖಂಡಿಗೆಯ ನಂದಿನಿ ನದಿಗೆ ಮುಂಚೂರು ವೆಟ್‌ವೆಲ್ ಬಳಿಯ ಒಳಚರಂಡಿ ಕೊಳಚೆ ನೀರು, ಕೊಡಿಪಾಡಿಯಲ್ಲಿ ನಿರ್ಮಾಣವಾಗಿರುವ ತ್ಯಾಜ್ಯ ಸಂಸ್ಕರಣಾ ಘಟಕದ ನೀರು, ಚೊಕ್ಕಬೆಟ್ಟು ಪರಿಸರದ ಮನೆಗಳ ತ್ಯಾಜ್ಯ ನೀರು ಹಾಗೂ ಖಾಸಗಿ ಕಟ್ಟಡಗಳ, ಹೋಟೆಲ್‌ಗಳ ತ್ಯಾಜ್ಯ ನದಿಗೆ ಸೇರುತ್ತಿರುವುದರಿಂದ ನಂದಿನಿ ನದಿಯಲ್ಲಿ ಮಾಲಿನ್ಯ ಹೆಚ್ಚುತ್ತಿದ್ದು ಇದರಿಂದ ಚೇಳ್ಯೈರು ಖಂಡಿಗೆ ಭಾಗದ ಕೃಷಿಯನ್ನೇ ಅವಲಂಬಿತ ಕುಟುಂಬಗಳು ಕೃಷಿ ಮಾಡಲಾಗದ ಪರಿಸ್ಥಿತಿ ಎದುರಾಗಿದೆ. ಕುಡಿಯುವ ನೀರಿಗೂ ಸಮಸ್ಯೆಯಾಗಿದ್ದು, ಬಾವಿಗಳು ಮಲಿನಗೊಂಡಿವೆ. ಇತಿಹಾಸ ಪ್ರಸಿದ್ಧ ಖಂಡಿಗೆ ದೈವಸ್ಥಾನದ ಮೀನು ಹಿಡಿಯುವ ವಿಶೇಷ ಜಾತ್ರೆಯೂ ನಿಲ್ಲುವ ಹಂತ ತಲುಪಿದೆ. ಜಾನುವಾರುಗಳಿಗೆ ನೀರು ಕುಡಿಯಲು ಮತ್ತು ಮೇವು ತಿನ್ನಲು ಕಷ್ಟವಾಗಿದೆ. ನಂದಿನಿ ನದಿ ಸಂರಕ್ಷಣಾ ಸಮಿತಿ ಖಂಡಿಗೆ ಚೇಳ್ಯೈರು ಸೇರಿ ಜಿಲ್ಲಾಡಳಿತ ಮತ್ತು ಪರಿಸರ ಇಲಾಖೆ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಗಿತ್ತು. ಬಳಿಕ ಲೋಕಾಯುಕ್ತ ತನಿಖೆಯಾಗಿ ಆದೇಶವಿದ್ದರೂ ಸ್ವಚ್ಛತೆ ಕಾರ್ಯ ಕುಂಠಿತವಾಗಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಆಯುಕ್ತರು, ತಕ್ಷಣ ನಗರ ಪಾಲಿಕೆ ಮತ್ತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ಮಂಗಳೂರು ತಹಶೀಲ್ದಾರ್ ರಮೇಶ್ ಬಾಬು, ಕಂದಾಯ ಅಧಿಕಾರಿ ಪ್ರಸಾದ್, ಚೇಳ್ಯೈರು ಗ್ರಾಮ ಆಡಳಿತ ಅಧಿಕಾರಿ ಸುಲೋಚನಾ, ನಗರ ಪಾಲಿಕೆ ಅಧಿಕಾರಿಗಳಾದ ಲಾವಣ್ಯ, ಶಿವಲಿಂಗಪ್ಪ, ಯತೀಶ್, ಪರಿಸರ ಇಲಾಖೆ ಅಧಿಕಾರಿಗಳು, ಚೇಳ್ಯೈರು ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಜಯಾನಂದ, ಮಾಜಿ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ, ಮಾಜಿ ಸದಸ್ಯ ಸುಧಾಕರ ಶೆಟ್ಟಿ, ನಂದಿನಿ ನದಿ ಸಂರಕ್ಷಣಾಸಮಿತಿಯ ಸುಕೇಶ್ ಶೆಟ್ಟಿ ಖಂಡಿಗೆ, ನಿತಿನ್ ಶೆಟ್ಟಿ ಖಂಡಿಗೆ, ವಾಸುದೇವ ಶೆಟ್ಟಿ ಖಂಡಿಗೆ, ಚರಣ್ ಕುಮಾರ್, ಸುನೀಲ್ ಶೆಟ್ಟಿ ಚೇಳ್ಯೈರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಾಮಗಾರಿ: ವಾಹನ ಸಂಚಾರ ನಿಷೇಧ

ಕಾಸರಗೋಡು: ಧರ್ಮತಡ್ಕ – ಕನಿಯಾಲ –ಬೆಳ್ಳೂರು – ಬೆರಿಪದವು ರಸ್ತೆಯ ಬೆಳ್ಳೂರು ಸೇತುವೆಯ ಬಳಿ ತಡೆಗೋಡೆ ನಿರ್ಮಾಣ ಕಾರ್ಯ ನಡೆಯುತ್ತಿರುವುದರಿಂದ ಮೇ 14 ರಿಂದ ಜೂನ್ 30ರ ವರೆಗೆ ರಸ್ತೆ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಬಾಯರ್‌ಪದವು ಬೆಳ್ಳೂರು ಬದಿಗೆ ಹೋಗಲು ಸೂರಂಬಲ ಪೆರೋಡಿ ಕಲ್ಲಗದ್ದೆ ಮಾರ್ಗವಾಗಿ ಹೋಗಬೇಕು ಎಂದು ಕಾಸರಗೋಡು ರಸ್ತೆಗಳ ಉಪವಿಭಾಗದ ಸಹಾಯಕ ಇಂಜಿನಿಯರ್ ತಿಳಿಸಿದ್ದಾರೆ.

ಸಂಚಾರ ನಿಷೇಧ

ಕಾಂಕ್ರೀಟಿಂಗ್ ಕಾಮಗಾರಿಯ ಅಂಗವಾಗಿ ಪಡನ್ನಕ್ಕಾಡ್‌ನ ನಂಬ್ಯಾರ್‌ಕಾಲ್ ರಸ್ತೆಯ ಉಳಿದ ಭಾಗವನ್ನು ಮೇ 13ರಿಂದ ಜೂನ್ 10ರ ವರೆಗೆ ಮುಚ್ಚಲಾಗುವುದು ಎಂದು ಕಾಞಂಗಾಡ್ ನಗರಸಭಾ ಕಾರ್ಯದರ್ಶಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೀರಿಕ್ಕಾಡು ಯಕ್ಷಗಾನ ಸಾಂಸ್ಕೃತಿಕ ಅಧ್ಯಯನ ಕೇಂದ್ರದಲ್ಲಿ 'ಚಿಣ್ಣರ ಮೇಳ'

ಮಂಗಳೂರು: ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘದ ಕೀರಿಕ್ಕಾಡು ಯಕ್ಷಗಾನ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ಆಶ್ರಯದಲ್ಲಿ 'ಚಿಣ್ಣರ ಮೇಳ'ದ ಕಲಿಕಾ ಶಿಬಿರವು ಯಶಸ್ವಿಯಾಗಿ ಜರಗಿತು.



ಬನಾರಿ ಕೇಂದ್ರದ ನೃತ್ಯ ಗುರು ಸರೋಜಿನಿ ಬನಾರಿ ಮತ್ತು ರಂಗಭೂಮಿ ಕಲಾವಿದೆ ಸುಸ್ಮಿತಾ ಮೋಹನ್ ಅವರು ಕಲಾ ಮನೋವಿಕಾಸ ಮತ್ತು ಮಕ್ಕಳ ಮನೋಸ್ಥೈರ್ಯ ವೃದ್ಧಿಯನ್ನು ಗುರಿಯಾಗಿರಿಸಿ ಆರು ದಿನಗಳ ಬೇಸಿಗೆ ಶಿಬಿರವನ್ನು ನಡೆಸಿಕೊಟ್ಟರು.

ಯಕ್ಷಗುರು ವಿಶ್ವವಿನೋದ ಬನಾರಿ ಅವರ ಮಾರ್ಗದರ್ಶನದಲ್ಲಿ ಮೂಡಿಬಂದ ಈ ಶಿಬಿರದಲ್ಲಿ ಸಂಘದ ಕಲಾವಿದರು ಮತ್ತು ಆಸಕ್ತ ಶಿಬಿರಾರ್ಥಿ ಮಕ್ಕಳ ಸಮ್ಮಿಲನದೊಂದಿಗೆ 'ದಕ್ಷಾಧ್ವರ' ಯಕ್ಷಗಾನ ತಾಳಮದ್ದಳೆ ಏರ್ಪಡಿಸಲಾಗಿತ್ತು.

ರಚನಾ ಚಿದ್ಗಲ್ ಮತ್ತು ಎಳೆಯ ಪ್ರತಿಭೆ ಸಾಯಿ ನಕ್ಷತ್ರ ಮಜಿಕೋಡಿ ಅವರ ಭಾಗವತಿಕೆಗೆ ಮಂಡೆಕೋಲು ಅಪ್ಪಯ್ಯ ಮಣಿಯಾಣಿ, ವಿಷ್ಣು ಶರಣ ಬನಾರಿ, ನಾರಾಯಣ ಪಾಟಾಳಿ ಮಯ್ಯಾಳ, ಕೃಷ್ಣ ಪ್ರಸಾದ್ ಬೆಳ್ಳಿಪ್ಪಾಡಿ ಅವರು ಚೆಂಡೆ ಮದ್ದಳೆ ಚಕ್ರತಾಳದಲ್ಲಿ ಸಹಕರಿಸಿದರು. ಅರ್ಥಧಾರಿಗಳಾಗಿ ಎಂ. ಬಾಲಕೃಷ್ಣ ಗೌಡ ಮುದಿಯಾರು, ರಮಾನಂದ ರೈ ದೇಲಂಪಾಡಿ, ವೀರಪ್ಪ ಸುವರ್ಣ ಬೆಳ್ಳಿಪ್ಪಾಡಿ, ಸಂಜೀವ ರಾವ್ ಮಯ್ಯಾಳ, ಪದ್ಮನಾಭ ಕೃಷ್ಣ ಸಿಂಧೂರ ಮಯ್ಯಾಳ, ಹಸ್ತ ಬೆಳ್ಳಿಪ್ಪಾಡಿ ಹಳೇಮನೆ, ಪ್ರತಿಮಾ ಸಾಲಿಯಾನ್ ಕಲ್ಲಡ್ಕ, ಸಂಜನಾ ರೆಂಜಾಳ, ಲಿಶ್ರ ಬೆಳ್ಳಿಪ್ಪಾಡಿ, ಶ್ರಾವ್ಯಶ್ರೀ ಚೆಂಡೆಮೂಲೆ, ಪೃಥ ಕಟ್ಟಪುಣಿ ಸುಧೀರ್, ಮಾಸ್ಟರ್ ಸಚಿತ್ ಚೆಂಡಮೂಲೆ, ತಶ್ರಿ ಬೆಳ್ಳಿಪ್ಪಾಡಿ ಹಳೆಮನೆ ಭಾಗವಹಿಸಿದರು.

ಸ್ಥಳ ಸಾನಿಧ್ಯ ಶ್ರೀ ಗೋಪಾಲಕೃಷ್ಣ ದೇವರ ಪೂಜೆ, ಗೀತಾ ಪಾರಾಯಣ, ಸಾನಿಧ್ಯ ರೆಂಜಾಳ ಅವರ ಭಾಗವತಿಕೆಯ ಪ್ರಥಮ ರಂಗಪ್ರವೇಶದೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ನಂದಕಿಶೋರ ಬನಾರಿ ವಂದಿಸಿದರು.

ಕಿರು ಸುದ್ದಿ

ಮೇ17: ರಾಶಿ ರಾಜೇಶ್ ಹೆಗ್ಡೆ ಭರತನಾಟ್ಯ ರಂಗಪ್ರವೇಶ

ಮಂಗಳೂರು: ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್ ನಿರ್ದೇಶಕ ವಿದ್ವಾನ್ ಯು.ಕೆ. ಪ್ರವೀಣ್ ಅವರ ಶಿಷ್ಯೆ ರಾಶಿ ರಾಜೇಶ್ ಹೆಗ್ಡೆ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಮೇ 17ರಂದು ಸಂಜೆ 4.30ಕ್ಕೆ ಮಂಗಳೂರಿನ ಕುದ್ಮಲ್ ರಂಗರಾವ್ ಪುರಭವನದಲ್ಲಿ ನಡೆಯಲಿದೆ.

ಸುಮಾರು 13 ವರ್ಷಗಳಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿರುವ ರಾಶಿ ರಾಜೇಶ್ ಹೆಗ್ಡೆ ಅವರು ಪುಷ್ಪಾಂಜಲಿ, ಶ್ಲೋಕ, ಜತಿಸ್ವರ, ವರ್ಣಂ, ಪದಂ, ದೇವಿಸ್ತುತಿ ಹಾಗೂ ತಿಲ್ಲಾನ ಸೇರಿದಂತೆ ಭರತನಾಟ್ಯದ ವಿವಿಧ ಮಾರ್ಗ ಪದ್ಧತಿಯ ನೃತ್ಯಗಳನ್ನು ಪಂದನಲ್ಲೂರು ಶೈಲಿಯಲ್ಲಿ ಸುಮಾರು ಮೂರು ಗಂಟೆಗಳ ಕಾಲ ಪ್ರದರ್ಶಿಸಲಿದ್ದಾರೆ ಎಂದು ವಿದ್ವಾನ್ ಯು.ಕೆ. ಪ್ರವೀಣ್ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ರಂಗಪ್ರವೇಶ ಕಾರ್ಯಕ್ರಮಕ್ಕೆ ನಟ್ಟುವಾಂಗದಲ್ಲಿ ಗುರು ವಿದ್ವಾನ್ ಯು.ಕೆ. ಪ್ರವೀಣ್, ಗಾಯನದಲ್ಲಿ ವಿದುಷಿ ಉಷಾ ಪ್ರವೀಣ್ ಹಾಗೂ ಕುಮಾರಿ ಆರಾಧನಾ ಎನ್.ಕೆ., ಮೃದಂಗದಲ್ಲಿ ವಿದ್ವಾನ್ ಗೀತೇಶ್ ನೀಲೇಶ್ವರಂ, ಪಿಟೀಲಿನಲ್ಲಿ ವಿದ್ವಾನ್ ಶ್ರೀಧರಾಚಾರ್ ಪಾಡಿಗಾರು, ಕೊಳಲಿನಲ್ಲಿ ವಿದ್ವಾನ್ ರಾಜಗೋಪಾಲ್ ವಿ. ಕಾಞ್ಞಂಗಾಡ್ ಹಾಗೂ ಖಂಜರದಲ್ಲಿ ವಿದ್ವಾನ್ ಯು.ಪಿ. ಶರಣ್ ಸಹಕರಿಸಲಿದ್ದಾರೆ ಎಂದು ಅವರು ಹೇಳಿದರು. ಶರವು ಮಹಾಗಣಪತಿ ದೇವಸ್ಥಾನದ ಶಿಲೇ ಶಿಲೇ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಅಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಅತಿಥಿಗಳಾಗಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಎ.ಬಿ. ಶೆಟ್ಟಿ ದಂತ ವಿಜ್ಞಾನ ಸಂಸ್ಥೆಯ ಪ್ರಾಂಶುಪಾಲ ಪ್ರೊ. ಡಾ. ಮಿತ್ರ ಎನ್. ಹೆಗ್ಡೆ ಹಾಗೂ ಜೀವ ವಿಮಾ ನಿಗಮ ಉಡುಪಿ ವಿಭಾಗದ ಹಿರಿಯ ವಿಭಾಗೀಯ ವ್ಯವಸ್ಥಾಪಕ ಗಣಪತಿ ಎನ್. ಭಟ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್ ಆರ್. ಹೆಗ್ಡೆ, ಉಷಾ ಪ್ರವೀಣ್ ಹಾಗೂ ರಾಶಿ ಆರ್. ಹೆಗ್ಡೆ ಉಪಸ್ಥಿತರಿದ್ದರು.

ಲಾರಿ ಮೇಲೆ ಮರ ಬಿದ್ದು ಎಂಟು ಮಂದಿಗೆ ಗಾಯ


ಮಡಿಕೇರಿ: ಸಿಡಿಲು ಅಬ್ಬರಕ್ಕೆ ಲಾರಿ ಮೇಲೆ ಮರ ಬಿದ್ದ ಪರಿಣಾಮ ಒರ್ವ ಕಾರ್ಮಿಕ ಗಂಭೀರವಾಗಿ ಗಾಯಗೊಂಡು, ಇತರ 7 ಕಾರ್ಮಿಕರು ಸಣ್ಣಪುಟ್ಟ ಗಾಯಗೊಂಡಿರುವ ಘಟನೆ ಕುಟ್ಟ ಪೊಲೀಸ್ ಠಾಣಾ ವ್ಯಾಪ್ತಿಯ ನಾಲ್ಕೇರಿ ಗ್ರಾಮದಲ್ಲಿ ನಡೆದಿದೆ.

ಘಟನೆಯಲ್ಲಿ ಕಾರ್ಮಿಕ ರಾಘವೇಂದ್ರ ಎಂಬವರ ಮರದ ಕೊಂಬೆ ಮತ್ತು ಲಾರಿಯ ಒಡೆದ ಗಾಜು ತಗುಲಿ ಗಾಯಗಳಾಗಿದ್ದು, ಉಳಿದಂತೆ ರಮೇಶ, ಮಹೇಶ, ವಿಜಿ, ಜಾಹಿರ್, ರಂಗ, ಕರೀಂ ಹಾಗೂ ಶಂಕರ ಎಂಬವರು ಸಣ್ಣಪುಟ್ಟ ಗಾಯಗೊಂಡಿದ್ದಾರೆ. ಲಾರಿಯಲ್ಲಿದ್ದ ಗೊಬ್ಬರವನ್ನು ನಾಲ್ಕೇರಿ ಕೃಷಿ ಪತ್ತಿನ ಸಹಕಾರ ಸಂಘದ ಗೋದಾಮಿನಲ್ಲಿ ಸಂಗ್ರಹಿಸಲು ಹಿಂದಿರುಗುತ್ತಿದ್ದಾಗ ನಾಲ್ಕೇರಿ- ಗೋಣಿಕೊಪ್ಪ ರಸ್ತೆಯಲ್ಲಿ ಈ ಘಟನೆ ನಡೆದಿದೆ. ಗಾಯಾಳುಗಳಿಗೆ ಗೋಣಿಕೊಪ್ಪ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದ್ದು, ಕುಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ


ಶೇಷಪ್ಪ ಮಡಿವಾಳ

ಸವಣೂರು : ಪಾಲ್ತಾಡಿ ಗ್ರಾಮದ ಚೆನ್ನಾವರ ನಿವಾಸಿ ದೈವಗಳ ಹಿರಿಯ ಪರಿಚಾರಕರಾದ ಶೇಷಪ್ಪ ಮಡಿವಾಳ (75) ಅವರು ಅಲ್ಪಕಾಲದ ಅಸೌಖ್ಯದಿಂದ ಮೇ 13ರಂದು ಸ್ವಗೃಹದಲ್ಲಿ ನಿಧನರಾದರು. ಶೇಷಪ್ಪ ಮಡಿವಾಳ ಅವರು 55 ವರ್ಷಗಳಿಂದ ವಿವಿಧ ಕಡೆಗಳಲ್ಲಿ ದೈವದ ಚಾಕರಿ ವರ್ಗದಲ್ಲಿ ಹಿರಿಯರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಸುದೀರ್ಘ ಈ ಕಾರ್ಯಕ್ಕೆ ವಿವಿಧ ಸಂಘ ಸಂಸ್ಥೆಗಳು ಹಾಗೂ ವಿವಿಧ ದೇವಸ್ಥಾನ, ದೈವಸ್ಥಾನಗಳಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ. ಮೃತರು ಪತ್ನಿ ಸವಣೂರು ಗ್ರಾ.ಪಂ. ಮಾಜಿ ಉಪಾಧ್ಯಕ್ಷೆ ಜಯಂತಿ ಮಡಿವಾಳ, ಮಕ್ಕಳಾದ ಲೋಕೇಶ್, ಹರೀಶ್, ನಿತೇಶ್, ಸೊಸೆಯಂದಿರಾದ ಸುಮಲತಾ ಲೋಕೇಶ್, ರಮ್ಯಾ ಹರೀಶ್, ಮೊಮ್ಮಗ ತನ್ವಿತ್ ಹಾಗೂ ಬಂಧುವರ್ಗದವರನ್ನು ಅಗಲಿದ್ದಾರೆ. ಮೃತರ ಮನೆಗೆ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಸುಳ್ಯ ಮಂಡಲ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಇಂದಿರಾ ಬಿ.ಕೆ, ವಿವಿಧ ದೇವಸ್ಥಾನದ, ದೈವಸ್ಥಾನಗಳ ಪ್ರಮುಖರು ಭೇಟಿ ನೀಡಿ ಸಂತಾಪ ಸೂಚಿಸಿದರು.




ಲ್ಯಾನ್ಸಿ ಜೋಸೆಫ್ ಮಸ್ಕರೇನ್ಹಸ್

ಮಂಗಳೂರು: ಮಂಗಳೂರಿನ ನಿರ್ಮಾಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿ ನಗರದ ಸ್ಕೈಲೈನ್ ರೂಪುಗೊಳಿಸಿದ್ದ ಲ್ಯಾನ್ಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥಾಪಕ ಲ್ಯಾನ್ಸಿ ಜೋಸೆಫ್ ಮಸ್ಕರೇನ್ಹಸ್ ಅವರು ಬುಧವಾರ ನಿಧನರಾದರು. ಅವರಿಗೆ 77 ವರ್ಷ ವಯಸ್ಸಾಗಿತ್ತು. 1973ರಲ್ಲಿ ಲೈಸೆನ್ಸ್ ಪಡೆದ ಪ್ಲಂಬರ್ ಆಗಿ ತಮ್ಮ ವೃತ್ತಿಜೀವನ ಆರಂಭಿಸಿದ್ದ ಲ್ಯಾನ್ಸಿ ಅವರು ನಿರ್ಮಾಣ ಕ್ಷೇತ್ರದಲ್ಲಿ ಅಪ್ರತಿಮ ಗುರುತು ಮೂಡಿಸಿದ್ದರು. 1982ರಲ್ಲಿ ಹಂಪನಕಟ್ಟೆಯ ಐಕಾನಿಕ್ 'ಧನ್ಯವಾದ' ಕಟ್ಟಡ ನಿರ್ಮಾಣದ ಮೂಲಕ ಅವರು ಗಮನ ಸೆಳೆದಿದ್ದರು. 1984ರಲ್ಲಿ 'ಪೊಂಪೇ ಶೇಡ್ ಅಪಾರ್ಟ್‌ಮೆಂಟ್ಸ್' ನಿರ್ಮಿಸುವ ಮೂಲಕ ಮಂಗಳೂರಿನಲ್ಲಿ ಅಪಾರ್ಟ್‌ಮೆಂಟ್ ಸಂಸ್ಕೃತಿಗೆ ಹೊಸ ಅಧ್ಯಾಯ ಬರೆದಿದ್ದರು. ಐದು ದಶಕಗಳ ಕಾಲ ಲ್ಯಾನ್ಸಿ ಕನ್‌ಸ್ಟ್ರಕ್ಷನ್ಸ್ ಮೂಲಕ ಎಸ್ಸೆಲ್ ಸೆಂಟರ್, ಎಂಪೈರ್ ಹಾಗೂ ಎಬನಿ ಸೇರಿದಂತೆ ಅನೇಕ ಪ್ರಮುಖ ಕಟ್ಟಡಗಳನ್ನು ನಿರ್ಮಿಸಿ ಮಂಗಳೂರಿನ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದರು. ಅವರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಬಂಧು ವರ್ಗವನ್ನು ಅಗಲಿದ್ದಾರೆ.



ಗೋಪಾಲ ಎಂ.

ಉಪ್ಪಳ: ಬಂದ್ಯೋಡು ನಿವಾಸಿ ಧಾರ್ಮಿಕ ಮುಂದಾಳು, ಸಮಾಜ ಸೇವಕ ಗೋಪಾಲ ಎಂ. (84) ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ರಾತ್ರಿ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಅಡ್ಕ ಶ್ರೀ ಭಗವತಿ ಕ್ಷೇತ್ರದಲ್ಲಿ ಹಲವು ವರ್ಷಗಳ ಕಾಲ ಅಧ್ಯಕ್ಷರಾಗಿದ್ದು, ಕ್ಷೇತ್ರದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದರು. ಅಲ್ಲದೆ ವಿವಿಧೆಡೆ ಕ್ಷೇತ್ರ, ಮಠ, ಮಂದಿರಗಳಲ್ಲಿ ಜೀರ್ಣೋದ್ಧಾರ ಸಮಿತಿಯಲ್ಲಿ ಪದಾಧಿಕಾರಿಯಾಗಿ ಸೇವೆ ನಡೆಸಿದ್ದರು. ಮಂಗಲ್ಪಾಡಿ ಸೇವಾ ಸಹಕಾರಿ ಬ್ಯಾಂಕ್‌ನ ಮಾಜಿ ಅಧ್ಯಕ್ಷರೂ ಆಗಿದ್ದರು. ಮೃತರು ಪತ್ನಿ ಲಲಿತಾ, ಮಕ್ಕಳಾದ ಗೋಕುಲ್‌ದಾಸ್, ಮಧುಸೂಧನ್‌ದಾಸ್, ವನಮಾಲ ದೇವಿ, ವತ್ಸಲಾದೇವಿ, ಮೃದುಲಾ ದೇವಿ ಅವರನ್ನು ಅಗಲಿದ್ದಾರೆ.



ಉಡುಪಿಯಲ್ಲಿ ಜಿಲ್ಲಾ ಮಟ್ಟದ ಸಮಿತಿ ಸಭೆ | ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಸೂಚನೆ

ಬೀದಿಶ್ವಾನಗಳ ಹಾವಳಿ ತಡೆಗೆ ಕ್ರಮ



ಉಡುಪಿ: ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿರುವ ಆದೇಶದಲ್ಲಿರುವ ಮಾರ್ಗಸೂಚಿಗಳನ್ನು ಜಿಲ್ಲೆಯಾದ್ಯಂತ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಇಂದು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ಕುರಿತ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜಿಲ್ಲೆಯ ನಗರ ಪ್ರದೇಶದಲ್ಲಿ 7197 ಹಾಗೂ ಗ್ರಾಮೀಣ ಭಾಗದಲ್ಲಿ 13,185 ಸೇರಿದಂತೆ ಸುಮಾರು 20,382 ಬೀದಿನಾಯಿಗಳನ್ನು ಗುರುತಿಸಲಾಗಿರುತ್ತದೆ. ಹಾಗೆಯೇ ಜಿಲ್ಲೆಯ ನಗರ ಭಾಗದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು, ಸರ್ಕಾರಿ ಕಚೇರಿಗಳು, ಬಸ್ ಹಾಗೂ ರೈಲ್ವೆ ನಿಲ್ದಾಣ, ಆಸ್ಪತ್ರೆಗಳು ಹಾಗೂ ಕ್ರೀಡಾಂಗಣ ಸೇರಿದಂತೆ ಒಟ್ಟು 253 ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 446 ಬೀದಿನಾಯಿಗಳನ್ನು ಗುರುತಿ ಸಲಾಗಿರುತ್ತದೆ ಎಂದ ಅವರು, ಪ್ರತೀ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಬೀದಿ ನಾಯಿಗಳ ಉಪಟಳ ತಡೆಯಲು ನೇಮಕ ಮಾಡಲಾದ ನೋಡೆಲ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕು ಎಂದರು.

ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿ ವಾರ್ಡ್‌ಗೆ ಒಂದರಂತೆ ಹಾಗೂ ಪ್ರತೀ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂಖ್ಯೆಗೆ ಅನುಗುಣವಾಗಿ ಆಹಾರ ವಿತರಣೆಗೆ ಸ್ಥಳಗಳನ್ನು ಗುರುತಿಸಿ, ನಾಮಫಲಕ ಅಳವಡಿಸಿರುವ ಕುರಿತು ಮಾಹಿತಿ ನೀಡುವಂತೆ ಸೂಚಿಸಿದ ಅವರು, ಆಹಾರ ವಿತರಣಾ ತಾಣಗಳನ್ನು ಹೊರತುಪಡಿಸಿ ಇತರೆ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ಪೂರೈಕೆ ಮಾಡದಲ್ಲಿ ಅಂತಹವ ವಿರುದ್ಧ ಎಫ್.ಐ.ಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕೆಂದರು.

ಜಿಲ್ಲೆಯ ನಗರ ಹಾಗೂ ಸ್ಥಳೀಯ ಸಂಸ್ಥೆಯವರು ಬೀದಿನಾಯಿಗಳ ಗುರುತಿಸುವಿಕೆ, ಸ್ಥಳಾಂತರ, ಸಂತಾನಹರಣ ಶಸ್ತ್ರ ಚಿಕಿತ್ಸೆ, ಆಶ್ರಯತಾಣ, ಮತ್ತಿತರ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಬೇಕು. ಬೀದಿ ನಾಯಿಗಳ ನಿಯಂತ್ರಣ ಕುರಿತು ಸ್ಥಾಪಿಸಲಾದ ಸಹಾಯವಾಣಿಯಲ್ಲಿ ದಾಖಲಾಗುವ ದೂರುಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೀದಿನಾಯಿ ಹಿಡಿಯುವ ಸಿಬ್ಬಂದಿಗಳನ್ನು ತರಬೇತಿ ನೀಡಿ ನಿಯೋಜಿಸಬೇಕು. ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಹೆಚ್ಚು ನಾಯಿ ಕಡಿತ ಪ್ರಕರಣಗಳಾದರೂ ಸಹ 2026ರ ಮಾರ್ಚ್ ನಿಂದ ಈವರೆಗೆ ಶೂನ್ಯ ಬೀದಿ ನಾಯಿಗಳನ್ನು ಹಿಡಿದು, ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಲಾಗಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಕೂಡಲೇ ಬೀದಿ ನಾಯಿ ಹಿಡಿಯುವ ಸಿಬ್ಬಂದಿಯನ್ನು ನಿಯೋಜಿಸಲು ಕ್ರಮವಹಿಸಬೇಕು ಎಂದರು.

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಬೀದಿ ನಾಯಿಗಳನ್ನು ಸಂತಾನಹರಣ ಶಸ್ತ್ರ ಚಿಕಿತ್ಸೆ, ಎ.ಆರ್.ವಿ ಲಸಿಕೆ ನೀಡುವುದರೊಂದಿಗೆ ಅವುಗಳನ್ನು ಆಕರ್ಷಣೀಯವಾಗಿ ಕಾಣುವಂತೆ ಮಾಡಬೇಕು. ಶ್ವಾನ ಪ್ರದರ್ಶನ, ದತ್ತು ಸ್ವೀಕಾರ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ನಾಯಿಗಳನ್ನು ಸಾರ್ವಜನಿಕರು ದತ್ತು ಪಡೆಯುವಂತೆ ಪ್ರೇರೇಪಿಸಬೇಕು ಎಂದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ.ಎಂ.ಸಿ ರೆಡ್ಡಪ್ಪ, ಪಶುವೈದ್ಯಕೀಯ ಪಾಲಿಕ್ಲಿನಿಕ್ ಉಪನಿರ್ದೇಶಕ ಡಾ. ಬಾಬಣ್ಣ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಸ್ಥಳ ಗುರುತಿಸಿ

ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ನಡೆಸಲು ಹಳೆಯ ಕಟ್ಟಡಗಳನ್ನು ಗುರುತಿಸಿ, ಮಾಹಿತಿ ನೀಡುವಂತೆ ತಿಳಿಸಿದ ಅವರು, ಬೀದಿನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಬಿಡಲು ಅನುಕೂಲವಾಗುವಂತೆ ಪ್ರತೀ ತಾಲೂಕುಗಳಲ್ಲಿ ಆಶ್ರಯ ತಾಣಗಳ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಉಡುಪಿ ನಗರಸಭೆ, ಕುಂದಾಪುರ, ಕಾರ್ಕಳ ಹಾಗೂ ಕಾಪು ಪುರಸಭೆ, ಬೈಂದೂರು ಹಾಗೂ ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 11.91 ಎಕರೆ ಜಮೀನು ಮಂಜೂರು ಮಾಡಿದ್ದು, 33.93 ಲಕ್ಷ ಕ್ರಿಯಾ ಯೋಜನೆಯನ್ನು ಅದಕ್ಕು ಶೀಘ್ರವಾಗಿ ಪೂರ್ಣಗೊಳಿಸುವಂತೆ ತಿಳಿಸಿದರು.



ಕರ್ನಾಟಕ ರಾಜ್ಯದ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಭೋಸರಾಜು ಅವರು ಬುಧವಾರ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ದೇವಳದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ, ಸದಸ್ಯ ರಘುರಾಮ ದೇವಾಡಿಗ ಆಲೂರು, ಕೆಪಿಸಿಸಿ ಕಾರ್ಯಾಧ್ಯಕ್ಷ, ವಿಧಾನಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಜಿಪಂ ಮಾಜಿ ಅಧ್ಯಕ್ಷ ಎಸ್, ರಾಜು ಪೂಜಾರಿ, ಕಾಂಗ್ರೆಸ್‌ನ ಸ್ಥಳೀಯ ಮುಖಂಡ ಕೊಲ್ಲೂರು ವಿನಾಯಕ ಆಚಾರ್ಯ ಇದ್ದರು.

ಬಿಎಸ್ಇ 12ನೇ ತರಗತಿ ಪರೀಕ್ಷೆ | ಪ್ರವೇಶ ಪ್ರಕ್ರಿಯೆ ಪ್ರಾರಂಭ

ಶಾರದಾ ವಿದ್ಯಾನಿಕೇತನ ಶೇಕಡಾ 100 ಫಲಿತಾಂಶದೊಂದಿಗೆ ಉತ್ತಮ ಸಾಧನೆ

ಮಂಗಳೂರು: ಶಾರದಾ ವಿದ್ಯಾನಿಕೇತನ ಸಂಸ್ಥೆಯು ಸಿಬಿಎಸ್ಇ 12ನೇ ತರಗತಿ ವಾರ್ಷಿಕ ಪರೀಕ್ಷೆ 2026ರಲ್ಲಿ ಶೇ.100 ಫಲಿತಾಂಶ ದಾಖಲಿಸಿ ಮತ್ತೊಮ್ಮೆ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಮೇಲುಗೈ ಸಾಧಿಸಿದೆ. ನಿರಂತರವಾಗಿ ಶೇ.100 ಫಲಿತಾಂಶ ದಾಖಲಿಸುತ್ತಿರುವ ಸಂಸ್ಥೆ ತನ್ನ ಶೈಕ್ಷಣಿಕ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿದೆ. ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದು ವಿಶಿಷ್ಟ ಸಾಧನೆ ಮಾಡಿದ್ದು, ಸಂಸ್ಥೆಯ ಶಿಸ್ತುಬದ್ಧ ಶಿಕ್ಷಣ, ಗುಣಮಟ್ಟದ ಬೋಧನೆ ಹಾಗೂ ಸಮಗ್ರ ವಿದ್ಯಾರ್ಥಿ ಅಭಿವೃದ್ಧಿಗೆ ಇದು ಸಾಕ್ಷಿಯಾಗಿದೆ.

ಸಿಬಿಎಸ್ಇ 12ನೇ ತರಗತಿ ಫಲಿತಾಂಶ 2026-ಪ್ರಮುಖ ಸಾಧಕರು

ಶ್ರವಲ್ ನಾಯಕ್ ಟಿ – 479/500 (95.8%) ಅಂಕಗಳನ್ನು ಪಡೆದು ಶಾಲೆಯ ಪ್ರಥಮ ಸ್ಥಾನ ಗಳಿಸಿದ್ದಾರೆ.



ಪಾರ್ವತಿ ಸುರೇಶ್ – 448/500 (89.6%), ಆರ್ ಕೆ. ಅದ್ವಿಕಾ – 442/500 (88.4%), ಇತರೆ ಗಮನಾರ್ಹ ಸಾಧಕರು: ಪ್ರಚೇತನ ಮೊಳೆಯಾರ್ ಭಟ್ – 398/500 (79.6%), ಅಗಸ್ತ್ಯ ಎಂ. – 397/500 (79.4%).

ಸಂಸ್ಥೆಯ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕ್ ಅವರು ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿ, ಅವರ ಪರಿಶ್ರಮ, ಶಿಸ್ತು ಮತ್ತು ಉತ್ತಮ ಸಾಧನೆಯನ್ನು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಎಂ. ಬಿ. ಪುರಾಣಿಕ್ ಅವರು ವಿದ್ಯಾರ್ಥಿಗಳ ಸಾಧನೆಗೆ ಹೆಮ್ಮೆ ವ್ಯಕ್ತಪಡಿಸಿ, ಸಂಸ್ಥೆಯ ಶೈಕ್ಷಣಿಕ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲು ಪೋಷಕರು ಮತ್ತು ಶಿಕ್ಷಕರು ನೀಡುತ್ತಿರುವ ನಿರಂತರ ಸಹಕಾರವನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ 2026-27ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಕ್ರಿಯೆ ಪ್ರಾರಂಭಗೊಂಡಿರುವುದಾಗಿ ಸಂಸ್ಥೆ ಪ್ರಕಟಿಸಿದೆ.

ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ ಭರವಸೆ

ಕಾಸರಗೋಡು ವೈದ್ಯಕೀಯ ಕಾಲೇಜು ಒಂದು ವರ್ಷದೊಳಗೆ ಕಾರ್ಯಾರಂಭ

ಕಾಸರಗೋಡು: ಕಾಸರಗೋಡು ಶಾಸಕರಾಗಿ ಆಯ್ಕೆಯಾದ ಕಲ್ಲಟ್ರ ಮಾಹಿನ್ ಹಾಜಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಕಟ್ಟಡದ ಕೆಲಸವನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಿ ಅದನ್ನು ಕಾರ್ಯಾರಂಭಿಸಲು ಅಗತ್ಯವಾದ ಕಠಿಣ ಮಧ್ಯಸ್ಥಿಕೆಗಳನ್ನು ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು. ರಾಜ್ಯದಲ್ಲಿ ಹೊಸ ಯುಡಿಎಫ್ ಸರ್ಕಾರ ಅಧಿಕಾರಕ್ಕೆ ಬರುವುದರೊಂದಿಗೆ ಜಿಲ್ಲೆಯ ಪ್ರಮುಖ ಆರೋಗ್ಯ ಯೋಜನೆಗಳ ಕೆಲಸ ತ್ವರಿತಗೊಳ್ಳುತ್ತದೆ ಎಂಬುದು ಜನರ ದೊಡ್ಡ ಆಶಯವಾಗಿದೆ ಎಂದು ಅವರು ಹೇಳಿದರು.



ಗುತ್ತಿಗೆ ಕಂಪೆನಿಗಳ ಸಮನ್ವಯ

ಆಸ್ಪತ್ರೆಯ ಸಿವಿಲ್ ಕಾಮಗಾರಿಗಳನ್ನು ದೆಹಲಿ ಮೂಲದ ಗ್ರಿಲ್ಲೋಕ್ ಅಸೋಸಿಯೇಟ್ಸ್ ಕಂಪೆನಿಯು ನಿರ್ವಹಿಸುತ್ತಿದೆ ಮತ್ತು ವಿದ್ಯುತ್ ಕಾಮಗಾರಿಗಳನ್ನು ಊರಾಲುಂಗಲ್ ಸೊಸೈಟಿ ನಿರ್ವಹಿಸುತ್ತಿದೆ. ಈ ಎರಡು ಕಂಪೆನಿಗಳ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಮತ್ತು ಅವುಗಳನ್ನು ಮುಂದಕ್ಕೆ ಸಾಗಿಸಲು ಅಗತ್ಯ ಸೂಚನೆಗಳನ್ನು ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಪ್ರಸ್ತುತ ನಿರ್ಮಾಣ ಪ್ರಗತಿಯನ್ನು ನಿರ್ಣಯಿಸಲು ತಾಂತ್ರಿಕ ಸಮಿತಿಯ ಅಧ್ಯಕ್ಷ ಶ್ರೀಕಂಠನ್ ನಾಯರ್ ಅವರೊಂದಿಗೆ ವಿವರವಾದ ಚರ್ಚೆ ನಡೆಸಿದರು.

ಎ.ಅಬ್ದುಲ್ ರಹಿಮಾನ್, ಮಾಹಿನ್ ಕೇಳೋಟ್ ಮತ್ತು ಟಿ.ಎಂ.ಇಕ್ಬಾಲ್ ನಿಯುಕ್ತ ಶಾಸಕರೊಂದಿಗೆ ಚರ್ಚೆಯಲ್ಲಿ ಭಾಗ ವಹಿಸಿದ್ದರು. ಕಾಸರಗೋಡಿನ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಹೊಸ ಸರ್ಕಾರದ ಮೂಲಕ ಆದ್ಯತೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

10 ವರ್ಷಗಳ ನಿರ್ಲಕ್ಷ್ಯ

ಉಮ್ಮನ್ ಚಾಂಡಿ ಸರ್ಕಾರದ ಅವಧಿಯಲ್ಲಿ ಆರಂಭಿಸಲಾದ ವೈದ್ಯಕೀಯ ಕಾಲೇಜು ಯೋಜನೆಯು ಕಳೆದ ಹತ್ತು ವರ್ಷಗಳಿಂದ ಯಾವುದೇ ಗಮನಾರ್ಹ ಪ್ರಗತಿಯನ್ನು ಸಾಧಿಸಿಲ್ಲ ಎಂದು ಕಲ್ಲಟ್ರ ಮಾಹಿನ್ ಹಾಜಿ ಆರೋಪಿಸಿದರು. ವಿವಿಧ ತಾಂತ್ರಿಕ ಕಾರಣಗಳನ್ನು ಉಲ್ಲೇಖಿಸಿ ಯೋಜನೆಯನ್ನು ವಿಳಂಬ ಮಾಡುವುದು ಜಿಲ್ಲೆಯ ಒಟ್ಟಾರೆ ಪ್ರಗತಿಗೆ ಹಿನ್ನಡೆಯಾಗುತ್ತಿರುವ ವಾಸ್ತವವಾಗಿದೆ. ವೈದ್ಯಕೀಯ ಕಾಲೇಜಿನ ಕಡೆಗೆ 'ಅಸ್ಪಷ್ಟ ನೀತಿ' ಅಳವಡಿಸಿಕೊಳ್ಳುವ ಅಧಿಕಾರಿಗಳು ಮತ್ತು ವ್ಯವಸ್ಥೆಗಳನ್ನು ಯಾವುದೇ ಸಂದರ್ಭದಲ್ಲೂ ಸಹಿಸಲಾಗದು ಎಂದು ನಿಯೋಜಿತ ಶಾಸಕರು ಎಚ್ಚರಿಸಿದರು.

ಮಂಗಳೂರಿನಲ್ಲಿ ತುಳು ಇತಿಹಾಸ, ಸಂಸ್ಕೃತಿ ವಿಚಾರಗೋಷ್ಠಿ

ಸಂಸ್ಕೃತಿ ಅರಿವು ಅಗತ್ಯ: ಪದ್ಮರಾಜ್

ಮಂಗಳೂರು: ತುಳುನಾಡಿನ ಸಾಂಸ್ಕೃತಿಕ ಪರಂಪರೆ ವಿಶೇಷವಾಗಿರುವಂತಹದು. ದೈವಾರಾಧನೆ, ಯಕ್ಷಗಾನ, ಕಂಬಳ ಮೊದಲಾದವುಗಳು ತುಳುನಾಡಿನ ಸಂಸ್ಕೃತಿಯ ಹಿರಿಮೆಯಾಗಿದೆ. ಯುವ ಜನರಿಗೆ ತುಳುನಾಡಿನ ಇತಿಹಾಸ, ಸಂಸ್ಕೃತಿಯ ಕುರಿತು ಅರಿವು ಮೂಡಿಸುವ ಕೆಲಸ ಆಗಬೇಕಿದೆ ಎಂದು ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಮಂಗಳೂರಿನ ಶ್ರೀ ಗೋಕರ್ಣನಾಥೇಶ್ವರ ಕಾಲೇಜಿನ ಜಂಟಿ ಆಶ್ರಯದಲ್ಲಿ ನಡೆದ 'ತುಳು ಇತಿಹಾಸ ಮತ್ತು ಸಂಸ್ಕೃತಿ ವಿಚಾರಗೋಷ್ಠಿ'ಯಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಬ್ರಹ್ಮಶ್ರೀ ನಾರಾಯಣ ಗುರುಗಳ ಮಂಗಳೂರು ಭೇಟಿಯು ತುಳುನಾಡಿನ ಚರಿತ್ರೆಯಲ್ಲಿ ಐತಿಹಾಸಿಕ ಮಹತ್ವವಾದದ್ದು ಎಂದು ಹೇಳಿದರು.



1837ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಅಮರ ಸುಳ್ಯ ಹೋರಾಟದ ಬಗ್ಗೆ ಮಾತನಾಡಿದ ಅಧ್ಯಾಪಕ ಅರವಿಂದ ಚೊಕ್ಕಾಡಿ, ಎಲ್ಲಾ ಸಮುದಾಯದ ಜನರ ಒಗ್ಗೂಡಿಕೆಯಿಂದ ತುಳುನಾಡಿನವರು ಹಾಗೂ ಕೊಡಗಿನವರು ಒಗ್ಗಟ್ಟಿನಿಂದ ಹೋರಾಟ ಸಂಘಟಿಸಿದ್ದರು ಎಂದು ಹೇಳಿದರು. ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಗಳ ಸಂಚಾಲಕ ವಸಂತ ಕಾರಂದೂರು ಅಧ್ಯಕ್ಷತೆ ವಹಿಸಿದ್ದರು. ತುಳು ಸಂಸ್ಕೃತಿ ಬಗ್ಗೆ ಉಪನ್ಯಾಸ ನೀಡಿದ ಬಂಟ್ವಾಳದ ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ.ತುಕಾರಾಮ ಪೂಜಾರಿ ಅವರನ್ನು ಸನ್ಮಾನಿಸಲಾಯಿತು.

ಅಕಾಡೆಮಿ ಸದಸ್ಯ ಪಾಂಗಾಳ ಬಾಬು ಕೊರಗ, ಶ್ರೀ ವೆಂಕಟೇಶ ಶಿವಭಕ್ತಿ ಯೋಗ ಸಂಘದ ಉಪಾಧ್ಯಕ್ಷರಾದ ಡಾ.ಬಿ.ಜಿ.ಸುವರ್ಣ ಮತ್ತು ಶೇಖರ್ ಪೂಜಾರಿ, ಕಾಲೇಜು ಆಡಳಿತ ಮಂಡಳಿ ಸದಸ್ಯ ಚಂದನ್ ದಾಸ್, ಆಡಳಿತಾಧಿಕಾರಿ ನಾಗೇಶ್ ಕರ್ಕೇರ, ಡಾ.ಯತೀನ್, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ರಘುರಾಜ್ ಕದ್ರಿ, ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಡಾ.ಜಯಪ್ರಕಾಶ್ ಸ್ವಾಗತಿಸಿದರು. ಉಪನ್ಯಾಸಕ ಪ್ರತೀಪ್ ಉಪಾಧ್ಯಾಯ, ವಿದ್ಯಾರ್ಥಿನಿ ಮಂಗಳಾ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸಕಿ ರವಿಕಲಾ ವಂದಿಸಿದರು.

ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್‌ರಿಂದ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ



ಮಂಗಳೂರು : ನಗರದ ಕೊಡಿಯಾಲ ಬೈಲಿನ ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ ಎಸ್.ಕೆ.ಡಿ.ಬಿ. ಅಸೋಸಿಯೇಶನ್ ಮತ್ತು ತುಳುನಾಡು ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಹುಬ್ಬಳ್ಳಿಯ ವಿದ್ಯಾವಾರಿಧಿ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಅವರಿಂದ ಶ್ರೀಮದ್ ಭಾಗವತ ಸಪ್ತಾಹ ಪ್ರವಚನ ಮಾಲಿಕೆಯ 3ನೇ ದಿನದ ಕಾರ್ಯಕ್ರಮ ಜರಗಿತು.

ಸಂಘಟಕ ಸುಧಾಕರ ರಾವ್ ಪೇಜಾವರ ಸ್ವಾಗತಿಸಿದರು. ಎಸ್. ಕೆ.ಡಿ.ಬಿ. ಅಸೋಸಿಯೇಶನ್ ಅಧ್ಯಕ್ಷ ಬಿ. ಸುಬ್ರಹ್ಮಣ್ಯರಾವ್, ಪ್ರಭಾಕರ ರಾವ್ ಪೇಜಾವರ, ಪ್ರಶಾಂತ ಉಪಧ್ಯಾಯ, ಸುಮಾ ಎಸ್.ರಾವ್, ಭಾರತಿ ಭಟ್, ಶಶಿಧರ ಐತಾಳ್, ಸಿ.ಎ. ರಾಮದಾಸ್ ಭಟ್, ಗಣೇಶ್ ಹೆಬ್ಬಾರ್, ದಿವಾಣ ಕೇಶವ ಭಟ್ ಉಪಸ್ಥಿತರಿದ್ದರು.

ಶ್ರೀದೇವಿ ಭಜನಾ ಬಳಗ ಬಿಜೈ ಅವರಿಂದ ಶ್ರೀಮದ್ ಭಗವನ್ನಾಮ ಸಂಕೀರ್ತನೆ ನೆರವೇರಿತು. ಸಂಜೆ 6ರಿಂದ 7.30ರ ತನಕ ಮೇ 16ರ ವರೆಗೆ ಈ ಉಪನ್ಯಾಸವು ಜರಗಲಿದೆ.

ಈಜು ವಿಭಾಗದ ಸಾಧನೆ ಗುರುತಿಸಿದ ರೋಟರಿ ಕ್ಲಬ್ ಮಂಗಳೂರು ನಾರ್ತ್

ಪ್ರತಿಭಾವಂತರಿಗೆ ಸನ್ಮಾನದ ಗೌರವ

ಮಂಗಳೂರು: ರೋಟರಿ ಕ್ಲಬ್ ಮಂಗಳೂರು ನಾರ್ತ್ ವತಿಯಿಂದ ಮಂಗಳವಾರ ನಡೆದ ವಾರಾಂತ್ಯ ಸಭೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಯುವ ಪ್ರತಿಭಾವಂತರನ್ನು ಸನ್ಮಾನಿಸಲಾಯಿತು.

ಈಜು ವಿಭಾಗದಲ್ಲಿ ಸಾಧನೆಗೈದ ನಟಿಕ್, ಅಥ್ಲೆಟಿಕ್ಸ್‌ನಲ್ಲಿ ಸಾಧನೆ ಮಾಡಿದ ಮಾಧುರ್ಯ, ಪವರ್ ಲಿಫ್ಟಿಂಗ್‌ನಲ್ಲಿ ಸಾಧನೆಗೈದ ಕೀರ್ತನ್ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಲಗಿಮಾ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ತೋರಿದ ಪರಿಶ್ರಮ, ಸಮರ್ಪಣೆ ಮತ್ತು ಸಾಧನೆಗಾಗಿ ಪ್ರಶಂಸಿಸಲ್ಪಟ್ಟ ಈ ಯುವ ಪ್ರತಿಭಾವಂತರಿಗೆ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಕೆನರಾ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಮಂಜುನಾಥ್ ಸಿಂಗ್ಯೆ, ಸನ್ಮಾನಿತರನ್ನು ಅಭಿನಂದಿಸಿ, ಶುಭ ಹಾರೈಸಿದರು. ಚುನಾಯಿತ ಅಧ್ಯಕ್ಷ ಸುದರ್ಶನ ನಾಯಕ್, ಕಾರ್ಯದರ್ಶಿ ಶಾಂಭವಿ ಪ್ರಭು, ಮಾಜಿ ಅಧ್ಯಕ್ಷ ಮೋಹನ್ ನಾಯರ್, ಬುಲೆಟಿನ್ ಸಂಪಾದಕ ಡಾ. ಸತೀಶ್ ಕುಮಾರ್ ಶೆಟ್ಟಿ, ಮಾಜಿ ಜಿಲ್ಲಾ ಗವರ್ನರ್ ಕೃಷ್ಣ ಶೆಟ್ಟಿ, ಮಾಜಿ ಸಹಾಯಕ ಗವರ್ನರ್ ವಿಶ್ವನಾಥ್ ಶೆಟ್ಟಿ, ಡಾ. ಸಿ. ಎ. ರಘುವೀರ್, ಟಿ. ಜಿ. ಶೆಣೈ ಉಪಸ್ಥಿತರಿದ್ದರು.



ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ
11
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 14 ಮೇ 2026
ಮಂಗಳೂರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	12	8	4	0	16	+0.551
ಆರ್‌ಸಿಬಿ	11	7	4	0	14	+1.103
ಹೈದರಾಬಾದ್	12	7	5	0	14	+0.331
ಪಂಜಾಬ್	11	6	4	1	13	+0.428
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ದಿಲ್ಲಿ	12	5	7	0	10	-0.993
ಕೆಕೆಆರ್	10	4	5	1	9	-0.169
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

ಕಿರುಸುದ್ದಿ

ವೇಟ್‌ಲಿಫ್ಟಿಂಗ್: ಜ್ಞಾನೇಶ್ವರಿಗೆ ಬೆಳ್ಳಿ

ಹೊಸದಿಲ್ಲಿ: ಬುಧವಾರ ಗಾಂಧಿನಗರದಲ್ಲಿ ನಡೆದ 2026 ರ ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭರವಸೆಯ ಅಥ್ಲೀಟ್ ಜ್ಞಾನೇಶ್ವರಿ ಯಾದವ್ ಸ್ನ್ಯಾಚ್ ವಿಭಾಗದಲ್ಲಿ ಬೆಳ್ಳಿ ಪದಕ ಮತ್ತು 53 ಕೆಜಿ ವಿಭಾಗದಲ್ಲಿ ಒಟ್ಟಾರೆ ಕಂಚಿನ ಪದಕ ಗೆದ್ದರು. ಇದರೊಂದಿಗೆ ಆತಿಥ್ಯ ಭಾರತ ಮಹತ್ವದ ಪದಕ ಬಾಚಿಕೊಂಡಿದೆ. ಜ್ಞಾನೇಶ್ವರಿ ಒಟ್ಟು 194 ಕೆಜಿ ಎತ್ತುವ ಮೂಲಕ ಅದ್ಭುತ ಪ್ರದರ್ಶನ ನೀಡಿದರು. ಸ್ನ್ಯಾಚ್ ವಿಭಾಗದಲ್ಲಿ ಅವರು 88 ಕೆಜಿ ಎತ್ತಿದರು. ಚೀನಾದ ಜಿನ್ಲಾನ್ ಝೂವೊ ಒಟ್ಟು 216 ಕೆಜಿ ಎತ್ತುವ ಮೂಲಕ ಈ ವಿಭಾಗದಲ್ಲಿ ಚಿನ್ನ ಗೆದ್ದರೆ, ವಿಯೆಟ್ನಾಂನ ಹೊಯಿ ಹುವಾಂಗ್ ನ್ಗುಯೆನ್ ಒಟ್ಟು 195 ಕೆಜಿ ಎತ್ತುವ ಮೂಲಕ ಬೆಳ್ಳಿ ಪದಕವನ್ನು ಪಡೆದರು.

ರಾಮಕೃಷ್ಣ ಬದಲಿಗೆ ಕನ್ನಡಿಗ ನೋಹ್ರೊನಾ

ಚೆನ್ನೈ: ಕನ್ನಡಿಗ, ಮಹರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಮಿಂಚಿ ಗಮನ ಸೆಳೆದಿರುವ ಮೈಕಲ್ ನೋಹ್ರೊನಾ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ತಂಡ ಬದಲಿ ಆಟಗಾರರಾಗಿ ಖರೀದಿಸಿದೆ. ತಂಡದಿಂದ ರಾಮಕೃಷ್ಣ ಘೋಷ್ ಗಾಯದಿಂದ ಹೊರಬಿದ್ದಿದ್ದು, ಅವರ ಬದಲಿಗೆ ನೋಹ್ರಾನಾ ಅವರನ್ನು ಆಯ್ಕೆ ಮಾಡಿಕೊಂಡಿರುವುದು ಫ್ರಾಂಚೈಸಿ ಬುಧವಾರ ತಿಳಿಸಿದೆ. ಕರ್ನಾಟಕದಲ್ಲಿ ನಡೆಯುವ ಮಹರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಮಂಗಳೂರು ಡ್ರ್ಯಾಗನ್ಸ್ ಪರ ಆಡಿದ್ದ ಅವರು, 13 ಪಂದ್ಯಗಳಲ್ಲಿ 285 ರನ್ ಗಳಿಸಿದ್ದಲ್ಲದೆ, 10 ವಿಕೆಟ್ ಕೂಡ ಪಡೆದಿದ್ದರು. ಈ ಬೆನ್ನಲ್ಲೇ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯಾವಳಿಯಲ್ಲೂ ಕರ್ನಾಟಕ ತಂಡವನ್ನು ಮೂರು ಬಾರಿ ಪ್ರತಿನಿಧಿಸಿದ್ದಾರೆ.

ಕೆಕೆಆರ್ 192/4 | ರಾಯಲ್ ಬೆಂಗಳೂರಿಗೆ ಕಠಿಣ ಗುರಿ

ರಿಂಕು-ರಘು ಆರ್ಭಟ

ರಾಯ್ಪುರ: ರಘು-ರಿಂಕು ಮಿಂಚಿದ ನಂತರ ಕಳೆದ ಪಂದ್ಯದಲ್ಲಿ ಬೌಲಿಂಗ್ ಪಿಚ್ ಆಗಿದ್ದ ಕೆಕೆಆರ್ ಬುಧವಾರದಂದು ಬ್ಯಾಟಿಂಗ್ ಪಿಚ್ ಆಗಿ ಬದಲಾಯಿತು. ಸ್ಫೋಟಕ ಬ್ಯಾಟಿಂಗ್ ಮಾಡಿದ ಕೆಕೆಆರ್ ಮಹತ್ವದ ಪಂದ್ಯದಲ್ಲಿ ಬೆಂಗಳೂರಿಗೆ 193 ರನ್ ಗುರಿ ನೀಡಿದೆ.

ಸುಯಶ್ ಮತ್ತು ಶೇಫರ್ಡ್ ಬದಲಿಗೆ ಡಫಿ ಮತ್ತು ವೆಂಕಟೇಶ್ ಅವರೊಂದಿಗೆ ಕಣಕ್ಕಿಳಿದ ಆರ್‌ಸಿಬಿ ಮೊದಲಿಗೆ ಉತ್ತಮ ಬೌಲಿಂಗ್ ಮಾಡಿದರೂ, ಮಧ್ಯಮ ಕ್ರಮಾಂಕದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ ಕೆಕೆಆರ್ ದೊಡ್ಡ ಗುರಿ ನಿರ್ಮಿಸಿದೆ. ರಘುವಂಶಿ(71; 46ಎ, 7 ಬೌ, 3ಸಿ), ರಿಂಕು(49★; 29ಎ, 3 ಬೌ, 2ಸಿ) ಬ್ಯಾಟಿಂಗ್‌ನೊಂದಿಗೆ ಕೋಲ್ಕತ್ತಾ, 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 192 ರನ್ ಗಳಿಸಿದೆ.

ರಘುವಂಶಿ ಅಬ್ಬರ: ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಕೆಕೆಆರ್‌ಗೆ ಭರ್ಜರಿ ಆರಂಭ ಸಿಕ್ಕಿತು. ರಾಯ್ಪುರದ ಬೌಲಿಂಗ್ ಪಿಚ್‌ನಲ್ಲಿ ಫಿನ್ ಆಲೆನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಗಮನ ಸೆಳೆದರು. ಮೊದಲೆರಡು ಓವರ್‌ಗಳಲ್ಲಿ ರನ್ ಬಾರಿಸಿದರೂ ಭುವನೇಶ್ವರ್ ಕುಮಾರ್ ಅವರ ಸ್ವಿಂಗ್ ಎದುರಿಗೆ ನಿಲ್ಲಲಾಗಲಿಲ್ಲ. 8 ಬಾಲ್ ಎದುರಿಸಿದ್ದ ಆಲೆನ್ 18 ರನ್‌ಗೆ ಔಟಾದರು. ಅವರು ಔಟಾಗುತ್ತಿದ್ದಂತೆ ನಿಧಾನವಾಗಿ ಆಡುತ್ತಿದ್ದ ರಹಾನೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 3 ಬೌಂಡರಿ, 1 ಸಿಕ್ಸರ್ ಬಾರಿಸಿದ ನಂತರ ಅವರೂ ವಿಕೆಟ್ ಕೊಟ್ಟರು. ನಾಲ್ಕನೇ ಕ್ರಮಾಂಕದಲ್ಲಿ ಗ್ರೀನ್ ಬಂದರು. ಮೂರನೇ ಕ್ರಮಾಂಕದಲ್ಲಿ ಬಂದಿದ್ದ ಅಂಗ್ರಿಶ್ ರಘುವಂಶಿ ಸ್ಫೋಟಕ ಬ್ಯಾಟಿಂಗ್‌ಗೆ ಮಣೆ ಹಾಕಿದರು. ಪವರ್‌ಪ್ಲೇ ಮುಕ್ತಾಯಕ್ಕೆ ಕೆಕೆಆರ್ 56 ರನ್ ಗಳಿಸಿತು. ರಹಾನೆ ಮತ್ತು ಫಿನ್ ಔಟಾಗಿದ್ದರು.

ಮಧ್ಯಮ ಓವರ್‌ಗಳಲ್ಲಿ ಗ್ರೀನ್ ಒಂದು ಬದಿಯಲ್ಲಿ ನಿಂತರೆ ರಘು ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಬೌಂಡರಿ ಸಿಕ್ಸರ್‌ಗಳೊಂದಿಗೆ ಅರ್ಧ ಶತಕ ಬಾರಿಸಿದರು. ಗ್ರೀನ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ 24 ಬಾಲ್‌ಗಳಲ್ಲಿ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ರಿಂಕು ಸಿಂಗ್ ಬರುತ್ತಲೇ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್ 97 ರನ್ ಗಳಿಸಿತು. ಡೆತ್ ಓವರ್‌ವರೆಗೂ ರಿಂಕು-ರಘು ಆಟ ಮುಂದುವರಿಯಿತು. ರಿಂಕು ಸಿಂಗ್ ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸಿದ್ದಲ್ಲದೆ, ರೋಮಾಂಚನಕಾರಿ ಬೌಂಡರಿಗಳನ್ನೂ ಬಾರಿಸಿದರು. 19ನೇ ಓವರ್‌ನಲ್ಲಿ ಹೆಚ್ಚಿನ ರನ್ ಬರದಿದ್ದರೂ ಇನ್ನುಳಿದ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಕೆಕೆಆರ್ ಹೆಚ್ಚಿನ ರನ್‌ಗಳನ್ನು ಜೊತೆಗೂಡಿಸಿತು. ಕೊನೆಯಲ್ಲಿ ರಿಂಕು ಸಿಂಗ್ ಕೂಡ 49★ ರನ್ ಬಾರಿಸಿದರು. ಅಂಗ್ರಿಶ್ 71 ರನ್ ಗಳಿಸಿದರು.



ಪಂದ್ಯಕ್ಕೆ ಮಳೆ ಅಡ್ಡಿ

ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಟಾಸ್‌ಗೂ ಮುನ್ನವೇ ಸಂಜೆಯ ಹೊತ್ತಲ್ಲಿ ಮಳೆ ಶುರುವಾಯಿತು. ರಾಯ್ಪುರ ಕ್ರೀಡಾಂಗಣದ ತುಂಬೆಲ್ಲಾ ಕವರ್ ಹಾಕಿದ್ದರು. 7:15ಕ್ಕೆ ಮಳೆ ನಿಂತರೂ, ಮೈದಾನ ಸಿದ್ಧಗೊಂಡು ಪಂದ್ಯ ನಡೆಸಲು ಒಂದು ತಾಸಿಗಿಂತಲೂ ಹೆಚ್ಚಿನ ಸಮಯ ಬೇಕಾಯಿತು. ಪರಿಷ್ಕೃತ ಸಮಯವನ್ನು ನಿಗದಿ ಮಾಡಿ, 8:30 ಕ್ಕೆ ಟಾಸ್, 8:45ಕ್ಕೆ ಪಂದ್ಯ ಶುರುವಾಯಿತು.

ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಾಟ

ಪಂಜಾಬ್‌ಗೆ ಮಹತ್ವದ ಪಂದ್ಯ

ಧರ್ಮಶಾಲಾ: ಐಪಿಎಲ್ ಪ್ಲೇಆಫ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಮುಖ ಪಂದ್ಯದಲ್ಲಿ ಪಂಜಾಬ್ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಕಳೆದ ಪಂದ್ಯಗಳಲ್ಲಿ ಭಾರೀ ಸೋಲು ಕಂಡಿರುವ ಶ್ರೇಯಸ್ ಅಯ್ಯರ್ ನೇತೃತ್ವದ ಕಿಂಗ್ಸ್ ತಂಡವು ಗೆಲ್ಲಲೇಬೇಕಾದ ಅನಿವಾರ್ಯತೆಗೆ ಸಿಲುಕಿಕೊಂಡಿದೆ. ಅತ್ತ ಮುಂಬೈ ಸಕಾರಾತ್ಮಕ ಅಂತ್ಯಕ್ಕೆ ಅಣಿಯಾಗುತ್ತಿದೆ.

ಮೊದಲಿನ ಪಂದ್ಯಗಳಲ್ಲಿ ಅಜೇಯವಾಗಿದ್ದ ಪಂಜಾಬ್ ಕಿಂಗ್ಸ್ ದ್ವಿತಿಯಾರ್ಧದಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಟೇಬಲ್ ಟಾಪರ್ ಆಗಿದ್ದ ಪಂಜಾಬ್ ಇದೀಗ ನಾಲ್ಕು ಸೋಲುಗಳೊಂದಿಗೆ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ. ಮುಂಬೈ ಇಂಡಿಯನ್ಸ್ ಸೋಲುಗಳಿಂದಲೇ ಕಂಗೆಟ್ಟಿದ್ದು ಆರ್‌ಸಿಬಿ ವಿರುದ್ಧ ಸೋತು 9ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಧರ್ಮಶಾಲಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂಜಾಬ್ ಕಿಂಗ್ಸ್‌ಗೆ ಒತ್ತಡ: ಒಟ್ಟು 13 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿರುವ ಪಂಜಾಬ್ ಕಿಂಗ್ಸ್ ಸೋತರೆ ದೊಡ್ಡ ಹಿನ್ನಡೆ ಅನುಭವಿಸಲಿದೆ. ಪಂದ್ಯದ ನಂತರ ಅಂಕಪಟ್ಟಿ ಸ್ಥಾನಕ್ಕೆ ಯಾವುದೇ ಪರಿಣಾಮ ಬೀಳದಿದ್ದರೂ, ಶುಕ್ರವಾರದಂದು ಚೆನ್ನೈ ಲಖನೌ ತಂಡದ ವಿರುದ್ಧ ಗೆದ್ದರೆ, ಪಂಜಾಬ್ ಐದನೇ ಸ್ಥಾನಕ್ಕೆ ಇಳಿಯಲಿದೆ. ಪ್ಲೇಆಫ್ ಲೆಕ್ಕಾಚಾರದಲ್ಲಿ ಗಟ್ಟಿಯಾಗಿ ಉಳಿಯಬೇಕೆಂದರೆ ಪಂಜಾಬ್ ಕಿಂಗ್ಸ್ ಈ ಪಂದ್ಯದಲ್ಲಿ ಗೆಲ್ಲಲೇಬೇಕು. ಟಾಪ್ ಸ್ಥಾನದ ಮೇಲೆ ಕಣ್ಣಿಡಬೇಕಾದರೆ ಮಾಡು ಇಲ್ಲವೇ ಮಡಿ. ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಪಂಜಾಬ್ ಕಿಂಗ್ಸ್ ಕಳೆದ ಪಂದ್ಯದಲ್ಲಿ ಬೌಲಿಂಗ್‌ನಲ್ಲಿ ದೊಡ್ಡ ಹಿನ್ನಡೆ ಅನುಭವಿಸಿದೆ. ಮುಖ್ಯವಾಗಿ ಅರ್ಷದೀಪ್ ಬಿಟ್ಟರೆ ಇನ್ನುಳಿದ ಬೌಲರ್‌ಗಳು ವಿಫಲರಾಗಿದ್ದರೆ.

ಪಿಚ್: ಧರ್ಮಶಾಲಾದ ಎಚ್‌ಪಿಎಲ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಬ್ಯಾಟಿಂಗ್‌ಗೆ ಬಲ ನೀಡಲಿದೆ. ಕಳೆದ ಪಂದ್ಯದಲ್ಲಿ ದಿಲ್ಲಿ 210 ರನ್‌ಗುರಿ ಬೆನ್ನತ್ತಿತ್ತು. ಬೌಲರ್‌ಗಳಿಗೆ ಅಲ್ಪ ಕಾಟ ಕೊಡಲಿದೆ. ಸ್ಪಿನ್ನರ್‌ಗಳಿಗೆ ತೀರಾ ಕಷ್ಟ. ಟಾಸ್ ಗೆದ್ದವರು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದೇ ಹೆಚ್ಚು.



ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಧರ್ಮಶಾಲಾ, ಸಮಯ: 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಗೆಲುವುಗಳ ವಿದಾಯಕ್ಕೆ ಮುಂಬೈ ಸಿದ್ಧ

ಅತ್ತ ಪಂದ್ಯಾವಳಿಯಿಂದ ಹೊರಬಿದ್ದಿರುವ ಮುಂಬೈ ಇಂಡಿಯನ್ಸ್ ಗೆಲುವಿನೊಂದಿಗೆ ಅಭಿಯಾನ ಮುಗಿಸುವ ನಿರೀಕ್ಷೆಯಲ್ಲಿದೆ. ಹಿಂದಿನ ಬಹುತೇಕ ಪಂದ್ಯಗಳಲ್ಲಿ ಸೋತಿರುವ ಮುಂಬೈ ಆರ್‌ಸಿಬಿ ವಿರುದ್ಧ ಗೆಲ್ಲುವ ಹಂತಕ್ಕೆ ಬಂದು ಸೋತಿತು. ಬ್ಯಾಟಿಂಗ್ ವೈಫಲ್ಯತೆ ತಂಡಕ್ಕೆ ದೊಡ್ಡ ಆಘಾತ ನೀಡಿದೆ. ಯಾರೊಬ್ಬರೂ ಲಯದಲ್ಲಿಲ್ಲ. ರಯಾನ್ ಕೂಡ ಹಿಂದಿನ ಪಂದ್ಯದಲ್ಲಿ ಬೇಗನೇ ಔಟಾಗಿದ್ದಾರೆ. ತಂಡಕ್ಕೆ ಪಾಂಡ್ಯ ಬಲ ಸಿಗಬಹುದು. ಅಭ್ಯಾಸಕ್ಕಿಳಿದ ಅವರು ಪಂದ್ಯಕ್ಕೆ ಮರಳುವ ಸಾಧ್ಯತೆ ಇದೆ. ಬೌಲಿಂಗ್‌ನಲ್ಲೂ ಪ್ರಮುಖರು ಲಯಕ್ಕೆ ಬರಬೇಕಿದೆ.

ಪ್ರೀ ಕ್ವಾರ್ಟರ್‌ಗೆ ಸಿಂಧು, ಸೇನ್

- ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್
- ಮುಂದುವರಿದ ಭಾರತೀಯರ ಪಾರುಪತ್ಯ
- ಕಿಡಂಬಿ ಶ್ರೀಕಾಂತ್‌ಗೂ ಮುನ್ನಡೆ
- ಕನ್ನಡಿಗ ಆಯುಷ್ ಸೇರಿದಂತೆ ಹಲವರಿಗೆ ನಿರಾಸೆ

ಬ್ಯಾಂಕಾಕ್: ಇಲ್ಲಿ ನಡೆಯುತ್ತಿರುವ ಥೈಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿನಲ್ಲಿ ಭಾರತದ ಆಟಗಾರರು ಭರ್ಜರಿ ಪ್ರದರ್ಶನ ನೀಡಿದ್ದು, ಪಿ.ವಿ. ಸಿಂಧು, ಲಕ್ಷ್ಯ ಸೇನ್ ಹಾಗೂ ಕಿಡಂಬಿ ಶ್ರೀಕಾಂತ್ ಪ್ರೀ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದಾರೆ.

ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿ ಉತ್ತಮ ಪ್ರದರ್ಶನ ನೀಡಿರುವ ನಂತರ ಭಾರತದ ಪ್ರಮುಖ ಬ್ಯಾಡ್ಮಿಂಟನ್ ಆಟಗಾರರು ಮಿಂಚಿದ್ದಾರೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಸಿಂಧು, ತೈವಾನ್ ತುಂಗ್ ಚಿಯೊ ಟೋಂಗ್ ವಿರುದ್ಧ ಕೇವಲ 33 ನಿಮಿಷಗಳಲ್ಲಿ 21-9, 21-12 ಅಂತರದ ಸುಲಭ ಜಯ ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅವರು ಡೆನ್ಮಾರ್ಕ್‌ನ ಅಮಾಲಿ ಶುಲ್ಜ್ ಅವರನ್ನು ಎದುರಿಸಲಿದ್ದಾರೆ. ಮೊದಲನೇ ಸೆಟ್‌ನಲ್ಲೇ ದೊಡ್ಡ ಮುನ್ನಡೆ ಸಾಧಿಸಿದ ಸಿಂಧು 21-9ರಿಂದ ಗೆದ್ದರು. ಅದೇ ಆಟವನ್ನು ಮುಂದುವರಿಸಿದಂತೆ ಎದುರಾಳಿ ತೈವಾನ್‌ನ ತುಂಗ್ ಎರಡನೇ ಸೆಟ್‌ನಲ್ಲಿ 21-12ರಿಂದ ಸೋತರು.

ಲಕ್ಷ್ಯ ಸೇನ್, ಸಿಂಗಾಪುರದ ಜಿಯಾ ಹೆಂಗ್ ಜೇಸನ್ ತೆಹ್ ವಿರುದ್ಧ 21-16, 21-17 ಅಂತರದಲ್ಲಿ ಗೆದ್ದು ತಮ್ಮ ಮುಖಾಮುಖಿ ದಾಖಲೆಯನ್ನು 6-0ಗೆ ಏರಿಸಿದರು. ಅವರೂ ಯಾವುದೇ ಅಡತಡೆ ಇಲ್ಲದೆ ಪ್ರಾಬಲ್ಯ ಸಾಧಿಸಿದರು. ಎರಡೂ ಸೆಟ್‌ಗಳಲ್ಲಿ ಸೇನ ಮುನ್ನಡೆಯಲ್ಲೇ ಇದ್ದರು. ಮಾಜಿ ವಿಶ್ವ ಚಾಂಪಿಯನ್‌ಶಿಪ್ ಬೆಳ್ಳಿ ಪದಕ ವಿಜೇತ ಶ್ರೀಕಾಂತ್, ಸಿಂಗಾಪುರದ ಲೋ ಕೀನ್ ಯೂ ವಿರುದ್ಧ 21-14, 21-15 ಅಂತರದಲ್ಲಿ ಸುಲಭ ಜಯ ದಾಖಲಿಸಿದರು. ಇದೀಗ ಅವರು ತೈವಾನ್ ನಸುಲಿ ಯಾಂಗ್ ಅವರನ್ನು ಎದುರಿಸಲಿದ್ದಾರೆ.

ಮಾಳ್ವಿಕಾಗೂ ಜಯ

ಮಹಿಳಾ ವಿಭಾಗದಲ್ಲಿ ಮಾಳ್ವಿಕಾ ಬನ್ಸೋದ್ ರೋಚಕ ಹೋರಾಟದಲ್ಲಿ ಕೆನಡಾದ ವೆನ್ ಯು ಝಾಂಗ್ ವಿರುದ್ಧ ಜಯ ಸಾಧಿಸಿದರು. ಮೊದಲ ಗೇಮ್ ಸೋತರೂ, ಎರಡನೇ ಗೇಮ್‌ನಲ್ಲಿ ಆರು ಗೇಮ್ ಪಾಯಿಂಟ್ ಉಳಿಸಿಕೊಂಡು ಕೊನೆಗೆ ಪಂದ್ಯವನ್ನು ಮೂರನೇ ಗೇಮ್‌ಗೆ ಕೊಂಡೊಯ್ದು ಗೆಲುವು ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅವರು ಹಾಲಿ ಚಾಂಪಿಯನ್ ಚೆನ್ ಯು ಫೇಯ್ ಅವರನ್ನು ಎದುರಿಸಲಿದ್ದಾರೆ. ಯುವ ಆಟಗಾರ್ತಿ ದೇವಿಕಾ ಸಿಹಾಗ್ ಜಪಾನ್‌ನ ನಾತ್ಸುಕಿ ನಿದೈರಾ ವಿರುದ್ಧ ಗೆದ್ದು ಸೂಪರ್ 500 ಮಟ್ಟದಲ್ಲಿ ತಮ್ಮ ಮೊದಲ ಜಯ ದಾಖಲಿಸಿದರು.

ಹಲವರಿಗೆ ನಿರಾಸೆ

ಆದರೆ ಭರವಸೆಯ ಆಟಗಾರರಾದ ಆಯುಷ್ ಶೆಟ್ಟಿ, ಅನ್ಮೋಲ್ ಖರ್ಬ್, ಉನ್ನತಿ ಹೂಡಾ ಹಾಗೂ ತನ್ವಿ ಶರ್ಮ ಸೋಲು ಕಂಡು ಟೂರ್ನಿಯಿಂದ ಹೊರಬಿದ್ದರು. ಕೋಡೈ ನೊರೊಕಾ ವಿರುದ್ಧ ಆಡಿದ ಆಯುಷ್ 13-21, 21-17, 4-21ರಿಂದ ಸೋತರು. ಸ್ಥಳೀಯ ಆಟಗಾರ್ತಿ ಚೋಚುವಾಂಗ್ ಉನ್ನತಿ ಹೂಡಾ ಅವರನ್ನು 11-21, 21-17, 21-16ರಿಂದ ಸೋಲಿಸಿದರು. ಚೀನಾದ ಚೇನ್ ಅನ್ಮೋಲ್ ಅವರನ್ನು 2-1ರಿಂದ ಸೋಲಿಸಿದರೆ, ತನ್ವಿ ಶರ್ಮ ಹೀನಾ ಅಕೆಚಿ ವಿರುದ್ಧ 17-21, 8-21ರಿಂದ ಸೋಲಿಸಿದರು.

ಕ್ವಾರ್ಟರ್‌ಗೆ ಯಾನಿಕ್‌ಸಿನ್ನರ್

ಹೊಸದಿಲ್ಲಿ: ಉತ್ತಮ ಪ್ರದರ್ಶನ ನೀಡಿರುವ ಯಾನಿಕ್ ಸಿನರ್ ಇಟಾಲಿಯನ್ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಮಂಗಳವಾರ ನಡೆದ ಪಂದ್ಯದಲ್ಲಿ ಅರ್ಹತಾ ಸುತ್ತಿನಿಂದ ಬಂದ ಆಂಡ್ರಿಯಾ ಪೆಲ್ಲೆಗ್ರಿನೊ ವಿರುದ್ಧ 6-2, 6-3 ಅಂತರದಲ್ಲಿ ಗೆದ್ದ ಸಿರ್ನ, ನೊವಾಕ್ ಜೊಕೊವಿಚ್ ಅವರ ದಾಖಲೆಯನ್ನೂ ಸರಿಗಟ್ಟಿದರು. ಗ್ರ್ಯಾಂಡ್ ಸ್ಲ್ಯಾಂಮ್ ಬಳಿಕ ಅತ್ಯಂತ ಮಹತ್ವದ ಟೂರ್ನಿಗಳೆಂದು ಪರಿಗಣಿಸಲ್ಪಡುವ ಮಾಸ್ಟರ್ಸ್ ಸರಣಿಯಲ್ಲಿ ಸಿನರ್ ಇದೀಗ ಸತತ 31ನೇ ಗೆಲುವು ದಾಖಲಿಸಿದ್ದಾರೆ. ಈ ಹಿಂದೆ 2011ರಲ್ಲಿ ಜೊಕೊವಿಚ್ ಇದೇ ಸಾಧನೆ ಮಾಡಿದ್ದರು. ರೋಮ್‌ನಲ್ಲಿ ಪ್ರಶಸ್ತಿ ಗೆದ್ದರೆ, ಎಲ್ಲಾ ಒಂಬತ್ತು ಮಾಸ್ಟರ್ಸ್ 1000 ಟೂರ್ನಿಗಳಲ್ಲೂ ಜಯಿಸಿದ ಎರಡನೇ ಆಟಗಾರ ಎಂಬ ಗೌರವ ಸಿನರ್‌ಗೆ ಸಿಗಲಿದೆ. ಈ ಸಾಧನೆಯನ್ನು ಇದುವರೆಗೆ ಜೊಕೊವಿಚ್ ಮಾತ್ರ ಮಾಡಿದ್ದಾರೆ. ಸಿನರ್ ಈಗಾಗಲೇ ಸತತ ಐದು ಮಾಸ್ಟರ್ಸ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದಾರೆ.



ಇದೇ ವೇಳೆ ಕೈಮಣಿಯ ಗಾಯದಿಂದ ಕಾರ್ಲೋಸ್ ಅಲ್ಕರಾಜ್ ಟೂರ್ನಿಯಿಂದ ಹೊರಗುಳಿದಿರುವುದು ಸಿನರ್‌ಗೆ ಇನ್ನಷ್ಟು ಬಲ ನೀಡಿದೆ. ರೋಮ್ ಮತ್ತು ಮುಂಬರುವ ಫ್ರೆಂಚ್ ಓಪನ್‌ನಲ್ಲಿ ಅವರೇ ಪ್ರಮುಖ ಪ್ರಶಸ್ತಿ ಫೇವರಿಟ್ ಆಗಿದ್ದಾರೆ. ಒಟ್ಟಾರೆ ಸಿನರ್ ತಮ್ಮ ಗೆಲುವಿನ ಸರಣಿಯನ್ನು 26 ಪಂದ್ಯಗಳಿಗೆ ವಿಸ್ತರಿಸಿದ್ದಾರೆ. ಫೆಬ್ರವರಿ 19ರಂದು ಖತಾರ್ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಯಾಕುಬ್ ಮೆನ್ಸಿಕ್ ವಿರುದ್ಧ ಸೋತ ಬಳಿಕ ಅವರು ಇನ್ನೂ ಯಾವುದೇ ಪಂದ್ಯದಲ್ಲಿ ಸೋಲು ಕಂಡಿಲ್ಲ.

ಬೆಳಗಾವಿ ಮಹಾನಗರ ಪಾಲಿಕೆ ಸಭೆಯಲ್ಲಿ ಗಡಿಸಮರ

ಎಂಇಎಸ್ ಸದಸ್ಯರ ವಿರೋಧಕ್ಕೆ ಆಕ್ಷೇಪ

ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯು ಬುಧವಾರ ಕನ್ನಡ ಮತ್ತು ಮರಾಠಿ ಸದಸ್ಯರ ನಡುವಿನ ತೀವ್ರ ವಾಗ್ವಾದಕ್ಕೆ ಸಾಕ್ಷಿಯಾಯಿತು. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ಗೊತ್ತುವಳಿಯನ್ನು ಸ್ವೀಕರಿಸುವ ವಿಚಾರದಲ್ಲಿ ಎಂಇಎಸ್ ಮತ್ತು ಕನ್ನಡ ಪರ ಸದಸ್ಯರ ನಡುವೆ ಭಾರಿ ಗದ್ದಲ ನಡೆದು ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಸಭೆಗೆ ನುಗ್ಗಲು ಯತ್ನಿಸಿದ ಘಟನೆ ನಡೆಯಿತು.

ಕನ್ನಡ ಪರ ಸದಸ್ಯ ರಮೇಶ್ ಸೊಂಟಕ್ಕಿ ಅವರು, ಮಹಾಜನ್ ವರದಿ ಅಂತಿಮ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ಗೊತ್ತುವಳಿಯನ್ನು ಪಾಲಿಕೆ ಅಧಿಕೃತವಾಗಿ ಸ್ವೀಕರಿಸಬೇಕು ಎಂದು ವಿಷಯ ಮಂಡಿಸಿದರು. ಈ ವಿಷಯ ಪ್ರಸ್ತಾಪವಾಗುತ್ತಿದ್ದಂತೆ ಎಂಇಎಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿದೆ, ಹೀಗಿರುವಾಗ ಗೊತ್ತುವಳಿ ಮಂಡಿಸಲು ಸಾಧ್ಯವಿಲ್ಲ ಎಂದು ಉದ್ಧಟತನ ತೋರಿದರು. ಇದು ಕನ್ನಡ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು.

ಸಭೆಯಲ್ಲಿ ಹಾಜರಿದ್ದ ಕಾನೂನು ತಜ್ಞರು, ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಈಗಲೇ ಗೊತ್ತುವಳಿ ಸ್ವೀಕರಿಸಲು ಅವಕಾಶವಿಲ್ಲ ಎಂದರು. ಇದಕ್ಕೆ ತಿರುಗೇಟು ನೀಡಿದ ರಮೇಶ್ ಸೊಂಟಕ್ಕಿ, ಕರ್ನಾಟಕ ವಿಧಾನಸಭೆಯಲ್ಲೇ ಆರು ಬಾರಿ ಇಂತಹ ಗೊತ್ತುವಳಿ ಅಂಗೀಕಾರವಾಗಿದೆ ಎಂದು ನೆನಪಿಸಿದರು. ಗದ್ದಲ ತೀವ್ರಗೊಂಡ ಹಿನ್ನೆಲೆಯಲ್ಲಿ ಮಧ್ಯಪ್ರವೇಶಿಸಿದ ಮೇಯರ್ ಪ್ರೀತಿ ಕಾಮಕರ ಅವರು, ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಈ ಕುರಿತು ಸರ್ಕಾರದ ಅಭಿಪ್ರಾಯ ಪಡೆಯಲಾಗುವುದು ಎಂದು ರೂಲಿಂಗ್ ನೀಡಿದರು.

ಇದೇ ವೇಳೆ, ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಶ್ರೀನಿವಾಸ ತಾಳೂರ್ಕರ್ ನೇತೃತ್ವದಲ್ಲಿ ಪಾಲಿಕೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಬೆಳಗಾವಿ ಕರ್ನಾಟಕದ್ದು ಎಂದು ಘೋಷಣೆ ಕೂಗುತ್ತಾ ಸಭೆಗೆ ನುಗ್ಗಲು ಪ್ರಯತ್ನಿಸಿದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದರು. ನಂತರ ಮೇಯರ್ ಮತ್ತು ಉಪಮೇಯರ್ ಸ್ಥಳಕ್ಕೆ ಬಂದು ಹೋರಾಟಗಾರರಿಂದ ಮನವಿ ಸ್ವೀಕರಿಸಿದರು. ಆಡಳಿತ ಪಕ್ಷದಲ್ಲಿರುವ ಬಿಜೆಪಿ ಮತ್ತು ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ ಸದಸ್ಯರ ನಡುವೆ ಈ ವಿಚಾರದಲ್ಲಿ ಒಮ್ಮತವಿದ್ದರೂ, ಎಂಇಎಸ್ ಸದಸ್ಯರ ನಡೆಯಿಂದಾಗಿ ಪಾಲಿಕೆ ಸಭೆ ರಣರಂಗವಾಗಿ ಪರಿಣಮಿಸಿತು.



ಮರಣ ಹೊಂದಿದವರ ಖಾತೆಗೆ ಗೃಹಲಕ್ಷ್ಮಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮರಣ ಹೊಂದಿದ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಖಾತೆಗೆ ರೂ.22 ಕೋಟಿ ಅನುದಾನ ವರ್ಗಾವಣೆ ಆಗಿದೆ ಎಂಬ ಮಾಹಿತಿಯನ್ನು ರಾಜ್ಯ ಕಚೇರಿ ತಿಳಿಸಿದ್ದು, ಈ ಸಹಾಯಧನ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ ಫಲಾನುಭವಿಗಳ ಮಾಹಿತಿಯನ್ನು ಪಡೆಯಲು ಕ್ರಮ ಕೈಗೊಳ್ಳಬೇಕೆಂದು ದ.ಕ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಸೂಚಿಸಿದ್ದಾರೆ.

ಮಂಗಳವಾರ ದ.ಕ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಲಾಖೆಯ ಮಾಹಿತಿಯಲ್ಲಿ ಜೀವಂತವಿರುವ ಗೃಹಲಕ್ಷ್ಮಿ ಫಲಾನುಭವಿಯು ಮರಣ ಹೊಂದಿರುವುದಾಗಿ ದಾಖಲಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಮುಂದಿನ ಸಭೆಗೆ ವರದಿ ಸಲ್ಲಿಸುವಂತೆ ಸೂಚಿಸಿದರು.

ಫಲಾನುಭವಿಗಳ ಮಾಹಿತಿ ನೀಡಲು ಭರತ್ ಮುಂಡೋಡಿ ಸೂಚನೆ

ಮರಣ ಹೊಂದಿದ ಫಲಾನುಭವಿಯ ಹೆಸರು, ಖಾತೆ ಸಂಖ್ಯೆ ಹಾಗೂ ಬ್ಯಾಂಕಿನ ವಿವರಗಳು ಇದ್ದಲ್ಲಿ ಬ್ಯಾಂಕ್ ಮುಖಾಂತರ ಕ್ರಮ ಕೈಗೊಳ್ಳಬಹುದು. ಇಲ್ಲವಾದಲ್ಲಿ ಗ್ರಾಮದಲ್ಲಿ ಮರಣಹೊಂದಿದವರ ಮಾಹಿತಿ ಗ್ರಾಮ ಕರಣಿಕರ ಕಚೇರಿಯಲ್ಲಿ ಲಭ್ಯವಿರುತ್ತದೆ. ಅಂತಹ ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪಡೆದಲ್ಲಿ ಮರಣ ಹೊಂದಿದ ಫಲಾನುಭವಿಯ ಖಾತೆಗೆ ಸಹಾಯಧನ ಬಿಡುಗಡೆ ಮಾಡುವುದನ್ನು ತಡೆಹಿಡಿಯಬಹುದು. ಮೃತ ಫಲಾನುಭವಿಯ ಮರಣ ಪ್ರಮಾಣ ಪತ್ರ ಬಂದ ತಕ್ಷಣ ಫಲಾನುಭವಿಗಳ ಪಟ್ಟಿಯಿಂದ ಹೆಸರನ್ನು ತೆಗೆಯಬೇಕು. ಅವರ ಹೆಸರು, ಬ್ಯಾಂಕ್ ವಿವರಗಳಿದ್ದಲ್ಲಿ ಬ್ಯಾಂಕ್ ಮುಖಾಂತರ ಖಾತೆಯನ್ನು ಸ್ಥಗಿತಗೊಳಿಸಲು ಕ್ರಮವಹಿಸಬೇಕು ಎಂದು ಅವರು ಸೂಚಿಸಿದರು

ಮತಕ್ಕಾಗಿ ಹಿಜಾಬ್ ಬಳಕೆ: ಅಶೋಕ

ಬೆಂಗಳೂರು: ದಾವಣಗೆರೆ ಉಪಚುನಾವಣೆ ಸುತ್ತ ನಡೆದ ಘಟನೆಗಳ ನಂತರ ಅಲ್ಪಸಂಖ್ಯಾತರ ಆಕ್ರೋಶಕ್ಕೆ ಬೆದರಿರುವ ಕಾಂಗ್ರೆಸ್ ಸರ್ಕಾರ, ಈಗ ತನ್ನ ಮತಬ್ಯಾಂಕ್ ಉಳಿಸಿಕೊಳ್ಳಲು ಹಿಜಾಬ್ ಅಸ್ತ್ರವನ್ನು ಕೈಗೆತ್ತಿಕೊಂಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದ ನೈಜ ಸಮಸ್ಯೆಗಳಾದ ಬೆಲೆ ಏರಿಕೆ, ಭ್ರಷ್ಟಾಚಾರ, ರೈತರ ಸಂಕಷ್ಟ, ಕಾನೂನು ಸುವ್ಯವಸ್ಥೆಯ ವೈಫಲ್ಯ - ಇವೆಲ್ಲದರ ಬಗ್ಗೆ ಮೌನವಾಗಿರುವ ಕಾಂಗ್ರೆಸ್ ಸರ್ಕಾರ, ಮುನಿಸಿಕೊಂಡಿರುವ ಮುಸ್ಲಿಂ ಮತ ಬ್ಯಾಂಕ್‌ಗೆ ಹಿಜಾಬ್ ಮೂಲಕ ಮುಲಾಮು ಹಚ್ಚಲು ಹೊರಟಿದೆ ಎಂದು ಆಕ್ಷೇಪಿಸಿದ್ದಾರೆ.

ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ 2022ರಲ್ಲಿ ಅಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ವಸ್ತ್ರಸಂಹಿತೆಯನ್ನು ಹೈಕೋರ್ಟ್ ಎತ್ತಿ ಹಿಡಿದಿತ್ತು. ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಮುಖ್ಯ ಎಂದು ತೀರ್ಪು ನೀಡಿತ್ತು. ಈಗ ಕೋರ್ಟ್ ಆದೇಶವನ್ನೇ ಗಾಳಿಗೆ ತೂರಿ ಒಂದು ಸಮುದಾಯದ ಓಲೈಕೆಗೆ ಮುಂದಾಗಿರುವುದು ಯಾವ ಸೀಮೆ ಜಾತ್ಯತೀತತೆ? ಒಂದು ಸಮುದಾಯದ ಹಿಜಾಬ್‌ಗೆ ಹಸಿರು ನಿಶಾನೆ ತೋರಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಕೇಸರಿ ಶಾಲುವಿಗೆ ಮಾತ್ರ ನಿಷೇಧ ಹೇರಿದೆ. ನಿಮ್ಮ ಈ ಓಲೈಕೆ ರಾಜಕಾರಣ ಹಿಂದುಗಳಿಗೆ ಅರ್ಥವಾಗುವುದಿಲ್ಲ ಎಂದು ಭಾವಿಸಿದ್ದೀರಾ ಮುಖ್ಯಮಂತ್ರಿಗಳೇ? ಎಂದು ಪ್ರಶ್ನಿಸಿದ್ದಾರೆ.



ಶಾಲಾ-ಕಾಲೇಜುಗಳನ್ನು ಸಮಾನತೆಯ ಕೇಂದ್ರಗಳನ್ನಾಗಿ ನೋಡುವ ಬದಲು, ಧರ್ಮದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ವಿಭಜಿಸುತ್ತಿರುವ ನಿಮ್ಮ ನಡೆಯೇ ನಾಚಿಕೆಗೇಡು. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರ ಅತಿಯಾದ ಓಲೈಕೆ ರಾಜಕಾರಣ ಮಾಡಿ ಯಾವ ದುಸ್ಥಿತಿಗೆ ತಲುಪಿದೆಯೋ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರಕ್ಕೂ ಅದೇ ಗತಿ ಕಾದಿದೆ. ಕರ್ನಾಟಕದಲ್ಲಿ ತುಷ್ಟೀಕರಣದ ಪರಾಕಾಷ್ಠೆ ತಲುಪಿರುವ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರು ತಕ್ಕ ಪಾಠ ಕಲಿಸುವುದು ಗ್ಯಾರಂಟಿ. ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಸಂವಿಧಾನ ಮತ್ತು ನ್ಯಾಯಾಂಗದ ಆಶಯಗಳನ್ನು ಬಲಿಕೊಡುತ್ತಿರುವ ಈ ಸರ್ಕಾರಕ್ಕೆ ಜನರೇ ಅಂತ್ಯ ಹಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ತಡೆಗೋಡೆಗೆ ಅನುದಾನ: ಸಚಿವ

ಕುಂದಾಪುರ: ಸೇತುವೆ ಸಹಿತ ಕಿಂಡಿ ಅಣೆಕಟ್ಟು, ಉಪ್ಪು ನೀರಿನ ತಡೆಗಾಗಿ ನಿರ್ಮಿಸಿರುವ ಕಿಂಡಿ ಅಣೆಕಟ್ಟುಗಳ ನಿರ್ವಹಣೆಗಾಗಿ ವರ್ಷಕ್ಕೆ ಸರಕಾರದಿಂದ 20 ಕೋ.ರೂ. ಖರ್ಚು ಮಾಡುತ್ತಿದ್ದೇವೆ. 5 ವರ್ಷಕ್ಕೆ ನಿರ್ವಹಣೆಗಾಗಿ ಟೆಂಡರ್ ಸಹ ಕರೆದು ಕೊಡಲಾಗುತ್ತಿದೆ. ಆದರೆ ಯಾರ್ಯಾರು ಏನೇನು ಕಾಮಗಾರಿ ಮಾಡಿದ್ದಾರೆ. ಅದರ ಸಂಪೂರ್ಣ ಮಾಹಿತಿ ತರಿಸಿಕೊಂಡು, ಪರಿಶೀಲನೆ ಮಾಡುವ ಮೂಲಕ ಇಲಾಖೆಯಿಂದಲೇ ನಿಗಾವಹಿಸಲಾಗುತ್ತಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದರು.



ಅವರು ಬುಧವಾರ ಕುಂದಾಪುರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ನಮ್ಮ ಇಲಾಖೆಗೆ ವರ್ಷಕ್ಕೆ 50 ಕೋ.ರೂ. ಅಂದರೆ ತಿಂಗಳಿಗೆ 4.16 ಕೋ.ರೂ. ಬಿಡುಗಡೆಯಾಗುತ್ತದೆ. ತಡೆಗೋಡೆ ನಿರ್ಮಾಣಕ್ಕೆ ಗರಿಷ್ಠ ಅರ್ಜಿ ಬರುತ್ತಿದೆ. ಎಲ್ಲಿ ಹೆಚ್ಚಿನ ಅವಶ್ಯಕತೆ ಇದೆಯೋ ಅಲ್ಲಿಗೆ ಖಂಡಿತ ಆದ್ಯತೆ ನೆಲೆಯಲ್ಲಿ ಕೊಡುತ್ತೇವೆ. ಕರಾವಳಿ ಭಾಗದ ನದಿ ಕೊರತೆ ತಡೆಗೋಡೆ ನಿರ್ಮಾಣಕ್ಕೂ ಸಾಧ್ಯವಾದಷ್ಟು ಅನುದಾನ ನೀಡಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ನದಿಗಳ ಜೋಡಣೆ ಯೋಜನೆ ಬಗ್ಗೆ ಏನೇ ಇದ್ದರೂ ಕೇಂದ್ರ ಸರಕಾರವೇ ಕ್ರಮ ಕೈಗೊಳ್ಳಬೇಕು. ಈಗಾಗಲೇ ಇಲಾಖೆಯಿಂದ ಅನೇಕ ಬಾರಿ ಕೇಂದ್ರ ಜಲಶಕ್ತಿ ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಡಿಸಿಎಂ ಡಿಕೆಶಿ ಜತೆಗೂಡಿ ಸ್ವತಃ ನಾನು ಕೇಂದ್ರ ಸಚಿವರನ್ನು ಭೇಟಿಯಾಗಿ 3,200 ಕೋ.ರೂ. ಮೊತ್ತದ ಯೋಜನೆಗಳ ಪ್ರಸ್ತಾವನೆ ಸಲ್ಲಿಸಿದ್ದೇನೆ. ಆದರೆ ಈವರೆಗೆ ಯಾವುದೇ ಅನುದಾನ ಬಂದಿಲ್ಲ ಎಂದವರು ಸ್ಪಷ್ಟಪಡಿಸಿದರು. ನೀಟ್ - ಯುಜಿ ಪ್ರಶ್ನೆ ಪತ್ರಿಕೆ ಸೋರಿಗೆ ಬಗ್ಗೆ ಪೂರ್ತಿ ಮಾಹಿತಿಯಿಲ್ಲ. ಎಲ್ಲೂ ಯಾವ ಪ್ರಶ್ನೆ ಪತ್ರಿಕೆಗಳೂ ಸೋರಿಕೆಯಾಗಬಾರದು ಅನ್ನುವ ಕಟ್ಟುನಿಟ್ಟಿನ ಆದೇಶವಿದೆ. ಈ ಬಗ್ಗೆ ಅನೇಕ ಬಾರಿ ಚರ್ಚೆಯಾಗಿದೆ. ಕಳೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ವೇಳೆ ಸೋರಿಕೆಯಾಗದ ಹಾಗೇ ಕ್ರಮ ಕೈಗೊಂಡಿದ್ದೇವೆ. ಈ ರೀತಿಯ ಸೋರಿಕೆ ಆಗಬಾರದು. ಅಂತವರ ಮೇಲೆ ಮೊದಲು ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ರಾಜ್ಯದಲ್ಲಿ ಮೊದಲಿದ್ದ ಹಾಗೇ ಸಿಇಟಿ ಜಾರಿಗೆ ರಾಜ್ಯ ಸಚಿವ ಸಂಪುಟವೇ ತೀರ್ಮಾನ ಕೈಗೊಳ್ಳಲಿದೆ. ಎಂದರು.

ರಾಗಿಗೆ ಬೆಂಬಲ ಬೆಲೆ ಏರಿಕೆ ಸ್ವಾಗತ

ಬೆಂಗಳೂರು: ಕೇಂದ್ರ ಸರ್ಕಾರದ ಸರ್ಕಾರದ ಸಂಪುಟ ಸಭೆಯಲ್ಲಿ ಕ್ವಿಂಟಲ್ ರಾಗಿ ಬೆಳೆಗೆ 2026-27ರ ಸಾಲಿನಲ್ಲಿ 5,205 ರೂ. ಬೆಂಬಲ ಬೆಲೆ ನಿಗದಿಪಡಿಸಲು ಒಪ್ಪಿಗೆ ನೀಡಿದ ನಿರ್ಧಾರವನ್ನು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಸ್ವಾಗತಿಸಿದ್ದಾರೆ.



ರಾಗಿಗೆ ಬೆಂಬಲ ಬೆಲೆ ಪ್ರತಿ ಕ್ವಿಂಟಲ್‌ಗೆ 5,205 ರೂ. ನಿಗದಿಪಡಿಸಿರುವುದು ಅತ್ಯಂತ ಸ್ವಾಗತಾರ್ಹ ಹಾಗೂ ರೈತಪರ ನಿರ್ಧಾರವಾಗಿದೆ. ಇದು ಲಕ್ಷಾಂತರ ರೈತರಿಗೆ, ವಿಶೇಷವಾಗಿ ರಾಜ್ಯದಲ್ಲಿ, ದೊಡ್ಡ ಉತ್ತೇಜನ ಮತ್ತು ನೆಮ್ಮದಿಯನ್ನು ನೀಡಲಿದೆ. ಕರ್ನಾಟಕದಲ್ಲಿ ರಾಗಿ ಕೇವಲ ಒಂದು ಬೆಳೆ ಮಾತ್ರವಲ್ಲ, ಗ್ರಾಮೀಣ ಕುಟುಂಬಗಳ ಜೀವನೋಪಾಯ, ಆಹಾರ ಭದ್ರತೆ ಮತ್ತು ಸಂಸ್ಕೃತಿಯೊಂದಿಗೆ ಆಳವಾಗಿ ಬೆಸೆದುಕೊಂಡಿದೆ ಎಂದು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5983

ಎಡದಿಂದ ಬಲಕ್ಕೆ
1.ನಿಧಾನ ನಡಿಗೆ-ಮಂದಗಮನ (4)
3. ಮನುಷ್ಯರನ್ನು ಬಲಿಕೊಡುವ ಯಜ್ಞ (4)
5.ಸರ ಧರಿಸಿ ಕತ್ತು ತಿರುಗಿಸಿ ಮಾಡಿದ ವ್ಯಾಯಾಮ (4)
8.ನಕಲುಗಳಿಗಿಂತ ಮೊದಲು ಇರುವ ದಸ್ತಾವೇಜು (4)
10. ಹಗುರವಾಗಿ ತೇಲುತ್ತಿರುವ ನಾವೆ (3)
11. ನಾವು ವಾಸಿಸುವ ಭೂಮಿ (3)
12.ಸಂಪಿಗೆ ಹೂವು ಇಲ್ಲಿ ತಿರುಗಿದೆ (3)
14.ಮಾರ್ದನಿಗೆ ಓಗೊಟ್ಟ ಮಹಿಳೆ (3)
16.ಮಂಗಳನಿರುವ ಸಪ್ತಾಹದ ದಿನ (4)
17.ಪೂರ್ಣ ಮಾಗಿರುವುದು ತಿರುಗಿದೆ (4)

ಮೇಲಿನಿಂದ ಕೆಳಕ್ಕೆ
2.ಗ್ರಾಮ್ಯಭಾಷೆಯಲ್ಲಿ ವ್ಯಾಪಾರ (3)
4.ರಸದಿಂದ ತುಂಬಿದ ಮಾವು (3)
6.ಇದು ಒಂದು ಗಾಳಿವಾದ್ಯ-ಶಹನಾಯಿ (3)
7.ಮೇಲೇರುವಿಕೆ ತಲೆಕೆಳಗಾಗಿದೆ (2)
8.ಮತ್ತೊಬ್ಬರ ವಿಷಯದಲ್ಲಿ ತೂರಿಸಬಾರದ್ದು (2)
9.ಶೌರ್ಯ-ಕಲಿತನದ ಸಮಾನಪದ (3)
11.ಮೈಮೇಲೆ ಹೊದೆವ ಉತ್ತರೀಯ (5)
13.ಶಶಿಯನ್ನೇ ಅಲಂಕಾರ ಮಾಡಿಕೊಂಡವನು-ಶಿವ (5)
14.ವಾಚಾಳಿ ಸರಳಭಾಷೆಯಲ್ಲಿ (4)
15.ಕಾರ್ಯಕ್ರಮವನ್ನು ನಡೆಸುವ ವ್ಯಕ್ತಿ (4)

5982 ಉತ್ತರ

ಎಡದಿಂದ ಬಲಕ್ಕೆ:
1.ಜಾಹೀರಾತು 2.ಜಾಲಂದರ
4.ಮಹೋನ್ನತಿ 6.ಮೊದಲಿಗ
7.ನೋಡುಗ 8.ಮೃಗಸಿರ
9.ವೀರಾಸನ 11.ವಾಡಿಕೆ
12.ಆಕಾಶ 13.ನಾಜೂಕು
15.ನಗೆಗೇಡಿ 16.ಉಗ್ರವಾದಿ

ಮೇಲಿನಿಂದ ಕೆಳಕ್ಕೆ :
1.ಜಾಗೃತಿ 3.ಗರ್ಗರ
5.ಮನೋರಮೆ
6.ಮೊಗವೀರ
8.ಮೃಗವಾಹನ
10.ಉಪಶಮನ 13.ನಾಡಿ
14.ಕುದಿ

ಕಿರುಸುದ್ದಿ

ಜೀಪು ಪ್ರಪಾತಕ್ಕೆ ಉರುಳಿ ಕೇರಳದ ವ್ಯಕ್ತಿ ಸಾವು



ಮಡಿಕೇರಿ: ಜೀಪು ಪ್ರಪಾತಕ್ಕೆ ಬಿದ್ದು ವ್ಯಕ್ತಿಯೊಬ್ಬರು ಸಾವಿಗೀಡಾಗಿರುವ ಘಟನೆ ವೀರಾಜಪೇಟೆ– ಕಣ್ಣೂರು ಮಾರ್ಗದ ಮಾಕುಟ್ಟ ಬಳಿ ಮಂಗಳವಾರ ನಡೆದಿದೆ.ಮೃತರನ್ನು ಕೇರಳದ ಕಣ್ಣೂರು ಜಿಲ್ಲೆಯ ಬಾಲಕೃಷ್ಣ ಎಂದು ಗುರುತಿಸಲಾಗಿದೆ. ಕಣ್ಣೂರು ಜಿಲ್ಲೆಯವರಾದ ಬಾಲಕೃಷ್ಣ ಎಂಬವರು ಮಂಗಳವಾರ ಬೆಳಗ್ಗೆ ಜೀಪ್‌ನಲ್ಲಿ ಕೊಡಗಿಗೆ ಆಗಮಿಸಿ ಅಪರಾಹ್ನ 3.45ಕ್ಕೆ ವೀರಾಜಪೇಟೆಯಿಂದ ಕಣ್ಣೂರಿಗೆ ವಾಪಸ್ ಹೊರಟಿದ್ದರು. ಆದರೆ ಆ ಬಳಿಕ ಕಾಣೆಯಾಗಿದ್ದು, ಈ ಸಂಬಂಧ ವೀರಾಜಪೇಟೆ ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಬಗ್ಗೆ ಪೊಲೀಸರು ತನಿಖೆ ಕೈಗೊಂಡಾಗ ಕೇರಳಕ್ಕೆ ಹೋಗುವ ಮಾಕುಟ್ಟ ರಸ್ತೆಯ ಪೆರುಂಬಾಡಿಯಿಂದ 10 ಕಿ.ಮೀ. ದೂರದಲ್ಲಿ ಜೀಪು ಪ್ರಪಾತಕ್ಕೆ ಉರುಳಿ ಬಿದ್ದಿರುವುದು ಪತ್ತೆಯಾಗಿದೆ. ಈ ಅಪಘಾತದಲ್ಲಿ ಬಾಲಕೃಷ್ಣ ಮೃತಪಟ್ಟಿದ್ದು, ಜೀಪು ಚಾಲನೆ ಸಂದರ್ಭ ಬಾಲಕೃಷ್ಣರ ಹೃದಯ ಸ್ತಂಭನಗೊಂಡು ಈ ಅಪಘಾತ ಸಂಭವಿಸಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಮೃತದೇಹವನ್ನು ಶವ ಪರೀಕ್ಷೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಇರಿಸಲಾಗಿದ್ದು, ಘಟನೆ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

ಸಸಿಹಿತ್ಲು: ಸಿಡಿಲು ಬಡಿದು ಮಹಿಳೆಗೆ ಗಾಯ; ಮನೆಗೆ ಹಾನಿ

ಮುಲ್ಕಿ: ಹಳೆಯಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಸಿಹಿತ್ಲು ಜೋರಾದ ದರ್ಗಾ ಬಳಿ ಮಂಗಳವಾರ ರಾತ್ರಿ ಸಿಡಿಲು ಬಡಿದು ಅಬ್ದುಲ್ ರಝಾಕ್ ಎಂಬವರ ಪತ್ನಿ ಜುಬೇದ (60) ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ. ಮಂಗಳವಾರ ರಾತ್ರಿ 11 ಗಂಟೆಗೆ ಭಾರೀ ಮಳೆ ಗಾಳಿ ಜೊತೆಗೆ ಸಿಡಿಲು ಬಡಿದು ಅಬ್ದುಲ್ ರಜಾಕ್‌ರವರ ಮನೆಗೂ ಹಾನಿಯಾಗಿದೆ. ಮನೆಯೊಳಗಿನ ಇಲೆಕ್ಟ್ರಾನಿಕ್ ವಸ್ತುಗಳು, ಸ್ವಿಚ್ ಬೋರ್ಡ್ ಹಾಗೂ ಮನೆಯ ಗೋಡೆಗೆ ಕೂಡ ಹಾನಿಯಾಗಿದೆ. ಸ್ಥಳಕ್ಕೆ ಹಳೆಯಂಗಡಿ ಗ್ರಾಮ ಪಂಚಾಯತ್ ಮಾಜೀ ಪಂಚಾಯತ್ ಸದಸ್ಯ ಧನರಾಜ್ ಸಸಿಹಿತ್ಲು ಹಾಗೂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ವೃಷಭ ಮಾಸದ ಪೂಜೆಗಾಗಿ ಇಂದು ತೆರೆಯಲಿದೆ ಶಬರಿಮಲೆ ಬಾಗಿಲು

ಕಾಸರಗೋಡು: ವೃಷಭ ಮಾಸದ ಪೂಜೆಗಾಗಿ ಶಬರಿಮಲೆ ಶ್ರೀ ಧರ್ಮಶಾಸ್ತಾ ಕ್ಷೇತ್ರದ ಬಾಗಿಲು ಮೇ 14ರಂದು ಸಂಜೆ 5 ಗಂಟೆಗೆ ತೆರೆಯಲಿದೆ. ತಂತ್ರಿವರ್ಯ ಕಂಠರಾರ್ ಮಹೇಶ್ ಮೋಹನರ್ ಅವರ ಸಮ್ಮುಖದಲ್ಲಿ ಪ್ರಧಾನ ಅರ್ಚಕ ಇ.ಡಿ.ಪ್ರಸಾದ್ ನಂಬೂದಿರಿ ದೇವಾಲಯ ಬಾಗಿಲು ತೆರೆದು ದೀಪ ಬೆಳಗಿಸಲಿದ್ದಾರೆ. ಬಳಿಕ 18ನೇ ಮೆಟ್ಟಿಲಿನ ಕೆಳಗಿನ ಯಜ್ಞಕುಂಡದಲ್ಲಿ ಅಗ್ನಿ ಬೆಳಗಿಸುವರು. ವೃಷಭ ಮಾಸದ ಮೊದಲ ದಿನವಾದ ಮೇ 15ರಂದು ಬೆಳಗ್ಗೆ 5 ಗಂಟೆಗೆ ದೇವಾಲಯವು ದರ್ಶನಕ್ಕಾಗಿ ಬಾಗಿಲು ತೆರೆಯಲಿದೆ. ನಂತರ ಅಯ್ಯಪ್ಪ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಗುವುದು. ಅಂದು ದೀಪಾರಾಧನೆಯ ನಂತರ 18ನೇ ಮೆಟ್ಟಲಲ್ಲಿ ಪಡಿಪೂಜೆ ಇರುತ್ತದೆ. ಮೇ 19ರಂದು ರಾತ್ರಿ 10 ಗಂಟೆಗೆ ಶ್ರೀ ಕ್ಷೇತ್ರದ ಬಾಗಿಲು ಮುಚ್ಚಲಿದೆ. ಶಬರಿಮಲೆಗೆ ಭೇಟಿ ದರ್ಶನಕ್ಕೆ ಆಗಮಿಸುವ ಭಕ್ತರು ವರ್ಚುವಲ್ ಕ್ಯೂ ವೆಬ್‌ಸೈಟ್ www.sabarimala-online.org ಮೂಲಕ ಬುಕ್ಕಿಂಗ್ ಮಾಡಬಹುದು.

ಉದ್ಯೋಗಾವಕಾಶ: ಮೇ 19 ರಂದು ಸಂದರ್ಶನ

ಮಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮೆಡ್‌ಪ್ಲಸ್ ಕಂಪೆನಿ, ಬೆಂಗಳೂರು ಮತ್ತು ಮಂಗಳೂರಿನಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇರ ಸಂದರ್ಶನ ಮೇ 19 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ರವರೆಗೆ ಪಡೀಲ್ ಜಿಲ್ಲಾಡಳಿತ ಕಚೇರಿಯಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನಡೆಯಲಿದೆ. ಹುದ್ದೆಗಳ ವಿವರ: ಫಾರ್ಮಾಸಿಸ್ಟ್ ಹುದ್ದೆಗೆ ಡಿ.ಫಾರ್ಮಾ /ಬಿ.ಫಾರ್ಮಾ (ಪಿ.ಸಿ.ಐ ಸರ್ಟಿಫಿಕೇಟ್ ನೊಂದಿಗೆ) ವಿದ್ಯಾರ್ಹತೆ ಹೊಂದಿರಬೇಕು. ವೇತನ (ಸಿ.ಟಿ.ಸಿ) 3.83 ರಿಂದ 4.16 ಎಲ್.ಪಿ.ಎ., ಫಾರ್ಮಾಸಿ ಯೇಡ್ ಹುದ್ದೆಗೆ ಎಸ್.ಎಸ್.ಎಲ್.ಸಿ/ ಪಿ.ಯು.ಸಿ/ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು.ವೇತನ (ಸಿ.ಟಿ.ಸಿ) 2.70 ರಿಂದ 3.42ಎಲ್.ಪಿ.ಎ., ಸಿ.ಎಸ್.ಎ ಹುದ್ದೆಗೆ ಎಸ್.ಎಸ್.ಎಲ್.ಸಿ/ ಪಿ.ಯು.ಸಿವಿದ್ಯಾರ್ಹತೆ ಹೊಂದಿರಬೇಕು. ವೇತನ (ಸಿ.ಟಿ.ಸಿ) 2.52 ಎಲ್.ಪಿ.ಎ., ಅಪ್ರೆಂಟಿಸ್– ಪಿ.ಯು.ಸಿವಿದ್ಯಾರ್ಹತೆ ಹೊಂದಿರಬೇಕು.ವೇತನ (ಸಿ.ಟಿ.ಸಿ) 1.92 ಎಲ್.ಪಿ.ಎ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 0824 2457139ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಪ್ರಕಟಣೆ ತಿಳಿಸಿದೆ.

ಅಡ್ಡ ಪರಿಣಾಮಗಳಿಲ್ಲದ ಅಡ್ಡ ಬೋರು | ಆಲಂಕಾರಿನ ರೈತರೊಬ್ಬರ ಸಾಹಸ

ಪಾಳು ಕೆರೆಯಲ್ಲಿ ಸಮೃದ್ಧ ನೀರು!

▸ ಸಾಕ್ಷಿ ಆಲಂಕಾರು

ಆಲಂಕಾರು: ಕೇರಳ ರಾಜ್ಯಕ್ಕೆ ಸೀಮಿತವಾಗಿದ್ದ ಅಡ್ಡಬೋರು ಇದೀಗ ಕಡಬ ತಾಲೂಕಿನ ಆಲಂಕಾರಿನಲ್ಲಿ ರೈತನೊಬ್ಬ ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ಕಳೆದ ಕೆಲವು ವರ್ಷಗಳಿಂದ ತನ್ನ ಜಾಗದಲ್ಲಿ ಕೊಳವೆ ಬಾವಿ ಕೊರೆಸಿ ನೀರು ಸಿಗದೆ ಅಪಾರ ಪ್ರಮಾಣದ ಧನ ಕಳೆದುಕೊಂಡಿರುವ ಆಲಂಕಾರು ಗ್ರಾಮದ ಕಯ್ಯಪೆ ನಿವಾಸಿ ಪ್ರಗತಿಪರ ಕೃಷಿಕ ಜನಾರ್ದನ ಗೌಡ ತಮ್ಮ ಬತ್ತಿ ಹೋಗಿದ್ದ ಕೆರೆಗೆ ಅಡ್ಡ ಬೋರ್ ಅಳವಡಿಸಿ ಒಳ್ಳೆಯ ಪ್ರತಿಫಲ ಕಂಡಿದ್ದು, ಕಳೆದ ವರ್ಷ ರಾಜಸ್ಥಾನದಿಂದ ಅಡ್ಡ ಬೋರ್ ಅಳವಡಿಸುವವರನ್ನು ಕರೆಸಿ ಮತ್ತೆ ಅಡ್ಡ ಬೋರ್ ಕೊರೆಸಿ ಮತ್ತಷ್ಟು ಯಶಸ್ಸು ಪಡೆದಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ಜನಾರ್ದನ ಗೌಡರು ಕೆರೆಯಲ್ಲಿದ್ದ ಕೆಸರನ್ನು ತೆಗೆದು ಆಳ ಮಾಡದೆ ಕೆರೆಯ ಗೋಡೆಗಳಲ್ಲಿ ಅಡ್ಡವಾಗಿ ಮಾನವ ಶ್ರಮದ ಅಡ್ಡ ಬೋರ್ ಕೊರೆಸಿದ್ದರು. ಅದು ಕೇವಲ 50 ಅಡಿ ಮಾತ್ರವಾಗಿತ್ತು. ಕೆರೆಯ ಎರಡು ಭಾಗಗಳಲ್ಲಿ ಕೊಳವೆ ಕೊರೆಸಿ ಬಳಿಕ ಅದಕ್ಕೆ ಪೈಪ್ ಅಳವಡಿಸಿದ್ದರು. ಪರಿಣಾಮ ಇವರಿಗೆ ಅಡಿಕೆ ತೋಟಕ್ಕೆ ಬೇಕಾದಷ್ಟು ನೀರು ದೊರೆಯುತ್ತಿರಲಿಲ್ಲ. ಇನ್ನಷ್ಟು ಕೃಷಿ ವಿಸ್ತರಣೆ ಮಾಡುವ ಉದ್ದೇಶದಿಂದ ರಾಜಸ್ಥಾನದ ಅಡ್ಡ ಬೋರ್ ಕೊರೆಯುವ ವ್ಯಕ್ತಿಗಳಿಂದ ಯಾಂತ್ರಿಕೃತವಾಗಿ ಕೊರೆಸಿ ಯಶಸ್ವಿಯಾಗಿದ್ದಾರೆ.



ಕಡಿಮೆ ವೆಚ್ಚದಲ್ಲಿ ನೀರು

ಹಿಂದೆ ಅಡ್ಡ ಬೋರ್ ಕೊರೆಸುವಾಗ ಮಾನವ ಶ್ರಮದಿಂದಲೇ ನಿರ್ಮಾಣ ಮಾಡಬೇಕಿದ್ದುದರಿಂದ ಕೊಳವೆ ಕೊರೆದ ಅಡಿ ಒಂದಕ್ಕೆ ರೂ.200 ವೆಚ್ಚ ನೀಡಬೇಕಾಗಿತ್ತು. ಆದರೆ, ಈಗ ಯಾಂತ್ರಿಕೃತವಾಗಿ ಮಾಡುವುದರಿಂದ ಇದರ ದರ ಇನ್ನಷ್ಟು ಅಗ್ಗವಾಗಿದೆ. ಒಂದು ಅಡಿ ಕೊರೆದರೆ ರೂ.65 ವಿಧಿಸಲಾಗುತ್ತದೆ. ಕೇವಲ ಮೂವರು ಕಾರ್ಮಿಕರು ಹಾಗೂ ಯಂತ್ರವನ್ನು ಬಳಸಿಕೊಂಡು ಸುಲಭದಲ್ಲಿ ಕೊರೆಯಲಾಗುತ್ತದೆ. ಇದಕ್ಕೆ ಬೇಕಾಗುವ ವಿದ್ಯುತ್ ವ್ಯವಸ್ಥೆಗೆ ದೊಡ್ಡ ಜನರೇಟರ್ ಅಗತ್ಯವಿದೆ, ಕೆಸರು ತೆಗೆಯುವ ಕಾರ್ಯಕ್ಕೆ ಬೇರೆಯೇ ವೆಚ್ಚವಿದೆ. ಆದರೂ ಇವರ ಖರ್ಚು ವೆಚ್ಚ ಒಟ್ಟು 50 ಸಾವಿರ ರೂ. ಮೀರುವುದಿಲ್ಲ.

20 ಸ್ಪ್ರಿಂಕ್ಲರ್ ಅಳವಡಿಕೆ

ಈ ವ್ಯವಸ್ಥೆಯಲ್ಲಿ ಸುಮಾರು 300 ಅಡಿಯಷ್ಟು ಕೊರೆಯಲು ಅವಕಾಶವಿದ್ದರೂ ಅವರು ಯಾಂತ್ರಿಕೃತವಾಗಿ 165 ಅಡಿ, 100 ಅಡಿ ಹಾಗೂ 50 ಅಡಿಯ ಮೂರು ಕೊಳವೆ ಕೊರೆಸಿ ಸಮೃದ್ಧ ನೀರು ಪಡೆಯುತ್ತಿದ್ದಾರೆ. ಕೊಳವೆಗಳನ್ನು ಮಾಡಿ 2 ಇಂಚಿನ ಪಿವಿಸಿ ಪೈಪುಗಳನ್ನು ಅಳವಡಿಸಲಾಗಿದೆ. ಈ ಪೈಪುಗಳಿಗೆ ಅಲ್ಲಲ್ಲಿ ರಂಧ್ರಗಳನ್ನು ಕೊರೆಯಲಾಗಿದೆ. ಈ ರಂಧ್ರದ ಮೂಲಕ ನೀರು ಕೆರೆಗೆ ಬರುತ್ತದೆ. ಈಗ 15 ಅಡಿ ಅಗಲ, 20 ಅಡಿ ಉದ್ದ ಹಾಗೂ 20 ಅಡಿ ಆಳವಿರುವ ಈ ಕೆರೆಯಲ್ಲಿ ಇದೀಗ ದಿನಕ್ಕೆ 15 ಅಡಿಯಷ್ಟು ನೀರು ಶೇಖರಣೆಯಾಗುತ್ತಿದ್ದು, 5 ಎಚ್‌ಪಿ ಪಂಪ್ ಚಾಲು ಮಾಡಿದರೆ 3ರಿಂದ 4 ಗಂಟೆ ನೀರು ಸಿಗುತ್ತಿದೆ. ಸುಮಾರು 2 ಸಾವಿರ ಅಡಿಕೆ ಗಿಡ ಇರುವ ಅವರ ತೋಟಕ್ಕೆ ಭರಪೂರ ನೀರು ಸಿಗುತ್ತಿದ್ದು, ಒಂದೇ ಬಾರಿಗೆ 20 ಸ್ಪ್ರಿಂಕ್ಲರ್ ಅಳವಡಿಸಿ ನೀರುಣಿಸಲು ಸಾಧ್ಯವಾಗುತ್ತದೆ.

ಭರಪೂರ ಜಲನಿಧಿ

ಜನಾರ್ದನ ಗೌಡರು ತಮ್ಮ ಕೃಷಿ ಭೂಮಿಯಲ್ಲಿ 3 ಕೊಳವೆ ಬಾವಿಗಳನ್ನು ಕೊರೆಸಿ ನೀರು ಸಿಗದೆ ಅಡಿಕೆ ಕೃಷಿಯನ್ನು ಕಳಕೊಂಡು ಹತಾಶರಾಗಿದ್ದರು. ಅವರ ಭೂಮಿಯ ಅಕ್ಕಪಕ್ಕದ ಸುಮಾರು 25 ಎಕರೆ ಪ್ರದೇಶದಲ್ಲಿ ಕೊಳವೆ ಬಾವಿ ಕೊರೆಸಿದರೂ ನೀರು ಮಾತ್ರ ಯಾರಿಗೂ ಸಿಕ್ಕಿರಲಿಲ್ಲ. ಈ ಕಾರಣಕ್ಕೆ ಜನಾರ್ದನ ಗೌಡರು ತಮ್ಮ ಭೂಮಿಯಲ್ಲಿ ಮತ್ತೆ ಕೊಳವೆ ಬಾವಿ ಕೊರೆಸಲಿಲ್ಲ. ಆರಂಭದಲ್ಲಿ ಕುಮಾರ ಧಾರ ನದಿಯಿಂದ ನೀರೆತ್ತಿ ಸುಮಾರು ಒಂದು ಕಿ.ಮೀ. ದೂರಕ್ಕೆ ಪೈಪ್ ಹಾಕಿ ತೊಟಕ್ಕೆ ನೀರು ಹಾಕುತ್ತಿದ್ದರು. ಅದು ಸಮಸ್ಯೆ ಎನಿಸಿದಾಗ ಅಡ್ಡ ಬೋರ್ ಪ್ರಯೋಗ ನಡೆಸಿದರು. ಆರಂಭದಲ್ಲಿ ಸುಮಾರು 2 ಇಂಚು ನೀರು ಸಿಕ್ಕಿತ್ತು. ಆ ಕೊಳವೆಯಲ್ಲಿ ನೀರಿನ ಪ್ರಮಾಣ ಸ್ವಲ್ಪ ಕಡಿಮೆಯಾಗಿರುವುದರಿಂದ ಮತ್ತೆ 55 ಅಡಿ ಉದ್ದದ ಒಂದು ಅಡ್ಡಬೋರನ್ನು ಅಳವಡಿಸಿದ್ದರು. ಈ ವರ್ಷ ಮತ್ತೆ ಪ್ರಯೋಗ ಮಾಡಿ ಯಶಸ್ಸು ಕಂಡು ಈ ಬಿರು ಬೇಸಿಗೆಯಲ್ಲಿ ಭರಪೂರ ಜಲನಿಧಿ ಒಲಿದಿದೆ.

ಸಮಸ್ಯೆ ಪರಿಹಾರ



ಈ ಮಣ್ಣಿನ ಸಂಸ್ಕೃತಿಯ ಭಾಗವಾಗಿರುವ ಕೆರೆ ಬಾವಿಗಳನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೆರೆಗಳು ಮಾಯವಾಗಿ ಕೊಳವೆ ಬಾವಿಗಳು ಹೆಚ್ಚಾಗುತ್ತಿವೆ. ಆದರೂ ನೀರಿಗೆ ತತ್ವಾರ ಇದ್ದೇ ಇದೆ. ಮಾತ್ರವಲ್ಲ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಕೆರೆಗಳಲ್ಲಿ ಅಡ್ಡ ಬೋರ್‌ಗಳನ್ನು ಕೊರೆಸಿ ನೀರು ಶೇಖರಣೆ ಮಾಡಿದರೆ ನೀರು ಶಾಶ್ವತವಾಗಿರುತ್ತದೆ. ನಮ್ಮಲ್ಲಿರುವ ಕೆರೆ ಅಡ್ಡ ಬೋರ್ ಅಳವಡಿಸಿರುವುದರಿಂದ ನಮ್ಮ ನೀರಿನ ಸಮಸ್ಯೆ ನೀಗಿದೆ.

■ ಜನಾರ್ದನ ಗೌಡ, ಕೃಷಿಕ

ಪಣಂಬೂರು, ಮುಲ್ಕಿ ಪೊಲೀಸರ ಕಾರ್ಯಾಚರಣೆ

ಮಾದಕ ದ್ರವ್ಯ ಸಾಗಾಟ: ಕಾಲೇಜ್ ವಿದ್ಯಾರ್ಥಿನಿ ಸೆರೆ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಮುಲ್ಕಿ ರೈಲ್ವೇ ಸ್ಟೇಷನ್ ರಸ್ತೆಯಲ್ಲಿ ಹೈಡ್ರೊವಿಡ ಗಾಂಜಾ ಮಾದಕ ದ್ರವ್ಯವನ್ನು ಮಾರಾಟ ಮಾಡಲು ಸಾಗಾಟ ಮಾಡುತ್ತಿದ್ದ ಕಾಲೇಜ್ ವಿದ್ಯಾರ್ಥಿನಿಯೊಬ್ಬಳನ್ನು ಪೊಲೀಸರು ಸೆರೆ ಹಿಡಿದಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹುಲಿದೇವರ ಬನ ಸಾಗರ ತಾಲೂಕಿನ, ಪ್ರಸ್ತುತ ಕುಂದಾಪುರ ಕಾಲೇಜಿನ ಅಂತಿಮ ವರ್ಷದ ಬಿಸಿಎ ವಿದ್ಯಾರ್ಥಿನಿ ಸುಹಾನ (21) ಬಂಧಿತಳಾದವಳು.



ಪಣಂಬೂರು ಎಸಿಪಿ ತಂಡ ಹಾಗೂ ಮೂಲ್ಕಿ ಠಾಣೆಯ ತಂಡ ಕಾರ್ಯಾಚರಣೆ ನಡೆಸಿದ್ದು, ಆಕೆಯಿಂದ ಸುಮಾರು 35 ಲಕ್ಷ ರೂ. ಮೌಲ್ಯದ ಸುಮಾರು 1 ಕೆಜಿ 42 ಗ್ರಾಮ್ ಹೈಡ್ರೊವಿಡ ಗಾಂಜಾ ಮಾದಕ ವಸ್ತುವನ್ನು ಹಾಗೂ ಕೃತ್ಯಕ್ಕೆ ಬಳಸಿದ ಮೊಬೈಲ್ ಫೋನ್ ಮತ್ತು ಇತರ ಸೊತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಸುಹಾನ ಚೆನ್ನೈನಿಂದ ಹೈಡ್ರೊವಿಡ ಗಾಂಜಾ ತರಿಸಿಕೊಂಡು ಮಂಗಳೂರಿನಲ್ಲಿ ಮಾರಾಟ ಮಾಡಿ ಹಣ ಗಳಿಸುವ ಉದ್ದೇಶದಿಂದ ತಂದಿರುವುದಾಗಿ ಪೊಲೀಸ್ ತನಿಖೆಯಿಂದ ತಿಳಿದು ಬಂದಿದೆ. ಸುಹಾನ ವಿರುದ್ಧ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಹಾನ ವಿರುದ್ಧ ಈ ಹಿಂದೆ ಕಾವೂರು ಪೊಲೀಸ್ ಠಾಣೆ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ಕಸ್ಟಮ್ ವಿಭಾಗದಲ್ಲಿ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇಗುಲ 84 ಕೋ. ರೂ. ವಾರ್ಷಿಕ ಆದಾಯ

ಬೈಂದೂರು: ಕೊಲ್ಲೂರು ಶ್ರೀ ಮೂಕಾಂಬಿಕಾ ದೇಗುಲಕ್ಕೆ 2025–26ನೇ ಸಾಲಿನಲ್ಲಿ ಠೇವಣಿ ಹಾಗೂ ಉಳಿತಾಯ ಮೊತ್ತ ಹೊರತುಪಡಿಸಿ 84,00,59,189.83 ಕೋ. ರೂ. ಆದಾಯ ಬಂದಿದೆ. ಕಳೆದ ಬಾರಿಗಿಂತ 13 ಕೋಟಿ ರೂ. ಹೆಚ್ಚಳವಾಗಿದೆ.

2023–24ರಲ್ಲಿ ರೂ. 68,23,06,285 ಆದಾಯ, ರೂ.26,59,12,715 ನಿವ್ವಳ ಉಳಿತಾಯ, ರೂ. 168,48,76,316 ನಿಶ್ಚಿತ ಠೇವಣಿ, 2024–25ರಲ್ಲಿ ರೂ. 71,93,37,864 ಆದಾಯ, ರೂ.31,35,18,212 ನಿವ್ವಳ ಉಳಿತಾಯ, ರೂ. 200,83,64,755 ನಿಶ್ಚಿತ ಠೇವಣಿ, 2025–26ರಲ್ಲಿ ರೂ. 32,75,67,386 ನಿವ್ವಳ ಉಳಿತಾಯ, ರೂ.229,82,32,074 ನಿಶ್ಚಿತ ಠೇವಣಿ ಆಗಿದೆ.



ಹರಕೆ ಸೇವೆ, ಕಾಣಿಕೆ ಹುಂಡಿ, ಛತ್ರ, ಕಟ್ಟಡಗಳ ಬಾಡಿಗೆ ದೇಗುಲದ ಆದಾಯದ ಮೂಲಗಳಾಗಿವೆ. ವರ್ಷಂಪ್ರತಿ ಆದಾಯ ಹೆಚ್ಚಳವಾಗುತ್ತಿದ್ದು 2025–26ರಲ್ಲಿ ದಾಖಲೆ ಆದಾಯ ಬಂದಿದೆ. ಭಕ್ತರಿಂದ ಹರಕೆ, ಕಾಣಿಕೆ ರೂಪದಲ್ಲಿ ಚಿನ್ನ ಬೆಳ್ಳಿ ಕೂಡ ಸಂದಾಯವಾಗಿದೆ. ಅಲ್ಲದೇ ತುಲಾಭಾರ, ಚಂಡಿಕಾಯಾಗ, ಅನ್ನದಾಸೋಹಕ್ಕೆ ಭಕ್ತರಿಂದ ಕಾಣಿಕೆ ರೂಪದಲ್ಲಿ ಪಾವತಿಯಾಗಿದೆ. ದೇವಳದ ವಸತಿಗೃಹದಿಂದ ಉತ್ತಮ ಆದಾಯ ಲಭಿಸುತ್ತಿದ್ದು ಇದೀಗ ನೂತನ ವಸತಿಗೃಹ ನಿರ್ಮಾಣಕ್ಕೆ ಸರ್ಕಾರದ ಅನುಮತಿ ದೊರಕಿದೆ. ದೇಗುಲದ ಸಮಗ್ರ ಅಭಿವೃದ್ಧಿಗೆ ಪೂರಕವಾದ ವ್ಯವಸ್ಥೆ ಕಲ್ಪಿಸುವಲ್ಲಿ ಭಕ್ತರಿಗೆ ಸಕಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ದೇಗುಲದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ ಕುಮಾರ್ ಶೆಟ್ಟಿ ಹಾಗೂ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ತಿಳಿಸಿದ್ದಾರೆ.

ಯುವತಿಯ ತಲೆಗೆ ಕಲ್ಲಿನಿಂದ ಜಜ್ಜಿ ಕೊಲೆ ಯತ್ನ

ಚಿನ್ನದ ಸರ ದೋಚಿದ ದುಷ್ಕರ್ಮಿಗಳು

ಉಡುಪಿ: ಇಲ್ಲಿನ ಶಾಂತಿನಗರದ ಸುದರ್ಶನ ಕಾಂಪ್ಲೆಕ್ಸ್‌ನ ಬಾಡಿಗೆ ರೂಮಿನಲ್ಲಿ ವಾಸವಿದ್ದ ಯುವತಿಯೊಬ್ಬಳ ಮೇಲೆ ಅಪರಿಚಿತ ವ್ಯಕ್ತಿಗಳು ಸಿಮೆಂಟ್ ಕಲ್ಲಿನಿಂದ ಹಲ್ಲೆ ನಡೆಸಿ, ಆಕೆಯ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ದೋಚಿರುವ ಆತಂಕಕಾರಿ ಘಟನೆ ನಡೆದಿದೆ.

ಗಂಭೀರವಾಗಿ ಗಾಯಗೊಂಡ ಯುವತಿಯನ್ನು ಕುಮಟಾ ಮೂಲದ ಯೋಗಿತಾ ಎಂದು ಗುರುತಿಸಲಾಗಿದೆ.

ಮೇಘಾ ಮಂಜುನಾಥ ಗೌಡ ಹಾಗೂ ಸ್ನೇಹಿತೆಯರಾದ ನಾಗರತ್ನ ಮತ್ತು ಗಗನಾ ಅವರು ಮೇ 12ರಂದು ಸಂಜೆ ಮಣಿಪಾಲ ಕೈಗಾರಿಕಾ ಪ್ರದೇಶದ ಬೈಂಡಿಂಗ್ ಪ್ರೆಸ್‌ಗೆ ರಾತ್ರಿ ಪಾಳಿ ಕೆಲಸಕ್ಕೆ ತೆರಳಿದ್ದರು. ಮೇ 13ರ ಬೆಳಿಗ್ಗೆ 7.15ಕ್ಕೆ ಅವರು ಕೆಲಸ ಮುಗಿಸಿ ರೂಮಿಗೆ ವಾಪಸ್ಸಾದಾಗ, ಮನೆಯ ಬಾಗಿಲು ಅರೆ ತೆರೆದ ಸ್ಥಿತಿಯಲ್ಲಿತ್ತು. ಒಳಗೆ ಹೋಗಿ ನೋಡಿದಾಗ ಯೋಗಿತಾ ತಲೆಗೆ ಬಲವಾದ ಪೆಟ್ಟು ಬಿದ್ದು ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡುಬಂದಿದೆ. ಆಕೆಯ ಪಕ್ಕದಲ್ಲೇ ರಕ್ತಸಿಕ್ತವಾದ ತುಂಡಾದ ಸಿಮೆಂಟ್ ಕಲ್ಲುಗಳು ಪತ್ತೆಯಾಗಿವೆ.

ಚಿನ್ನಾಭರಣ ದೋಚಿದ ಕೃತ್ಯ


ಘಟನೆಯ ಸಮಯದಲ್ಲಿ ಅಪರಿಚಿತ ದುಷ್ಕರ್ಮಿಗಳು ಯೋಗಿತಾಳ ಕುತ್ತಿಗೆ ಯಲ್ಲಿದ್ದ ಸುಮಾರು 8 ಗ್ರಾಂ ತೂಕದ (ಅಂದಾಜು 80,000 ರೂ. ಮೌಲ್ಯದ) ಬಂಗಾರದ ಸರವನ್ನು ಕಿತ್ತು ಕೊಂಡು ಪರಾರಿಯಾಗಿದ್ದಾರೆ. ಹಲ್ಲೆಯ ತೀವ್ರತೆಗೆ ಯೋಗಿತಾ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ತಕ್ಷಣವೇ ಆಕೆಯನ್ನು ಆಟೋರಿಕ್ಷಾ ಮೂಲಕ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಆಕೆ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೇ 12ರ ಸಂಜೆ 6 ಗಂಟೆಯಿಂದ ಮೇ 13ರ ಬೆಳಿಗ್ಗೆ 7.15ರ ಅವಧಿಯಲ್ಲಿ ಈ ಕೃತ್ಯ ನಡೆದಿದ್ದು, ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿಜಾಬ್ ನಿಷೇಧ ಹಿಂಪಡೆದ ರಾಜ್ಯ ಸರ್ಕಾರ | ಯಶ್‌ಪಾಲ್ ಆಕ್ರೋಶ

ಶಿಕ್ಷಣ ವ್ಯವಸ್ಥೆಯ ಇಸ್ಲಾಮೀಕರಣ

ಉಡುಪಿ: ರಾಜ್ಯದ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಆದೇಶವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂಪಡೆಯುವ ಮೂಲಕ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಇಸ್ಲಾಮೀಕರಣಗೊಳಿಸಲು ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ ಜಾತಿ ಮತ ಬಡವ ಶ್ರೀಮಂತ ಎಂಬ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ ಶಾಲಾ ಸಮವಸ್ತ್ರದ ಆಶಯಕ್ಕೆ ವಿರುದ್ಧವಾಗಿ ಇದೀಗ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವ ಮೂಲಕ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಗೊಂದಲ ಸೃಷ್ಟಿಸಲು ರಾಜ್ಯ ಸರ್ಕಾರ ಮುಂದಾಗಿದೆ.

2021 ಡಿಸೆಂಬರ್ ತಿಂಗಳಿನಲ್ಲಿ ಉಡುಪಿಯ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ 6 ಮಂದಿ ವಿದ್ಯಾರ್ಥಿನಿಯರು ದುರುದ್ದೇಶ ಪೂರ್ವಕವಾಗಿ ಹಿಜಾಬ್ ಅವಕಾಶ ನೀಡುವಂತೆ ಆಗ್ರಹಿಸಿ ವಿವಾದ ಸೃಷ್ಟಿಸಿ ರಾಜ್ಯ ಹಾಗೂ ದೇಶದಾದ್ಯಂತ ಗೊಂದಲ ನಿರ್ಮಾಣವಾಗಿ ಶಿಕ್ಷಣ ವ್ಯವಸ್ಥೆಗೆ ಹಾಗೂ ಕಾನೂನು ವ್ಯವಸ್ಥೆಗೆ ಧಕ್ಕೆ ಉಂಟಾಗಿದ್ದು, ಈ ಸಂದರ್ಭದಲ್ಲಿ ಕೆಲವು ಮತೀಯವಾದಿ ನಿಷೇಧಿತ ಸಂಘಟನೆಗಳು ಹಿಜಾಬ್ ವಿವಾದದ ಮೂಲಕ ಶಾಂತಿ ಸುವ್ಯವಸ್ಥೆಗೂ ಧಕ್ಕೆ ತರುವ ಪ್ರಯತ್ನ ಮಾಡಿರುವುದನ್ನು ರಾಜ್ಯದ ಜನತೆ ಇಂದೂ ಮರೆತಿಲ್ಲ.

ಕೇವಲ ಅಲ್ಪಸಂಖ್ಯಾಂತರ ಓಲೈಕೆಗಾಗಿ ಹಿಜಾಬ್ ನಿಷೇಧ ಆದೇಶವನ್ನು ಹಿಂಪಡೆಯಲು ರಾಜ್ಯ ಸರಕಾರ ಮುಂದಾಗಿದೆ. ಹಿಜಾಬ್ ಧರಿಸಲು ಅವಕಾಶ ನೀಡುವ ಸರ್ಕಾರ ಕೇಸರಿ ಶಾಲು ಧರಿಸಲು ಅವಕಾಶ ನೀಡದೆ ಮತ್ತೊಮ್ಮೆ ತನ್ನ ಹಿಂದೂ ವಿರೋಧಿ ನಿಲುವನ್ನು ಮುಂದುವರೆಸಿದೆ.



ಈ ಹಿಂದೆ ಹಿಜಾಬ್ ಇಸ್ಲಾಂನ ಅತ್ಯಗತ್ಯ ಭಾಗವಲ್ಲ ಎಂದು ಹೈಕೋರ್ಟ್‌ನ ತ್ರಿಸದಸ್ಯ ಪೀಠ ನೀಡಿದ ತೀರ್ಪು ನೀಡಿದ್ದರೂ ಹಿಜಾಬ್ ಧರಿಸಲು ಅವಕಾಶ ನೀಡಲು ಅತಿ ಮುತುವರ್ಜಿ ವಹಿಸುತ್ತಿರುವ ರಾಜ್ಯ ಸರಕಾರ ತನ್ನ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು. ಕೇವಲ ರಾಜಕೀಯ ಉದ್ದೇಶಕ್ಕಾಗಿ ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಹದಗೆಡಿಸಿ ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡಲು ಅವಕಾಶ ನೀಡುವುದಿಲ್ಲ ಎಂದು ಶಾಸಕ ಯಶ್ ಪಾಲ್ ಸುವರ್ಣ ಎಚ್ಚರಿಕೆ ನೀಡಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಗುರುವಾರ 14, ಮೇ 2026 | e-mail dìganthamlr@gmail.com | Website www.hosadigantha.com

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 26° | ಉಡುಪಿ 35° 27°

ಮಳೆ ನಿಂತು ಹೋದ ಮೇಲೆ...



ಮಂಗಳವಾರ ರಾತ್ರಿ ಸುರಿದ ಗುಡುಗು ಸಿಡಿಲಿನ ಸಹಿತದ ಬಿರುಗಾಳಿ ಮಳೆಗೆ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ಆಸ್ತಿಪಾಸ್ತಿಗಳಿಗೆ ಅಪಾರ ಹಾನಿ ಉಂಟಾಗಿದೆ. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಹಲವು ಮನೆಗಳಿಗೆ ಮರ ಉರುಳಿ ಹಾನಿ ಸಂಭವಿಸಿವೆ.

ಮಳೆಗಾಲಕ್ಕೆ ಪುತ್ತೂರು ಮೆಸ್ಕಾಂ ಸನ್ನದ್ಧ

ಕರೆಂಟ್ ಪ್ರಾಬ್ಲೆಂ? ಡೋಂಟ್ ವರಿ!

ಇನ್ನೇನು ಮಳೆಗಾಲ ನಾಡಿಗೆ ಕಾಲಿಡುವ ಸಮಯ ಬಂದಿದ್ದು, ಮೆಸ್ಕಾಂ ಪುತ್ತೂರು ವಿಭಾಗವು ತಮ್ಮ ವ್ಯಾಪ್ತಿಯಲ್ಲಿ ಮಳೆಗಾಲದ ಎಲ್ಲಾ ಸವಾಲು ಎದುರಿಸಲು ಸರ್ವ ಸನ್ನದ್ಧವಾಗಿದೆ. ಗ್ರಾಹಕರ ವಿದ್ಯುತ್ ಸಮಸ್ಯೆ ಮತ್ತು ದೂರುಗಳಿಗೆ ಈಗಾಗಲೇ ಟೋಲ್ ಫ್ರೀ ಸಂಖ್ಯೆ ಕೂಡಾ ಆರಂಭಿಸಲಾಗಿದೆ.

ವಿದ್ಯುತ್‌ನ ಅವಘಡದ ಬಗ್ಗೆ ಮುನ್ಸೂಚನೆ ಕಂಡಲ್ಲಿ ತಕ್ಷಣ ಕೆಳಗೆ ತಿಳಿಸಿರುವ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಮೆಸ್ಕಾಂ ಇಲಾಖೆ ವಿನಂತಿಸಿದೆ.

ಪುತ್ತೂರು: ಮಳೆಗಾಲ ಹತ್ತಿರವಾಗುತ್ತಿದ್ದು, ಈ ಸಂದರ್ಭದಲ್ಲಿ ವಿದ್ಯುತ್ ಪ್ರಸರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಎಚ್ಚರಿಕೆ ಕ್ರಮಗಳನ್ನು ಅನುಸರಿಸುವಂತೆ ಮೆಸ್ಕಾಂ ವಿನಂತಿಸಿದೆ.
ಮಳೆಗಾಲಕ್ಕೆ ಪುತ್ತೂರು ವಿಭಾಗ ಸರ್ವ ಸನ್ನದ್ಧವಾಗಿದ್ದು, ಗ್ರಾಹಕರ ಸಮಸ್ಯೆ ನಿವಾರಣೆಗೆ ಹಾಗೂ ತುರ್ತು ನಿರ್ವಹಣಾ ಕೆಲಸಗಳಿಗಾಗಿ ಹೆಚ್ಚುವರಿ 48 ಮಂದಿಯ ಕಾರ್ಯ ಪಡೆ, ಪವರ್ ಮೆನ್‌ಗಳ ಜತೆ ಕಾರ್ಯ ನಿರ್ವಹಿಸಲಿದೆ.

ಇದು ನೆನಪಿರಲಿ
- ಸಾರ್ವಜನಿಕರು ತುಂಡಾಗಿ ಬಿದ್ದ ವಿದ್ಯುತ್ ಲೈನ್ನ್ನು ಮುಟ್ಟಬಾರದು
- ವಿದ್ಯುತ್ ಕಂಬ ಹಾಗೂ ಇತರೆ ವಿದ್ಯುತ್ ಉಪಕರಣ ಮುಟ್ಟದಿರಿ
- ಜಾನುವಾರು ವಿದ್ಯುತ್ ಕಂಬಕ್ಕೆ ಕಟ್ಟಬೇಡಿ
- ಬಟ್ಟೆ ಒಣಗಲು ವಿದ್ಯುತ್ ಸಾಮಗ್ರಿ ಬಳಕೆ ಮಾಡದಿರಿ

ಸೇವೆಗಾಗಿ ಹೆಚ್ಚುವರಿ 6 ವಾಹನಗಳು
ಪುತ್ತೂರು ಮೆಸ್ಕಾಂ ವಿಭಾಗದಲ್ಲಿ ಈಗಾಗಲೇ 5 ವಾಹನಗಳು ಕಾರ್ಯಾಚರಿಸುತ್ತಿದ್ದು ಹೆಚ್ಚುವರಿಯಾಗಿ 6 ವಾಹನಗಳು ಬಂದಿವೆ. ವಿದ್ಯುತ್‌ನ ಅವಘಡದ ಬಗ್ಗೆ ಮುನ್ಸೂಚನೆ ಕಂಡು ಬಂದಲ್ಲಿ ತಕ್ಷಣ ಕೆಳಗೆ ತಿಳಿಸಿರುವ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸುವಂತೆ ಇಲಾಖೆ ವಿನಂತಿಸಿದೆ.

ನಗರ ಉಪವಿಭಾಗ
24 ತಾಸು ಸೇವಾ ಕೇಂದ್ರ 9480833013, 08251 236393
ಶಾಖಾಧಿಕಾರಿ (ಪು-1) 9448289638, 08251 236393
ಶಾಖಾಧಿಕಾರಿ (ಪು-2) 9448289644, 08251 236493
ಶಾಖಾಧಿಕಾರಿ ಉಪ್ಪಿನಂಗಡಿ 9448289646, 08251 251401
ಶಾಖಾಧಿಕಾರಿ ಬನ್ನೂರು 9480841354, 08251 233393
ಸ. ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) 9448289504, 08251 230393

ಗ್ರಾ. ಉಪವಿಭಾಗ
24 ತಾಸು ಸೇವಾ ಕೇಂದ್ರ 08251 285683
ಶಾಖಾಧಿಕಾರಿ ಕುಂಬ್ರ 9448289645, 08251 285683
ಶಾಖಾಧಿಕಾರಿ ಬೆಟ್ಟಂಪಾಡಿ 9448998737, 08251 288493
ಶಾಖಾಧಿಕಾರಿ ಸವಣೂರು 9448998736, 08251 282063
ಶಾಖಾಧಿಕಾರಿ ಈಶ್ವರಮಂಗಲ 9480833074, 08251 289283
ಸ. ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) 9480833065, 08251 234393

ಕಡಬ ಉಪವಿಭಾಗ
24 ತಾಸುಗಳ ಸೇವಾ ಕೇಂದ್ರ 9480841369, 08251 260158
ಶಾಖಾಧಿಕಾರಿ ಕಡಬ 9448289647, 08251 260158
ಶಾಖಾಧಿಕಾರಿ ಆಲಂಕಾರು 9448998738, 08251 263600
ಶಾಖಾಧಿಕಾರಿ ನೆಲ್ಯಾಡಿ 9448998725, 08251 254493
ಶಾಖಾಧಿಕಾರಿ ಬಿಳಿನೆಲೆ 9480841353, 08251 262353
ಸ. ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) 9480833044, 08251 260159

ಸುಳ್ಯ ಉಪವಿಭಾಗ
24 ತಾಸು ಸೇವಾ ಕೇಂದ್ರ 9480833015, 08257 233299
ಶಾಖಾಧಿಕಾರಿ ಸುಳ್ಯ 9448289643, 08257 233299
ಶಾಖಾಧಿಕಾರಿ ಬೆಳ್ಳಾರೆ 9448289653, 08257 272499
ಶಾಖಾಧಿಕಾರಿ ಅರಂತೋಡು 9448998740, 08257 265199
ಶಾಖಾಧಿಕಾರಿ ಜಾಲ್ಸೂರು 9480841352, 08257 233399
ಸ. ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) 9448289505, 08257 231399

ಸುಬ್ರಹ್ಮಣ್ಯ
24 ತಾಸು ಸೇವಾ ಕೇಂದ್ರ 8277882868, 08257 281355
ಶಾಖಾಧಿಕಾರಿ ಸುಬ್ರಹ್ಮಣ್ಯ 9480841355, 08257 281355
ಶಾಖಾಧಿಕಾರಿ ಪಂಜ 9480841351, 08257 278399
ಶಾಖಾಧಿಕಾರಿ ಗುತ್ತಿಗಾರು 9448289652, 08257 282199
ಸ. ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) 9480841346, 08257 231399, 9448289443, 08251 237593

ಸುತ್ತ ಮುತ್ತ

ಉಡುಪಿಯಲ್ಲೂ ಮಳೆಯಬ್ಬರ: ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಉಡುಪಿ: ಮಂಗಳವಾರ ರಾತ್ರಿ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಭಾರೀ ಮಳೆಯಾಗಿದ್ದು ಜನಜೀವನ ಅಸ್ತವ್ಯಸ್ತಗೊಳಿಸಿತ್ತು.

ಎಲ್ಲೆಲ್ಲಿ ಮಳೆ? ಎಲ್ಲೆಲ್ಲಿ ಹಾನಿ?
ಮಂಗಳವಾರ ರಾತ್ರಿ 9.30ರ ನಂತರ ಗುಡುಗು ಸಹಿತ ಆರಂಭವಾದ ಅಬ್ಬರದ ಮಳೆಯು ಉಡುಪಿ ನಗರ, ಕಟಪಾಡಿ, ಶಂಕರಪುರ, ಶಿರ್ವ, ಆಲೆವೂರು, ಹಿರಿಯಡ್ಕ, ಪೆರ್ಣಂಕಿಲ, ಮೂಡಬೆಳ್ಳೆ, ಬ್ರಹ್ಮಾವರ ಹಾಗೂ ಕಾಪು ಸೇರಿದಂತೆ ಜಿಲ್ಲೆಯ ಬಹುತೇಕ ಭಾಗಗಳನ್ನು ವ್ಯಾಪಿಸಿತು. ಗಾಳಿಯ ತೀವ್ರತೆಗೆ ಹಲವೆಡೆ ವಿದ್ಯುತ್ ಕಂಬಗಳು ನೆಲಸಮಗೊಂಡಿದ್ದು ರಾತ್ರಿಯಿಡೀ ವಿದ್ಯುತ್ ಸಂಪರ್ಕ ಕಡಿತಗೊಂಡು ಸಾರ್ವಜನಿಕರು ಕತ್ತಲಲ್ಲಿ ಕಾಲ ಕಳೆಯುವಂತಾಗಿತ್ತು.

ಸಿಡಿಲು ಬಡಿದು ಮನೆಗೆ ಬೆಂಕಿ: ಮನೆಯೊಡತಿ ಅದೃಷ್ಟವಶಾತ್ ಪಾರು

ಕಾಸರಗೋಡು: ಸಿಡಿಲು ಬಡಿದ ಪರಿಣಾಮ ಮನೆಗೆ ಬೆಂಕಿ ತಗುಲಿದ ಘಟನೆ ಕಸಬಾ ಕಡಪ್ಪುರದಲ್ಲಿ ಮಂಗಳವಾರ ರಾತ್ರಿ ನಡೆದಿದೆ. ಕಸಬಾ ಕಡಪ್ಪುರದ ಮೀನಾಕ್ಷಿ ಎಂಬವರ ಮಾಲಕತ್ವದಲ್ಲಿರುವ ಹೆಂಚು ಹಾಸಿದ ಮನೆಗೆ ಸಿಡಿಲು ಬಡಿದಿದೆ.

ಫ್ರಿಡ್ಜ್‌ನಲ್ಲಿ ಮೊದಲು ಕಾಣಿಸಿದ ಬೆಂಕಿ
ಮನೆಯೊಳಗಿನ ಫ್ರಿಡ್ಜ್‌ನಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿದೆ. ನಂತರ ಟಿವಿ, ಫ್ಯಾನ್, ಹಾಸಿಗೆ ಬಟ್ಟೆಬರೆಗಳಿಗೂ ಬೆಂಕಿ ಹರಡಿದೆ. ಈ ವೇಳೆ ಮನೆ ಮಾಲಕಿ ಹೊರಕ್ಕೆ ಓಡಿದುದರಿಂದ ಸಂಭಾವ್ಯ ಅಪಾಯದಿಂದ ಪಾರಾಗಿದ್ದಾರೆ. ಈ ಬಗ್ಗೆ ಲಭಿಸಿದ ಮಾಹಿತಿಯಂತೆ ಸೀನಿಯರ್ ಫಯರ್ ಆ್ಯಂಡ್ ರೆಸ್ಕ್ಯೂ ಆಫೀಸರ್ ಸನ್ನಿ ಇಮನ್ವಲ್ ನೇತೃತ್ವದ ಕಾಸರಗೋಡು ಅಗ್ನಿಶಾಮಕ ದಳ ತಕ್ಷಣ ತಲುಪಿ ಬೆಂಕಿ ನಂದಿಸುವ ಮೂಲಕ ಹೆಚ್ಚಿನ ಅನಾಹುತವನ್ನು ತಪ್ಪಿಸಿದೆ. ಸುಮಾರು ಎರಡೂವರೆ ಲಕ್ಷ ರೂ. ನಷ್ಟ ಅಂದಾಜಿಸಲಾಗಿದೆ.

ಇನ್ನೂ ಮೂರು ದಿನ ಕರಾವಳಿ ಭಾಗಕ್ಕೆ ಗುಡುಗು ಸಹಿತ ಸಾಧಾರಣ ಮಳೆ?

ಮಂಗಳೂರು: ಹವಾಮಾನ ಇಲಾಖೆ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮುನ್ಸೂಚನೆಯ ಪ್ರಕಾರ, ಮೇ 14 ರಿಂದ ಮೇ 17 ರವರೆಗೆ ಕರಾವಳಿಯಾದ್ಯಂತ ಗುಡುಗು ಸಹಿತ ಮಳೆಯ ಅಬ್ಬರ ಮುಂದುವರಿಯುವ ಸಾಧ್ಯತೆಯಿದೆ. ಈ ಅವಧಿಯಲ್ಲಿ ಜಿಲ್ಲೆಯ ಪ್ರತ್ಯೇಕ ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದ್ದು, ಗಂಟೆಗೆ 50 ರಿಂದ 60 ಕಿಲೋ ಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಎಚ್ಚರಿಸಲಾಗಿದೆ.

ದಕ್ಷಿಣ ಕನ್ನಡ, ಕಾಸರಗೋಡಲ್ಲಿ ಅಪಾರ ಹಾನಿ


ಖುಷಿ ಕೃಷಿ ಉಡೀಸ್

ಎಲ್ಲೆಡೆ ತ್ರಾಸ ತಂದಿಟ್ಟಿತು ತಾಸಿನ ಮಳೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ಮಂಗಳವಾರ ರಾತ್ರಿ ಭಾರೀ ಮಳೆಯಾಗಿದ್ದು, ಕೆಲವು ತಾಸುಗಳ ಕಾಲ ಸತತವಾಗಿ ಸುರಿದ ಗಾಳಿ ಮಳೆಯ ಆರ್ಭಟಕ್ಕೆ ಹಲವೆಡೆ ಅಪಾರ ಪ್ರಮಾಣದಲ್ಲಿ ಹಾನಿ ಉಂಟಾಗಿದೆ.

ಖುಷಿ, ಕೃಷಿ ಎರಡಕ್ಕೂ ಕುತ್ತು
ಒಂದೆಡೆ ಯಕ್ಷಗಾನ ಸಹಿತ ವಿವಿಧ ಕಾರ್ಯಕ್ರಮಗಳಿಗೆ ಮಳೆ ಅಡ್ಡಿಯಾದರೆ ಇನ್ನೊಂದೆಡೆ ಗಾಳಿಯಿಂದ ಕೃಷಿ ಬೆಳೆಗಳಿಗೆ ಅಪಾರ ಹಾನಿ ಉಂಟಾಗಿದೆ. ದಕ್ಷಿಣ ಕನ್ನಡದ ಬಂಟ್ವಾಳ, ಸಿದ್ಧಕಟ್ಟೆ, ಮೂಡುಬಿದಿರೆ, ಬೆಳ್ತಂಗಡಿಯ ಲಾಯಿಲ, ಕಾಸರಗೋಡಿನ ಉಪ್ಪಳ ಮುಂತಾದೆಡೆ ಹಾನಿ ಪ್ರಮಾಣ ಅಧಿಕವಾಗಿದೆ.

ಹಾರಿ ಹೋದ ಕ್ಯಾಂಟೀನ್ ಛಾವಣಿ
ಭಾರೀ ಗಾಳಿಗೆ ಬಂಟ್ವಾಳ ಸಿದ್ಧಕಟ್ಟೆ ಮಾರುಕಟ್ಟೆಯ ನಿವಾಸಿ ಗೋಪಾಲ ಪೂಜಾರಿ ಎಂಬವರ ಕ್ಯಾಂಟೀನ್ ಛಾವಣಿ ಹಾರಿಹೋಗಿದ್ದು, ಸಾವಿರಾರು ರೂ. ನಷ್ಟ



ಸಂಭವಿಸಿದೆ. ಪುಂಜಾಲಕಟ್ಟೆ - ಪುರಿಯ ರಸ್ತೆಯಲ್ಲಿ ಅಶ್ವತ್ಥ ಮರದ ಗೆಲ್ಲು ಬಿದ್ದು ವಿದ್ಯುತ್ ತಂತಿ ತುಂಡಾಗಿದೆ.

ಬೆಳ್ತಂಗಡಿ ತಾಲೂಕಿನಲ್ಲಿ ಅಪಾರ ಹಾನಿ
ಬೆಳ್ತಂಗಡಿ ಲಾಯಿಲ ಗ್ರಾಮದ ಆಯಿಲ ಕೊತ್ತಿಲಕೋಡಿ ಎಂಬಲ್ಲಿನ ರೇವತಿ ಎಂ.ಕೆ. ಎಂಬವರ ಮನೆಗೆ ಮರ ಬಿದ್ದು ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಅಗಳಿಯ ಸೂರ್ಯಕಾಂತ ಹೆಬ್ಬಾರ್ ಅವರ ತೋಟದಲ್ಲಿ 25ಕ್ಕಿಂತ ಅಧಿಕ ಅಡಕೆ ಮರಗಳು ಮುರಿದು ಬಿದ್ದಿದ್ದು, ಗಾಳಿಯ ರಭಸಕ್ಕೆ ಸಿಲುಕಿ ಅಡಿಕೆ ಒಣಗಿಸುವ ಎರಡು ಸೋಲಾರ್ ಗೂಡುಗಳು ನೆಲಕಚ್ಚಿವೆ. ಮನೆಯ ಹಿಂಭಾಗದ ಶೀಟುಗಳು ಹಾರಿ ಹೋಗಿದ್ದು ಲಕ್ಷಾಂತರ ರೂ. ಹಾನಿ ಸಂಭವಿಸಿದೆ. »ಪುಟ 6

ಹಲವೆಡೆ ಯಕ್ಷಗಾನ ಪ್ರದರ್ಶನಗಳಿಗೂ ಅಡ್ಡಿಯಾದ ಗಾಳಿಮಳೆ

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಂಗಳವಾರ ರಾತ್ರಿ ಕಾಣಿಸಿಕೊಂಡ ಭಾರೀ ಗಾಳಿ



ಮಳೆಯ ಆರ್ಭಟದಿಂದಾಗಿ ಯಕ್ಷಗಾನ ಪ್ರದರ್ಶನಗಳಿಗೆ ತೀವ್ರ ಅಡ್ಡಿಯಾಯಿತು. ಹಲವಡೆ ರಂಗಸ್ಥಳದಲ್ಲಿ ಪ್ರದರ್ಶನ ರದ್ದುಗೊಳಿಸಿ ಸಾಂಕೇತಿಕವಾಗಿ ಪ್ರದರ್ಶನ ಪೂರ್ಣಗೊಳಿಸಿ ಕಥೆಗೆ ಮಂಗಳ ಹಾಡಲಾಯಿತು.

ಕೋಝಿಕ್ಕೋಡ್ 400 ಕೆವಿ ಸಬ್ ಸ್ಟೇಷನ್‌ನಲ್ಲಿ ಟ್ರಾನ್ಸ್‌ಫಾರ್ಮರ್ ದುರಸ್ತಿ

ಕಾಸರಗೋಡು ಜಿಲ್ಲೆಯಲ್ಲಿ ವಿದ್ಯುತ್ ವ್ಯತ್ಯಯ

ಕಾಸರಗೋಡು: ಜಿಲ್ಲೆಯ ಸಹಿತ ಕೇರಳದ ನಾಲ್ಕು ಜಿಲ್ಲೆಗಳಲ್ಲಿ ಮುಂದಿನ ಒಂದು ವಾರ ಕಾಲ ವಿದ್ಯುತ್ ಪೂರೈಕೆಯಲ್ಲಿ ಆಂಶಿಕ ವ್ಯತ್ಯಯ ಉಂಟಾಗಲಿದೆ. ಕಾಸರಗೋಡು, ಕಣ್ಣೂರು, ಕೋಯಿಕ್ಕೋಡ್, ವಯನಾಡು ಜಿಲ್ಲೆಗಳಲ್ಲಿ ಈ ವ್ಯತ್ಯಯ ಉಂಟಾಗಲಿದೆ.

ಸಬ್ ಸ್ಟೇಷನ್‌ನಲ್ಲಿ ತಾಂತ್ರಿಕ ದೋಷ
ಕೋಝಿಕ್ಕೋಡ್ ಪವರ್ ಗ್ರಿಡ್ ಕಾರ್ಪೋರೇಷನ್ ಸಬ್ ಸ್ಟೇಷನ್‌ನಲ್ಲಿ ತಾಂತ್ರಿಕ ದೋಷ ಕಂಡುಬಂದ ಕಾರಣ ಮುಂದಿನ ಏಳು ದಿನಗಳ ವರೆಗೆ ವಯನಾಡು, ಕೋಝಿಕ್ಕೋಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಭಾಗಶಃ ವಿದ್ಯುತ್ ನಿರ್ಬಂಧ ವಿಧಿಸಲಾಗುವುದು.



ಕೋಝಿಕ್ಕೋಡ್ 400 ಕೆವಿ ಸಬ್‌ಸ್ಟೇಷನ್‌ನಲ್ಲಿ 500 ಎಂವಿಎ ಟ್ರಾನ್ಸ್‌ಫಾರ್ಮರ್ ಬುಶಿಂಗ್‌ನಲ್ಲಿನ ದೋಷದಿಂದ ಬಿಕ್ಕಟ್ಟು ಉಂಟಾಗಿದೆ. ಇದರ ನಿರ್ವಹಣೆಗಾಗಿ ಟ್ರಾನ್ಸ್‌ಫಾರ್ಮರ್‌ನ್ನು ತಕ್ಷಣವೇ ಸ್ಥಗಿತಗೊಳಿಸುವ ಅಗತ್ಯವಿದೆ ಎಂದು ಪವರ್ ಗ್ರಿಡ್ ಕಾರ್ಪೋರೇಷನ್ ಕೆಎಸ್‌ಇಬಿಗೆ ತಿಳಿಸಿದೆ. ಸಮಸ್ಯೆ ಸರಿಪಡಿಸಲು ಮತ್ತು ವಿದ್ಯುತ್ ಪೂರೈಕೆಯನ್ನು ಪುನರ್ ಸ್ಥಾಪಿಸಲು ಏಳು ದಿನಗಳು ಬೇಕಾಗುತ್ತದೆ.

ಮೇ 18ರ ವರೆಗೆ ಕಷ್ಟ
ಪವರ್ ಗ್ರಿಡ್ ನಿಗಮದ ಕೋಝಿಕ್ಕೋಡ್‌ನ 400 ಕೆವಿ ಸಬ್ ಸ್ಟೇಷನ್‌ನಲ್ಲಿ ಟ್ರಾನ್ಸ್‌ಫಾರ್ಮರ್ ದುರಸ್ತಿ ಹಿನ್ನೆಲೆಯಲ್ಲಿ ಮೇ 18ರ ವರೆಗೆ ಆಂಶಿಕವಾಗಿ ವಿದ್ಯುತ್ ಸ್ಥಗಿತಗೊಳ್ಳಲಿರುವುದಾಗಿ ಕೆಎಸ್‌ಇಬಿ ಪ್ರಕಟಣೆಯಲ್ಲಿ ತಿಳಿಸಿದೆ.

ಕಚೇರಿಯಲ್ಲಿ ಸಿಗಲಿದೆ ವ್ಯತ್ಯಯ ಸಮಯ ಪಟ್ಟಿ

ಮಲಬಾರ್‌ನಲ್ಲಿ ಹೆಚ್ಚಿನ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಸೇವೆ ಸ್ಥಗಿತವಾಗಿ ಲೋಡ್ ನಿರ್ವಹಣೆಯ ಭಾಗವಾಗಿ ನಿರ್ಬಂಧಗಳನ್ನು ವಿಧಿಸಲಾಗುತ್ತಿದೆ. ವಿದ್ಯುತ್ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ಕೆಎಸ್‌ಇಬಿ ಗ್ರಾಹಕರಲ್ಲಿ ವಿನಂತಿಸಿದೆ. ವ್ಯತ್ಯಯದ ಸ್ಥಳೀಯ ಸಮಯಗಳ ವೇಳಾಪಟ್ಟಿ ಕೆಎಸ್‌ಇಬಿ ಕಚೇರಿಗಳ ಮೂಲಕ ಲಭ್ಯವಿರುತ್ತವೆ.

ಭಕ್ತರ ರೋಮಾಂಚನಗೊಳಿಸಿತು ದೈವಕಳೆ



ಕಾರಣಿಕ ಕ್ಷೇತ್ರ ಬಂಟ್ವಾಳ ತಾಲೂಕಿನ ಮುತ್ತೂರು ನಟ್ಟಿಲ ಪಂಜುರ್ಲಿ ಮತ್ತು ಪರಿವಾರ ದೈವಗಳ ದೈವಸ್ಥಾನದಲ್ಲಿ ಪ್ರತಿಷ್ಠಾ ಕಲಶಾಭಿಷೇಕ ಮತ್ತು ನೇಮ ವಿಜೃಂಭಣೆಯಿಂದ ನೆರವೇರಿತು. (ವಿವರ ಪುಟ 3)

ಅಲ್ಲಲ್ಲಿ ಬುಡಮೇಲಾದ ಮರಗಳು | ಧರೆಗುರುಳಿದ ವಿದ್ಯುತ್ ಕಂಬಗಳು | ಹಾರಿಹೋದ ಮನೆ ಹಂಚು | ಹೊಳೆಯಾದ ತಗ್ಗು ಪ್ರದೇಶಗಳು

ಗುಡುಗು ಸಿಡಿಲು ಸಹಿತದ ಪ್ರಳಯಾಂತಕ ಗಾಳಿ ಮಳೆಗೆ ಬೆಚ್ಚಿಬಿದ್ದ ಮೂಡುಬಿದಿರೆ

ಮೂಡುಬಿದಿರೆ: ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳವಾರ ರಾತ್ರಿ ಸುರಿದ ಧಾರಾಕಾರ ಮಳೆ ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು.
ಸುಮಾರು ಒಂದೂವರೆ ಗಂಟೆಗಳ ಕಾಲ ಗುಡುಗು-ಸಿಡಿಲು ಸಹಿತ ಸುರಿದ ಭರ್ಜರಿ ಮಳೆ, ಗಾಳಿಯ ಅಬ್ಬರಕ್ಕೆ ಹತ್ತಾರು ಮರಗಳು ಧರೆಗುರುಳಿ ಹಲವು ಕಡೆ ರಸ್ತೆ ಸಂಚಾರಕ್ಕೂ ತೊಂದರೆ ಉಂಟಾಯಿತು.
ಹಲವು ಮನೆಗಳು ಮಾಡು ಮರಗಳುರುಳಿ ಹಾನಿಗೊಳಗಾಗಿವೆ. ಬಿರುಗಾಳಿ ರಭಸಕ್ಕೆ ಸೂರುಗಳಿಗೆ ಹಾನಿಗಳಾಗಿವೆ. ಬಿರುಗಾಳಿಯ ತೀವ್ರತೆಗೆ ಅನೇಕ ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು ಪ್ರಮುಖ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಯಿತು. ಪರಿಣಾಮವಾಗಿ ಬುಧವಾರ ದಿನಪೂರ್ತಿ ಹಲವೆಡೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡು ಸಾರ್ವಜನಿಕರು





ಸಂಕಷ್ಟ ಅನುಭವಿಸಿದರು.

ಮರಗಿಡಗಳು ಅಡಿಮೇಲು, ಹಂಚು ಉಡೀಸ್
ಗಾಳಿಯ ವೇಗಕ್ಕೆ ಕೆಲವು ಮನೆಗಳ ಹಂಚುಗಳು ಹಾರಿಹೋಗಿದ್ದು, ಮರಗಿಡಗಳು ಅಡಿಮೇಲಾಗಿವೆ. ಕೆಲವೆಡೆ ಮನೆಗಳ ಆವರಣ ಹಾಗೂ ರಸ್ತೆಗಳಲ್ಲಿ ಮರ ಬಿದ್ದ ಪರಿಣಾಮ ಸ್ಥಳೀಯರು ಆತಂಕಕ್ಕೊಳಗಾದರು. ಮಳೆಯ ಅಬ್ಬರದಿಂದ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತಾಯಿತು.

ಅಲ್ಲಲ್ಲಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಅಪಾರ ಹಾನಿ
ಮಾರ್ಪಾಡಿ ಚಂದ್ರಮರ, ಉಳಿಯ ಪ್ರದೇಶದಲ್ಲಿ ಭಾರೀ ಬಿರುಗಾಳಿಗೆ ಹಲವು ಮನೆ ಹಾನಿಗೊಳಗಾಗಿವೆ. ಅಪ್ಪಿ ಎಂಬವರ ಮನೆಯ ಮೇಲೆ ಮರವುರುಳಿ ಬಿದ್ದು ಶೃತಿ (28) ಎಂಬವರಿಗೆ ಗಾಯವಾಗಿದೆ. ಮಾರ್ಪಾಡಿ ಗ್ರಾಮದ ಮೂರನೇ ವಾರ್ಡ್ ವ್ಯಾಪ್ತಿಯ ಸ್ವರಾಜ್ಯ ಮೈದಾನದ ಬಳಿ ಪುತ್ತಿಗೆ ಮನೆ ನಿವಾಸಿ ಪತ್ರಕರ್ತ ಧನಂಜಯ ಮೂಡುಬಿದಿರೆ ಅವರ ಮನೆಯ ಮೇಲೆ ತೆಂಗಿನ ಮರ ಬಿದ್ದು ಅಪಾರ ಹಾನಿ ಸಂಭವಿಸಿದೆ. ಈಶಾನ್ಯ ಭಾಗದಲ್ಲಿದ್ದ ತೆಂಗಿನ ಮರ ಮನೆಯ ಮಾಡಿಗೆ ಉರುಳಿ ಬಿದ್ದಿದ್ದು ಸುಮಾರು ಒಂದು ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ. 2024ರಲ್ಲಿ ಸುರಿದ ಭಾರೀ ಗಾಳಿ ಮಳೆಗೆ ಇದೇ ಮನೆ ಸಂಪೂರ್ಣ ನಾಶವಾಗಿತ್ತು.

ಮನೆಯ ಮೇಲೆ ಉರುಳಿದ ಕರೆಂಟ್ ಕಂಬ
ಇರುವೈಲು ಗ್ರಾಮದ ರಮೇಶ್ ಪ್ರಭು ಎಂಬವರ ಮನೆಯ ಮೇಲೆ ವಿದ್ಯುತ್ ಕಂಬವು ಉರುಳಿ ಬಿದ್ದು ಅಪಾರ ನಷ್ಟ ಸಂಭವಿಸಿದೆ. »ಪುಟ 6

ಮುಂದು'ವರಿ'ದ ಮಳೆ

ಬುಧವಾರ ದಿನಪೂರ್ತಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಸಂಜೆಯ ವೇಳೆ ಮತ್ತೆ ಮಳೆಯ ಅಬ್ಬರವಿತ್ತು. ಭಾರೀ ಪ್ರಮಾಣದ ಸಿಡಿಲು ಗುಡುಗು ಅಕ್ಷರಶಃ ಹೈರಾಣಾಗಿಸಿದೆ. ಬೇಸಿಗೆ ಮಳೆ ಮೂಡುಬಿದಿರೆ ಜನತೆಗೆ ದುಃಸ್ವಪ್ನವಾಗಿ ಕಾಡುತ್ತಿದೆ.

ಗಾಳಿಗೆ ಉರುಳಿದ ಗೋಳಿ

ಬನ್ನಡ್ಕ ಬಳಿ ಭಾರೀ ಗಾಳಿಗೆ ಗೋಳಿ ಮರವೊಂದು ಬುಡಮೇಲಾಗಿ ಬಿದ್ದಿದ್ದು, ನಾರಾಯಣ ದೇವಾಡಿಗ ಎಂಬವರ ಗೂಡಂಗಡಿ ಸಂಪೂರ್ಣ ಹಾನಿಗೊಳಗಾಗಿದೆ. ರಾತ್ರಿ ದುರಂತ ಸಂಭವಿಸಿದ್ದರಿಂದಾಗಿ ಯಾವುದೇ ಪ್ರಾಣಾಪಾಯಗಳಾಗಿಲ್ಲ.

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಗುರುವಾರ 14, ಮೇ 2026

ಕಡಬ ಪೇಟೆಯ ಅಸಮರ್ಪಕ ಒಳಚರಂಡಿ | ಮಳೆನೀರು ಸರಾಗ ಹರಿವಿಗೆ ಹೂಳು, ಗಿಡಗಂಟಿ ತೆರವಾಗಲಿ

ಭವಿಷ್ಯ ದೃಷ್ಟಿಯಿಂದ ಬೇಕಿದೆ ಸಮಗ್ರ ಒಳಚರಂಡಿಯ ವ್ಯವಸ್ಥೆ

■ ತುಳಸಿ ಕಡಬ





ಕಡಬ: ಕಡಬ ಪೇಟೆ ಹಾಗೂ ಪರಿಸರದಲ್ಲಿ ಕೆಲವು ಕಡೆ ರಸ್ತೆ ಬದಿಯಲ್ಲಿನ ಅಸಮರ್ಪಕ ಚರಂಡಿ ವ್ಯವಸ್ಥೆಯಿಂದಾಗಿ ಮಳೆನೀರು ರಸ್ತೆಯಲ್ಲಿಯೇ ಹರಿದು ಹೋಗುತ್ತಿದ್ದರೆ, ಪೇಟೆಯ ಚರಂಡಿಗಳಲ್ಲಿ ಸಂಗ್ರಹವಾದ ಮಳೆನೀರು ತೋಡುಗಳಿಗೆ ಹರಿದು ಹೋಗುವ ದಾರಿಗಳಲ್ಲಿ ಪೊದೆ, ಗಿಡಗಂಟಿ ಬೆಳೆದು ಕಸಕಡ್ಡಿಗಳು ಸೇರಿ ನೀರಿನ ಹರಿವಿಗೆ ತಡೆಯಾಗುತ್ತಿವೆ. ಕಡಬ ಪೇಟೆ ಬೆಳೆಯುತ್ತಿರುವುದರಿಂದ ಈಗಿನ ಒಳಚರಂಡಿ ವ್ಯವಸ್ಥೆ ಏನೇನೂ ಸಾಲದು. ಪೇಟೆಯಲ್ಲಿನ ಚರಂಡಿಗಳಿಂದ ಹರಿಯುವ ಮಳೆನೀರು ಬೈಲಿನ ಭಾಗಕ್ಕೆ ಹೋಗುವ ಸಣ್ಣ ತೋಡುಗಳಲ್ಲಿ ಹೂಳು ಹಾಗೂ ಕಸಕಡ್ಡಿಗಳನ್ನು ತೆರವುಗೊಳಿಸಿ ಹೂಳೆತ್ತಿದರೆ ತತ್‌ಕ್ಷಣದ ಸಮಸ್ಯೆಗಳು ಬಗೆಹರಿಯಲು ಸಾಧ್ಯ. ಅಂಗಡಿ ಮನೆ ಕಾಲನಿ ಬಳಿಯ ದ್ರವತ್ಯಾಜ್ಯ ಸಂಸ್ಕರಣ ಘಟಕದ ಪಕ್ಕದಿಂದ ಬೈಲಿನ ಕಡೆಗೆ ಮಳೆನೀರು ಹರಿದು ಹೋಗುವ ಸಣ್ಣ ತೋಡಿನಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳು, ಗಿಡಗಂಟಿಗಳು ಹಾಗೂ ಹೂಳು ತುಂಬಿಕೊಂಡಿದೆ. ಕಾಲನಿಯಿಂದ ಹರಿದು ಬರುವ ಕೊಳಚೆ ನೀರು ಕೂಡ ಅಲ್ಲಲ್ಲಿಯೇ ಸಂಗ್ರಹವಾಗಿದ್ದು ದುರ್ವಾಸನೆಗೆ ಕಾರಣವಾಗುತ್ತಿದೆ. ಹಾಗೆಯೇ ಕಡಬ ಪೇಟೆಯ ಸಂತೆಕಟ್ಟೆಯ ಪರಿಸರದ ಚರಂಡಿಗಳ ನೀರು ಹರಿದು ತೋಡು ಸೇರುವಲ್ಲಿ ಕೂಡ ಪೂರ್ತಿ ಗಿಡಗಂಟಿಗಳು ಬೆಳೆದು ನೀರಿನ ಹರಿವಿಗೆ ತಡೆಯುಂಟಾಗಿದೆ. ಮಳೆಗಾಲಕ್ಕೆ ಮೊದಲು ಈ ಎಲ್ಲಾ ತಡೆಗಳನ್ನು ತೆರವುಗೊಳಿಸಿದರೆ ಮಳೆನೀರು ಸರಾಗವಾಗಿ ತೋಡು ಸೇರಲು ತೊಂದರೆಯಾಗದು.

ಪೇಟೆ ಪರಿಸರದಲ್ಲಿಯೂ ಕೃತಕ ನೆರೆ

ಪೇಟೆಯಲ್ಲಿ ಕೆಲವು ಕಡೆ ಚರಂಡಿಯಲ್ಲಿಯೇ ಕುಡಿಯುವ ನೀರಿನ ಪೈಪ್‌ಗಳು ಹಾದು ಹೋಗಿರುವುದರಿಂದ ಅದರಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳು ಹಾಗೂ ಕಸಕಡ್ಡಿ ಸಿಲುಕಿಕೊಂಡು ನೀರು ಹರಿದು ಹೋಗಲು ತೊಡಕಾಗಿದೆ. ಕಡಬ ಪೇಟೆಯ ಅಡ್ಡಗದ್ದೆ ಕಾಲೇಜ್ ರಸ್ತೆ, ಪಂಜ ರಸ್ತೆಯಲ್ಲಿಯೂ ಮಳೆನೀರು ಹರಿದು ಹೋಗಲು ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದೇ ಇರುವುದರಿಂದ ಮಳೆನೀರು ರಸ್ತೆಯಲ್ಲಿಯೇ ಹರಿದು ಕೃತಕ ನೆರೆ ಉಂಟಾಗುತ್ತಿದೆ. ಮಳೆ ನೀರು ಹರಿದು ಹೋಗಲು ರಸ್ತೆಯ ಬದಿಯಲ್ಲಿ ಸೂಕ್ತವಾದ ಚರಂಡಿ ವ್ಯವಸ್ಥೆ ಮಾಡಿದರೆ ಈ ಸಮಸ್ಯೆ ಹೋಗಲಾಡಿಸಬಹುದು. ಜೊತೆಗೆ ಕೆಲವು ಕಡೆ ಅಂಗಡಿ ಕಟ್ಟಡ ಹಾಗೂ ಮನೆಗಳ ಮುಂದಿನ ರಸ್ತೆ ಬದಿಯ ಚರಂಡಿಗಳನ್ನು ಮುಚ್ಚಿದ ಪರಿಣಾಮ ಮಳೆನೀರು ರಸ್ತೆಗೆ ಹರಿದು ರಸ್ತೆಗೆ ಹಾನಿಯಾಗುತ್ತಿದೆ. ಅದರ ವಿರುದ್ಧವೂ ಪಟ್ಟಣ ಪಂಚಾಯತ್ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯವಿದೆ.

> **ಕ್ರಮ ಕೈಗೊಳ್ಳಲು ನಿರ್ಣಯ**
>
> **ಪಟ್ಟಣ ಪಂಚಾಯತ್ ವ್ಯಾಪ್ತಿಯ ಪೇಟೆಯಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆಗೆ ಮುಂದಿನ ದಿನಗಳಲ್ಲಿ ಅನುದಾನದ ಲಭ್ಯತೆಯ ಆಧಾರದಲ್ಲಿ ಕಾರ್ಯ ಯೋಜನೆ ಹಮ್ಮಿಕೊಳ್ಳಲಾಗುವುದು. ಮಳೆ ನೀರು ಮತ್ತು ಕೊಳಚೆ ನೀರು ಹರಿಯುವಂತೆ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ನಿರ್ಣಯ ಅಂಗೀಕರಿಸಲಾಗುವುದು. ಅದಕ್ಕೆ ಬೇಕಾದ ಅದಾಜು ಪಟ್ಟಿ ತಯಾರಿಸಿ ಅನುದಾನ ಕಾದಿರಿಸಲಾಗುವುದು.**
>
> ● **ತಮನಾ ಜಬೀನ್, ಅಧ್ಯಕ್ಷರು**
> **ಕಡಬ ಪಟ್ಟಣ ಪಂಚಾಯತ್**

ಸಮಗ್ರ ಒಳಚರಂಡಿ ವ್ಯವಸ್ಥೆ ಬೇಕಿದೆ

ಕಡಬದ ಭವಿಷ್ಯದ ಸಮಗ್ರ ಅಭಿವೃದಿಯ ದೃಷ್ಟಿಯಿಂದ ಸೂಕ್ತ ಒಳಚರಂಡಿ ವ್ಯವಸ್ಥೆಗೆ ಯೋಜನೆ ರೂಪಿಸಬೇಕಾಗಿದೆ. ಪೇಟೆಯ ಹೋಟೇಲ್ ಇತ್ಯಾದಿಗಳ ಕೊಳಚೆ ನೀರು ಹಾಗೂ ಮಳೆ ನೀರು ಹರಿದು ಹೋಗಲು ಪ್ರತ್ಯೇಕ ಪೈಪ್‌ಲೈನ್ ಅಳವಡಿಸಬೇಕಾಗಿದೆ. ಮುಖ್ಯವಾಗಿ ಡ್ರೈನೇಜ್‌ನ ಅವಶ್ಯಕತೆಯಿದೆ. ಈಗಾಗಲೇ ಅನುಷ್ಠಾನವಾಗಿರುವ ದ್ರವ ತ್ಯಾಜ್ಯ ಘಟಕಕ್ಕೆ ಮರುಜೀವ ನೀಡಿ ಬಳಕೆ ಮಾಡಬೇಕು. ಈ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯತ್ ಆಡಳಿತ ತುರ್ತು ಕ್ರಮ ಕೈಗೊಳ್ಳಬೇಕಿದೆ ಎನ್ನುವುದು ಸಾರ್ವಜನಿಕರ ಆಗ್ರಹ.

ಸುತ್ತ ಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಉರ್ವಮಾರ್ಕೆಟ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 14ರಂದು ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಕುದ್ಮುಲ್ ಉಪಕೇಂದ್ರದಿಂದ ಹೊರಡುವ ಡೊಂಗರಕೇರಿ, ಪ್ರಗತಿ ಹಾಗೂ ಕಾರ್‌ಸ್ಟ್ರೀಟ್ ಫೀಡರ್‌ನಲ್ಲಿ ಹಾಗೂ ಕೆಪಿ ಉರ್ವಮಾರ್ಕೆಟ್ ಉಪಕೇಂದ್ರದಿಂದ ಹೊರಡುವ ಡೊಮಿನಿಕ್, ಶೇಡಿಗುರಿ ಮತ್ತು ಹೊಯಿಗೆ ಬೈಲು ಫೀಡರುಗಳಲ್ಲಿ ಕೆನರಾ ಹೈಸ್ಕೂಲ್, ಡೊಂಗರಕೇರಿ, ಹೊಂಡ ಮ್ಯಾಟ್ರಿಕ್ಸ್ ಸಿಟಿ ಪಾಯಿಂಟ್, ಒಶಿಯನ್ ಪರ್ಲ್, ಅಯೋಧ್ಯ ಹೋಟೆಲ್, ತಾಜ್ ಮಹಲ್ ಹೋಟೆಲ್, ಮಾನಸ ಟವರ್, ಪಿ.ವಿ.ಎಸ್ ಸರ್ಕಲ್, ಕೊಡಿಯಾಲ್ ಬೈಲ್, ಶಾರದಾ ವಿದ್ಯಾಲಯ, ಅಳಕೆ, ಕೋಡಿಕಲ್, ಗಣೇಶ್ ಭವನ ಮಂದಿರ, ಬಲ್ಲಿಕಂಪೌಂಡು, ಜಿ.ಎಸ್.ಬಿ ಸ್ಟ್ರಾ ರೋಡ್, ಕೋಡಿಕಲ್ ಕಟ್ಟೆ, ಎಸ್.ಎನ್.ಡಿ.ಪಿ, ಕಂಚಿಗಾರ ಗುಡ್ಡು, ನಾಗಬ್ರಹ್ಮ ಸನ್ನಿಧಿ ರೋಡ್, ಫಾರ್ಮ್ ಫೀಲ್ಡ್ ರೋಡ್, ಕುರುವಂಬಾ ಟೆಂಪಲ್ ರೋಡ್, ಹಗ್ಗೆ ಜನರಲ್ ಸ್ಟೋರ್, ಜೆಬಿ ಲೋಬೋ ರೋಡ್, ಕೊಟ್ಟಾರ ಚೌಕಿ, ವಿವೇಕಾನಂದ ನಗರ, ಫ್ಲೋರ್ ಮಿಲ್, ಟೆಲಿಫೋನ್ ಎಕ್ಸ್‌ಚೇಂಜ್ ರೋಡ್, ಅಲಗುಡ್ಡ ರೋಡ್, ದಂಬೆಲ್, ಪ್ಲಾಣಿನ ನಗರ, ಯೆನೆಪೋಯ ಸಾ ಮಿಲ್ ರೋಡ್, ದಂಬೆಲ್ ರಿವರ್ ಸೈಡ್, ಅಶೋಕನಗರ, ಯುವಕ ಸಂಘ ರೋಡ್, ಉರ್ವಮಾರ್ಕೆಟ್ ಸರ್ಕಲ್‌ನಿಂದ ಕಾಮತ್ ಕೆಫೆವರೆಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಗಳೂರು: ಕದ್ರಿ ಉಪಕೇಂದ್ರದಿಂದ ಹೊರಡುವ ಶಿವಭಾಗ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ, ಮೇ 15ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಶಿವಭಾಗ್ 1ನೇ ಕ್ರಾಸ್‌ನಿಂದ 5ನೇ ಕ್ರಾಸ್‌ವರೆಗೆ, ತಾರೆತೋಟ, ಇವನ್ಸ್ ಗೀತಾಂಜಲಿ, ಲೋವರ್ ಬೆಂದೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೇ 17: ಉಜಿರೆಯಲ್ಲಿ ವಿಷು ಕಣಿ ಆಚರಣೆ


ಬೆಳ್ತಂಗಡಿ: ರಾಜ್ಯದ ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ನಡೆಯದ, ಜನಪ್ರತಿನಿಧಿಯೊಬ್ಬರ ಸಹಕಾರದೊಂದಿಗೆ ತಾಲೂಕಿನಲ್ಲಿ ಕಳೆದ 4 ವರ್ಷಗಳಿಂದ ನಡೆಯುತ್ತಿರುವ ಕೇರಳೀಯ ಸಂಪ್ರದಾಯದ ವಿಷು ಕಣಿ ಆಚರಣೆಯ 5 ನೇಯ ಸಂಭ್ರಮಾಚರಣೆ ಮೇ 17 ರಂದು ಉಜಿರೆ ಕೃಷ್ಣಾನುಗ್ರಹ ಸಭಾಭವನದಲ್ಲಿ ನಡೆಯಲಿದೆ ಎಂದು ಶಾಸಕ ಹರೀಶ್ ಪೂಂಜ ತಿಳಿಸಿದರು. ತಾಲೂಕು ವಿಷು ಆಚರಣಾ ಸಮಿತಿಯಿಂದ ನಡೆಯುತ್ತಿರುವ



ಸಾಮೂಹಿಕ ಆಚರಣೆಯಲ್ಲಿ ಕಳೆದ 4 ವರ್ಷಗಳಿಂದ ಕೇರಳ ಸಂಸ್ಕೃತಿಯನ್ನು ಜೋಡಿಸುವ, ಸಂಸ್ಕಾರ, ಒಗ್ಗಟ್ಟನ್ನು ಕಲ್ಪಿಸುವ ವಿಶಿಷ್ಟವಾದ ಕಾರ್ಯ ಮಾಡಲಾಗಿದೆ. 17 ರಂದು ಕೇರಳ ಸಾಂಪ್ರದಾಯಿಕ ಶೈಲಿಯ 33 ಬಗೆಯ ತಿಂಡಿ-ಊಟೋಪಚಾರಗಳು ಇದ್ದು ಸುಮಾರು 4 ಗಂಟೆಗಳ ಕಾಲ ನಡೆಯುವ ಮನರಂಜನಾ ಕಾರ್ಯಕ್ರಮದಲ್ಲಿ ವಿಶೇಷ ಕೇರಳ ಚೆಂಡೆ, ಕೇರಳಂ ಹಾಗೂ ಅಂತಾರಾಜ್ಯ ಕಲಾವಿದರಿಂದ ಸಾಂಸ್ಕೃತಿಕ ವೈವಿಧ್ಯತೆಗಳು ಇರಲಿವೆ ಎಂದರು. ಆಯೋಜನಾ ತಂಡವು ಕಳೆದ ಒಂದು ತಿಂಗಳಿನಿಂದ ಕಾರ್ಯಕ್ರಮಕ್ಕೆ ಪ್ರಾಮಾಣಿಕ ಕೆಲಸ ಮಾಡುತ್ತಿದೆ.ಧರ್ಮಸ್ಥಳ, ಉಜಿರೆ, ಲಾಯಿಲ ಪ.ಪಂ. ವ್ಯಾಪ್ತಿಯಲ್ಲಿ ಹೆಚ್ಚಿನ ಕೇರಳ ಭಾಷಿಕರಿದ್ದಾರೆ. ಅಂದು ಹಬ್ಬದ ವಾತಾವರಣ ನಿರ್ಮಾಣವಾಗಲಿದ್ದು ಕೇರಳದ ತಾವು ತಮ್ಮ ತವರು ರಾಜ್ಯದಲ್ಲಿದ್ದೇವೆ ಎಂಬ ಭಾವನೆ ಮೂಡಿಸುತ್ತದೆ ಎಂದರು. ಗೋಷ್ಠಿಯಲ್ಲಿ ಅನಿಲ್ ಕುಮಾರ್, ಪ್ರಸಾದ್, ನೈಮಿಷ್, ದಿವಿನೇಶ್, ಅಖಿಲೇಶ್, ಅನಿಜಿತ್ ಇದ್ದರು.

ಸುಳ್ಯ ಜನಜಾಗೃತಿ ವೇದಿಕೆ ಅಧ್ಯಕ್ಷರಾಗಿ ಎಂ. ವೆಂಕಪ್ಪ ಗೌಡ ಆಯ್ಕೆ

ಸುಳ್ಯ: ತಾಲೂಕು ಜನಜಾಗೃತಿ ವೇದಿಕೆ ನೂತನ ಅಧ್ಯಕ್ಷರಾಗಿ ವಕೀಲ ಎಂ. ವೆಂಕಪ್ಪ ಗೌಡ



ಆಯ್ಕೆಯಾಗಿದ್ದಾರೆ. ಬುಧವಾರ ನಡೆದ ತಾಲೂಕು ಜನಜಾಗೃತಿ ವೇದಿಕೆ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ನಡೆದಿದ್ದು ಅವರು ಪ್ರಸ್ತುತ ಶ್ರೀ ಮಹಾವಿಷ್ಣು ದೇವಸ್ಥಾನ ಕಾಯರ್ತೋಡಿ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪುದು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಟ್ಟಡ ಉದ್ಘಾಟನೆ



ಬಂಟ್ವಾಳ: ಪುದು ಗ್ರಾಮದ ಕಡೆಗೋಳಿಯಲ್ಲಿ ಪುದು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ 'ಶ್ರೀ ನಂದ' ಉದ್ಘಾಟನೆಯನ್ನು ಮಂಗಳೂರು ಲೋಕಸಭಾ ಸದಸ್ಯರಾದ ಕ್ಯಾಪ್ಟನ್ ಬ್ರಿಜೇಶ್ ಚೌಟ ನೆರವೇರಿಸಿದರು. ಬಳಿಕ ಮಾತನಾಡಿದ ಸಂಸದರು, ದೇಶದ ಪ್ರಧಾನಿ ನರೇಂದ್ರ ಮೋದಿಯವರ ಆಶಯದಂತೆ ಪುದು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಮೂಲಕ ಮಹಿಳಾ ಸಹಕಾರಿಗಳು ಸಬಲೀಕರಣಗೊಳ್ಳುತ್ತಿದ್ದಾರೆ. ಹಾಲು ಉತ್ಪಾದನೆಯಲ್ಲಿ ಇನ್ನಷ್ಟು ಹೆಚ್ಚಿನ ಸಾಧನೆಯನ್ನು ಮಾಡುವ ಮೂಲಕ ಮಹಿಳೆಯರು ಸ್ವಾವಲಂಬಿ ಜೀವನ ನಡೆಸಬೇಕು ಎಂದು ಹಾರೈಸಿದರು .

ನೂತನ ಕಟ್ಟಡ 'ಶ್ರೀನಂದ'ದ ಉದ್ಘಾಟನೆಯನ್ನು ದ.ಕ. ಜಿಲ್ಲಾ ಹಾಲು ಒಕ್ಕೂಟ ನಿಯಮಿತದ ಅಧ್ಯಕ್ಷ ರವಿರಾಜ್ ಹೆಗ್ಡೆ, ಗೋದಾಮನ್ನು ದ.ಕ. ಜಿಲ್ಲಾ ಹಾಲು ಒಕ್ಕೂಟ ನಿಯಮಿತದ ವ್ಯವಸ್ಥಾಪನಾ ನಿರ್ದೇಶಕರಾದ ವಿವೇಕ ಡಿ., ಸಭಾ ಕಾರ್ಯಕ್ರಮವನ್ನು ಡಿಸಿಸಿ ಬ್ಯಾಂಕ್ ನಿರ್ದೇಶಕ ಐಕಳಬಾವ ಡಾ ದೇವಪ್ರಸಾದ್ ಶೆಟ್ಟಿ ಉದ್ಘಾಟಿಸಿ ಶುಭಹಾರೈಸಿದರು.

ದ. ಕ ಜಿಲ್ಲಾ ಹಾಲು ಒಕ್ಕೂಟ ನಿಯಮಿತದ ನಿರ್ದೇಶಕರಾದ ಕೆ.ಪಿ. ಸುಚರಿತ ಶೆಟ್ಟಿ ಸುಧಾಕರ ರೈ ಬೋಳಂತೂರು, ಸವಿತಾ ಎನ್. ಶೆಟ್ಟಿ ನಂದರಾಮ್ ರೈ, ಮಂಗಳೂರು ಸ್ಕಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ, ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣ ಕುಮಾರ್ ಪೂಂಜಾ, ಶ್ರೀ ನಾಗಬ್ರಹ್ಮ ಸನ್ನಿಧಿ ಶ್ರೀ ಕೋರ್ದಬ್ಬು ದೈವಸ್ಥಾನದ ಆಡಳಿತ ಮೊಕ್ತೇಸರರಾದ ಭಾಸ್ಕರ ಚೌಟ ಕುಮ್ಡೇಲು, ಸಂಸ್ಕಾರ ಭಾರತಿ ಜಿಲ್ಲಾಧ್ಯಕ್ಷ ತಾರಾನಾಥ ಕೊಟ್ಟಾರಿ,ಒಕ್ಕೂಟದ ಉಪ ವ್ಯವಸ್ಥಾಪಕರಾದ ಜಾನೆಟ್ ರೊಸಾರಿಯೋ, ವಿಸ್ತರಣಾಧಿಕಾರಿ ಜಗದೀಶ್, ಹಾಲು ಪರೀಕ್ಷಕರಾದ ಲಕ್ಷ್ಮಿ ನಾಣ್ಯ, ಪುದು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತದ ಅಧ್ಯಕ್ಷೆ ಹೇಮಲತಾ ಬಿ. ಚೌಟ, ಉಪಾಧ್ಯಕ್ಷೆ ಗೀತಾ ಗಂಪದಕೋಡಿ ಉಪಸ್ಥಿತರಿದ್ದರು.

ಕಾರ್ಯ ನಿರ್ವಹಣಾಧಿಕಾರಿ ಆಶಾ ಲತಾ ತುಂಬೆಕೋಡಿ ವರದಿ ವಾಚಿಸಿದರು. ನಿರ್ದೇಶಕಿ ಶಾಂತ ಡಿ. ಚೌಟ ಸ್ವಾಗತಿಸಿದರು. ಸುಜಾತಾ ಕಿದೆಬೆಟ್ಟು ವಂದಿಸಿದರು. ಜಗದೀಶ್ ಕಡೆಗೋಳಿ ನಿರೂಪಿಸಿದರು. ಇದೇ ವೇಳೆ ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದ ಸಹಕಾರಿಗಳನ್ನು ಸನ್ಮಾನಿಸಲಾಯಿತು.

ಶ್ರೀ ಮಹಾಲಿಂಗೇಶ್ವರ ದೇವರ ಸ್ವರ್ಣ ಕವಚಕ್ಕೆ ಭಕ್ತರಿಂದ ಸಹಕಾರ



ಪುತ್ತೂರು: ಇತಿಹಾಸ ಪ್ರಸಿದ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ದೇವರಿಗೆ ಸ್ವರ್ಣ ಕವಚ ನಿರ್ಮಾಣ ಮಾಡುವ ಸಂಕಲ್ಪದಂತೆ ಭಕ್ತರಿಂದ ಸಹಕಾರ ಸಿಗುತ್ತಿದ್ದು ಐವರು ಭಕ್ತರು ತಲಾ 1 ಪವನ್‌ನಂತೆ 5 ಪವನ್ ಸ್ವರ್ಣವನ್ನು ದೇವರಿಗೆ ಸಮರ್ಪಣೆ ಮಾಡಿದ್ದಾರೆ.

ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಮತ್ತು ಜಯಶ್ರೀ ದಂಪತಿ ಪುತ್ರ ವರುಣ್, ಉಪ್ಪಿನಂಗಡಿ ಸಹಸ್ರಲಿಂಗೇಶ್ವರ ಮಹಾಕಾಳಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರಾಧಾಕೃಷ್ಣ ನ್ಯಾಕ್, ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರು ಮತ್ತು ಸಮಿತಿ ಸದಸ್ಯರೂ ಆಗಿರುವ ವಿ. ವಸಂತ ಕದಿಲಾಯ, ಆದರ್ಶ ನ್ಯಾಕ್ ಉಪ್ಪಿನಂಗಡಿ, ಭರತ್ ಕುಮಾರ್ ಆರಿಗ ಪಟ್ಟೆಗುತ್ತು ಅವರು ತಲಾ 1 ಪವನ್ ಸ್ವರ್ಣವನ್ನು ದೇವರ ಸ್ವರ್ಣ ಕವಚ ನಿರ್ಮಾಣ ಬಾಬ್ತು ಸಮರ್ಪಣೆ ಮಾಡಿದರು. ಶಾಸಕ ಅಶೋಕ್ ಕುಮಾರ್ ರೈ ಅವರು ಸ್ವರ್ಣ ಸಮರ್ಪಣೆ ಮಾಡಿದವರನ್ನು ಗೌರವಿಸಿದರು. ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಸದಸ್ಯರು ಉಪಸ್ಥಿತರಿದ್ದರು.

> **5 ಪವನ್ ಸ್ವರ್ಣ ನೀಡುತ್ತೇನೆ**
>
> **ಮಹಾಲಿಂಗೇಶ್ವರ ದೇವರಿಗೆ ಸ್ವರ್ಣ ಕವಚ ನಿರ್ಮಾಣಕ್ಕೆ 10 ಕೆ.ಜಿ. ಬಂಗಾರ ಆವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಭಕ್ತರಿಂದ ಸಹಕಾರ ಬೇಕು. ನಾನು ವೈಯುಕ್ತಿಕ ನೆಲೆಯಲ್ಲಿ 5 ಪವನ್ ಚಿನ್ನವನ್ನು ನೀಡುತ್ತೇನೆ ಎಂದು ಶಾಸಕ ಅಶೋಕ್ ರೈ ಹೇಳಿದರು.**

ಪಂಜಿಮೊಗರುವಿನಲ್ಲಿ ಸುಸಜ್ಜಿತ 'ಮೊಗೇರ ಸೌಧ'ದ ಉದ್ಘಾಟನೆ



ಮಂಗಳೂರು: ಮೊಗೇರ ಸಂಘ ಮಂಗಳೂರು ತಾಲೂಕು ಇದರ ನೇತೃತ್ವದಲ್ಲಿ ಕೂಳೂರು ಪಂಜಿಮೊಗರುವಿನಲ್ಲಿ ಸುಮಾರು 4 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡ ನಾಲ್ಕು ಅಂತಸ್ತಿನ ಸುಸಜ್ಜಿತ 'ಮೊಗೇರ ಸೌಧ' ಭಾನುವಾರ ಉದ್ಘಾಟನೆಗೊಂಡಿತು.

ಸೌಧ ಉದ್ಘಾಟಿಸಿ ಮಾತನಾಡಿದ ಶಾಸಕ ಡಾ.ವೈ. ಭರತ್ ಶೆಟ್ಟಿ, ಮೊಗೇರ ಸಂಘದ ಸಂಘಟಿತ ಪ್ರಯತ್ನದಿಂದ ನೂತನ ಮೊಗೇರ ಸೌಧ ಉದ್ಘಾಟನೆಗೊಂಡಿದೆ. ಈ ಭವನದಲ್ಲಿ ಶಿಕ್ಷಣ ಮತ್ತು ಸ್ವ ಉದ್ಯೋಗಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ಅಂಬೇಡ್ಕರ್ ಅವರ ಚಿಂತನೆಯನ್ನು ಸಾಕಾರಗೊಳಿಸುವಂತಾಗಲಿ ಎಂದರು. ನೂತನವಾಗಿ ನಿರ್ಮಿಸಿದ ಸಮುದಾಯ ಭವನ, ಉದ್ದೇಶಿತ ಸ್ವ ಉದ್ಯೋಗ ತರಬೇತಿ ಕೇಂದ್ರ ಮತ್ತು ಬಡ ಮಕ್ಕಳ ವಸತಿ ನಿಲಯಗಳನ್ನೊಳಗೊಂಡಿರುವ ಬಹು ಮಹಡಿಗಳ ಕಟ್ಟಡದ ಸದುಪಯೋಗವಾಗಲಿ ಎಂದವರು ಹೇಳಿದರು.

ನಗರದ ಪಂಜಿ ಮೊಗರುವಿನ ರಸ್ತೆಯ ಬದಿಯಲ್ಲಿ ಸಂಘದ ಹೆಸರಿನಲ್ಲಿ ಸ್ವಂತ ಕ್ರಯಕ್ಕೆ ಪಡುಕೊಂಡ ಸುಮಾರು 0.20 ಎಕ್ರೆ ವಿಸ್ತೀರ್ಣದಲ್ಲಿ ನಾಲ್ಕು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಕಟ್ಟಡದಲ್ಲಿ ನಿರುದ್ಯೋಗಿ ಯುವಕರಿಗೆ ಹಾಗೂ ಮಹಿಳೆಯರಿಗೆ ಸ್ವಉದ್ಯೋಗ ತರಬೇತಿ ಕೇಂದ್ರ ಮತ್ತು ಬಡ ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸಂಘದ ಅಧ್ಯಕ್ಷ ಸೀತಾರಾಮ ಕೊಂಚಾಡಿ ಅಧ್ಯಕ್ಷತೆ ವಹಿಸಿದ್ದರು ಮಂಗಳೂರು ಮಹಾನಗರಪಾಲಿಕೆಯ ಮಾಜಿ ಮೇಯರ್ ಶಶಿಧರ ಹೆಗ್ಡೆ ಮಾಜಿ ಸಚಿವರಾದ ಎಸ್. ಅಂಗಾರ, ಡಾ.ವಾಸುದೇವ ಬೆಳ್ಳೆ, ದಲಿತ ಮುಖಂಡರಾದ ಎಂ.ದೇವದಾಸ್, ಮಾಜಿ ಕಾರ್ಪೊರೇಟರ್ ಅನಿಲ್ ಕುಮಾರ್, ಸುಭಾಷ್ ಹನುಮಂತಥಿ ಕಾನಡೆ, ಡಾ.ಘನ ಶ್ಯಾಮ ಪಾತಣಕರ್, ನಂದರಾಜ್ ಸಂಕೇಶ ಮಾತನಾಡಿದರು. ಮೊಗೇರ ಸಂಘದ ಮಾಜಿ ರಾಜ್ಯಾಧ್ಯಕ್ಷ ಸುಂದರ ಮೇರ, ದೇವದಾಸ್ ಕೂಳೂರು, ರುಕ್ಕಯ್ಯ ಪಂಜಿಮೊಗರು ಉಪಸ್ಥಿತರಿದ್ದರು.

ಅಶೋಕ್ ಕೊಂಚಾಡಿ ಪ್ರಾಸ್ತವಿಕವಾಗಿ ಮಾತನಾಡಿದರು. ಸಂಘದ ಕಾರ್ಯದರ್ಶಿ ಗಿರಿಯಪ್ಪ ಸ್ವಾಗತಿಸಿದರು. ಕೋಶಾಧಿಕಾರಿ ನಾರಾಯಣ ಉಳ್ಳಾಲ್ ವಂದಿಸಿದರು.

ಮಂಗಳೂರು ವಿವಿ ಸಾಂಸ್ಕೃತಿಕ ಸ್ಪರ್ಧೆ 'ಸಂಭ್ರಮ- 2026'ರ ಉದ್ಘಾಟನೆ



ಕೊಣಾಜೆ: ವಿದ್ಯಾರ್ಥಿ ಜೀವನ ಮಹತ್ವದ್ದಾಗಿದೆ. ನಾವು ಉತ್ತಮ ಶಿಕ್ಷಣದೊಂದಿಗೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಉದ್ಯೋಗವನ್ನು ಪಡೆಯುವ ಮೂಲಕ ಪೋಷಕರಿಗೆ, ಕಲಿತ ಶಿಕ್ಷಣ ಸಂಸ್ಥೆಗೆ ಕೀರ್ತಿ ತರುವ ಕೆಲಸ ಮಾಡಬೇಕು ಎಂದು ಸಿನಿಮಾ ಹಾಗೂ ನಾಟಕ ಕಲಾವಿದ ಸತೀಶ್ ಬಂದಲೆ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಆಶ್ರಯದಲ್ಲಿ ಮೂರು ದಿನಗಳ ಕಾಲ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆ 'ಸಂಭ್ರಮ-2026' ನ್ನು ಬುಧವಾರ ಮಂಗಳ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು ತುಳು ಸಿನಿಮಾ, ನಾಟಕಗಳು ಕೇವಲ ಮನರಂಜನೆಗೆ ಮಾತ್ರವಲ್ಲ, ಅವುಗಳಲ್ಲಿ ಸಮಾಜಕ್ಕೆ ಸಂದೇಶ ಇರುವುದನ್ನು ಕೂಡಾ ಗಮನಿಸಬೇಕು. ವಿದ್ಯಾರ್ಥಿ ಜೀವನದಲ್ಲಿ ನಡೆಯುವ ಇಂತಹ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಾವು ತೊಡಗಿಸಿಕೊಂಡು ಮುನ್ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಯಶ್ವಿನ್ ಕೆ.ಪಿ, ಅಪೇಕ್ಷಾ ಎಚ್ ಆಳ್ವ, ನಿಹಾರ್ ಗಾಂವ್ಕರ್, ಮಿಲನ್ ಮುತ್ತಣ್ಣ, ಶ್ರೀಶ ಕೆ, ಕೇಸರಿ ಇದ್ದರು. ನಾಟಕ ಕಲಾವಿದ ಸತೀಶ್ ಬಂದಲೆ ಅವರನ್ನು ಗೌರವಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ನಿರ್ದೇಶಕರಾದ ಡಾ.ಮೋಹನ್ ಸಿಂಘೆ ಅವರು ಸ್ವಾಗತಿಸಿದರು. ಸಾಂಸ್ಕೃತಿಕ ಜೊತೆ ಕಾರ್ಯದರ್ಶಿ ಕೇಸರಿ ವಂದಿಸಿದರು. ಸಂಶೋಧನಾ ವಿದ್ಯಾರ್ಥಿನಿ ಕಾವ್ಯ ಕಾರ್ಯಕ್ರಮ ನಿರೂಪಿಸಿದರು.

ತೋಕೂರು ದೇವಸ್ಥಾನದಲ್ಲಿ ಶ್ರೀ ದೇವರ ಉತ್ಸವ ಬಲಿ, ಚಂದ್ರ ಮಂಡಲ ರಥೋತ್ಸವ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರ ಪ್ರತಿಷ್ಠಾಪನಾ ಮಹೋತ್ಸವದ ವರ್ಷಾಚರಣೆ ಅಂಗವಾಗಿ ರಾತ್ರಿ ಶ್ರೀ ರಂಗ ಪೂಜೆ,ಶ್ರೀ ದೇವರ ಉತ್ಸವ ಬಲಿ, ಚಂದ್ರಮಂಡಲ ರಥೋತ್ಸವ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಯವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನಡೆಯಿತು ಈ ಸಂದರ್ಭ ಪ್ರಧಾನ ಅರ್ಚಕ ಟಿ.ಕೆ. ಮಧುಸೂದನ ಆಚಾರ್, ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗುರುರಾಜ್ ಎಸ್. ಪೂಜಾರಿ, ಸದಸ್ಯರಾದ ಪುರುಷೋತ್ತಮ ಕೋಟ್ಯಾನ್, ಅಶೋಕ್ ಕುಂದರ್, ಸಂಪತ್ ಜೆ. ಶೆಟ್ಟಿ ತೋಕೂರುಗುತ್ತು, ವಿಶ್ವನಾಥ, ಭಾಸ್ಕರ್ ದೇವಾಡಿಗ, ಸವಿತಾ ಬೆಳ್ಳಾಯರು, ಶೋಭಾ ವಿ. ಅಂಚನ್, ಮಾಜಿ ಪಂಚಾಯತ್ ಅಧ್ಯಕ್ಷ ಮೋಹನ್ ದಾಸ್, ಗ್ರಾಮಸ್ಥರಾದ ಹರಿದಾಸ್ ಭಟ್, ರಾಮಣ್ಣ ದೇವಾಡಿಗ ಮುಂಬೈ, ಪುರುಷೋತ್ತಮ ರಾವ್, ವ್ಯಾಸರಾವ್ ಚೆನ್ನೈ ಹಾಗೂ ಊರಿನ ಗ್ರಾಮಸ್ಥರು, ಸ್ಥಳೀಯ ಸಂಘ ಸಂಸ್ಥೆಗಳ ಸದಸ್ಯರು ಉಪಸ್ಥಿತರಿದ್ದರು

ಬೆಳ್ತಂಗಡಿ: ವ್ಯಸನ ಮುಕ್ತ ಅಭಿಯಾನ



ಬೆಳ್ತಂಗಡಿ: ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ರೆಡ್ ಕ್ರಾಸ್ ದಿನದ ಅಂಗವಾಗಿ ವ್ಯಸನ ಮುಕ್ತ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು.


ಮೂಲತ್ವ ಫೌಂಡೇಶನ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಪ್ರಕಾಶ್ ಕೋಟ್ಯಾನ್ ಉದ್ಘಾಟಿಸಿದರು. ಕಾಲೇಜಿನ ಪ್ರಾಚಾರ್ಯ ಪ್ರೊಫೆಸರ್ ಸುರೇಶ್ ವಿ. ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಮಂಗಳೂರಿನ ಡಿ ಎಡಿಕ್ಷನ್ ಕೌನ್ಸಿಲರ್ ಡಾ. ಕುಸುಮ್ ತಂತ್ರಿ ಮಾದಕ ವಸ್ತುಗಳನ್ನು ತೆಗೆದುಕೊಳ್ಳುವುದರಿಂದ ಆಗುವ ಪರಿಣಾಮಗಳ ಬಗ್ಗೆ ವಿವರಿಸಿದರು. ಯುವ ರೆಡ್ ಕ್ರಾಸ್ ಘಟಕದ ಸಂಚಾಲಕ ಡಾ. ರವಿ ಎಂ.ಎನ್. ಸ್ವಾಗತಿಸಿದರು. ಎನ್ನೆಸ್ಸೆಸ್ ಕಾರ್ಯಕ್ರಮಾಧಿಕಾರಿ ಪ್ರೊ.ಕವಿತಾ ಇದ್ದರು. ಚಿತ್ರಾ ನಿರೂಪಿಸಿದರು. ಸುರಕ್ಷಿತಾ ವಂದಿಸಿದರು. ಬೆಳ್ತಂಗಡಿಯ ಯುವ ರೆಡ್ ಕ್ರಾಸ್ ಘಟಕ, ರೋವರ್ಸ್-ರೆಂಜರ್ಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಜತೆಗೆ ಮಂಗಳೂರಿನ ಮೂಲತ್ವ ಫೌಂಡೇಶನ್ ಚಾರಿಟೇಬಲ್ ಟ್ರಸ್ಟ್, ಸೇವಾ ಭಾರತಿ, ಕೇಶವ ಸ್ಮೃತಿ ಸಂವರ್ಧನ ಸಮಿತಿ ಆಶ್ರಯದಲ್ಲಿ ಕಾರ್ಯಕ್ರಮ ಜರಗಿತು.

ಸುಳ್ಯ ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ | ಅಧಿಕಾರಿಗಳ ಅಸಮರ್ಪಕ ಉತ್ತರಕ್ಕೆ ಶಾಸಕಿ ಭಾಗೀರಥಿ ಮುರುಳ್ಯ ಗರಂ

ಪಟ್ಟಣ ಪಂಚಾಯತ್‌ನ ಕಲ್ಚರ್ಪೆ ಘನತ್ಯಾಜ್ಯ ಘಟಕದಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ಸೂಚನೆ

ಸುಳ್ಯ: ಸುಳ್ಯ ಪಟ್ಟಣ ಪಂಚಾಯತ್ ವ್ಯಾಪ್ತಿಯ ಕಲ್ಚರ್ಪೆ ಘನತ್ಯಾಜ್ಯ ಘಟಕದಲ್ಲಿ ಬರ್ನಿಂಗ್ ಸಮಸ್ಯೆ ಉದ್ಭವಿಸಿದ್ದು ಈ ಕುರಿತು ನಾನು ಶಾಸಕಿಯಾದಾಗ ಪ್ರಥಮ ಸಭೆಯನ್ನು ಮಾಡಲಾಗಿತ್ತು. ಇದೀಗ ಯಂತ್ರೋಪಕರಣ ಕೈ ಕೊಟ್ಟಿದ್ದು ಆ ಯಂತ್ರೋಪಕರಣ ಪೂರೈಸಿದ ಗುತ್ತಿಗೆ ಸಂಸ್ಥೆ ಮತ್ತು ಯಂತ್ರೋಪಕರಣಗಳ ಕುರಿತ ದಾಖಲೆ ಸಹಿತ ಗುರುವಾರ ಕಚೇರಿಗೆ ಆಗಮಿಸಿ ಸಮರ್ಪಕ ಉತ್ತರದ ಜೊತೆಗೆ ತ್ಯಾಜ್ಯ ವಿಲೇವಾರಿ ಮಾಡುವಂತೆ ಮುಖ್ಯಾಧಿಕಾರಿ ಪರವಾಗಿ ಸಭೆಗೆ ಆಗಮಿಸಿದ ಸಿಬ್ಬಂದಿಗೆ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಸೂಚಿಸಿದ ಘಟನೆ ನಡೆದಿದೆ.

ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ



ಬುಧವಾರ ನಡೆದ ಸುಳ್ಯ ತಾಲೂಕು ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ.ಪಂ. ಅಧಿಕಾರಿಯ ಅಸಮರ್ಪಕ ಉತ್ತರಕ್ಕೆ ಗರಂ ಆಗಿ ಸೂಚಿಸಿದರು. ಈ ಸಂದರ್ಭ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಮಾತನಾಡಿ, ಪ.ಪಂ. ಮುಖ್ಯಾಧಿಕಾರಿ ಸುಮಾರು ರೂ.2 ಲಕ್ಷಗಳಷ್ಟು ಲಂಚ ಪಡೆದು ಅಕ್ರಮ ಕಟ್ಟಡಕ್ಕೆ ಅನುಮತಿ ನೀಡುತ್ತಿದ್ದಾರೆ. ಈ ಬಗ್ಗೆಯೂ ಮುಂದಿನ ಸಭೆಗೆ ದಾಖಲೆ ಸಲ್ಲಿಸುವಂತೆ ಸೂಚಿಸಬೇಕು ಎಂದು ಕೋರಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕಿ, ಅಧಿಕಾರಿಗಳು ಸೂಕ್ತ ದಾಖಲೆಗಳನ್ನು ಸಭೆಗೆ ಸಲ್ಲಿಸಬೇಕು ಎಂದು ಸೂಚಿಸಿದರು.

ಕೊಲ್ಲಮೊಗ್ರ ಪನ್ನೆ ಎಂಬಲ್ಲಿ ನೆರೆ ಸಂತ್ರಸ್ತರಿಗೆ ನಿವೇಶನ ಹಂಚಿಕೆ ಸ್ಥಳದ ಬಗ್ಗೆ ಉತ್ತರವನ್ನು ಪಡೆದು ಮುಂದಿನ ಸಭೆಯ ಒಳಗೆ ನಿವೇಶನ ಹಂಚಿಕೆಯಾಗಬೇಕು ಎಂದು ನಾಮನಿರ್ದೇಶಕ ಸದಸ್ಯ ಧರ್ಮಪಾಲ ಕೊಯಿಂಗಾಜೆ ಆಗ್ರಹಿಸಿದರು. ಈ ವಿಚಾರ ಮುಂದೆ ಮತ್ತೊಮ್ಮೆ ಚರ್ಚೆಗೆ ಬಾರದಂತೆ ನಿವೇಶನ ಹಂಚಿಕೆ ಆಗುವಂತೆ ನೋಡಿಕೊಳ್ಳಬೇಕು ಎಂದು ತಹಶೀಲ್ದಾರ್ ಅವರಿಗೆ ಸೂಚಿಸಿದರು. ಕೆಡಿಪಿ ಸಭೆಗೆ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಕಡ್ಡಾಯವಾಗಿ ಹಾಜರಾಗಬೇಕು ಎಂದು ಸೂಚಿಸಿದರು.

ಸುಳ್ಯ ಪಟ್ಟಣ ವ್ಯಾಪ್ತಿಯಲ್ಲಿ ಅಮೃತ್ ಯೋಜನೆ ಕಾಮಗಾರಿಗಾಗಿ ರಸ್ತೆ ಅಗೆದು ಹಾಕಲಾಗಿದ್ದು ಅದನ್ನು ಸರಿಪಡಿಸಿದ ವಿಚಾರಕ್ಕೆ ಪ.ಪಂ. ಅಧಿಕಾರಿ ಸಮರ್ಪಕ ಉತ್ತರ ನೀಡದೇ ಇದ್ದಾಗ ಅಮೃತ್ ಯೋಜನೆಯ ಎಇಇ ಸುಳ್ಯಕ್ಕೆ ಆಗಮಿಸಿ ವರದಿ ನೀಡಬೇಕು. ಜೊತೆಗೆ ಅಧಿಕಾರಿಗಳಿಗೆ ನೋಟೀಸ್ ನೀಡಲು ಪ.ಪಂ. ಆಡಳಿತಾಧಿಕಾರಿ ಮಂಜುಳ ಎಂ. ಸೂಚಿಸಿದರು.

ಪರಮೇಶ್ವರ ಕೆಂಬಾರೆ ಅವರು ಗುತ್ತಿಗಾರು ಮೆಟ್ಟಿನಡ್ಕ ರಸ್ತೆಯ ಕಳಪೆ ಕಾಮಗಾರಿ ಕುರಿತು ಛಾಯಾಚಿತ್ರ ಸಹಿತ ಪ್ರಶ್ನಿಸಿದಾಗ, ಅನುದಾನ ಬರುವುದೇ ಕಡಿಮೆ, ಬಂದ ಅನುದಾನದಲ್ಲಿ ಕಳಪೆಯಾದರೆ ಹೇಗೆ? ಲೋಕೋಪಯೋಗಿ ಇಲಾಖಾ ಅಧಿಕಾರಿಗಳು ಕಾಮಗಾರಿಯ ಪರಿಶೀಲನೆ ನಡೆಸುತ್ತಿರಬೇಕು. ಜೊತೆಗೆ ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಂದು ಶಾಸಕಿ ಸೂಚಿಸಿದರು.

ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ರಾಜಣ್ಣ ಸ್ವಾಗತಿಸಿ, ವಂದಿಸಿದರು. ವೇದಿಕೆಯಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ ಉಪಸ್ಥಿತರಿದ್ದರು.

> **ಗೋ ಶಾಲೆ ನಿರ್ಮಾಣಕ್ಕೆ ಪತ್ರ**
>
> **ಉಬರಡ್ಕ ಮಿತ್ತೂರು ಗ್ರಾಮದಲ್ಲಿ ಪಶುಸಂಗೋಪನೆ ಇಲಾಖೆಗೆ ಕಾಯ್ದಿರಿಸಿದ ಸ್ಥಳವನ್ನು ವರ್ಗಾವಣೆ ಕೋರಿ ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಜೊತೆಗೆ ಪ್ರಸ್ತುತ ಸ್ಥಳದಲ್ಲಿ ಕೊಟ್ಟಿಗೆ ನಿರ್ಮಿಸಿದ್ದು, ಈಗ ಮೂಲಸೌಕರ್ಯ ಅಭಿವೃದ್ಧಿಗೆ ರೂ.30,54 ಲಕ್ಷ ಅನುದಾನಕ್ಕಾಗಿ ಪತ್ರ ಬರೆಯಲಾಗಿದೆ ಎಂದು ಸಭೆಗೆ ಪಶು ಸಂಗೋಪನಾ ಆಸ್ಪತ್ರೆ ವೈದ್ಯಾಧಿಕಾರಿ ಡಾ. ನಿತಿನ್ ಪ್ರಭು ಸಭೆಗೆ ತಿಳಿಸಿದರು.**

ಸುತ್ತಮುತ್ತ

ಬೆಳ್ತಂಗಡಿ ಸರಕಾರಿ ಕಾಲೇಜಿನಲ್ಲಿ ಹಳ್ಳಿ ಸಂತೆ

ಬೆಳ್ತಂಗಡಿ: ಸರಕಾರಿ ಪ್ರಥಮ ದರ್ಜೆ ಕಾಲೇಜು ಬೆಳ್ತಂಗಡಿ ಇಲ್ಲಿನ ವಾಣಿಜ್ಯ ವಿಭಾಗದ ಆಶ್ರಯದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಲ್ಲಿ ವ್ಯವಹಾರಿಕ ಕೌಶಲ್ಯವನ್ನು ಬೆಳೆಸುವ ದೃಷ್ಟಿಯಿಂದ ಹಳ್ಳಿ ಸಂತೆ ಎಂಬ ಕಾರ್ಯಕ್ರಮದ ಮೂಲಕ ಹೋಟೆಲ್ ವ್ಯವಹಾರ ಮತ್ತು ಅಂಗಡಿ ವ್ಯವಹಾರಗಳ ಜ್ಞಾನವನ್ನು ನೀಡಲಾಯಿತು. ಈ ಕಾರ್ಯಕ್ರಮವನ್ನು ಕಾಲೇಜಿನ ಪ್ರಾಚಾರ್ಯ ಪ್ರೊಫೆಸರ್ ಸುರೇಶ್ ವಿ. ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ವಾಣಿಜ್ಯ ಸಂಘದ ಸಂಯೋಜಕರಾದ ಪ್ರೊಫೆಸರ್ ನವೀನ್, ಡಾ. ರಾಜೇಶ್ವರಿ ಮತ್ತು ಸ್ನಾತಕೋತ್ತರ ವಿಭಾಗದ ಸಂಚಾಲಕ ಡಾ. ರವಿ ಎಂ.ಎನ್.ಉಪಸ್ಥಿತರಿದ್ದರು. ಕುಮಾರಿ ಕವನ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ತೇಜಸ್ವಿನಿ ವಂದಿಸಿದರು.

ಸೇತುವೆ ನಿರ್ಮಾಣ ಕಾಮಗಾರಿಗೆ ಅನುದಾನ ಮಂಜೂರು: ಪೂಂಜ

ಬೆಳ್ತಂಗಡಿ: ಬೆಳ್ತಂಗಡಿ ತಾಲೂಕಿನ ಬೆಳಾಲು ಗ್ರಾಮದ ಮೂಕುತ್ತಿ ಮಜಲು ಹಾಗೂ ನಾಗಕಲ್ಲು ಪ್ರದೇಶಗಳಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಬಂಡವಾಳ ವೆಚ್ಚ ಅನುದಾನದಡಿ ರೂ.5 ಕೋಟಿ ಅನುದಾನ ಮಂಜೂರಾಗಿದೆ ಎಂದು ಶಾಸಕ ಹರೀಶ್ ಪೂಂಜ ತಿಳಿಸಿದ್ದಾರೆ.

ಬೆಳಾಲು ಗ್ರಾಮಸ್ಥರ ಬಹುಕಾಲದ ಬೇಡಿಕೆಯಂತೆ ಈ ಪ್ರದೇಶದಲ್ಲಿ ಸೇತುವೆ ನಿರ್ಮಾಣದ ಅಗತ್ಯತೆ ಕುರಿತು ಸರ್ಕಾರದ ಗಮನಕ್ಕೆ ತರಲಾಗಿದ್ದು ಲೋಕೋಪಯೋಗಿ ಇಲಾಖೆ ಮುಖಾಂತರ ಕಾಮಗಾರಿ ಅನುಷ್ಠಾನಗೊಳಿಸಲು ಅಗತ್ಯ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಅನುದಾನ ಬಿಡುಗಡೆಗೊಂಡಿದೆ. ಈ ಕಾಮಗಾರಿ ಯಿಂದ ಸ್ಥಳೀಯ ಸಾರ್ವಜನಿಕರಿಗೆ ಸುಗಮ ಹಾಗೂ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸಲಾಗುವುದರ ಜೊತೆಗೆ ಗ್ರಾಮೀಣ ಭಾಗದ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ದೊರೆಯಲಿದೆ. ಈ ಮಹತ್ವದ ಕಾಮಗಾರಿಗೆ ಅನುದಾನ ಮಂಜೂರು ಮಾಡಿದ ರಾಜ್ಯ ಸರ್ಕಾರಕ್ಕೆ ಹಾಗೂ ಲೋಕೋಪಯೋಗಿ ಇಲಾಖೆ ಸಚಿವರಿಗೆ ಶಾಸಕ ಹರೀಶ್ ಪೂಂಜ ಧನ್ಯವಾದ ಸಲ್ಲಿಸಿದ್ದಾರೆ.

ಮೇ 17: ಕಡಂಬಾರಿನಲ್ಲಿ ಶ್ರೀ ವಿಷ್ಣು ಯಕ್ಷ ವೈಭವ

ಮಂಜೇಶ್ವರ: ಶ್ರೀ ವಿಷ್ಣು ಯಕ್ಷಬಳಗ ಮಜಿಬೈಲು ಮಂಜೇಶ್ವರ ಕಲಾ ತಂಡದ ಶ್ರೀ ವಿಷ್ಣು ಯಕ್ಷ ವೈಭವ -2026 ಕಾರ್ಯಕ್ರಮ ಮೇ 17ರಂದು ಕಡಂಬಾರು ಶ್ರೀ ಮಹಾವಿಷ್ಣುಮೂರ್ತಿ ದೇವಳ ವಠಾರದಲ್ಲಿ ಜರಗಲಿದೆ. ಶ್ರೀ ಮಹಾವಿಷ್ಣುಮೂರ್ತಿ ದೇವಳ ಕಡಂಬಾರು, ಶ್ರೀ ಗುರುನರಸಿಂಹ ಯಕ್ಷಬಳಗ ಮೀಯಪದವು, ಶ್ರೀ ಬೆನಕ ಯಕ್ಷ ಕಲಾ ವೇದಿಕೆ ಪೈವಳಿಕೆ ಸಮಾರಂಭಕ್ಕೆ ಸಹಕಾರ ನೀಡಲಿದೆ. ಸಂಜೆ 4.30ಕ್ಕೆ ದೀಪ ಪ್ರಜ್ವಲನೆ ಮೂಲಕ ಯಕ್ಷಶತಕ ಉದ್ಘಾಟನೆಗೊಳ್ಳಲಿದೆ. ಬಳಿಕ ತಂಡದ ಸದಸ್ಯರು , ನುರಿತ ಕಲಾವಿದರಿಂದ ಗುರುದಕ್ಷಿಣೆ ಯಕ್ಷಗಾನ ನಡೆಯಲಿದೆ. ರಾತ್ರಿ ಗಂಟೆ 7ರಿಂದ ಸಭಾಕಾರ್ಯಕ್ರಮ ಜರಗಲಿದೆ. ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ ಕಡಂಬಾರು ಕ್ಷೇತ್ರದ ಆಡಳಿತ ಮೊಕ್ತೇಸರ ಸೂರ್ಯ ನಾರಾಯಣ ಅಯ್ಯ ಅಧ್ಯಕ್ಷತೆ ವಹಿಸಲಿ ದ್ದಾರೆ. ವೈದಿಕ ವಿದ್ವಾಂಸ ರಾಮದಾಸ ಆಚಾರ್ಯ ಕಡಂಬಾರು ಶುಭಾಶಂಸನೆಗೈಯ್ಯುವರು. ಕರ್ನಾಟಕ ಯಕ್ಷಗಾನ ಅಕಾಡೆಮಿ ಬೆಂಗಳೂರು ಸದಸ್ಯ ಸತೀಶ ಅಡಪ ಸಂಕಬೈಲು, ಉಡುಪಿ ಉಜ್ವಲ್ ಗ್ರೂಪ್‌ನ ಆಡಳಿತ ನಿರ್ದೇಶಕ ಅಜಯ್ ಪಿ.ಶೆಟ್ಟಿ ಕನಿಲ ಶ್ರೀ ಭಗವತಿ ಕ್ಷೇತ್ರ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪದ್ಮನಾಭ ಕಡಪ್ಪರ, ಪ್ರೀತೇಶ ಶೆಟ್ಟಿ ವಿ. ಪೋರ್ ಚಾನೆಲ್ ಮಂಗಳೂರು ಪ್ರತಿನಿಧಿ ಭಾಗವಹಿಸಲಿದ್ದಾರೆ. ಕಲಾತಪಸ್ವಿ ಬಾಲಕೃಷ್ಣ ಮಂಜೇಶ್ವರ ನಾಟ್ಯನಿಲಯಂ ಮಂಜೇಶ್ವರ , ನಿವೃತ್ತ ಮುಖ್ಯೋಪಾಧ್ಯಾಯರು, ಯಕ್ಷಗಾನ ಕಲಾವಿದ ರಾಜಾರಾಮ ರಾವ್ ಮೀಯಪದವು ಅವರನ್ನು ಗೌರವಿಸಲಾಗುವುದು.ಬಳಿಕ 'ಭಾರ್ಗವ ವಿಜಯ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ.

ಕಾರಿಗೆ ಲಾರಿ ಡಿಕ್ಕಿ: ಹೆದ್ದಾರಿ ಸಂಚಾರ ಅಸ್ತವ್ಯಸ್ತ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಹಳೆಯಂಗಡಿ ಜಂಕ್ಷನ್ ಬಳಿ ಕಾರಿಗೆ ಲಾರಿ ಡಿಕ್ಕಿಯಾಗಿ ಕಾರಿನ ಒಂದು ಭಾಗ ಸಂಪೂರ್ಣ ಹಾನಿಯಾಗಿದೆ. ಕಾರ್ಕಳದ ಬೋಳ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಕಾರು ಹಳೆಯಂಗಡಿ ಜಂಕ್ಷನ್ ಬಳಿಯ ಅಪಘಾತ ತಡೆಗೆ ಇರಿಸಿದ್ದ ಬ್ಯಾರಿಕೇಡ್ ಬಳಿ ನಿಧಾನಗತಿಯಿಂದ ಚಲಿಸುತ್ತಿದ್ದಂತೆ ಅತೀ ವೇಗದಿಂದ ಬಂದ ಲಾರಿಎಡ ಬದಿಗೆ ಚಲಿಸಿ ಕಾರಿಗೆ ಡಿಕ್ಕಿ ಹೊಡೆದು ಎಳೆದುಕೊಂಡು ಹೋಗಿದೆ. ಅಪಘಾತದಿಂದ ಕಾರಿನ ಬಲ ಬದಿಗೆ ಹಾನಿ ಯಾಗಿದ್ದು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಯಿತು.

ಪ್ರಾಕೃತಿಕ ವಿಕೋಪ ವಿಪತ್ತು ನಿರ್ವಹಣಾ ಸಮಿತಿ ಸಭೆ | ಅಧಿಕಾರಿಗಳಿಗೆ ಶಾಸಕರಿಂದ ಖಡಕ್ ಸೂಚನೆ

ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಭೆಗಳನ್ನು ತುರ್ತಾಗಿ ನಡೆಸಿ

ಸುಳ್ಯ: ಪ್ರಾಕೃತಿಕ ವಿಕೋಪ ವಿಪತ್ತು ಸಂಬಂಧಿಸಿದಂತೆ ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಸ್ಥಳೀಯ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಭೆಗಳನ್ನು ತುರ್ತಾಗಿ ನಡೆಸಬೇಕು ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಸೂಚಿಸಿದ್ದಾರೆ.

ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ ನಡೆದ ಸುಳ್ಯ ತಾಲೂಕು ಪ್ರಾಕೃತಿಕ ವಿಕೋಪ ವಿಪತ್ತು ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಎಲ್ಲಾ ಇಲಾಖಾ ಅಧಿಕಾರಿಗಳು ಪ್ರಾಕೃತಿಕ ವಿಕೋಪವನ್ನು ಎದುರಿಸಲು ಬೇಕಾಗುವ ಸಲಕರಣೆ ಅಗತ್ಯವಿದ್ದಲ್ಲಿ ಕೋಡಲೇ ತಿಳಿಸಿ ತರಿಸಿಕೊಳ್ಳುವ ವ್ಯವಸ್ಥೆಗಳನ್ನು ಮಾಡಿಕೊಳ್ಳುವಂತೆ ಸೂಚಿಸಿದರು.



ಇಲಾಖಾವಾರು ಅಧಿಕಾರಿಗಳು ಶಿಥಿಲವಾದ ಶಾಲೆಗಳ ಕಟ್ಟಡ, ಅಂಗನವಾಡಿ, ಆಸ್ಪತ್ರೆಗಳು ಸೇರಿದಂತೆ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಬಗ್ಗೆ ವರದಿ ಸಲ್ಲಿಸಬೇಕು. ಜೊತೆಗೆ ನಿರಾವರಿ ಇಲಾಖೆಯು ಕಿಂಡಿ ಅಣೆಕಟ್ಟು, ತೂಗು ಸೇತುವೆ, ಕಾಲು ಸಂಕ ಸೇರಿದಂತೆ ಇತರೆ ನೀರಿನ ಮೇಲೆ ನಾಗರಿಕರು ಬಳಸುವ ದಾರಿಗಳ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡುವುದರ ಜೊತೆಗೆ ಅಗ್ನಿಶಾಮಕ, ಪೋಲೀಸ್, ಅರಣ್ಯ ಇಲಾಖೆಯು ಅಪಾಯಕಾರಿ ಮರಗಳು, ಮಣ್ಣು ಕುಸಿತ ಸೇರಿದಂತೆ ಇತರೆಡೆಗಳಲ್ಲಿ ಸುರಕ್ಷತೆ ಜೊತೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳ ಬೇಕು ಎಂದು ತಿಳಿಸಿದರು.

ಸಭೆ ನಡೆಸಲು ಸೂಚನೆ

ಪ್ರಾಕೃತಿಕ ವಿಕೋಪ ವಿಪತ್ತು ನಿರ್ವಹಣೆ ಕುರಿತಾಗಿ ಸ್ಥಳೀಯ ಗ್ರಾ.ಪಂ. ಮಟ್ಟದಲ್ಲಿ ಪಂಚಾಯತ್ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಇಲಾಖೆಗಳನ್ನು ಸೇರಿಸಿಕೊಂಡು ಸಭೆ ನಡೆಸಬೇಕು. ಜೊತೆಗೆ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಇತರೆ ಸಮಸ್ಯೆಗಳು ಎದುರಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಹಾಗೂ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕಚೇರಿಯಲ್ಲಿ ಇರುವ ದಿನಗಳ ಬಗ್ಗೆ ಮಾಹಿತಿ ಪತ್ರಗಳನ್ನು ಪಂಚಾಯತ್‌ಗಳಲ್ಲಿ ಅಳವಡಿಸಬೇಕು ಹಾಗೂ ಸಾರ್ವಜನಿಕರಿಂದ ದೂರವಾಣಿ ಕರೆಗಳು ಬಂದಾಗ ಪೂರಕವಾಗಿ ತಕ್ಷಣವೇ ಸ್ಪಂದಿಸಬೇಕು ಎಂದು ಶಾಸಕರು ಸೂಚಿಸಿದರು.

> **ವಿದ್ಯುತ್ ಸಮಸ್ಯೆ ಎದುರಾಗದಿರಲಿ**
>
> ಈಗಲೇ ಕೆಲ ಕಡೆಗಳಲ್ಲಿ ಎರಡು ಮೂರು ದಿನಗಳಿಂದ ವಿದ್ಯುತ್ ಪೂರೈಕೆ ಸರಿಯಾಗಿಲ್ಲ, ಮಳೆಗಾಲದಲ್ಲಿ ಇಂತಹ ಸಮಸ್ಯೆಗಳು ಎದುರಾಗದಂತೆ ನೋಡಿಕೊಳ್ಳಬೇಕು. ಜೊತೆಗೆ ಜೋತು ಬಿದ್ದಿರುವ ತಂತಿ, ಹಾಗೂ ಕಾಡು ಬಳ್ಳಿಗಳು ಸುತ್ತಿರುವುದನ್ನು ಸರಿಪಡಿಸಿ ನಿರಂತರ ವಿದ್ಯುತ್ ಪೂರೈಕೆ ಆಗುವಂತೆ ಕ್ರಮ ವಹಿಸಬೇಕು.
>
> ● ಭಾಗೀರಥಿ ಮುರುಳ್ಯ , ಶಾಸಕಿ

ಪರಿಶೀಲನೆ ನಡೆಸಿ

ಸುಳ್ಯದಲ್ಲಿ ಅತೀ ಮುಖ್ಯವಾಗಿ ವಿದ್ಯುತ್ ಸಮಸ್ಯೆಗಳೆ ಕಂಡುಬರುತ್ತಿದ್ದು ಈ ಕುರಿತು ಅಧಿಕಾರಿಗಳು ಒಮ್ಮೆ ಮಾಣಿ ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸಿ, ಕಂಬಗಳು ಮತ್ತು ತಂತಿಗಳನ್ನು ವೀಕ್ಷಣೆ ಮಾಡಬೇಕು ಜೊತೆಗೆ ಲೋಕೋಪಯೋಗಿ ಮತ್ತು ಪಂಚಾಯತ್ ರಾಜ್ ಇಂಜಿ ಯರಿಂಗ್ ವಿಭಾಗ ರಸ್ತೆಗಳ ಚರಂಡಿ ಹಾಗೂ ಕುಡಿಯುವ ನೀರಿನಪೈಪ್ ಅಳವಡಿಕೆಗೆ ತೊಂದರೆಗೀಡಾದ ರಸ್ತೆ ದುರಸ್ತಿ ಪಡಿಸಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರಿಕಾ ಕ್ರಮ ವಹಿಸಿಕೊಳ್ಳಬೇಕು ಎಂದು ಶಾಸಕಿ ಮುರುಳ್ಯ ಸೂಚನೆ ನೀಡಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿ ಕಾರಿ ರಾಜಣ್ಣ ಸ್ವಾಗತಿಸಿ, ವಂದಿಸಿದರು.

ಕುಡ್ಲ ಕುಲಾಲೆರ್ ಟ್ರಸ್ಟ್: ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಬಂಟ್ವಾಳ: ಕುಡ್ಲ ಕುಲಾಲೆರ್ ಚಾರಿಟೇಬಲ್ ಸೇವಾ ಟ್ರಸ್ಟ್ ಮಂಗಳೂರು ಇದರ ವತಿಯಿಂದ 2025-26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 625 ರಲ್ಲಿ 618 ಅಂಕ ಗಳಿಸಿದ ದುವಿ ಹಾಗೂ ಕೃಷ್ಮ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಬಿ.ಸಿ.ರೋಡಿನ ಹಿರಿಯ ನ್ಯಾಯವಾದಿ, ನೋಟರಿ ಅಶ್ವಿನ್ ಕುಮಾರ್ ರೈ ಅವರು ಸರಳ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಟ್ರಸ್ಟ್‌ನ ಅಧ್ಯಕ್ಷರಾದ ಸದಾಶಿವ ಬಂಗೇರ ಪ್ರಾಸ್ತಾವಿಕವಾಗಿ ಮಾತನಾಡಿ, ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲು ಹೆಮ್ಮೆಯಾಗುತ್ತದೆ. ಭವಿಷ್ಯದಲ್ಲಿ ತಮ್ಮ ಜೀವನದಲ್ಲಿಯು ಯಶಸ್ಸನ್ನು ಹೊಂದಿ ಕಲಿತ ಶಾಲೆ, ಹೆತ್ತವರು, ಹುಟ್ಟಿ ಬೆಳೆದ ಊರಿಗೆ ಕೀರ್ತಿಯನ್ನು ತರಬೇಕೆಂದರು. ಮಾಜಿ ಪುರಸಭಾ ಸದಸ್ಯರಾದ ಲೋಲಾಕ್ಷ ಶೆಟ್ಟಿ,ಪ್ರಭಾ ಸಾಲ್ಯಾನ್ ,ಟ್ರಸ್ಟ್ ಸದಸ್ಯ ದಯಾನಂದ ನೇರಂಬೋಳು , ಜಯರಾಮ ಶೆಟ್ಟಿ ಮೊಡಂಕಾಪು, ನೊವೆಲ್ ಪಿಂಟೋ ಕಟ್ಟಡ ಮಾಲಿಕರಾದ ಜಯಲಕ್ಷ್ಮಿ ಎಸ್ ಬಂಗೇರ ಭೋಜ ಸಾಲಿಯಾನ್, ಜೇಸಿ ಅಧ್ಯಕ್ಷ ಕಿಶೋರ್ ಆಚಾರ್ಯ ಉಪಸ್ಥಿತರಿದ್ದರು. ಟ್ರಸ್ಟ್ ಕಾರ್ಯದರ್ಶಿ ಶೇಷಪ್ಪ ಮಾಸ್ತರ್ ಸ್ವಾಗತಿಸಿ, ವಂದಿಸಿದರು.

> **ಭವಿಷ್ಯ ರೂಪಿಸಬೇಕು**
>
> ಎಸ್ಸೆಸೆಲ್ಸಿ ಎಂಬುದು ವಿದ್ಯಾರ್ಥಿ ಜೀವನ ಭವಿಷ್ಯ ರೂಪಿಸುವ ಪ್ರಥಮ ಹಂತ, ಸಾಧಕಿ ವಿದ್ಯಾರ್ಥಿನಿಯರು ಚೆನ್ನಾಗಿ ಕಲಿತು ತಾವು ಅಪೇಕ್ಷಿಸಿದ ಕೋರ್ಸ್ ಅನ್ನು ಆಯ್ಕೆಮಾಡಿ ಜೀವನದ ಭವಿಷ್ಯವನ್ನು ರೂಪಿಸಿಕೊಳ್ಳಬೇಕು, ಈಗ ವಿಪುಲ ಅವಕಾಶ ಗಳು ಕೈ ಬೀಸಿ ಕರೆಯುತ್ತಿದೆ.
>
> ● ಅಶ್ವಿನ್ ಕುಮಾರ್ ರೈ

53ನೇ ಬಜಾಲ್ ವಾರ್ಡಿನ ಕುಂದೋಡಿ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ



ಮಂಗಳೂರು: ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಹಾನಗರ ಪಾಲಿಕೆ ವ್ಯಾಪ್ತಿಯ 53ನೇ ಬಜಾಲ್ ವಾರ್ಡಿನ ಕುಂದೋಡಿ ಕೆರೆ ಅಭಿವೃದ್ಧಿ ಕಾಮಗಾರಿಯು ಸುಮಾರು 25 ಲಕ್ಷ ರೂ. ಅನುದಾನದಲ್ಲಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಶಿಲಾನ್ಯಾಸ ಕಾರ್ಯಕ್ರಮ ನಡೆಯಿತು.

ಬಳಿಕ ಮಾತನಾಡಿದ ಶಾಸಕರು, ಸ್ಥಳೀಯರು ವಿಶ್ರಾಂತಿಗಾಗಿ ಬಳಸುವ ಈ ಕೆರೆಯನ್ನು ಈ ಹಿಂದೆ ಒಂದು ಹಂತಕ್ಕೆ ಅಭಿವೃದ್ಧಿಗೊಳಿಸಲಾಗಿತ್ತು. ಇದೀಗ ಸಾರ್ವಜನಿಕರ ಬೇಡಿಕೆಯ ಮೇರೆಗೆ ಮುಂದುವರಿದ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಗಿದೆ. ಈ ಕುರಿತು ಮೂಡ ಸಭೆಯಲ್ಲಿ ನನ್ನ ಮನವಿಗೆ ತಕ್ಷಣ ಸ್ಪಂದಿಸಿದ ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್ ಸಹಿತ ಎಲ್ಲಾ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಎಂದರು.

> **ಸಾರ್ವಜನಿಕರಿಗೆ ಉಪಯೋಗ**
>
> ಈ ಕೆರೆ ಅಭಿವೃದ್ಧಿಯ ನಂತರ ಯಾವುದಾದರು ಸಂಘ ಸಂಸ್ಥೆಗಳು ಮೇಲ್ವಿಚಾರಣೆ ನಡೆಸಿಕೊಂಡರೆ ಬಹುಕಾಲ ಇದರ ಉಪಯೋಗ ಸಾರ್ವಜನಿಕರಿಗೆ ದೊರೆಯಲಿದೆ .
>
> ● ವೇದವ್ಯಾಸ್ ಕಾಮತ್

ಈ ವೇಳೆ ಮುಡಾ ಆಯುಕ್ತ ಮೊಹಮ್ಮದ್ ನಜೀರ್, ಪ್ರಮುಖರಾದ ಚಂದ್ರಶೇಖರ್ ಬಜಾಲ್, ನೀರಜ್‌ಚಂದ್ರ ಪಾಲ್, ಸುಮನ್‌ದಾಸ್, ಅಬ್ದುಲ್ ಜಲೀಲ್, ಸಬಿತಾ ಮಿಸ್ಕಿತ್, ವಿನೇಶ್, ಅಶೋಕ್, ಮೋಹನ್ ಟೈಲರ್, ಮೋಹನ್ ದಾಸ್, ದೀಕ್ಷಿತ್, ದೀಪಕ್ ಡಿಸೋಜ, ಮೀನಾಕ್ಷಿ, ಕುಶಾಲ, ಹೇಮಲತಾ, ಮಮತಾ, ಅನಿಶಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಂಡೆಕೋಲು ಗ್ರಾ.ಪಂ.: ಬೇಸಿಗೆ ಶಿಬಿರ 'ಮಕ್ಕಳ ಜ್ಞಾನ ಹಬ್ಬ' ಆರಂಭ



ಸುಳ್ಯ: ನಿರಂತರ ಚಟುವಟಿಕೆಗಳಿಂದ ಕೂಡಿರುವ ಮಂಡೆಕೋಲು ಗ್ರಾ. ಪಂ. ಗ್ರಂಥಾಲಯದಲ್ಲಿ 10 ದಿನಗಳ ಬೇಸಿಗೆ ಶಿಬಿರ 'ಮಕ್ಕಳ ಜ್ಞಾನ ಹಬ್ಬ' ಭಾನುವಾರ ಆರಂಭಗೊಂಡಿತು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ ಶಿಬಿರವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಮಂಡಕೋಲು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸುರೇಶ್ ಕಣೆಮರಡ್ಕ, ಪಂ.ಅಭಿವೃದ್ಧಿ ಅಧಿಕಾರಿ ರಮೇಶ್ ಪಿ., ಸಂಪನ್ಮೂಲ ವ್ಯಕ್ತಿ ರಂಗ ಕಲಾವಿದ ಸುಬ್ಬು ಸಂಟ್ಯಾರ್ ವೇದಿಕೆಯಲ್ಲಿದ್ದರು. ರಂಗ ಕಲಾವಿದ ಸುಬ್ಬು ಸೆಂಟ್ಯಾರ್, ಹಾಗೂ ಬಳ್ಳಾರಿಯಲ್ಲಿ ಶಿಕ್ಷಕರಾಗಿರುವ ಸುಬ್ರಹ್ಮಣ್ಯ ಮಾವಂಜಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಶಿಬಿರವು ಮೇ 19ರ ತನಕ ನಡೆಯಲಿದ್ದು, ಸಂಸ್ಕಾರ ಪಾಠ, ಹಾಡು, ನೃತ್ಯ, ರಂಗಕಲೆ ಗಳು, ಗ್ರಾಮೀಣ ಆಟಗಳು, ಚೆಸ್, ಆರ್ಟ್, ಕ್ರಾಫ್ಟ್, ಹೊರ ಸಂಚಾರಗಳ ಸಹಿತ ಮಕ್ಕಳ ಜ್ಞಾನ ವೃದ್ಧಿಸುವ ವಿವಿಧ ಚಟುವಟಿಕೆಗಳು ನಡೆಯಲಿವೆ.

ಕಾರ್ಯಕ್ರಮದ ಆಯೋಜಕಿ, ಗ್ರಂಥಾಲಯ ಮೇಲ್ವಿಚಾರಕಿ ಸಾವಿತ್ರಿ ಕಣೆಮರಡ್ಕ ಪ್ರಸ್ತಾವನೆಗೈದರು. ಕುಶಿಯ ಪ್ರಾರ್ಥಿಸಿ, ತಶ್ವಿತ್ ಕನ್ಯಾನ ಸ್ವಾಗತಿಸಿ, ಸೂರ್ಯತೇಜ ವಂದಿಸಿ, ಪ್ರತೀಕ್ಷಾ ಕಾರ್ಯಕ್ರಮ ನಿರೂಪಿಸಿದರು.

ನಿಟ್ಟೆ ಬ್ರಹ್ಮಕುಮಾರಿ ವೃಂದಾವನ ಧ್ಯಾನ ಕೇಂದ್ರದಲ್ಲಿ ತಾಯಂದಿರ ದಿನ ಆಚರಣೆ



ಕಾರ್ಕಳ : 'ತಾಯಂದಿರ ದಿನ'ದ ಆಚರಣೆಯನ್ನು ನಿಟ್ಟೆ ಬ್ರಹ್ಮಾ ಕುಮಾರಿ ವೃಂದಾವನ ಧ್ಯಾನ ಕೇಂದ್ರದಲ್ಲಿ ನೆರವೇರಿಸಲಾಯಿತು.

ತಾಯಂದಿರ ಜೊತೆ ಮಕ್ಕಳು ಕೂಡ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಕಾರ್ಯಕ್ರಮಕ್ಕೆ ಮೆರುಗು ನೀಡಿತು.

ಸಮಾಜದಲ್ಲಿ ತಾಯಂದಿರ ವಿಶೇಷ ಪಾತ್ರವನ್ನು ಚರ್ಚಿಸಿ ಮಾತನಾಡಿದ ಧ್ಯಾನ ಕೇಂದ್ರದ ಸಂಚಾಲಕಿ ಬಿ.ಕೆ. ಯಶೋದಾ, ತಾಯಿಯು ಪ್ರೀತಿಯ ಸಾಕಾರಮೂರ್ತಿ ಮತ್ತು ಜೀವನದ ಮೊದಲ ಗುರು. ಪ್ರತಿಯೊಬ್ಬರ ಜೀವನದಲ್ಲಿ ತಾಯಿಯ ಪಾತ್ರ ಅತ್ಯಮೂಲ್ಯ ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾತೆಯರು ಅಮ್ಮಂದಿರ ಪಾತ್ರವು ಆಧುನಿಕತೆಯ ಜಗತ್ತಿನ ಜೊತೆಗೆ ಹೇಗೆ ಬದಲಾಗುತ್ತಿದೆ ಎಂಬ ಬಗ್ಗೆ ವಿಶ್ಲೇಷಿಸಿ ಮಾತನಾಡಿದರು.

ವಿವಿಧ ಚಟುವಟಿಕೆಗಳನ್ನು ಏರ್ಪಡಿಸಲಾಗಿದ್ದು, ಪಾಲ್ಗೊಂಡಿದ್ದ ಎಲ್ಲ ತಾಯಂದಿರು ಸಕ್ರಿಯವಾಗಿ ಭಾಗಿಯಾಗಿದ್ದರು.

400 ವರ್ಷ ಇತಿಹಾಸದ ಮುತ್ತೂರು ನಟ್ಟಿಲ ಪಂಜುರ್ಲಿ -ಪರಿವಾರ ದೈವಗಳ ದೈವಸ್ಥಾನದಲ್ಲಿ ಪ್ರತಿಷ್ಠಾ ಕಲಶಾಭಿಷೇಕ

ಬಂಟ್ವಾಳ: ಸುಮಾರು 400 ವರ್ಷಗಳ ಇತಿಹಾಸವಿರುವ ಕಾರಣಿಕ ಕ್ಷೇತ್ರವಾದ ಮುತ್ತೂರು ನಟ್ಟಿಲ ಪಂಜುರ್ಲಿ ಮತ್ತು ಪರಿವಾರ ದೈವಗಳ ದೈವಸ್ಥಾನದಲ್ಲಿ ಪ್ರತಿಷ್ಠಾ ಕಲಶಾಭಿಷೇಕ ಮತ್ತು ನೇಮ ಸಂಪನ್ನಗೊಂಡಿತು. ದೈವಜ್ಞ ಶಶಿಪಂಡಿತ್ ನೇತೃತ್ವದಲ್ಲಿ ಪ್ರಶ್ನಾಚಿಂತನೆನಡೆದು ಉಳಿಪ್ಪಾಡಿಗುತ್ತುವಿನಸುಬ್ಬಯ್ಯ ಮಾರ್ಲ, ಕೃಷ್ಣರಾಜ್ ಮಾರ್ಲ ಮತ್ತು ರಿತೇಶ್ ಮಾರ್ಲ ನೇತೃತ್ವದಲ್ಲಿ ಜೀರ್ಣೋದ್ಧಾರ ಕಾರ್ಯ ನಡೆಯಿತು. ವಾಸ್ತು ತಜ್ಞರಾದ ಕುಡುಪು ಶ್ರೀ ಕೃಷ್ಣರಾಜ ತಂತ್ರಿ ಮಾರ್ಗದರ್ಶನದಲ್ಲಿ ನಟ್ಟಿಲ ಪಂಜುರ್ಲಿ ದೇವಸ್ಥಾನ, ಒಡ್ಯನೇಶ್ವರಿ ದೈವಸ್ಥಾನ, ಕಲ್ಲುರ್ಟಿ ತೂಕತ್ತೆರಿ ದೇವಸ್ಥಾನ ನಿರ್ಮಾಣಗೊಂಡಿದೆ.



ಕಾವೂರು ವಿನಾಯಕ ಕಾರಂತ ಅವರ ನೇತೃತ್ವದಲ್ಲಿ ಪ್ರತಿಷ್ಠಾ ಕಲಶಾಭಿಷೇಕ ಮತ್ತು ಧಾರ್ಮಿಕ ವಿಧಿವಿಧಾನ, ರಾತ್ರಿ ದೈವಗಳಿಗೆ ನೇಮ ನೆರವೇರಿತು. ಸತೀಶ್ ಶೆಟ್ಟಿ ಪಟ್ಲ ಅವರ ಯಕ್ಷಧ್ರುವ ತಂಡದ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ಯಕ್ಷಗಾನ ವೈಭವ ಕಾರ್ಯಕ್ರಮ ನಡೆಯಿತು. ಇದೇ ವೇಳೆ ದೇವಸ್ಥಾನಕ್ಕೆ ಮುತ್ತೂರು ಮಟ್ಟು ಫ್ರೆಂಡ್ಸ್ ಕೊಡುಗೆಯಾಗಿ ನೀಡಿದ ಸ್ವಾಗತ ದ್ವಾರ ಲೋಕಾರ್ಪಣೆಗೊಳಿಸಲಾಯಿತು.

ಈ ಸಂದರ್ಭದಲ್ಲಿ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ, ಶಾಸಕರಾದ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು, ವೈ. ಭರತ್ ಶೆಟ್ಟಿ, ಮಂಗಳೂರು ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಮಾಜಿ ಸಚಿವರಾದ ಬಿ. ನಾಗರಾಜ ಶೆಟ್ಟಿ ಬಿ.ರಮಾನಾಥ ರೈ, ಪನುವೆಲು ಮನಪಾ ಸೇವಕ ಸಂತೋಷ್ ಶೆಟ್ಟಿ ದಳಂದಿಲ, ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಮಿಥುನ್ ರೈ, ಇನಾಯತ್ ಅಲಿ,ಇರುವೈಲು ಪಾನಿಲ ಸತೀಶ್ ಸಾಲಿಯಾನ್, ಉಳಿಪ್ಪಾಡಿಗುತ್ತು ಪ್ರಸನ್ನಕುಮಾರ್ ಶೆಟ್ಟಿ ಸುಭಾಷ್ ಚಂದ್ರ ನಾಯಕ್, ಪೊಳಲಿ ದೇವಸ್ಥಾನದ ಆಡಳಿತ ಮೊಕ್ತೇಸ ಡಾ.ಮಂಜಯ್ಯ ಶೆಟ್ಟಿ,ಬಿಜೆಪಿ ಮುಖಂಡರಾದ ಉದಯ ಕುಮಾರ್ ರಾವ್ ಬಂಟ್ವಾಳ, ಗೋವಿಂದ ಪ್ರಭು, ಬಂಟ್ವಾಳ ಬಿಲ್ಲವ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ, ಕೆ.ಎಂ. ಎಫ್.ನಿರ್ದೇಶಕ ನಂದರಾಮ ರೈ ಬೆಳ್ಳುರು ಪರಾರಿ, ಜಿಲ್ಲಾ ಧಾರ್ಮಿಕ ದತ್ತಿ ಇಲಾಖೆಯ ಸದಸ್ಯ ಹರಿಯಪ್ಪ ಮುತ್ತೂರು, ಮುತ್ತೂರು ಗ್ರಾ.ಪಂ.ಮಾಜಿ ಅಧ್ಯಕ್ಷ ಪ್ರವೀಣ್ ಆಳ್ವ, ಬಜ್ಪೆ ಪೊಲೀಸ್ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ಬಾಲಕೃಷ್ಣ , ಶ್ರೀಕಾಂತ್ ಶೆಟ್ಟಿ ಸಜೀಪ, ಮಾಜಿ ತಾ.ಪಂ.ಸದಸ್ಯ ಸಚಿನ್ ಅಡಪ, ಕರಿಯಂಗಳ ಗ್ರಾ.ಪಂ.ಮಾಜಿ ಅಧ್ಯಕ್ಷ ಚಂದ್ರಹಾಸ ಪಲ್ಲಿಪಾಡಿ, ಮಾಜಿ ಜಿ.ಪಂ.ಸದಸ್ಯ ವಿನೋದ್ ಮಾಡ, ಆರ್ ಕೆ. ಪೃಥ್ವಿರಾಜ್ , ಪ್ರಮುಖರಾದ ಪುರುಷೋತ್ತಮ ಸಾಲಿಯಾನ್ ನರಿಕೊಂಬು, ಸುದರ್ಶನ ಬಜ, ರಾಮಕೃಷ್ಣ ಕ್ರೆಡಿಟ್ ಕೋ.ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜಯರಾಜ್ ರೈ ಮತ್ತಿತರ ಗಣ್ಯರು ಕ್ಷೇತ್ರಕ್ಕೆ ಆಗಮಿಸಿ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭ ಪ್ರತಿಷ್ಠಾ ಕಲಶಾಭಿಷೇಕ ಸಮಿತಿ ಇದರ ಅಧ್ಯಕ್ಷರಾದ ಶಿವಾನಂದ ಕುಲಾಲ್, ಗೌರವ ಅಧ್ಯಕ್ಷರುಗಳಾದ ಚಂದ್ರಹಾಸ ಶೆಟ್ಟಿ ನಾಗೇಶ್ ಶೆಟ್ಟಿ ಪ್ರಥ್ವಿ ಆಳ್ವ, ಚಂದ್ರಹಾಸ ಶೆಟ್ಟಿ ನಾರ್ಲ, ವಿದ್ಯಾಚರಣ್ ಭಂಡಾರಿ ಮೊಗರುಗುತ್ತು, ಕುಮಾರ್ ಆಳ್ವ, ತಾರಾನಾಥ ಕುಲಾಲ್, ಜಗದೀಶ್ ಪಾಕಾಜೆ,ಸೂರಜ್ ಕುಲಾಲ್, ರವಿಕುಲಾಲ್, ಶೇಖರ್ ಕುಲಾಲ್ ಕಾರ್ಯದರ್ಶಿಗಳಾದ ಪವನ್ ಕುಮಾರ್ ಶೆಟ್ಟಿ ಶಂಕರ್ ಶೆಟ್ಟಿ ನಿತ್ಯಾನಂದ ಕೊಳವೂರು, ಯೋಗೀಶ್ ಕುಲಾಲ್, ಕುಸುಮಾಕರ ಶೆಟ್ಟಿ ದೀಪಕ್ ಪೂಜಾರಿ, ದಿವ್ತೇಶ್ ಪೂಜಾರಿ, ಲಕ್ಷ್ಮಣ್ ಕುಲಾಲ್ ಉಪಸ್ಥಿತರಿದ್ದರು.



ಇಡ್ಯಾ ಶ್ರೀ ವಿಠೋಭ ರುಕುಮಾಯಿ, ಶ್ರೀ ನಾರಾಯಣ ಗುರು ಮಂದಿರದಲ್ಲಿ ಇಡ್ಯಾ ಶ್ರೀ ರಕೇಶ್ವರೀ ಸನ್ನಿಧಿಯಿಂದ ಶ್ರೀ ಕ್ಷೇತ್ರಕ್ಕೆ ಭಂಡಾರ ಬಂದು ರಾತ್ರಿ ಶ್ರೀ ನಂದಿಕೇಶ್ವರ ರಕೇಶ್ವರೀ ದೈವಗಳ ನೇಮ ಜರಗಿತು.

ಮೇ 29ರಂದು ಸಂದರ್ಶನ

ಮುಳ್ಳೇರಿಯ: ಅಡೂರು ಸರ್ಕಾರಿ ಪ್ರೌಢಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ವಾಣಿಜ್ಯ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇಂಗ್ಲಿಷ್, ಇತಿಹಾಸ, ಹಿಂದಿ, ಅರೇಬಿಕ್ ಮತ್ತು ಕನ್ನಡ ವಿಷಯಗಳಿಗೆ ಶಿಕ್ಷಕರ ನೇಮಕಾತಿ ನಡೆಯಲಿದ್ದು, ಮೇ 29 ರಂದು ಬೆಳಿಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9633808765 ಕರೆ ಮಾಡಬಹುದು.

ಇಂದು ಕೆವಿವಿಇಎಸ್ ನೀರ್ಚಾಲು ಘಟಕ ಸಭೆ

ಬದಿಯಡ್ಕ: ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿ ನೀರ್ಚಾಲು ಘಟಕದ ದ್ವೈ ವಾರ್ಷಿಕ ಮಹಾಸಭೆಯು ಮೇ 14ರಂದು ಮಧ್ಯಾಹ್ನ 1ರಿಂದ ಸಂಜೆ 5ರ ತನಕ ನೀರ್ಚಾಲು ಶ್ರೀ ಕುಮಾರಸ್ವಾಮಿ ಸಭಾಭವನದಲ್ಲಿ ಜರಗಲಿರುವುದು. ಘಟಕದ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಮಹಾಸಭೆಯಲ್ಲಿ 2026-2028ನೇ ಸಾಲಿನ ನೂತನ ಸಮಿತಿಯ ಆಯ್ಕೆ ನಡೆಯಲಿದೆ.

ಜಿಲ್ಲಾಧ್ಯಕ್ಷ ಕೆ.ಅಹಮ್ಮದ್ ಶರೀಫ್, ಪ್ರಧಾನ ಕಾರ್ಯದರ್ಶಿ ಕೆ.ಜೆ.ಸಜಿ, ಜಿಲ್ಲಾ ಕೋಶಾಧಿಕಾರಿ ಮಾಹಿನ್ ಕೋಳಿಕ್ಕರ, ಬದಿಯಡ್ಕ ವಲಯ ಕನ್ವೀನರ್ ಕುಂಜಾರು ಮುಹಮ್ಮದ್ ಹಾಜಿ ಭಾಗವಹಿಸಲಿದ್ದಾರೆ. ಘಟಕದ ಎಲ್ಲಾ ಸದಸ್ಯರೂ ವ್ಯಾಪಾರ ಸಂಸ್ಥೆಗಳನ್ನು ಮುಚ್ಚಿ ಸಭೆಯಲ್ಲಿ ಕಡ್ಡಾಯವಾಗಿ ಹಾಜರಿರಬೇಕಾಗಿ ತಿಳಿಸಲಾಗಿದೆ.

ನಾರಾಯಣ ಗುರು ಜನ್ಮ ಜಯಂತಿ ಪ್ರಯುಕ್ತ ಗುರುಪೂಜೆ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಣೆ

ಹಿಂದುಳಿದ ಸಮಾಜಕ್ಕೆ ಬದುಕು ನೀಡಿದವರು: ಗಣೇಶ್ ಶಿರ್ಲಾಲು

ಬೆಳ್ತಂಗಡಿ: ಬ್ರಹ್ಮಶ್ರೀ ನಾರಾಯಣ ಗುರುಗಳು ಹಿಂದುಳಿದ ಸಮಾಜಕ್ಕೆ ಬದುಕು ನೀಡಿದವರು. ಅವರ ವಿಚಾರಗಳಿಗೆ ಹಾನಿಯಾಗುವ ಯಾವುದೇ ಕೃತ್ಯ ಸಮಾಜದಲ್ಲಿ ನಡೆದರೂ ಒಗ್ಗಟ್ಟಾಗಿ ಪ್ರತಿಭಟಿಸುವ, ಆ ಮೂಲಕ ನ್ಯಾಯ ಒದಗಿಸುವ ಕೆಲಸವನ್ನು ಬಿಲ್ಲವರಾದಿಯಾಗಿ ಸಮಸ್ತ ಹಿಂದುಳಿದ ಸಮಾಜ ಮಾಡಬೇಕಾಗಿದೆ ಎಂದು ಬೆಳ್ತಂಗಡಿ ಶ್ರೀ ಗುರುದೇವ ಕಾಲೇಜಿನ ಉಪನ್ಯಾಸಕ, ಪತ್ರಕರ್ತ ಗಣೇಶ್ ಬಿ. ಶಿರ್ಲಾಲು ಹೇಳಿದ್ದಾರೆ.

ಅವರು ಮಂಗಳವಾರ ಲಾಯಿಲ ಪಡ್ಲಾಡಿ ಅಜೆಕಲ್ ಶ್ರೀ ಜಯ ದುರ್ಗಾ ಕೃಪಾ ನಿವಾಸದ ಆವರಣದಲ್ಲಿ ಶ್ರೀ ಗುರು ನಾರಾಯಣ ಸ್ವಾಮಿ ಸೇವಾ ಸಂಘ ಲಾಯಿಲ ಇದರ ನೇತೃತ್ವದಲ್ಲಿ ಯುವ ಬಿಲ್ಲವ ವೇದಿಕೆ ಹಾಗೂ ಮಹಿಳಾ ಬಿಲ್ಲವ ವೇದಿಕೆ ಲಾಯಿಲ ಇವುಗಳ ಸಂಯುಕ್ತ ಆಶ್ರಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಜನ್ಮ ಜಯಂತಿ ಪ್ರಯುಕ್ತ ನಡೆದ ಗುರುಪೂಜೆ ಹಾಗೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಣಾ ಕಾರ್ಯಕ್ರಮದಲ್ಲಿ ಗುರು ಸಂದೇಶ ನೀಡಿದರು.



> **ಮಾರ್ಗದರ್ಶಕ**
>
> ಧಾರ್ಮಿಕವಾಗಿ, ಶೈಕ್ಷಣಿಕವಾಗಿ ನಾರಾಯಣ ಗುರುಗಳು ಮೂಡಿಸಿದ ಅರಿವು ಸಮಾಜದಲ್ಲಿ ನಮ್ಮನ್ನು ತೊಡಗಿಸಿಕೊ ಳ್ಳುವಂತೆ ಮಾಡಿದೆ. ಸಮಜ ಪರಿವರ್ತನೆ ಹರಿಕಾರರಾಗಿ ಅವರು ಮಾಡಿದ ಕಾರ್ಯಗಳು ನಮ್ಮ ಬದುಕಿನುದ್ದಕ್ಕೂ ಮಾರ್ಗದರ್ಶಕವಾಗಿದೆ.
>
> ● ಗಣೇಶ್ ಬಿ.ಶಿರ್ಲಾಲು

ಸಂಘದ ಅಧ್ಯಕ್ಷ ಬಿ. ಲಕ್ಷ್ಮಣ ಪೂಜಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಿಲ್ಲವ ಸಮಾಜ ಸೇರಿದಂತೆ ತಳ ಸಮುದಾಯದ ಪಾಲಿಗೆ ಆರಾಧ್ಯ ಶಕ್ತಿ ನಾರಾಯಣ ಗುರುಗಳು. ಲಾಯಿಲದಲ್ಲಿ ಬಿಲ್ಲವ ಸಮಾಜದ ಸೀಮಿತ ಮನೆಗಳಿದ್ದರೂ ಆ ಮನೆಯವರು ಒಟ್ಟು ಸೇರಿಕೊಂಡು ಸಮಾಜ ಒಂದಾಗಿಸುವ ಕಾರ್ಯ ಮಾಡುತ್ತ ಬರುತ್ತಿದ್ದು ಇದಕ್ಕೆ ಶಕ್ತಿ ತುಂಬುವ ಕೆಲಸ ಮಾಡಬೇಕು ಎಂದರು.

ಸಂಘದ ಗೌರವಾಧ್ಯಕ್ಷ ಕೃಷ್ಣಪ್ಪ ಪೂಜಾರಿ, ಆನಂದ ಪೂಜಾರಿ ನಿನ್ನಿಕಲ್ಲು, ಬೆಳ್ತಂಗಡಿ ಶ್ರೀ ಗುರು ನಾರಾಯಣ ಸ್ವಾಮಿ ಸೇವಾ ಸಂಘದ ನಿರ್ದೇಶಕ ಚಂದ್ರಶೇಖರ್, ಯುವ ಬಿಲ್ಲವ ವೇದಿಕೆ ಅಧ್ಯಕ್ಷ ಅಶೋಕ್ ಕುಮಾರ್, ಮಹಿಳಾ ಬಿಲ್ಲವ ವೇದಿಕೆ ಅಧ್ಯಕ್ಷೆ ರೇಖಾ, ಸಂಘದ ನಿಯೋಜಿತ ಅಧ್ಯಕ್ಷ ಶೈಲೇಶ್ ಆರ್. ಜೆ., ನಿಯೋಜಿತ ಯುವ ಬಿಲ್ಲವ ವೇದಿಕೆ ಅಧ್ಯಕ್ಷ ರವಿಚಂದ್ರ ನಾಡೆಂಜ ಹಾಗೂ ನಿಯೋಜಿತ ಮಹಿಳಾ ಬಿಲ್ಲವ ವೇದಿಕೆ ಅಧ್ಯಕ್ಷೆ ಜಯಂತಿ ಅನ್ನಡ್ಕ ಮೊದಲಾದವರು ಈ ಸಂದರ್ಭ ದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು.

ಕೆ. ಭೋಜರಾಜ್ ಪೆಳತ್ತಡಿ, ಕಾರ್ಯದರ್ಶಿ ಸೌಮ್ಯ ಲಾಯಿಲ, ಜಯಂತಿ ಸೇರಿದಂತೆ ಸಂಘದ ಪದಾಧಿಕಾರಿಗಳು ಸಹಕರಿಸಿದರು.ವಸಂತ ಸುವರ್ಣ ನಿರೂಪಿಸಿ, ನಿಯೋಜಿತ ನಿರ್ದೇಶಕಿ ಗೀತಾ ವಂದಿಸಿದರು.

ಶಾಸಕರ ಅನುದಾನದಲ್ಲಿ ನಿರ್ಮಿತ ಕಾಂಕ್ರಿಟ್ ರಸ್ತೆಯ ಲೋಕಾರ್ಪಣೆ

ಮಡಿಕೇರಿ: ವೀರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತೋರ ಗ್ರಾಮದಲ್ಲಿ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅನುದಾನದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ನೂತನ ಕಾಂಕ್ರೀಟ್ ರಸ್ತೆಯ ಲೋಕಾರ್ಪಣೆ ಕಾರ್ಯಕ್ರಮ ನೆರವೇರಿತು.

ಸ್ಥಳೀಯ ಪ್ರಮುಖರ ಹಾಗೂ ಸಾರ್ವಜನಿಕರ ಕೋರಿಕೆಯಂತೆ ಶಾಸಕರು ಆ ರಸ್ತೆಯ ಕಾಂಕ್ರಿಟೀಕರಣಕ್ಕೆ ಅನುದಾನ ಒದಗಿಸಿದ್ದರು. ತೋರ ಭಾಗದಲ್ಲಿ ವಿವಿಧ ಕಾರ್ಯಕ್ರಮ ನಿಮಿತ್ತ ಆಗಮಿಸಿದ ಶಾಸಕರು, ಸುಸಜ್ಜಿತ ನಿರ್ಮಾಣ ಗೊಂಡ ರಸ್ತೆ ಲೋಕಾರ್ಪಣೆಗೊಳಿಸಿದರು.



ಬ್ಲಾಕ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಜಿಲ್ಲಾ ಸಾಮಾಜಿಕ ಜಾಲತಾಣದ ಅಧ್ಯಕ್ಷ ಸೂರಜ್ ಹೊಸೂರು, ಕೆಡಿಪಿ ಸದಸ್ಯ ಪ್ರಶಾಂತ್, ಜಿಲ್ಲಾ ಅಲ್ಪಸಂಖ್ಯಾತರ ಅಧ್ಯಕ್ಷ ಹನೀಫ್, ತಾಲೂಕು ಅಲ್ಪಸಂಖ್ಯಾತರ ಅಧ್ಯಕ್ಷ ರಫೀಕ್, ಪ್ರಮುಖರಾದ ಜೆಫ್ರಿ,ಮಂಜುನಾಥ್,ವಿಜಯ,ಕುಶಾಲಪ್ಪ,ಶುಭಾ ಸುಬ್ಬಯ್ಯ, ಉಮೇಶ್, ಅರುಣಾ, ಮುದ್ದಪ್ಪ ರಾಜೇಶ್, ಮೊಣ್ಣಪ್ಪ ಗೋಪಮ್ಮ, ರೋಹಿಣಿ, ಲಲಿತಾ, ಕಾವೇರಮ್ಮ ಶಾರದಾ ಮತ್ತಿತರರಿದ್ದರು.

ಸುತ್ತಮುತ್ತ

ಮೇ 15-16ರಂದು ಮಂಗಳೂರಿನಲ್ಲಿ ಮಾಹೆ 33ನೇ ಘಟಿಕೋತ್ಸವ

ಮಂಗಳೂರು: ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯದ 33ನೇ ಘಟಿಕೋತ್ಸವ, ಪದವಿ ಪ್ರದಾನ ಸಮಾರಂಭವು ಮೇ 15 ಮತ್ತು 16ರಂದು ನಡೆಯಲಿದೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಮಾಹೆ ಮಂಗಳೂರು ಕ್ಯಾಂಪಸ್‌ನ ಸಹಕುಲಪತಿ ಡಾ.ದಿಲೀಪ್ ಜಿ. ನಾಯಕ್, ಮೇ 15ರ ಅಪರಾಹ್ನ 3 ಗಂಟೆಗೆ ಮಂಗಳೂರು ಕ್ಯಾಂಪಸ್‌ನ ಡಾ. ಟಿ.ಎಂ.ಎ. ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ಉದ್ಘಾಟನೆಗೊಳ್ಳಲಿದೆ. ಮೇ 16ರಂದು ಮಧ್ಯಾಹ್ನ 2.30ಕ್ಕೆ ಮಾಹೆ ಆನ್‌ಲೈನ್ ಶಿಕ್ಷಣದ 3ನೇ ಘಟಿಕೋತ್ಸವ ನಡೆಯಲಿದ್ದು, ಆನ್‌ಲೈನ್‌ನಲ್ಲಿ ಶಿಕ್ಷಣ ಪಡೆದ ಪದವೀಧರರಿಗೆ ಪದವಿ ಪ್ರದಾನ ಮಾಡಲಾಗುವುದು. ಅತೀ ಹೆಚ್ಚು ಅಂಕ ಗಳಿಸಿದವರಿಗೆ ಚಿನ್ನದ ಪದಕ ನೀಡಲಾಗುತ್ತದೆ ಎಂದರು. ಮೊದಲ ದಿನದ ಮಂಗಳೂರು ಘಟಿಕೋತ್ಸವದಲ್ಲಿ ಒಟ್ಟು 1,258 ಮಂದಿಗೆ ಹಾಗೂ 2ನೇ ದಿನ ಮಾಹೆ ಆನ್‌ಲೈನ್ ಶಿಕ್ಷಣದ 986 ಮಂದಿಗೆ ಪದವಿ ಪ್ರದಾನಿಸಲಾಗುವುದು.
ಮೇ 15ರ ಘಟಿಕೋತ್ಸವದಲ್ಲಿ ಮುಂಬೈನ ಟಾಟಾ ಮೆಮೋರಿಯಲ್ ಸೆಂಟರ್‌ನ ನಿರ್ದೇಶಕ ಪ್ರೊ.ಡಾ.ಸುದೀಪ್ ಗುಪ್ತಾ ಅವರು ಮುಖ್ಯ ಅತಿಥಿಯಾಗಿರುವರು. ಮಂಗಳೂರಿನ ನಿಟ್ಟೆ ಎಜುಕೇಶನ್ ಟ್ರಸ್ಟ್‌ನ (ಪರಿಗಣಿತ ವಿವಿ) ಸಹಕುಲಾಧಿಪತಿ ಡಾ.ಎಂ.ಶಾಂತಾರಾಮ ಶೆಟ್ಟಿ ಅತಿಥಿಯಾಗಿರುವರು ಎಂದವರು ಹೇಳಿದರು.
ಮೇ 16ರ ಆನ್‌ಲೈನ್ ಶಿಕ್ಷಣದ ಘಟಿಕೋತ್ಸವದಲ್ಲಿ ತಮಿಳುನಾಡು ಮರ್ಕಂಟೈಲ್ ಬ್ಯಾಂಕ್ ಲಿ. ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸಲೀ ಎಸ್. ನಾಯರ್ ಮುಖ್ಯ ಅತಿಥಿಯಾಗಿರುವರು. ಯುನೆಕ್ಸ್ಟ್ ಲರ್ನಿಂಗ್‌ನ ಸಿಇಒ ಅಂಬರೀಷ್ ಸಿನ್ಹಾ ಅತಿಥಿಯಾಗಿರುವರು ಎಂದು ಅವರು ವಿವರ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಂಗಳೂರಿನ ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸೈನ್ಸ್‌ನ ಡೀನ್ ಡಾ.ಆಶಿತಾ ಉಪ್ಪೂರು, ಭರತ್ ಕುಮಾರ್, ಶೀತಲ್ ಉಳ್ಳಾಲ್ ಉಪಸ್ಥಿತರಿದ್ದರು.

ಬೀಡಿ ಕಾರ್ಮಿಕರ ಸಮಸ್ಯೆ ಪರಿಹಾರ ಶೀಘ್ರ ತೀರ್ಮಾನ: ಶಾಸಕ ರೈ

ಪುತ್ತೂರು: ಬೀಡಿ ಕಾರ್ಮಿಕರಿಗೆ ಸರಕಾರ ನಿಗದಿಪಡಿಸಿದ ಮಜೂರಿ, ಬೋನಸ್ ಮತ್ತು ರಜೆ ಸಂಬಳದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು ವಾರದೊಳಗೆ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಸಭೆ ನಡೆಸಿ ಈ ಬಗ್ಗೆ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ. ಕಳೆದ ವಾರ ಕೆಯ್ಯೂರು ಗ್ರಾಮದ ಕಣಿಯಾರ್ ಎಮಬಲ್ಲಿ ಸೇತುವೆ ಗುದ್ದಲಿಪೂಜೆ ಕಾರ್ಯಕ್ರಮಕ್ಕೆ ತೆರಳಿದ್ದ ಶಾಸಕರಲ್ಲಿ ಮಹಿಳೆಯೋರ್ವರು ತಮ್ಮ ಸಮಸ್ಯೆಯನ್ನು ಹೇಳಿಕೊಂಡಿದ್ದರು. ಈ ವಿಚಾರವಾಗಿ ತಾನು ಅಧಿಕಾರಿಗಳ ಜೊತೆ ಚರ್ಚೆ ನಡೆಸುವುದಾಗಿ ಶಾಸಕರು ಭರವಸೆ ನೀಡಿದ್ದರು. ಸೋಮವಾರ ಜಿಲ್ಲಾ ಕಾರ್ಮಿಕ ಅಧಿಕಾರಿ ವಿಲ್ಮಾ ಎಲಿಜಬೆತ್ ತಾವ್ರೋ ಅವರನ್ನು ಕಚೇರಿಗೆ ಕರೆಸಿ ಸಭೆ ನಡೆಸಿದ ಶಾಸಕರು ಬೀಡಿ ಕಾರ್ಮಿಕರಿಗೆ ಸರಕಾರದಿಂದ ನಿಗದಿಮಾಡಲಾದ ಮಜೂರಿ, ಬೋನಸ್, ಮತ್ತು ರಜೆ ಸಂಬಳ ಹಾಗೂ ಇನ್ನಿತರ ಸೌಲಭ್ಯಗಳ ಮಾಹಿತಿ ಪಡೆದುಕೊಂಡರು. ಸಭೆಯಲ್ಲಿ ಕಟ್ಟಡ ಕಾರ್ಮಿಕ ಕಾರ್ಯವಾಹಕ ರಮೇಶ್ ಉಪಸ್ಥಿತರಿದ್ದರು.

ಕಾಡಬೆಟ್ಟು ಶೌರ್ಯ ವಿಪತ್ತು ನಿರ್ವಹಣಾ ಘಟಕದಿಂದ ಮನೆ ದುರಸ್ತಿ



ಬಂಟ್ವಾಳ: ಕಾವಳಪಡೂರು ಗ್ರಾಮದ ಬಡ ಮಹಿಳೆ ಮದ್ವ ಕಮಲ ಪೂಜಾರ್ತಿ ಮನೆಯ ಮೇಲ್ಛಾವಣಿ ದುರಸ್ತಿಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಗ್ಗ ವಲಯದ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವತಿಯಿಂದ ಮಾಡಲಾಯಿತು. ಶ್ರಮದಾನ ಕಾರ್ಯದಲ್ಲಿ ಘಟಕ ಪ್ರತಿನಿಧಿ ಪ್ರವೀಣ್, ಸದಸ್ಯರಾದ ಸಂಪತ್ ಶೆಟ್ಟಿ ಅಶೋಕ ಬೊಲ್ಪಾರ್, ಶಶಿಕಲ, ಪವಿತ್ರ ಅಶೋಕ ಹಾರೊದ್ದು ರಮೇಶ್ ಮಹಾಬಲ ರೈ, ನಾರಾಯಣ ಶೆಟ್ಟಿ ಮೋಹನಂದ,ರೋಹಿತ್, ಜನಾರ್ದನ ಹಾಗೂ ಧನು ಪೂಜೆ ಶೌರ್ಯ ಘಟಕದ ಸದಸ್ಯರಾದ ಪ್ರಮೋದ್ ಆಚಾರ್ಯ ಭಾಗವಹಿಸಿದ್ದರು. ಪ್ರಸಕ್ತ ವರ್ಷದಲ್ಲಿ ಕಾಡಬೆಟ್ಟು ವಗ್ಗ ಶೌರ್ಯ ಘಟಕದ ವತಿಯಿಂದ 6ನೇ ಮನೆ ದುರಸ್ತಿಯ ಶ್ರಮದಾನವಾಗಿದೆ.

ಕುಡಿಯುವ ನೀರಿನ ಸಮಸ್ಯೆ, ಸಿಬಂದಿ ಕೊರತೆ | ಸಣ್ಣಪುಟ್ಟ ಸಮಸ್ಯೆಗಳನ್ನೂ ಪರಿಹರಿಸಲಾಗದ ಸ್ಥಿತಿ

ಕುಂಟುತ್ತ ಸಾಗಿದೆ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಆಡಳಿತ

ಕಿನ್ನಿಗೋಳಿ: ಇಲ್ಲಿನ ಪಟ್ಟಣ ಪಂಚಾಯತ್ ಆಡಳಿತ ಅಧಿಕಾರಿಗಳು, ಸಿಬಂದಿ ಹಾಗೂ ಹೊಸದಾಗಿ ಆಯ್ಕೆಯಾದ ಸದಸ್ಯರ ಟೀಮ್ ವರ್ಕ್ ಕೊರತೆಯಿಂದ ನಲುಗಿದೆ. ಸಣ್ಣಪುಟ್ಟ ಸಮಸ್ಯೆಗಳನ್ನೂ ಪರಿಹರಿಸಲಾಗದ ಸ್ಥಿತಿಯಲ್ಲಿ ಇರುವ ಆಡಳಿತ ಮೀನು ಮಾರ್ಕೆಟಿಗೆ ಒಂದು ಫ್ಯಾನು ಅಳವಡಿಸಿದರೆ ಅದೇ ದೊಡ್ಡ ಸಾಧನೆ ಎಂಬಂತೆ ಪುಕ್ಕಟೆ ಪ್ರಚಾರ ಪಡೆಯುವಷ್ಟು ಹೀನಾಯ ಪರಿಸ್ಥಿತಿಯಲ್ಲಿದೆ.



ನೀರಿನ ಸಮಸ್ಯೆ
ಕುಡಿಯುವ ನೀರಿನ ಯೋಜನೆಗಳಿಗೇನೂ ಇಲ್ಲಿ ಕಡಿಮೆ ಇಲ್ಲ, ಆದರೆ ಸಮಸ್ಯೆ ಎಂದಿನಂತೆ ಈ ವರುಷವೂ ಕಂಡು ಬಂದಿದೆ. ಮೆನ್ನಬೆಟ್ಟು ಜಲ್ಲಿಗುಡ್ಡೆ ನೇಕಾರ ಕಾಲನಿ, ಕೊಡೆತ್ತೂರು, ನವೋದಯ ನಗರ ಕಾಪಿಕಾಡು ಉಲ್ಲಂಜೆ, ಕಿಲೆಂಜೂರು ನಡುಗೋಡು, ಕಿನ್ನಿಗೋಳಿ ಪೇಟೆಯಲ್ಲಿ ನೀರಿನ ಸಮಸ್ಯೆ ಇದೆ. ಕಳೆದ ನಾಲ್ಕೈದು ದಿನಗಳಿಂದ ನೀರಿಲ್ಲ, ಟ್ಯಾಂಕರ್‌ನಲ್ಲಿ ನೀರು ಪೂರೈಕೆಗೆ ಟೆಂಡರ್ ಕರೆಯದೆ ಸಮಸ್ಯೆಯಾಗಿದೆ. ಖಾಸಗಿ ಟ್ಯಾಂಕರಿನಲ್ಲಿ ನೀರು ತರಲಾಗುತ್ತಿದೆ. ಬಹುಗ್ರಾಮದ ನೀರು ಬಳ್ಕುಂಜೆಯಿಂದ ಮಂಗಳವಾರ, ಗುರುವಾರ ಶನಿವಾರ ಬರುತ್ತದೆ. ಉಳಿದ ದಿನ ಸಮಸ್ಯೆ. ಕುಡಿಯುವ ನೀರಿಗೆ 1 ಟ್ಯಾಂಕರ್‌ಗೆ 98 ಸಾವಿರ ತಿಂಗಳಿಗೆರೂ.ಖರ್ಚು ಆಗುತ್ತದೆ. ಲಿಟ್ಲ್‌ಫ್ಲವರ್ ಶಾಲೆ, ಬಲ್ಲಣ, ನೇಕಾರ ಕಾಲನಿ ಹೀಗೆ ಏಳೆಂಟು ಟ್ಯಾಂಕ್‌ಗಳಿಗೆ ನೀರನ್ನು ಟ್ಯಾಂಕರಿನಲ್ಲಿ ತುಂಬಿಸಲಾಗುತ್ತಿದೆ. ನವೋದಯ ನಗರ, ಕಾಪಿಕಾಡು ಕಡೆಗಳೆಲ್ಲ ನೀರು ಬಿಡುವವರದ್ದೇ ಸಮಸ್ಯೆ. ನಂದಿನಿ ನದಿಯಲ್ಲಿ ಬಾವಿ ಇದೆ. ಆದರೆ ನೀರು ತರಲು, ರಸ್ತೆ ಅಗಲ ಆಗುವಾಗ ಮತ್ತು ಅಮೃತ್ ಯೋಜನೆಯವರು ಪೈಪು ಒಡೆದು ಹಾಕಿದ್ದಾರೆ. ಹಾಗೆ ನೀರಿನ ಸಮಸ್ಯೆ ಹೆಚ್ಚಿದೆ.

ಸಿಬಂದಿ ಕೊರತೆ
ಬಿಜೆಪಿಯ 10 ಕಾಂಗ್ರೆಸ್‌ನ 8 ಮಂದಿ ಸದಸ್ಯರು ಆಯ್ಕೆಯಾಗಿ ಪಟ್ಟಣ ಪಂಚಾಯತ್ ಇನ್ನೇನು ಆಡಳಿತಾತ್ಮಕವಾಗಿ ಚೇತರಿಸಿಕೊಳ್ಳುತ್ತದೆ ಎಂದು ನಿರೀಕ್ಷೆಯಲ್ಲಿದ್ದ ಜನತೆಗೆ ಬೇಸರ ಮೂಡಿದೆ. ಇರುವ ಮುಖ್ಯಾಧಿಕಾರಿ ಆಡಳಿತದಲ್ಲಿ, ಸಿಬಂದಿ ನಿರ್ವಹಣೆಯಲ್ಲಿ ವಿಫಲರಾಗಿದ್ದಾರೆ. ಸಿಬಂದಿ ಮಾಹಿತಿ ಕೊರತೆಯಿಂದ ಇದ್ದಾರೆ. ಕೌಶಲ್ಯಗಳಿಂದ ದೂರ ಇದ್ದಾರೆ. ಬೇಕಾಬಿಟ್ಟಿಯಾಗಿ ಇರುವ ಪರಿಣಾಮ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಇನ್ನೂ ಆಡಳಿತಾತ್ಮಕವಾಗಿ ಎದ್ದು ನಿಲ್ಲಲು ಹೆಣಗಾಡುತ್ತಿದೆ.

40ರಲ್ಲಿ 26 ಹುದ್ದೆ ಖಾಲಿ
ಮುಖ್ಯಾಧಿಕಾರಿ ಸಹಿತ 40 ಹುದ್ದೆಗಳು ಕಿನ್ನಿಗೋಳಿ ಪಟ್ಟಣ ಪಂಚಾಯತ್ ನಲ್ಲಿರಬೇಕಿತ್ತು. ಪೂರ್ಣ ಪ್ರಮಾಣದ ಇಂಜಿನಿಯರ್ ಇಲ್ಲ, ರೆವಿನ್ಯೂ ಇನ್ಸಪೆಕ್ಟರ್ ಇಲ್ಲ, ಹೆಲ್ತ್ ಇನ್ಸಪೆಕ್ಟರ್ ಇಲ್ಲ, ಎಸ್‌ಡಿಎ, ಬಿಲ್ ಕಲೆಕ್ಟರ್ ಹೀಗೆ 26 ಹುದ್ದೆಗಳು ಖಾಲಿ ಇವೆ. 14 ಸಿಬಂದಿಗಳಿಂದ ಪಂಚಾಯತ್ ಆಡಳಿತಾತ್ಮಕವಾಗಿ ಸೋತಿದೆ.

ಟ್ರಾಫಿಕ್ ಜಾಮ್
ಕಿನ್ನಿಗೋಳಿ ಮುಖ್ಯ ರಸ್ತೆಯಲ್ಲಿ ಸುಖಾನಂದ ಶೆಟ್ಟಿ ಸರ್ಕಲ್ ಇದೆ. ಇಲ್ಲಿಂದ ಉಲ್ಲಂಜೆ ಕಟೀಲಿಗೆ ವಾಹನಗಳು ಹೋಗುವ ರಸ್ತೆ ಅಗಲ ಕಿರಿದಾಗಿದೆ. ಆದರೂ ರಸ್ತೆ ಬದಿ ವಾಹನ ನಿಲ್ಲಿಸುತ್ತಾರೆ. ಸರ್ಕಲ್ ಬಳಿ ವಾಹನಗಳ ಪಾರ್ಕಿಂಗ್ ಮಾಡುತ್ತಾರೆ. ಪರಿಣಾಮ ಕಿನ್ನಿಗೋಳಿ ಪೇಟೆ ಯಾವಾಗ ನೋಡಿದರೂ ಟ್ರಾಫಿಕ್ ಜಾಮ್ ಸಮಸ್ಯೆಯಿಂದ ನರಳುತ್ತದೆ. ಸುಖಾನಂದ ಸರ್ಕಲ್ ಬಳಿ ವಾಹನ ನಿಲ್ಲಿಸುವುದನ್ನು ನಿಷೇಧಿಸಿದರೆ, ಇಲ್ಲಿರುವ ರಸ್ತೆಯಲ್ಲಿ ಉಲ್ಲಂಜೆಯಿಂದ ಬರುವವರು ಕಿನ್ನಿಗೋಳಿ ಪೇಟೆಗೆ ಬರಲು ಸುಲಭವಾಗುತ್ತದೆ. ಇದು ಪಂಚಾಯತ್ ಆಡಳಿತಕ್ಕೂ ಅರ್ಥವಾಗುತ್ತಿಲ್ಲ, ಮೂಲ್ಕಿ ಪೊಲೀಸರಿಗೂ ಗೊತ್ತಾಗುತ್ತಿಲ್ಲ, ಕಾಮನ್ ಸೆನ್ಸ್ ಇಲ್ಲದ ಜನ ಇಲ್ಲೇ ಪಾರ್ಕಿಂಗ್ ಮಾಡಿ ಸಮಸ್ಯೆ ಹೆಚ್ಚಿಸುತ್ತಾರೆ. ಬಸ್ ನಿಲ್ದಾಣದಲ್ಲೂ, ಕಿನ್ನಿಗೋಳಿ ಪೇಟೆಯ ಇಕ್ಕೆಲಗಳಲ್ಲೂ ಶಿಸ್ತೇ ಇಲ್ಲದೆ ಬೇಕಾಬಿಟ್ಟಿ ವಾಹನ ನಿಲ್ಲಿಸುತ್ತಿರುವುದರಿಂದ ಯಾವಾಗ ನೋಡಿದರೂ ವಾಹನ ಬ್ಲಾಕ್.

ತೋಟಗಾರಿಕೆ ಬೆಳೆ ಕೀಟ, ರೋಗ ನಿರ್ವಹಣೆ ಬಗ್ಗೆ ಡಾ.ಕೇದಾರನಾಥ ಮಾಹಿತಿ

ರೈತರು ಸಮಗ್ರ ಕೃಷಿ ಪದ್ಧತಿ ಅನುಸರಿಸಲಿ

ಆಲಂಕಾರು: ರೈತ ಮಿಶ್ರ ಬೆಳೆಯನ್ನು ಆಶ್ರಯಿಸಿ, ವೈಜ್ಞಾನಿಕ ರೀತಿಯಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿದರೆ ರೈತ ಯಾವತ್ತೂ ಸೋಲುವುದಿಲ್ಲ ಎಂದು ಮಂಗಳೂರಿನ ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿ ಡಾ. ಕೇದಾರನಾಥ ಹೇಳಿದರು.



ಅವರು ಮಂಗಳವಾರ ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆಶ್ರಯದಲ್ಲಿ ಸಂಘದ ಪ್ರಧಾನ ಕಛೇರಿಯ ರೈತ ಸಮುದಾಯ ಭವನದಲ್ಲಿ ನಡೆದ ತೋಟಗಾರಿಕೆ ಬೆಳೆಗಳಲ್ಲಿ ಕೀಟ ಮತ್ತು ರೋಗಗಳ ನಿರ್ವಹಣೆಯ ಬಗ್ಗೆ ಸಮಗ್ರ ಮಾಹಿತಿ ನೀಡುವ ಕೃಷಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.
ಕೃಷಿಯನ್ನು ಖುಷಿಯಿಂದ ಮಾಡಬೇಕು ಹಾಗೂ ಒಂದೇ ಬೆಳೆಯನ್ನು ಆಶ್ರಯಿಸಬಾರದು. ಅಡಿಕೆಗೆ ಹಳದಿ ರೋಗ ಹಾಗೂ ಎಲೆಚುಕ್ಕಿ ರೋಗಗಳಿಂದ ಕಂಗಾಲಾಗಿರುವ ರೈತರು ಪರ್ಯಾಯ ಬೆಳೆಯನ್ನು ಅನುಷ್ಠಾನ ಮಾಡಿಕೊಂಡಲ್ಲಿ ಯಾವುದೇ ಸಮಸ್ಯೆ ಇಲ್ಲ, ನಾವು ಮಣ್ಣಿನ ಪರೀಕ್ಷೆಯನ್ನು ನಡೆಸುತ್ತಾ ಅದರ ಫಲವತ್ತತೆಯನ್ನು ಕಾಪಾಡಿಕೊಂಡು ಬರಬೇಕು. ಮಾತ್ರವಲ್ಲ ರಾಸಾಯನಿಕ ಗೊಬ್ಬರ ಬಳಕೆಯಿಂದ ದೂರವಿದ್ದು ಸಾವಯವ ಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕು. ತೋಟಗಾರಿಕಾ ಬೆಳೆಗಳಲ್ಲಿ ಕೀಟ ಮತ್ತು ರೋಗ ನಿರ್ವಹಣೆಯ ಬಗ್ಗೆ ನಾವು ತಜ್ಞರ ಮಾಹಿತಿ ಪಡೆದು ಕೃಷಿಯಲ್ಲಿ ಮುಂದುವರಿಯಬೇಕು ಹಾಗಾದಾಗ ಮಾತ್ರ ನಮ್ಮ ಕೃಷಿ ಪರಂಪರೆ ಉಳಿದು ಬೆಳೆಯಲಿದೆ. ಕೃಷಿಗೆ ಗೊಬ್ಬರ ಬಳಕೆಯ ಬಗ್ಗೆ ತಿಳಿದುಕೊಳ್ಳುವುದರಿಂದ ಸಮೃದ್ಧ ರೋಗ ರಹಿತ ಕೃಷಿಯನ್ನು ಮಾಡಬಹುದು ಎಂದು ಕೇದಾರನಾಥ್ ಹೇಳಿದರು.
ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಮೇಶ್ ಭಟ್ ಉಪ್ಪಂಗಳ ಅಧ್ಯಕ್ಷತೆ ವಹಿಸಿದ್ದರು. ಇಂದು ರೈತರು ಸೂಕ್ತ ಮಾರ್ಗದರ್ಶನ ಹಾಗೂ ಮಾಹಿತಿಯ ಕೊರತೆಯಿಂದಾಗಿ ಕೃಷಿಯಲ್ಲಿ ನಷ್ಟ ಅನುಭವಿಸುತ್ತಿದ್ದಾರೆ. ಅಡಿಕೆ ಗಿಡಗಳಿಗೆ ಎಲೆಚುಕ್ಕಿ ರೋಗ ಹಾಗೂ ಹಳದಿ ರೋಗ ಎನ್ನುವ ಮಾರಿ ನಮ್ಮ ಸಂಘದ ವ್ಯಾಪ್ತಿಯ ಆರು ಗ್ರಾಮಗಳಲ್ಲಿ ಕೂಡಾ ಉಲ್ಬಣಗೊಂಡಿದೆ ಎಂದರು.
ಮುಖ್ಯ ಅತಿಥಿಗಳಾಗಿದ್ದ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ನಿರ್ದೇಶಕ ಕಿರಣ್ ಉಪಾಧ್ಯಾಯ ಹಾಗೂ ಪ್ರಗತಿಪರ ಕೃಷಿಕ ಗುರುಪ್ರಸಾದ್ ರೈ ಕೇವಳ ತಮ್ಮ ಕೃಷಿಯ ಬಗೆಗಿನ ಅನುಭವ ಹಂಚಿಕೊಂಡರು. ಡಾ. ಕೇದಾರನಾಥ ಅವರು ರೈತರೊದಿಗೆ ಸಂವಾದ ನಡೆಸಿ ರೈತರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು. ಪ್ರಣಾಬ್ ರೈ ಮನವಳಿಕೆ ಪ್ರಾರ್ಥಿಸಿದರು. ಸಂಘದ ಉಪಾಧ್ಯಕ್ಷ ದಯಾನಂದ ರೈ ಮನವಳಿಕೆಗುತ್ತು ಸ್ವಾಗತಿಸಿ, ಸಿಇಒ ಮನೋಹರ ಪ್ರಕಾಶ್ ಡಿ. ವಂದಿಸಿದರು. ಶಾಖಾ ವ್ಯವಸ್ಥಾಪಕ ಲೋಕನಾಥ ರೈ ಕೇಳ್ಕ ಕಾರ್ಯಕ್ರಮ ನಿರ್ವಹಿಸಿದರು.

ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನ | ಶಾಸಕ ನಾಯ್ಕ್ ಅಭಿಪ್ರಾಯ

ಕರಾವಳಿಯಲ್ಲಿ ಬ್ಯಾರಿ ಸಾಹಿತ್ಯದ ಬೆಳವಣಿಗೆ

ಬಂಟ್ವಾಳ: ಕರಾವಳಿ ಜಿಲ್ಲೆಯಲ್ಲಿ ಬ್ಯಾರಿ ಭಾಷೆಯ ಸಾಹಿತ್ಯ ಲೋಕ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿರುವುದು ಅಭಿನಂದನೀಯವಾಗಿದ್ದು, ಸಾಹಿತಿಗಳು ಕೂಡ ಅಧಿಕ ಸಂಖ್ಯೆಯಲ್ಲಿದ್ದಾರೆ. ಕನ್ನಡದ ಜತೆಯಲ್ಲಿ ತುಳು ಪ್ರಧಾನ ಭಾಷೆಯಾಗಿದ್ದು, ಬ್ಯಾರಿ ಭಾಷೆಯು ಎರಡನೇ ಭಾಷೆಯಾಗಿ ವ್ಯಾವಹಾರಿಕವಾಗಿ ಚಾಲ್ತಿಯಲ್ಲಿದೆ. ಇದರಿಂದಾಗಿ ಭಾಷಾ ಸಾಮರಸ್ಯ ಇರುವುದು ಸ್ಪಷ್ಟವಾಗುತ್ತದೆ ಎಂದು ಶಾಸಕ ರಾಜೇಶ್ ನಾಯ್ಕ್ ಉಳಿಪಾಡಿ ಹೇಳಿದರು.



ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ಬ್ಯಾರಿ ಸಾಹಿತ್ಯ ಪರಿಷತ್ ಬಂಟ್ವಾಳ ಸಹಯೋಗದಲ್ಲಿ ಮಂಗಳವಾರ ಪಾಣೆಮಂಗಳೂರು ಆಲಡ್ಕ ಎಸ್.ಎಸ್ ಆಡಿಟೋರಿಯಂನಲ್ಲಿ ಆಯೋಜಿಸಲಾದ ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.
ಹಿರಿಯಕವಿ, ಗಾಯಕ ರಹೀಂ ಬಿ.ಸಿ.ರೋಡ್ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿ, ಬ್ಯಾರಿ ನಮ್ಮ ಮಾತೃಭಾಷೆಯಾಗಿದ್ದು,ಈ ಭಾಷೆಯನ್ನು ಉಳಿಸುವುದು ಕವಿ, ಸಾಹಿತಿಗಳ ಜವಾಬ್ದಾರಿ ಮಾತ್ರವಲ್ಲ, ಬ್ಯಾರಿ ಭಾಷೆಯನ್ನು ಉಳಿಸುವುದು ಪ್ರತಿಯೊಬ್ಬ ಬ್ಯಾರಿಯ ಕರ್ತವ್ಯವು ಆಗಿದೆ ಎಂದರು.
ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್. ಅಧ್ಯಕ್ಷತೆ ವಹಿಸಿದ್ದರು. ಉಮೈರತ್ ಕುಮೇರ್ ಅವರು ಬರೆದ ಬ್ಯಾರಿ ಕಥಾ ಸಂಕಲನವನ್ನು ಶಾಸಕ ರಾಜೇಶ್ ನಾಯ್ಕ್ ಬಿಡುಗಡೆಗೊಳಿಸಿದರು. ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಎಂ.ಎಸ್. ಮಹಮ್ಮದ್, ಮೊಹಿದ್ದೀನ್ ಶಿಕ್ಷಣ ಸಂಸ್ಥೆ ತುಂಬೆ ಅಧ್ಯಕ್ಷ ಬಿ. ಅಬ್ದುಲ್ ಸಲಾಂ ತುಂಬೆ, ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಬೆಳಗಾವಿ ಸೆನೆಟ್ ಸದಸ್ಯ ಡಾ. ಮುಸ್ತಫ ಬಸ್ತಿಕೋಡಿ, ಬಂಟ್ವಾಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುಮ್ತಾಝ್ ಎಚ್.ಐ., ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಮಹಮ್ಮದ್ ಹನೀಫ್ ಗೋಳ್ತಮಜಲು, ಪ್ರಧಾನ ಕಾರ್ಯದರ್ಶಿ ಪಿ.ಎಂ. ಅಶ್ರಫ್ ಪಾಣೆಮಂಗಳೂರು, ಕೋಶಾಧಿಕಾರಿ ಹಂಝು ಬಸ್ತಿಕೋಡಿ, ಗೌರವ ಸಲಹೆಗಾರ ಪಿ. ಮೊಹಮ್ಮದ್ ರಫೀಕ್, ಅಕಾಡೆಮಿ ಸದಸ್ಯ ಸಂಚಾಲಕ ಅಬೂಬಕ್ಕರ್ ಅನಿಲಕಟ್ಟೆ ಪ್ರಮುಖರಾದ ಪಿ.ಎ. ರಹೀಮ್, ಮಹಮ್ಮದ್ ಅಲಿ, ಬಿ.ಎಸ್.ಮಹಮ್ಮದ್, ಅಬ್ದುಲ್ ಲತೀಫ್ ನೇರಳಕಟ್ಟೆ, ತಾಜುದ್ದೀನ್ ಅಮ್ಮುಂಜೆ, ಖಾಲಿದ್ ಉಜಿರೆ, ಯು. ಮುಸ್ತಫಾ ಸಹಿತ ಇದ್ದರು. ಬ್ಯಾರಿ ಸಾಹಿತ್ಯ ಪರಿಷತ್ ಬಂಟ್ವಾಳ ಅಧ್ಯಕ್ಷ ಬಿ.ಎಂ.ಅಬ್ಬಾಸ್ ಅಲಿ ಸ್ವಾಗತಿಸಿದರು. ಪಿ.ಎಂ.ಅಶ್ರಫ್ ನಿರೂಪಿಸಿದರು.
ಸಮ್ಮೇಳನ ಆರಂಭಕ್ಕೂ ಮೊದಲು ಶ್ರೀ ಶಾರದಾ ಪ್ರೌಢಶಾಲೆಯ ಬಳಿಯಿಂದ ಸಮ್ಮೇಳನಾಧ್ಯಕ್ಷರನ್ನು ಸಭಾಂಗಣದತ್ತ ಮೆರವಣಿಗೆಯಲ್ಲಿ ಕರೆತರಲಾಯಿತು. ಅಕಾಡೆಮಿ ಅಧ್ಯಕ್ಷ ಉಮರ್ ಯು. ಎಚ್. ಧ್ವಜಾರೋಹಣ ನೆರವೇರಿಸಿದರು. ಉದ್ಘಾಟನಾ ಸಮಾರಂಭದ ಬಳಿಕ ಸಮ್ಮೇಳನಾಧ್ಯಕ್ಷರ ಭಾಷಣದ ಮೇಲೆ ಚರ್ಚಾಗೋಷ್ಠಿ ಮಧ್ಯಾಹ್ನ ಬ್ಯಾರಿ ಕವಿಗೋಷ್ಠಿ ಸಂಜೆ ಸಮಾರೋಪ ಸಮಾರಂಭ ನಡೆಯಿತು.

ಸುಳ್ಯ ತಾಲೂಕಿನ ಸಂಜೀವಿನಿ ಕೃಷಿ ಸಖಿ, ಪಶು ಸಖಿಯರಿಗೆ ತರಬೇತಿ



ಸುಳ್ಯ: ಭಾ.ಕೃ.ಸಂ.ಪ. – ಗೇರು ಸಂಶೋಧನಾ ನಿರ್ದೇಶನಾಲಯ ಪುತ್ತೂರು ಹಾಗೂ ಸುಳ್ಯ ತಾಲೂಕು ಪಂಚಾಯತ್ ಸಹಯೋಗದಲ್ಲಿ ಸೋಮವಾರ ಸುಳ್ಯ ತಾಲೂಕಿನ ಕೃಷಿ ಸಖಿಯರು ಮತ್ತು ಪಶು ಸಖಿಯರಿಗಾಗಿ ಸಮತೋಲಿತ ರಸಗೊಬ್ಬರ ಬಳಕೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು.
ಭಾರತ ಸರ್ಕಾರದ ವತಿಯಿಂದ ದೇಶವ್ಯಾಪಿಯಾಗಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ವ್ಯಾರಾ ವಿಸ್ತರಣಾ ಕಾರ್ಯಕರ್ತರಾಗಿರುವ ಕೃಷಿ ಸಖಿಯರು ಮತ್ತು ಪಶು ಸಖಿಯರಿಗೆ ರಾಸಾಯನಿಕ ಗೊಬ್ಬರಗಳ ಸಮತೋಲಿತ ಬಳಕೆ, ಸಾವಯವ ಗೊಬ್ಬರಗಳು ಹಾಗೂ ಜೈವಿಕ ಗೊಬ್ಬರಗಳ ಮೂಲಕ ಸಮಗ್ರ ಪೋಷಕಾಂಶ ನಿರ್ವಹಣೆಯ ಮಹತ್ವದ ಕುರಿತು ಅರಿವು ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.
ಡಾ. ಈರದಾಸಪ್ಪ ಇ. ಗೋಡಂಬಿ ಹಾಗೂ ಅಡಿಕೆ ಬೆಳೆಗಳಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆಯ ಅಗತ್ಯತೆ ಕುರಿತು ವಿವರಿಸಿದರು. ಡಾ. ಅಶ್ವತಿ ಚಂದ್ರಕುಮಾರ್ ಅವರು ಮಣ್ಣಿನ ಆರೋಗ್ಯ ಚೀಟಿ ಹಾಗೂ ಅಗತ್ಯಾಧಾರಿತ ಗೊಬ್ಬರ ಬಳಕೆಯ ಮಹತ್ವವನ್ನು ತಿಳಿಸಿದರು. ಸಂಜೀವಿನಿ ತಾಲೂಕು ಕಾರ್ಯಕ್ರಮದ ವ್ಯವಸ್ಥಾಪಕಿ ಶ್ವೇತಾ ವಿ.ಜಿ. ಗೇರು ಕೃಷಿಯ ಕುರಿತು ಮಾಹಿತಿ ನೀಡಿದರು.
ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ರಾಜಣ್ಣ ಪ್ರಸ್ತಾವಿಸಿದರು. ಸಂಪಾಜೆ ಗ್ರಾಮದ ಕೃಷಿ ಸಖಿ ಮೋಹಿನಿ ವಿಶ್ವನಾಥ್ ನಿರ್ವಹಿಸಿದರು. ಸಂಜೀವಿನಿ ತಾ.ಪಂ. ಸಿಬ್ಬಂದಿ ಜಯಲಕ್ಷ್ಮಿ ಶ್ರೀನಿ, ಹೃತಿಕ್ ಹಾಗೂ ತಾಲೂಕ್ ಪಂಚಾಯತ್ ಸಿಬ್ಬಂದಿಗಳಾದ ರಾಜೇಶ್, ಪ್ರಸಾದ್, ಜಯಪ್ರಕಾಶ್ ಸಹಕರಿಸಿದರು.

ಜೂನ್ ಪಡಿತರ ಆಹಾರ ಧಾನ್ಯ ಮೇ ತಿಂಗಳಲ್ಲೇ ವಿತರಣೆಗೆ ಸೂಚನೆ

ಮಡಿಕೇರಿ: ಮುಂಬರುವ ಖರೀದಿ ಋತುವಿನ ಹಿನ್ನೆಲೆಯಲ್ಲಿ ಮತ್ತು ಪರಿಣಾಮಕಾರಿ ಲಾಜಿಸ್ಟಿಕ್ಸ್ ಮತ್ತು ಸಂಗ್ರಹಣೆಗಾಗಿ ರಾಜ್ಯಗಳು ಎದುರಿಸುತ್ತಿರುವ ಅಡಚಣೆಗಳಿಂದಾಗಿ ಎನ್‌ಎಫ್‌ಎಸ್‌ಎ ಅಡಿಯಲ್ಲಿ ಮೇ ಮತ್ತು ಜೂನ್ ಆಹಾರಧಾನ್ಯ ಹಂಚಿಕೆ ಮುಂಗಡವಾಗಿ ಎತ್ತುವಳಿ ಮಾಡಿ ಕೂಡಲೇ ವಿತರಣೆ ಮಾಡುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ.
ಈ ಹಿನ್ನೆಲೆಯಲ್ಲಿ ಮೇ–2026 ಮತ್ತು ಜೂನ್–2026 ರ ಎರಡು ಮಾಹೆಗಳ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್) ಹಂಚಿಕೆ ಮೇಯಲ್ಲೇ ವಿತರಿಸಲು ಸರ್ಕಾರ ನಿರ್ದೇಶನ ನೀಡಿದೆ. ಅದರನ್ವಯ ಕೊಡಗು ಜಿಲ್ಲೆಯ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 70 ಕೆ.ಜಿ (ಮೇ–35 + ಜೂನ್ –35) ಅಕ್ಕಿ ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 10 ಕೆ.ಜಿ (ಮೇ–5 + ಜೂನ್–5) ಅಕ್ಕಿ ಉಚಿತವಾಗಿ ವಿತರಿಸಲಾಗುತ್ತದೆ. ಮೇ, ಜೂನ್ ಆಹಾರಧಾನ್ಯ ಮೇ ಒಟ್ಟಿಗೆ ವಿತರಣೆ ಮಾಡಬೇಕಿರುವುದರಿಂದ ವಿತರಣಾ ಸಂದರ್ಭ ಪ್ರತಿ ಮಾಹೆಯ ವಿತರಣೆಗೆ ಫಲಾನುಭವಿಗಳಿಂದ ಪ್ರತ್ಯೇಕ ಬಯೋಮೆಟ್ರಿಕ್ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಪಡಿತರ ಚೀಟಿ ಫಲಾನುಭವಿಗಳು ಮೇ ಮತ್ತು ಜೂನ್ ಬಯೋ ಮೆಟ್ರಿಕ್ ನೀಡಿ ಆಹಾರಧಾನ್ಯ ಪಡೆಯಲು ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರಿಗೆ ತಿಳಿಸಲಾಗಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಅನ್ನಭಾಗ್ಯ ದಡಿ ರಾಜ್ಯ ಸರ್ಕಾರದ ವತಿಯಿಂದ ವಿತರಿಸಲಾಗುತ್ತಿರುವ ಹೆಚ್ಚುವರಿ 5 ಕೆಜಿ ಆಹಾರಧಾನ್ಯ ಮೇ, ಜೂನ್ ಹಂಚಿಕೆಯನ್ನು ಆದ್ಯತಾ ಮತ್ತು ಅಂತ್ಯೋದಯ ಪಡಿತರ ಚೀಟಿಯ ಫಲಾನುಭವಿಗಳಿಗೆ ಈಗಾಗಲೇ ವಿತರಿಸುತ್ತಿರುವ ರೀತಿಯಲ್ಲಿ ಜೂನ್ ನಲ್ಲಿ ಎತ್ತುವಳಿ ಮಾಡಿ ವಿತರಿಸಲು ಸರ್ಕಾರವು ನಿರ್ದೇಶಿಸಿದೆ.
ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಮುಕ್ತ ಮಾರುಕಟ್ಟೆ ದರದಂತೆ ದಂಡ ವಿಧಿಸಲಾಗುವುದು. ಈ ಪಡಿತರ ಚೀಟಿಯನ್ನು 6 ತಿಂಗಳ ಅವಧಿಗೆ ಅಮಾನತುಗೊಳಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕ ಭೀಮರಾಯ ತಿಳಿಸಿದ್ದಾರೆ.

ಸುರತ್ಕಲ್ ಮಿತ್ರ ಮಂಡಳಿ ಸುವರ್ಣ ಮಹೋತ್ಸವ ಕಾರ್ಯಕಾರಿ ಸಮಿತಿ ಸಭೆ



ಸುರತ್ಕಲ್: ಮಿತ್ರ ಮಂಡಳಿ ಸುವರ್ಣ ಮಹೋತ್ಸವ ಕಾರ್ಯಕಾರೀ ಸಮಿತಿಯ ಮೊದಲ ಸಭೆ ಕಾರ್ಯಾಧ್ಯಕ್ಷ ಸತೀಶ್ ರಾವ್ ಇಡ್ಯ ನೇತೃತ್ವದಲ್ಲಿ ನಡೆಯಿತು.
ಮಿತ್ರ ಮಂಡಳಿ ಅಧ್ಯಕ್ಷ ಶ್ರೀ ಎಚ್ ಶ್ರೀರಂಗ, ಎಚ್. ಬಾಲಕೃಷ್ಣ ಕೃಷ್ಣಮೂರ್ತಿ ಹಾಗೂ ಉಜ್ವಲ್ ಕೃಷ್ಣ ವೇದಿಕೆಯಲ್ಲಿದ್ದರು. ಸಭೆಯಲ್ಲಿ ಮೇ 23ರಂದು ಸಂಜೆ 6 ಗಂಟೆಗೆ ಸುವರ್ಣ ಮಹೋತ್ಸವ ಉದ್ಘಾಟನೆ ನಡೆಸುವುದಾಗಿ ತೀರ್ಮಾನಿಸಲಾಯಿತು. ಉದ್ಘಾಟನಾ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಅತಿಕಾರಿ ಗೋಪಾಲ ಮಾಸ್ಟರ್, ಎಚ್ ಯು. ಅನಂತಯ್ಯ, ಪಿ. ಜನಾರ್ದನ, ಶ್ರೀ ವೆಂಕಟರಮಣ ಐತಾಳ್, ಐ.ಕೆ. ರಾಮಕೃಷ್ಣ ಹಾಗೂ ಜನಾರ್ದನ ಭಟ್ ಅವರನ್ನು ಅಭಿನಂದಿಸುವುದಾಗಿ ನಿರ್ಧರಿಸಲಾಯಿತು. ಸುವರ್ಣ ಮಹೋತ್ಸವದ ಅಂಗವಾಗಿ 12 ತಿಂಗಳು 12 ಕಾರ್ಯಕ್ರಮಗಳ ಆಯೋಜನೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಜೂನ್ ನಲ್ಲಿ ಮೂವರು ಸಲಹೆಗಾರರಿಂದ ವಿವಿಧ ವಿಷಯಗಳ ಕುರಿತು ವಿಚಾರ ವಿನಿಮಯ ನಡೆಸಲು ತೀರ್ಮಾನಿಸಲಾಯಿತು. ಜುಲೈನಲ್ಲಿ ವನಮಹೋತ್ಸವ, ಮಿಯಾವಾಕಿ ಅರಣ್ಯ ಭೇಟಿ ಏರ್ಪಡಿಸಿ ವಿದ್ಯಾದಾಯಿನಿ ಆವರಣದಲ್ಲಿ ಹಲಸು, ಮಾವು ಸಹಿತ 50 ಸಸಿಗಳನ್ನು ನೆಡಲು ನಿರ್ಧರಿಸಲಾಯಿತು. ಆಗಸ್ಟ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆಯೊಂದಿಗೆ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಆಶ್ರಮದವರಿಗೆ ಉಪಹಾರದೊಂದಿಗೆ ಕೊಡುಗೆ ನೀಡಲು ತೀರ್ಮಾನಿಸಲಾಯಿತು. ಪೂರ್ಣಿಮಾ, ರಾಬರ್ಟ್ ಪೌಲ್ ಡಿಸೋಜ, ಎಚ್. ಮೋಹನ, ಸಂದೇಶ ರಾವ್, ನಾಗೇಶ್ ಉಪ್ಪಿಣ್ಣೆ, ನವೀನ್ ಚಂದ್ರ, ಉಮೇಶ್, ನಾಗೇಶ್ ವಿ.ಎನ್., ಪ್ರಸಿದ್ಧ ಪಿ., ಎಚ್.ಪಿ. ಸುಬ್ರಹ್ಮಣ್ಯ, ಎಚ್. ಮುರಾರಿ ರಾವ್ ಹಾಗೂ ಎಚ್.ಯು. ರಾಘವೇಂದ್ರ, ಕಾರ್ಯದರ್ಶಿ ಗಣೇಶ್ ಇದ್ದರು. ಗಿರೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮೇ 17ರಂದು ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ ಶಾಖೆ ಬೋಳಿಯಾರಿನಲ್ಲಿ ಶುಭಾರಂಭ

ಬಂಟ್ವಾಳ: ಸ್ವಾತಂತ್ರ್ಯ ಹೋರಾಟಗಾರರಾದ ದಿ.ಡಾ. ಅಮ್ಮೆಂಬಳ ಬಾಳಪ್ಪರ ನೇತೃತ್ವದಲ್ಲಿ ಹಾಗೂ ಸಹಕಾರಿ ಧುರೀಣ ಹೂವಯ್ಯ ಮೂಲ್ಯ ಸಾರಥ್ಯದಲ್ಲಿ ಸ್ಥಾಪಿಸಲ್ಪಟ್ಟ ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ 18 ನೇ ಶಾಖೆ ಉಳ್ಳಾಲ ತಾಲೂಕಿನ ಬೋಳಿಯಾರು ಶ್ರೀ ದೇವಿಕಿರಣ್ ಕಟ್ಟಡದಲ್ಲಿ ಮೇ 17ರಂದು ಶುಭಾರಂಭಗೊಳ್ಳಲಿದೆ ಎಂದು ಸಂಘದ ಅಧ್ಯಕ್ಷ ಸುರೇಶ್ ಕುಲಾಲ್ ಬಂಟ್ವಾಳ ತಿಳಿಸಿದ್ದಾರೆ.
ಬುಧವಾರ ಸಂಘದ ಬಂಟ್ವಾಳ ಬೈಪಾಸ್‌ನಲ್ಲಿರುವ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಸ್ವಾಮೀಜಿ ನೂತನ ಶಾಖೆಯನ್ನು, ಸಂಸದ ಕ್ಯಾ. ಬ್ರಿಜೇಶ್ ಚೌಟ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಭದ್ರತಾ ಕೊಠಡಿ, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಸೇಫ್ ಲಾಕರನ್ನು, ಮಾಜಿ ಸಚಿವ



ಬಿ. ರಮಾನಾಥ ರೈ ಕಂಪ್ಯೂಟರ್ ಉದ್ಘಾಟನೆ ನೆರವೇರಿಸುವರು. ಸಹಕಾರ ಸಂಘಗಳ ಸಹಾಯಕ ನಿಬಂಧಕಿ ತ್ರಿವೇಣಿ ರಾವ್ ಠೇವಣಿ ಪತ್ರವನ್ನು ಬಿಡುಗಡೆ ಮಾಡುವರು ಎಂದು ವಿವರಿಸಿದರು.
ಅಮ್ಮೆಂಬಳ ವ್ಯ.ಸೇ.ಸ. ಸಂಘದ ಅಧ್ಯಕ್ಷ ಟಿ.ಜಿ. ರಾಜಾರಾಮ್ ಭಟ್, ಮೂಲ್ಯರ ಯಾನೆ ಕುಲಾಲರ ಮಾತೃ ಸಂಘದ ಅಧ್ಯಕ್ಷ ಮಯೂರು ಉಳ್ಳಾಲ, ದಿ.ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ. ಮಾಜಿ ಅಧ್ಯಕ್ಷ ಸಂತೋಷ್ ಕುಮಾರ್ ಬೋಳಿಯಾರ್, ಅಮ್ಮೆಂಬಳ ಸಂತ ಜೋಸೆಫ್ ಚರ್ಚ್‌ನ ಧರ್ಮಗುರು

5 ಹೊಸ ಶಾಖೆ ತೆರೆಯಲು ತೀರ್ಮಾನ
ಮುಂದಿನ ದಿನಗಳಲ್ಲಿ ಇನ್ನು ಐದು ಕಡೆಗಳಲ್ಲಿ ಶಾಖೆಗಳನ್ನು ತೆರೆಯಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಪ್ರಧಾನ ವ್ಯವಸ್ಥಾಪಕ ಬೋಜ ಮೂಲ್ಯ ತಿಳಿಸಿದರು. ಸಂಘವು ಗ್ರಾಹಕರ ಅನುಕೂಲಕ್ಕಾಗಿ ಮತ್ತು ಸಹಕಾರಿಯ ಹಿತದೃಷ್ಟಿಯಿಂದ ಗಣಕೀಕೃತ ಸಿಬಿಎಸ್ ತಂತ್ರಾಂಶದೊಂದಿಗೆ ಇ- ಕಲೆಕ್ಷನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ ಎಂದರು.

ವಂ. ಧರ್ಮಗುರು ಮೈಕಲ್ ಡಿಸಿಲ್ವ, ಬೋಳಿಯಾರು ಎಂಜೆಎಂ ಮಸೀದಿಯ ಅಧ್ಯಕ್ಷ ಪಿ.ಕೆ. ಅಬ್ದುಲ್ಲಾ, ತಾ.ಪಂ. ಮಾಜಿ ಸದಸ್ಯ ಬಿ.ಕೆ. ಅಬ್ದುಲ್ ಜಬ್ಬಾರ್, ಬೋಳಿಯಾರು ಗ್ರಾ.ಪಂ. ಮಾಜಿ ಅಧ್ಯಕ್ಷ ಶಕೂರು, ಶ್ರೀಕ್ಷೇತ್ರ ಪಣೋಲಿಬೈಲಿನ ಪ್ರಧಾನ ಅರ್ಚಕ ವಾಸುದೇವ ಮೂಲ್ಯ, ಆನುವಂಶಿಕ ಅರ್ಚಕರಾದ ನಾರಾಯಣ ಮೂಲ್ಯ, ದ.ಕ., ಉಡುಪಿ ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಪ್ರಶಾಂತ್ ಗಟ್ಟಿ, ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲು, ಬೆಂಗಳೂರು ಕುಲಾಲ ಸಂಘದ ಅಧ್ಯಕ್ಷ ದಿವಾಕರ ಮೂಲ್ಯ, ನೂತನ ಶಾಖಾ ಕಟ್ಟಡದ ಮಾಲಕ ಕೇಶವ ಭಂಡಾರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಅಧ್ಯಕ್ಷ ಸುರೇಶ್ ಕುಲಾಲ್ ತಿಳಿಸಿದರು.

5.28 ಕೋಟಿ ರೂ. ಲಾಭ
2025–26ನೇ ಸಾಲಿನಲ್ಲಿ 1432.13 ಕೋ.ರೂ. ವ್ಯವಹಾರ ನಡೆಸಿ 5.28 ಕೋಟಿ ರೂ. ಲಾಭ ಗಳಿಸಿದೆ ಎಂದು ಈ ಸಂದರ್ಭ ಹಾಜರಿದ್ದ ಸಂಘದ ಪ್ರಧಾನ ವ್ಯವಸ್ಥಾಪಕರಾದ ಬೋಜ ಮೂಲ್ಯ ತಿಳಿಸಿದರು.
ಸಂಘವು ಪ್ರಸ್ತುತ 17 ಶಾಖೆಗಳನ್ನು ಹೊಂದಿದ್ದು ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲೂ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದೆ. ಬಂಟ್ವಾಳ ಪಟ್ಟಣ, ಫರಂಗಿಪೇಟೆ, ವಿಟ್ಲ ಮುಡಿಪು, ಕುಕ್ಕಾಜೆ, ಬಂಟ್ವಾಳ ಬೈಪಾಸ್, ಪಡೀಲ್, ಕಲ್ಲಡ್ಕ, ಬಜಪೆ, ಬಿ.ಸಿ.ರೋಡು, ಪುಂಜಾಲಕಟ್ಟೆ, ಪುತ್ತೂರು, ಮೆಲ್ಕಾರ್, ಸಿದ್ದಕಟ್ಟೆ, ಉಪ್ಪಿನಂಗಡಿ, ತೊಕ್ಕೊಟ್ಟು–ದೇರಳಕಟ್ಟೆ ಮತ್ತು ಅಲಂಕಾರು ಶಾಖೆಗಳಿದ್ದು, ಈಗ 18ನೇ ಶಾಖೆ ಬೋಳಿಯಾರಿನಲ್ಲಿ ಶುಭಾರಂಭಗೊಳ್ಳಲಿದೆ.
ಸಂಘವು 8.23 ಕೋ.ರೂ. ಪಾಲುಬಂಡವಾಳ, 22.64 ಕೋ.ರೂ.ನಿಧಿಗಳು,62.88 ಕೋ.ರೂ. ವಿನಿಯೋಗಗಳು, 264.08 ಕೋ. ರೂ. ಠೇವಣಾತಿ 248.99 ಕೋ. ರೂ. ಹೊರಬಾಕಿ ಸಾಲಗಳಿದ್ದು, ಸಂಘದ ದುಡಿಯುವ ಬಂಡವಾಳ 297.71 ಕೋ. ರೂ.ಆಗಿರುತ್ತದೆಯಲ್ಲದೆ ಆಡಿಟ್ ವರ್ಗೀಕರಣದಲ್ಲಿ 'ಎ' ತರಗತಿಯನ್ನು ಪಡೆದಿದೆ ಎಂದರು.
ಸಂಘವು ಸದಸ್ಯರ ಅನುಕೂಲಕ್ಕಾಗಿ ಬಂಟ್ವಾಳ ಬೈಪಾಸ್ ಶಾಖೆಯಲ್ಲಿ ಇ-ಸ್ಟ್ಯಾಂಪ್ ಸೌಲಭ್ಯ,ಕೆಲವು ಶಾಖೆಗಳಲ್ಲಿ ಸೇಫ್ ಲಾಕರ್ ಸೌಲಭ್ಯ, ಮಣಿಪಾಲ ಆರೋಗ್ಯ ಕಾರ್ಡ್ ಸೌಲಭ್ಯ, ಸದಸ್ಯರ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನ, ಸದಸ್ಯರಿಗೆ ಯಶಸ್ವಿನಿ ವಿಮೆ,ಸಂಘದ ಸಿಬ್ಬಂದಿಗೆ ವಿಮಾ ಸೌಲಭ್ಯ, ಸದಸ್ಯರ ವೈದ್ಯಕೀಯ ಚಿಕಿತ್ಸೆಗೆ ಸಹಾಯಧನ ನೀಡುತ್ತಾ ಬಂದಿದೆ. ಸಂಘದಲ್ಲಿ ಪ್ರಸ್ತುತ 241 ಅಮೂಲ್ಯ ಸ್ವಸಹಾಯ ಗುಂಪುಗಳಿದ್ದು, 2161 ಸದಸ್ಯರು ಸಕ್ರಿಯವಾಗಿ ವ್ಯವಹರಿಸುತ್ತಿದ್ದು, 1,04,95,719.50 ರೂ. ಉಳಿತಾಯವನ್ನು ಮಾಡಿದ್ದಾರೆ ಎಂದು ಪ್ರಧಾನ ವ್ಯವಸ್ಥಾಪಕ ಬೋಜ ಮೂಲ್ಯ ವಿವರಿಸಿದರು.
ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಜನಾರ್ದನ ಬೊಂಡಾಲ, ನಿರ್ದೇಶಕರುಗಳಾದ ರಮೇಶ್ ಸಾಲಿಯಾನ್, ಅರುಣ್ ಕುಮಾರ್ ಕೆ., ಸತೀಶ್ ಬಿ. ರಮೇಶ್ ಸಾಲಿಯಾನ್, ಸುರೇಶ್ ಕುಮಾರ್ ಎನ್., ಬೋಜ ಸಾಲಿಯಾನ್, ಕಿರಣ್ ಕುಮಾರ್ ಎ.,ಹರೀಶ್, ಪ್ರೇಮನಾಥ್ ಬಂಟ್ವಾಳ, ರೇಖಾ ನಾಯಕ್, ಜಗನ್ನಿವಾಸ ಗೌಡ, ಗಣೇಶ್ ಸಮಗಾರ, ಮಾಲತಿ ಮಚ್ಚೇಂದ್ರ ಸಾಲಿಯಾನ್, ವಿದ್ಯಾ ಇದ್ದರು.

ಸುತ್ತಮುತ್ತ

ಇಂದು ಬದಿಯಡ್ಕ ವ್ಯಾಪಾರಿ ಮಹಾಸಭೆ

ಬದಿಯಡ್ಕ: ಬದಿಯಡ್ಕ ಮರ್ಚೆಂಟ್ಸ್, ಇಂಡಸ್ಟ್ರಿಯಲಿಸ್ಟ್ ಅಸೋಸಿಯೇಶನ್ ವಾರ್ಷಿಕ ಮಹಾಸಭೆ ಹಾಗೂ 2026-28ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಮೇ 14ರಂದು ಬೆಳಗ್ಗೆ 10 ಗಂಟೆಗೆ ಬದಿಯಡ್ಕ ಸರಕಾರಿ ಆಸ್ಪತ್ರೆ ಸಮೀಪವಿರುವ ಮನುಕುಲ ಅಪಾರ್ಟ್‌ಮೆಂಟ್‌ನಲ್ಲಿ ಜರಗಲಿದೆ. ಬೆಳಗ್ಗೆ 10 ರಿಂದ ಮಧ್ಯಾಹ್ನ ತನಕ ಎಲ್ಲಾ ವ್ಯಾಪಾರ ಸಂಸ್ಥೆಗಳಿಗೂ ರಜೆಯಾಗಿರುತ್ತದೆ.

ಮೇ 19: ಶಾಂತಿಗುರಿ ಶ್ರೀ ದೇವಳದಲ್ಲಿ ಪ್ರಥಮ ಪ್ರತಿಷ್ಠಾ ವರ್ಧಂತ್ಯೋತ್ಸವ

ಮಂಜೇಶ್ವರ: ಬೇಕೂರು ಶಾಂತಿಗುರಿ ಶ್ರೀಮೂಕಾಂಬಿಕಾ ದೇವಸ್ಥಾನದಲ್ಲಿ ಶ್ರೀ ದೇವಿಯ ಪ್ರಥಮ ಪ್ರತಿಷ್ಠಾ ವರ್ಧಂತ್ಯೋತ್ಸವ ಮೇ 19ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಬೆಳಿಗ್ಗೆ 7.30ಕ್ಕೆ ಸಾಮೂಹಿಕ ಪ್ರಾರ್ಥನೆ, ಪುಣ್ಯಾಹ, ಗಣಪತಿಹೋಮ, ನವಕ ಪ್ರಧಾನ ಕಲಶ, ಪ್ರಧಾನ ಹೋಮ, ಪ್ರಗತಿಪರ ಕೃಷಿಕ ದಾಮೋದರ ಉಬರ್ಲೆ ಅವರಿಂದ ದೀಪ ಪ್ರಜ್ವಲನೆ, 9ರಿಂದ 12ರ ವರೆಗೆ ಭಜನಾ ಕಾರ್ಯಕ್ರಮ, ನವಕ ಕಲಶಾಭಿಷೇಕ, ನಾಗ ರಕ್ತೇಶ್ವರಿ ದೈವಗಳಿಗೆ ತಂಬಿಲ ಸೇವೆ, ಪರಿವಾರ ದೈವ ಸನ್ನಿಧಿಗಳಲ್ಲಿ ತಂಬಿಲ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಅಪರಾಹ್ನ 3 ರಿಂದ ರಾತ್ರಿ 7ರ ತನಕ ಭಜನೆ, 7.30ಕ್ಕೆ ದುರ್ಗಾಪೂಜೆ, ರಾತ್ರಿ 8.30ಕ್ಕೆ ರಂಗಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ.
ಮೇ 20ರಂದು ರಾತ್ರಿ 7ರಿಂದ ದೈವಗಳಿಗೆ ವರ್ಷಾವಧಿ ಪರ್ವ ಹಾಗೂ ಕೊರಗಜ್ಜ ದೈವದ ಕೋಲ ಜರಗಲಿದೆ.

ಮೇ 23ರಂದು ಸಭೆ

ಕಾಸರಗೋಡು: ಅಜಾನೂರು ಮತ್ತು ಆನಂದಾಶ್ರಮ ಕುಟುಂಬ ಆರೋಗ್ಯ ಕೇಂದ್ರಗಳಿಗೆ ಸಿಬ್ಬಂದಿಗಳ ನೇಮಕಾತಿಗಾಗಿ ಮೇ 23 ರಂದು ಬೆಳಗ್ಗೆ 10 ಗಂಟೆಗೆ ಕುಟುಂಬ ಆರೋಗ್ಯ ಕೇಂದ್ರ ಆನಂದಾಶ್ರಮದಲ್ಲಿ ಸಭೆ ನಡೆಯಲಿದೆ.

ಕೆಎಸ್ಸಾರ್ಟಿಸಿಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ: ಅಸಮಾಧಾನ

ಕಾಸರಗೋಡು: ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಬಗ್ಗೆ ಖಾಸಗಿ ಬಸ್ ಮಾಲಿಕರು ಕಳವಳ ವ್ಯಕ್ತಪಡಿಸಿದ್ದಾರೆ. ಈ ಯೋಜನೆ ಜಾರಿಗೆ ಬಂದರೆ ಖಾಸಗಿ ಬಸ್ ಉದ್ಯಮ ಕುಸಿಯುತ್ತದೆ. ಸರ್ಕಾರ ಚರ್ಚೆಗೆ ಸಿದ್ಧವಾಗ ಬೇಕೆಂದು ಖಾಸಗಿ ಬಸ್ ಮಾಲೀಕರು ಒತ್ತಾಯಿಸಿದ್ದಾರೆ. ಕರ್ನಾಟಕದಂತೆಯೇ ಮೊದಲ ಸಚಿವ ಸಂಪುಟ ಸಭೆಯಲ್ಲಿ ಚುನಾವಣಾ ಭರವಸೆ ಆದೇಶದಂತೆ ನೀಡಲು ಯುಡಿಎಫ್ ಯೋಜಿಸುತ್ತಿದೆ. ಇದಕ್ಕೂ ಮುನ್ನ ಕೆಎಸ್ಸಾರ್ಟಿಸಿ ಬಸ್‌ಗಳು ಟಿಕೆಟ್‌ಗಳಲ್ಲಿ ಪ್ರಯಾಣಿಕರು ಪುರುಷ ಅಥವಾ ಮಹಿಳೆಯೇ ಎಂಬುದನ್ನು ದಾಖಲಿಸಲು ಪ್ರಾರಂಭಿಸಿವೆ. ಈ ಹಿನ್ನೆಲೆಯಲ್ಲಿ ಖಾಸಗಿ ಬಸ್ ಮಾಲೀಕರು ಮುಂದೆ ಬಂದಿದ್ದಾರೆ. ಯುಡಿಎಫ್ ಸರ್ಕಾರ ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಘೋಷಣೆ ಮರುಪರಿಶೀಲಿಸಬೇಕು. ಖಾಸಗಿ ಬಸ್ ವಲಯಕ್ಕೆ ಹೊಸ ಪ್ಯಾಕೇಜ್ ಘೋಷಿಸಬೇಕೆಂದು ಖಾಸಗಿ ಬಸ್ ಮಾಲೀಕರು ಒತ್ತಾಯಿಸಿದ್ದಾರೆ.
ಶಾಲೆಗಳು ತೆರೆಯಲು ಕೆಲವೇ ದಿನಗಳು ಬಾಕಿ

ಪಠ್ಯಪುಸ್ತಕ ವಿತರಣೆ, ಅಧ್ಯಾಪಕರ ತರಬೇತಿ ವಿಳಂಬ: ಬಿಜೆಪಿ ಆರೋಪ

ಕಾಸರಗೋಡು: ರಾಜ್ಯದಲ್ಲಿ ನೂತನ ಶೈಕ್ಷಣಿಕ ವರ್ಷ ಆರಂಭಗೊಳ್ಳಲು ಇನ್ನು ಕೆಲವೇ ದಿನಗಳು ಮಾತ್ರ ಬಾಕಿಯಿದ್ದು ಪಠ್ಯಪುಸ್ತಕ ವಿತರಣೆ, ಅಧ್ಯಾಪಕರ ತರಬೇತಿ ಪೂರ್ಣಗೊಳ್ಳದೆ ಶಿಕ್ಷಣ ವಲಯ ಸಮಸ್ಯೆ ಎದುರಿಸುತ್ತಿದೆಯೆಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅನೂಪ್ ಆ್ಯಂಟನಿ ಆರೋಪಿಸಿದ್ದಾರೆ. ಶಾಲೆಗಳು ತೆರೆಯಲು ಕೆಲವೇ ದಿನಗಳು ಬಾಕಿಯಿರುವಂತೆ ವಿದ್ಯಾರ್ಥಿಗಳಿಗೆ ಪಾಠಪುಸ್ತಕ ಲಭಿಸದಿರಲು ಕಾರಣ ಶಿಕ್ಷಣ ಇಲಾಖೆಯ ನಿರ್ಲಕ್ಷ್ಯ ನೀತಿಯಾಗಿದೆಯೆಂದು ಅವರು ಆರೋಪಿಸಿದ್ದಾರೆ. ಅಧ್ಯಾಪಕರ ತರಬೇತಿ ಪೂರ್ಣವಾಗಿ ನಡೆಸಲು ಸಾಧ್ಯವಾಗದ ಸ್ಥಿತಿ ಉಂಟಾಗಿದೆ. ಹಾಗಿರುವಾಗ ನೂತನ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಣ ಚಟುವಟಿಕೆ ಸುಗಮಗೊಳ್ಳುವುದಾದರೂ ಹೇಗೆಂದು ಅನೂಪ್ ಆ್ಯಂಟನಿ ಪ್ರಶ್ನಿಸಿದ್ದಾರೆ. ಡಿಜಿಟಲ್ ಶಿಕ್ಷಣ ಯೋಜನೆಗೆ ಕೋಟ್ಯಂತರ ರೂ. ಖರ್ಚು ಮಾಡಿದರೂ ಮೂಲಭೂತ ಸೌಕರ್ಯ ಹಲವು ಶಾಲೆಗಳಲ್ಲಿ ಇಂದೂ ಇಲ್ಲ. ಶಿಕ್ಷಣ ವಲಯ ಮಾದರಿ ಯಾಗಿಸುವುದಾಗಿ ತಿಳಿಸಿದ ಎಡರಂಗ ಸರಕಾರ ವಿದ್ಯಾರ್ಥಿಗಳ, ಅಧ್ಯಾಪಕರ ಭವಿಷ್ಯ ಸಂದಿಗ್ಧತೆಯಲ್ಲಿ ಸಿಲುಕಿಸುವಂತೆ ಮಾಡಿದೆಯೆಂದೂ ಅವರು ಆರೋಪಿಸಿದ್ದಾರೆ.

ನೂತನವಾಗಿ ನಿರ್ಮಾಣಗೊಂಡ ಬ್ರಹ್ಮೈಕ್ಯ ಶ್ರೀ ಕೇಶವಾನಂದ ಭಾರತಿ ಸ್ಮೃತಿ ಮಂದಿರ ಲೋಕಾರ್ಪಣೆ

ಸಮಾಜಕ್ಕೆ ಸಂಸ್ಕಾರ ಬೋಧಿಸುವ ಕಲೆ ಯಕ್ಷಗಾನ: ಶೃಂಗೇರಿ ಶ್ರೀ

ಕಾಸರಗೋಡು: ಭಾರತೀಯ ಪರಂಪರೆಯಲ್ಲಿ ಕಲೆಗಳು ಕೇವಲ ಮನೋರಂಜನೆಯ ಕಲೆಗಳಾಗಿರದೆ ಸಮಾಜಕ್ಕೆ ಸಂಸ್ಕಾರವನ್ನು ಬೋಧಿಸುವ ಮಾಧ್ಯಮವಾಗಿದೆ. ಅದರಲ್ಲೂ ಯಕ್ಷಗಾನ ಕಲೆಯು, ವೇದ ಪುರಾಣ ಕಥೆಗಳನ್ನು ಆಧರಿಸಿ ಅದರ ಪ್ರಧಾನ ಸಂದೇಶವನ್ನು ಸಮಾಜಕ್ಕೆ ಸಾರುತ್ತಿದೆ. ಪ್ರಧಾನವಾಗಿ ಮಾನವರಲ್ಲಿ ಬೇಕಾಗಿರುವುದು ಸಂಸ್ಕಾರ. ಸಂಸ್ಕಾರ ಹೊಂದಿದ ಮಾನವರು ನಿರ್ಭೀತಿಯಿಂದ ಜೀವನ ನಡೆಸಬಹುದು ಎಂದು ಶೃಂಗೇರಿ ಶ್ರೀ ಶಾರದಾಪೀಠದ ಪರಮಪೂಜ್ಯ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.




ಅವರು ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನವು ಎನ್‌ಎಂಪಿಎ ಮಂಗಳೂರು (ಪೋರ್ಟ್ ಅಥಾರಿಟಿ ಸಂಸ್ಥೆಯು) ನೀಡಿದ 15 ಲಕ್ಷ ರೂಪಾಯಿಗಳ ಸಿಎಸ್‌ಆರ್ ಫಂಡ್ ಮೂಲಕ ಯಕ್ಷಗಾನ ಪರ್ಫಾರ್ಮೆನ್ಸ್ ಹಾಲ್ ನಿರ್ಮಿಸಿದೆ. ಅದರಂತೆ ನೂತನವಾಗಿ ನಿರ್ಮಾಣಗೊಂಡ ಸಭಾಮಂದಿರಕ್ಕೆ ಬ್ರಹ್ಮೈಕ್ಯ 'ಶ್ರೀ ಕೇಶವಾನಂದ ಭಾರತಿ ಸ್ಮೃತಿ ಮಂದಿರ' ಎಂಬ ಹೆಸರನಿಟ್ಟು ಶೃಂಗೇರಿ ಶ್ರೀಗಳು ಲೋಕಾರ್ಪಣೆಗೈದು ಅನುಗ್ರಹಿಸಿದರು.
ಬ್ರಹ್ಮಶ್ರೀ ಇರುವೈಲು ಕೃಷ್ಣ ದಾಸ ತಂತ್ರಿ, ಯೋಗೀಶ ಅಡಿಗ ಮತ್ತು ಬಳಗದವರು ಕುಂಬಳೆ, ಎನ್‌ಎಂಪಿಎ ಮಂಗಳೂರು ಇದರ ಉದ್ಯೋಗಿ ವಿನಯರಾಜ ಶೆಟ್ಟಿ, ಮಧೂರು ಗ್ರಾ.ಪಂ. ಅಧ್ಯಕ್ಷೆ ಸುಜ್ಞಾನಿ ಶಾನುಭೋಗ್, ಪ್ರೊ. ಎ.ಶ್ರೀನಾಥ್ ಕಾಸರಗೋಡು, ಶೀನ ಶೆಟ್ಟಿ ಕಜೆ, ಜಯಾನಂದ ಕುಮಾರ್ ಹೊಸದುರ್ಗ, ರವೀಂದ್ರ ರೈ ಸಿರಿಬಾಗಿಲು, ಶ್ಯಾಮ್ ಕುಂಚಿನಡ್ಕ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯಕರ್ತರು, ವಿವಿಧ ಭಜನಾ ಸಂಘಗಳ ಪದಾಧಿಕಾರಿಗಳು, ದಿವಂಗತ ಸಿರಿಬಾಗಿಲು ವೆಂಕಪ್ಪಯ್ಯನವರ ಮನೆಯ ಸದಸ್ಯರು ಭಾಗವಹಿಸಿ ಮಂತ್ರಾಕ್ಷತೆ ಸ್ವೀಕರಿಸಿದರು.
ಗಡಿನಾಡು ಕಾಸರಗೋಡಿನ ಸಿರಿಬಾಗಿಲಿಗೆ ಜಗದ್ಗುರುಗಳ ಪಾದಸ್ಪರ್ಶದಿಂದ ಸಿರಿಬಾಗಿಲು ಹಾಗೂ ಸಿರಿಬಾಗಿಲು ಪ್ರತಿಷ್ಠಾನವು ಪವಿತ್ರವಾಯಿತು ಎಂದು ಪ್ರತಿಷ್ಠಾನವು ಸಂತಸವನ್ನು ವ್ಯಕ್ತಪಡಿಸಿತು.

"ಸಹಕಾರ ನಿರಂತರ ಇದೆ

ಯಕ್ಷಗಾನಕ್ಕೆ ಪಾರಂಪರಿಕ ಹಿನ್ನೆಲೆ ಯಿದೆ. ಹಿರಿಯರು ನಡೆದು ಬಂದ ರೀತಿ, ಕಲೆ ಉಳಿಸಿ ಬೆಳೆಸುವಲ್ಲಿ ಅವರು ನೀಡಿದ ಕೊಡುಗೆ, ಅದನ್ನು ನೆನಪಿಸುತ್ತ ಇಂದಿನ ಜನಾಂಗ ಅದೇ ತಳಹದಿಯ ಸಂಸ್ಕಾರ ಪೋಣಿಸಿ ಮುನ್ನಡೆಸಬೇಕು. ಈ ನಿಟ್ಟಿನಲ್ಲಿ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಭಾಗವತ ರಾಮಕೃಷ್ಣ ಮಯ್ಯ ಸಿರಿಬಾಗಿಲು ನೇತೃತ್ವದಲ್ಲಿ ಈ ಸಂಸ್ಥೆ ಯಕ್ಷಗಾನ ನಡೆದು ಬಂದ ರೀತಿ, ವೇಷಭೂಷಣಗಳ ವೈಶಿಷ್ಟ್ಯ, ಕೀರ್ತಿಶೇಷ ಕಲಾವಿದರ ಕೊಡುಗೆ ಮುಂತಾದವುಗಳ ಗುರುತಿಸಿ ದಾಖಲಿಸಿ ಅಧ್ಯಯನಕ್ಕೆ ಸೀಮಿತಗೊಳಿಸಿದೆ. ಈ ರೀತಿ ಸಂಸ್ಕೃತಿ ಉಳಿಸುವ ಪ್ರಯತ್ನಕ್ಕೆ ಶ್ರೀ ಮಠದ ಸಹಕಾರ ನಿರಂತರ ಇದೆ.

● ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ

ಪ್ರತಿಷ್ಠಾನದ ಅಧ್ಯಕ್ಷ ರಾಮಕೃಷ್ಣ ಮಯ್ಯ ಸಿರಿಬಾಗಿಲು ಸ್ವಾಗತಿಸಿ, ರಾಜಾರಾಮ ರಾವ್ ಮೀಯಪದವು ವಂದಿಸಿ, ದಾಮೋದರ್ ಶರ್ಮ ನಿರೂಪಿಸಿದರು.

ಬ್ರಹ್ಮೈಕ್ಯರ ಆಶೀರ್ವಾದ ಸಂಸ್ಥೆಯ ಬೆಳವಣಿಗೆಗೆ ಕಾರಣ

ಈ ಹಿಂದಿನ ಎಡನೀರು ಮಠಾಧೀಶ ಬ್ರಹ್ಮೈಕ್ಯ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು ಸಿರಿಬಾಗಿಲು ಪ್ರತಿಷ್ಠಾನದ ಸಾಂಸ್ಕೃತಿಕ ಭವನದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹರಸಿ ಸಾಂಸ್ಕೃತಿಕ ಭವನಕ್ಕೆ, ಪ್ರತಿಷ್ಠಾನಕ್ಕೆ ಆಶೀರ್ವದಿಸಿರುವುದರಿಂದ ಸಂಸ್ಥೆ ಈಗ ಬೆಳೆಯುವಂತಾಯಿತು. ಬ್ರಹ್ಮೈಕ್ಯ ಕೇಶವಾ ನಂದ ಸಾಮೀಜಿ ಯಕ್ಷಗಾನ, ಕಲೆ, ಸಂಸ್ಕೃತಿ ಇತ್ಯಾದಿಗಳನ್ನು ಉಳಿಸಿ ಬೆಳೆಸುವಲ್ಲಿ ಗಡಿನಾಡು ಕಾಸರಗೋಡಿನಲ್ಲಿ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಈ ಹಿನ್ನೆಲೆ ಪೂಜ್ಯರ ಹೆಸರಿನಲ್ಲಿ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ನಿರಂತರ ಸಾಂಸ್ಕೃತಿಕ ಸಾಹಿತ್ಯ ಕಾರ್ಯಕ್ರಮ ನಡೆಸಲು ಶ್ರೀ ಭಾರತೀ ಸ್ಮೃತಿ ಮಂದಿರ ನಿರ್ಮಿಸಲಾಗಿದೆ.

ಬಿಎಂಎಸ್ ಜಿಲ್ಲಾ ಕಾರ್ಯಾಲಯದಲ್ಲಿ ಆಶಾ ವರ್ಕರ್ಸ್ ಸಂಘದ ಕಾಸರಗೋಡು ಸಮಾವೇಶ



ಕಾಸರಗೋಡು: ಕೇರಳ ಪ್ರದೇಶ್ ಆಶಾ ವರ್ಕರ್ಸ್ ಸಂಘ (ಬಿಎಂಎಸ್)ನ ಕಾಸರಗೋಡು ಸಮಾವೇಶವು ಬಿಎಂಎಸ್ ಕಾಸರಗೋಡು ಜಿಲ್ಲಾ ಕಾರ್ಯಾಲಯದಲ್ಲಿ ಜರಗಿತು. ಯೂನಿಯನ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಸೋನಿ ಸತ್ಯನ್ ಪತ್ತನಂತ್ತಿಟ್ಟ ಸಮ್ಮೇಳನವನ್ನು ಉದ್ಘಾಟಿಸಿದರು.
ಆರೋಗ್ಯ ಕ್ಷೇತ್ರದ ಅತ್ಯಂತ ಕೆಳಮಟ್ಟ ದಲ್ಲಿ ಕಾರ್ಯಾಚರಿಸುವ ಆಶಾ ಕಾರ್ಯಕರ್ತೆಯರಿಗೆ ಅರ್ಹವಾದ ವೇತನ ನೀಡಬೇಕು, ಆಶಾ ಕಾರ್ಯಕರ್ತೆಯರನ್ನು ನೌಕರರಾಗಿ ಅಂಗೀಕರಿಸಬೇಕು, ಅವರಿಗೆ ಗೌರವಧನಕ್ಕೆ ಇನ್‌ಸೆಂಟಿವ್‌ಗೆ ಬದಲು ವೇತನವಾಗಿ ನಿರ್ಧರಿಸಬೇಕೆಂದು ಸೋನಿ ಸತ್ಯನ್ ಸರಕಾರವನ್ನು ಒತ್ತಾಯಿಸಿದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯೂನಿಯನ್ ಅಧ್ಯಕ್ಷೆ ಜಯಲಕ್ಷ್ಮೀ ಮೀಂಜ ವಹಿಸಿದ್ದರು. ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಯಶವಂತಿ ಮಂಜೇಶ್ವರ ಶುಭಹಾರೈಸಿದರು. ಯೂನಿಯನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೀತಾ ಬಾಲಕೃಷ್ಣನ್ ವಾರ್ಷಿಕ ವರದಿ ಮಂಡಿಸಿದರು.
ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಪಿ.ದಿನೇಶ್ ಬಂಬ್ರಾಣ ಸಮಾರೋಪ ಭಾಷಣ ಮಾಡಿ, ನೂತನ ಪದಾಧಿಕಾರಿಗಳನ್ನು ಘೋಷಿಸಿದರು.

ನೂತನ ಪದಾಧಿಕಾರಿಗಳು

ನೂತನ ಅಧ್ಯಕ್ಷರಾಗಿ ಜಯಲಕ್ಷ್ಮೀ ಮೀಂಜ, ಪ್ರಧಾನ ಕಾರ್ಯದರ್ಶಿ ಗೀತಾ ಬಾಲಕೃಷ್ಣನ್, ಕೋಶಾಧಿಕಾರಿಯಾಗಿ ಸೌಮ್ಯಾ ನಾಯ್ಕ್ ಕಾಸರಗೋಡು ಅವರನ್ನು ಆರಿಸಲಾಯಿತು.
ಶಿಜು ಮಧು ಮುಳಿಯಾರ್ ಸ್ವಾಗತಿಸಿ, ದಿವ್ಯಾ ಕಾಸರಗೋಡು ವಂದಿಸಿದರು.

ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿ ಬೀದಿ ನಾಯಿಗಳ ಹಾವಳಿ: ತಡೆಗೆ ನಾಗರಿಕರ ಒಕ್ಕೊರಳ ಆಗ್ರಹ

ಕಾಸರಗೋಡು: ಕಾಸರಗೋಡು ರೈಲ್ವೆ ಪ್ಲಾಟ್‌ಫಾರ್ಮ್ ಇತ್ತೀಚಿನ ದಿನಗಳಲ್ಲಿ ಬೀದಿನಾಯಿಗಳ ಆಶ್ರಯ ತಾಣವಾಗಿ ಬದಲಾಗಿದೆ. 20ಕ್ಕೂ ಅಧಿಕ ನಾಯಿಗಳು ಇಲ್ಲಿ ಠಿಕಾಣಿ ಹೂಡಿದ್ದು, ಬರುವ ರೈಲ್ವೆ ಪ್ರಯಾಣಿಕರಲ್ಲಿ ಭಯಭೀತಿ ಸೃಷ್ಟಿಸುತ್ತಿವೆ. ರೈಲ್ವೆ ನಿಲ್ದಾಣಕ್ಕೆ ನಿತ್ಯ ನೂರಾರು ಪ್ರಯಾಣಿಕರು ಬರುತ್ತಿದ್ದು, ಅವರೆಲ್ಲರೂ ಈ ನಾಯಿಗಳಿಂದ ಸಮಸ್ಯೆ ಎದುರಿಸುವಂತಾಗಿದೆ. ಮಕ್ಕಳು, ಮಹಿಳೆಯರು ಪ್ಲಾಟ್‌ಫಾರ್ಮ್‌ನಲ್ಲಿ ಅತ್ತಿಂದಿತ್ತ ಓಡಾಡುವಾಗ ಅವರನ್ನು ಹಿಂಬಾಲಿಸುವ ಶ್ವಾನಗಳ ದಂಡು ಯಾವಾಗ ಕಚ್ಚಿಬಿಡುತ್ತವೋ ಎಂಬ ಭಯ ಪ್ರಯಾಣಿಕರನ್ನು ನಿತ್ಯ ಕಾಡುತ್ತಿದೆ. ನಾಯಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದರೂ ರೈಲ್ವೆ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿದಂತಿಲ್ಲ.

ರಾತ್ರಿ ಹಗಲು ಠಿಕಾಣಿ

ರಾತ್ರಿಹಗಲೆನ್ನದೆ ಫ್ಲಾಟ್ ಫಾರ್ಮ್‌ನಲ್ಲೇ ತಂಗಿರುವ ನಾಯಿಗಳು ಮುಂದೆ ಸಮಸ್ಯೆ ತಂದೊಡ್ಡುವುದಂತೂ ಖಚಿತ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಕೆಲವು ಮಂದಿ ಪ್ರಯಾಣಿಕರು ತಾವು ಊಟ ಮಾಡಿದ ಬಳಿಕ ಉಳಿದ ಆಹಾರವನ್ನು ಅಲ್ಲಿರುವ ನಾಯಿಗಳಿಗೆ ಹಾಕುವುದರಿಂದ ಅಲ್ಲಿ ಸೇರುವ ನಾಯಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇಲಾಖಾ ಅಧಿಕಾರಿಗಳು ಇದಕ್ಕೆ ಕಡಿವಾಣ ಹಾಕಬೇಕೆಂಬ ಆಗ್ರಹ ಜನತೆಯದ್ದು.



- ■ ಬೀದಿನಾಯಿಗಳ ಆಶ್ರಯ ತಾಣವಾಗಿದೆ ಕಾಸರಗೋಡು ರೈಲ್ವೆ ಪ್ಲಾಟ್‌ಫಾರ್ಮ್
- ■ ನಾಯಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದರೂ ಗಾಢ ಮೌನದಲ್ಲಿ ರೈಲ್ವೆ ಅಧಿಕಾರಿಗಳು
- ■ ಸೂಕ್ತ ಕ್ರಮಕ್ಕೆ ನಾಗರಿಕರ ಆಗ್ರಹ

ಕಾಞಂಗಾಡು ರೈಲ್ವೆ ನಿಲ್ದಾಣ. ನಿಲ್ದಾಣದ ಪ್ರದೇಶದಲ್ಲಿ ನೂರಕ್ಕೂ ಹೆಚ್ಚು ಬೀದಿ ನಾಯಿಗಳು ಅಲೆದಾಡುತ್ತಿರುವುದಾಗಿ ರೈಲ್ವೆ ಪ್ರಯಾಣಿಕರು ಹೇಳುತ್ತಾರೆ. ರೈಲ್ವೆ ನಿಲ್ದಾಣ ನಾಯಿಗಳು ಆಶ್ರಯಿಸು ತ್ತಿದ್ದು ಸಮೀಪದಲ್ಲೇ ಮೀನು ಮಾರುಕಟ್ಟೆ ಇರುವುದರಿಂದ ನಾಯಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ನಾಯಿಗಳ ಗುಂಪುಗಳಿಂದ ರಾತ್ರಿ ವೇಳೆ ರೈಲು ನಿಲ್ದಾಣದ ರಸ್ತೆಯಲ್ಲಿ ನಡೆದಾಡಲು ಪ್ರಯಾಣಿಕರು ಭಯಪಡುತ್ತಾರೆ.

ಕೇಳುಗುಡ್ಡೆ ದೀನದಯಾಳ್ ಹಾಲ್‌ನಲ್ಲಿ ಉಚಿತ ಫುಟ್‌ಪಲ್ಸ್ ಥೆರಪಿ ಕಾರ್ಯಕ್ರಮ



ಕಾಸರಗೋಡು: ಕಾಸರಗೋಡು — ಶ್ರೀ ಶಾಸ್ತಾ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್ ಅಯ್ಯಪ್ಪ ನಗರ ಕೇಳುಗುಡ್ಡೆ, ಕಂಪಾನಿಯೋ ಲೈಫ್ ಕೇರ್ ವೆಲ್ನೆಸ್ ಸೆಂಟರ್ ಪದವಿನಂಗಡಿ ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಉಚಿತ ಫುಟ್ ಪಲ್ಸ್ ಥೆರಪಿ ಕೇಳುಗುಡ್ಡೆ ದೀನದಯಾಳ್ ಕಮ್ಯೂನಿಟಿ ಹಾಲ್‌ನಲ್ಲಿ ಮಂಗಳವಾರ ಆರಂಭಗೊಂಡಿತು.
ಸಕ್ಕರೆ ಕಾಯಿಲೆಯಿಂದ ಬರುವ ಪಾದದ ಉರಿ ಹಾಗೂ ಕಾಲುನೋವು ನಿವಾರಣೆ ಮಾಂಸ ಖಂಡಗಳ ಸೆಳೆತದಿಂದ ಮುಕ್ತಿ ಮತ್ತು ರಕ್ತ ಪರಿಚಾಲನೆ ಮತ್ತು ನರಗಳ ಯಾವುದೇ ವಿವಿಧ ಸರಳ ಮತ್ತು ದೀರ್ಘ ಕಾಲಿನ ಸಮಸ್ಯೆ ಔಷಧಿ ರಹಿತ ಅಡ್ಡ ಪರಿಣಾಮವಿಲ್ಲದೆ ನಿವಾರಿಸಬಹುದಾಗಿದೆ. ಮೇಕ್ ಇನ್ ಇಂಡಿಯಾ ಯೋಜನೆಯಡಿಯಲ್ಲಿ ದೇಶಾದ್ಯಂತ 350 ಶಾಖೆಗಳನ್ನು ಹೊಂದಿದೆ. ಹಾಗೆಯೇ 10 ಲಕ್ಷಕ್ಕಿಂತ ಹೆಚ್ಚಿನ ಜನರು ಪರಿಹಾರ ಕಂಡುಕೊಂಡಿದ್ದಾರೆ. 30 ನಿಮಿಷ ಟೆನ್ಸ್ ಮತ್ತು ಥೆರಪಿಯಿಂದ ನಮ್ಮ ದೇಹದಲ್ಲಿ 5 ಕಿ.ಮೀ ವಾಕಿಂಗ್ ಮಾಡಿದಷ್ಟು ರಕ್ತ ಸಂಚಾರ ಮಾಡಲು ಸಹಕಾರಿಯಾಗುತ್ತದೆ.
ಅರ್ಧ ತಲೆನೋವು, ಪಾದದಲ್ಲಿ ಉರಿ, ಪಾದದಲ್ಲಿ ನೋವು , ಥೈರಾಯ್ಡ್, ಕಾಲು ಜೋಮು, ವೆರಿಕೋಸ್ ವೇನ್, ಕಾಲು ಬಾವು, ಮಂಡಿನೋವು, ನಿದ್ರಾಹೀನತೆ, ಕಾಲು ನೋವು, ಸ್ಟ್ರೋಕ್, ಸೊಂಟ ನೋವು, ಪಿರಿಯಡ್ಸ್ ಸಮಸ್ಯೆ ಈ ಥೆರಪಿಯಿಂದ ಪರಿಹಾರ ಪಡೆದಿದ್ದಾರೆ. ಉಚಿತ ಫುಟ್ ಪಲ್ಸ್ ಥೆರಪಿ ಕೇಳುಗುಡ್ಡೆಯ ಕಮ್ಯೂನಿಟಿ ಹಾಲ್‌ನಲ್ಲಿ ಮಂಗಳವಾರ ಆರಂಭಗೊಂಡಿದ್ದು ಮೇ 23ರ ವರೆಗೆ ನಡೆಯಲಿದೆ.

ಕಾಞಂಗಾಡು ನಗರಸಭೆ ಕುಟುಂಬಶ್ರೀಯಿಂದ 'ಬಾಲಸಭಾ' ಮಕ್ಕಳ ಆಟದ ಶಿಬಿರ ಆರಂಭ



ಕಾಸರಗೋಡು: ಮಕ್ಕಳ ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು, ಹೊಸ ಆಲೋಚನೆಗಳನ್ನು ಹುಡುಕಲು ಮತ್ತು ಸ್ನೇಹ ಬಲಪಡಿಸಲು ಕುಟುಂಬಶ್ರೀ ಜಿಲ್ಲಾ ಮಿಷನ್ ಆಯೋಜಿಸಿರುವ 2 ದಿನಗಳ ಬಾಲಸಭಾ ಶಿಬಿರ ಕಾಞಂಗಾಡು ನಗರಸಭೆಯಲ್ಲಿ ಬುಧವಾರ ಪ್ರಾರಂಭಗೊಂಡಿದೆ.
'ಕಳಿಕೂಟಂ' ಎಂಬ ಹೆಸರಿನಲ್ಲಿ ಈ ಶಿಬಿರವು ಕಾಞಂಗಾಡು ನಗರಸಭಾ ಸಭಾಂಗಣದಲ್ಲಿ ನಡೆಯಲಿದೆ. ನಗರಸಭಾ ಅಧ್ಯಕ್ಷ ವಿ.ವಿ. ರಮೇಶನ್ ಶಿಬಿರ ಉದ್ಘಾಟಿಸಿದರು. ನಗರಸಭಾ ಸಿಡಿಎಸ್ ಅಧ್ಯಕ್ಷೆ ಕೆ.ಪುಷ್ಪಲತಾ ಅಧ್ಯಕ್ಷತೆ ವಹಿಸಿದ್ದರು.
ಶಿಬಿರದಲ್ಲಿ ನಗರಸಭೆಯ 47 ವಾರ್ಡ್‌ಗಳಿಂದ 74 ಮಕ್ಕಳು ಭಾಗವಹಿಸುತ್ತಿದ್ದಾರೆ. ಈ ವರ್ಷದ ಕುಟುಂಬಶ್ರೀ ಬಾಲಸಭಾ ಚಟುವಟಿಕೆಗಳನ್ನು 'ಕಾರ್ಬನ್ ಸಂತುಲಿತಾ ವಸ್ಥೆ' ಎಂಬ ಪ್ರಮುಖ ಗುರಿಯೊಂದಿಗೆ ಆಯೋಜಿಸಲಾಗಿದೆ. ನೃತ್ಯ ಮತ್ತು ಹಾಡು, 'ನನ್ನ ಸ್ನೇಹಿತ ನನ್ನ ಶಕ್ತಿ' ಎಂಬ ಮಕ್ಕಳನ್ನು ಆಕರ್ಷಿಸುವ ವಿವಿಧ ವಿಷಯಗಳ ಕುರಿತು ತರಬೇತಿ ತರಗತಿ ನಡೆಸಲಾಯಿತು.

ಬಾಲಸಭಾ ಸದಸ್ಯ ಕೆ.ತೇಜಗೆ ಸನ್ಮಾನ

ರಾಜ್ಯ ಮಕ್ಕಳ ಸಂಸತ್ತಿನಲ್ಲಿ ಭಾಗವಹಿಸಿದ್ದ ಬಾಲಸಭಾ ಸದಸ್ಯ ಕೆ.ತೇಜ ಅವರನ್ನು ಸನ್ಮಾನಿಸಲಾಯಿತು. ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಅತಿಥಿಯಾಗಿ ಭಾಗವಹಿಸಿದ್ದರು.
ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್, ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಪಿ. ಜಾಫರ್, ಎಂ. ಸುಮತಿ, ಮಹಮ್ಮದ್ ಮುರಿಯನಾವಿ, ಫೌಜಿಯಾ ಶೆರೀಫ್, ಸಿ.ವಿಜಯನ್, ನಗರ ಸಭಾ ಸದಸ್ಯ ಎಂ.ಪ್ರಶಾಂತ್ ಮಾತನಾಡಿದರು. ನಗರಸಭೆಯ ಸೆಕೆಂಡ್ ಸಿಡಿಎಸ್ ಅಧ್ಯಕ್ಷೆ ಪಿ.ವಿ.ರತ್ನಾವತಿ ಸ್ವಾಗತಿಸಿ, ಬ್ಲಾಕ್ ಸಂಯೋಜಕಿ ಕೆ.ಜಿಜಿ ವಂದಿಸಿದರು. ಎ.ವಿ.ಸಂತೋಷ್ ಕುಮಾರ್, ವಿಜಯ ಕುಮಾರ್ ಪನೆಯಾಲ್, ಜಿತಿನ್ ಕೊಡಕ್ಕಾಡ್ , ಅನುಶ್ರೀ ಮುಳಕ್ಕೋಮ್ ತರಬೇತಿಯ ನೇತೃತ್ವ ವಹಿಸಿದ್ದರು.

ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕ ಸಂಘದ ಕೇಂದ್ರ ಸಮಿತಿಯ ಮಹಾಸಭೆ

ಕಾಸರಗೋಡು: ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘ ಕಾಸರಗೋಡು ಇದರ ಕೇಂದ್ರ ಸಮಿತಿ ಮಹಾಸಭೆ ಬುಧವಾರ ಬೀರಂತಬೈಲಿನಲ್ಲಿರುವ ಕನ್ನಡ ಅಧ್ಯಾಪಕ ಭವನದಲ್ಲಿ ನಡೆಯಿತು. ಕೇಂದ್ರ ಸಮಿತಿ ಅಧ್ಯಕ್ಷ ಸುಕೇಶ್ ಎ. ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶೆಟ್ಟಿ ವಾರ್ಷಿಕ ವರದಿ ವಾಚಿಸಿ, ಕೋಶಾಧಿಕಾರಿ ಶರತ್ ಕುಮಾರ್ ಲೆಕ್ಕಪತ್ರ ಮಂಡಿಸಿದರು.
ಬಳಿಕ ಸಂಘಟನಾತ್ಮಕ ಚರ್ಚೆ ನಡೆಯಿತು. ಕುಂಬಳೆ ಉಪಜಿಲ್ಲಾಧ್ಯಕ್ಷ ಶ್ರೀಹರ್ಷ ಎಂ.ಪಿ., ಬೇಕಲ - ಹೊಸದುರ್ಗ ಉಪ ಜಿಲ್ಲಾ ಸಮಿತಿ ಅಧ್ಯಕ್ಷ ವಿಠಲ ಅಡ್ವಳ, ಕಾಸರಗೋಡು ಉಪ ಜಿಲ್ಲಾಧ್ಯಕ್ಷ ಕುಶ ಪಿ.ಎಲ್., ಪೂರ್ಣಿಮಾ ಎಂ., ಸುರೇಖಾ ಕೆ. ಮಂಜೇಶ್ವರ ಉಪಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಎಂ., ಕಿಶೋರ್ ಕುಮಾರ್ ಚರ್ಚೆಯಲ್ಲಿದ್ದರು. ಕೇಂದ್ರ ಸಮಿತಿ ಉಪಾಧ್ಯಕ್ಷ ಶ್ರೀಲತಾ ಕೆ., ಜಯಪ್ರಶಾಂತ್ ಪಾಲೆಂಗ್ರಿ, ಪ್ರದೀಪ್ ಕೆ.ವಿ. ಉಪಸ್ಥಿತರಿದ್ದರು.
ಬಳಿಕ ನೂತನ ಸಮಿತಿಗೆ ಪದಾಧಿಕಾರಿ ಗಳ ಆರಿಸಲಾಯಿತು. ಅಧ್ಯಕ್ಷರಾಗಿ ಮಂಜೇಶ್ವರ ಜಿಡಬ್ಲ್ಯೂಎಲ್‌ಪಿ ಶಾಲೆ ಮುಖ್ಯ ಶಿಕ್ಷಕ ಸುಕೇಶ್, ಪ್ರಧಾನ ಕಾರ್ಯದರ್ಶಿಯಾಗಿ ಎಎಲ್‌ಪಿ ಶಾಲೆ ಕಿಳಿಂಗಾರಿನ ಶಿಕ್ಷಕ ಪ್ರದೀಪ್‌ಕುಮಾರ್ ಶೆಟ್ಟಿ ಪುನರಾಯ್ಕೆಯಾಗಿದ್ದಾರೆ. ಕೋಶಾಧಿಕಾರಿಯಾಗಿ ಬೋವಿಕ್ಕಾನ ಎಯುಪಿ ಶಾಲೆ ಪ್ರದೀಪ್ ಕೆ.ವಿ., ಸಹ ಕೋಶಾಧಿಕಾರಿಯಾಗಿ ಕುಂಟಿಕಾನ ಎಎಸ್‌ಬಿ ಶಾಲೆ ಶಿಕ್ಷಕ ಶರತ್ ಕುಮಾರ್ ಅವಿರೋಧ ಆಯ್ಕೆಯಾದರು.



ಉಪಾಧ್ಯಕ್ಷರಾಗಿ ಕೂಡ್ಲು ಶಾಲೆಯ ಶಿಕ್ಷಕಿ ಶ್ರೀಲತಾ ಕೆ., ವಿದ್ಯಾರಣ್ಯ ಎ.ಎಲ್.ಪಿ. ಶಾಲೆ ಬೆರಿಪದವಿನ ಮುಖ್ಯ ಶಿಕ್ಷಕ ಉಮೇಶ್ ಕೆ., ಇಚ್ಲಂಗೋಡು ಎಎಲ್‌ಪಿ ಶಾಲೆ ಮುಖ್ಯ ಶಿಕ್ಷಕ ಜಯರಾಮ ಸಿ.ಎಚ್., ಚಂದ್ರಗಿರಿ ಶಾಲಾ ಮುಖ್ಯ ಶಿಕ್ಷಕಿ ಯಶೋಧಾ, ಕಾರ್ಯದರ್ಶಿಗಳಾಗಿ ಕುಳೂರು ಜಿಎಲ್‌ಪಿ ಶಾಲಾ ಶಿಕ್ಷಕ ಜಯಪ್ರಶಾಂತ್ ಪಾಲೆಂಗ್ರಿ, ಕಾರಡ್ಕ ಜಿಎಚ್‌ಎಸ್ ಶಾಲೆ ಶಿಕ್ಷಕ ಡಾ.ಶ್ರೀಶ ಕುಮಾರ್ ಪಂಚಿತ್ತಡ್ಕ, ಆನೆಕಲ್ಲು ಎಯುಪಿ ಶಾಲೆ ಶಿಕ್ಷಕ ಜೀವನ್‌ಕುಮಾರ್, ಬೆಳ್ಳೂರು ಜಿಎಚ್‌ಎಸ್ ಶಾಲೆ ಶಿಕ್ಷಕ ನವೀನ್‌ಕುಮಾರ್ ಪಿ., ಸಂಘಟನಾ ಕಾರ್ಯದರ್ಶಿಯಾಗಿ ಮಂಜೇಶ್ವರ ಜಿಡಬ್ಲ್ಯೂಎಲ್‌ಪಿ ಶಾಲೆ ಶಿಕ್ಷಕ ಜಬ್ಬಾರ್ ಬಿ., ಅಧಿಕೃತ ವಕ್ತಾರರಾಗಿ ಬಂದಡ್ಕ ಜಿಎಚ್‌ಎಸ್ ಶಾಲಾ ಶಿಕ್ಷಕ ಬಾಬು ಕೆ., ಲೆಕ್ಕ ಪರಿಶೋಧಕರಾಗಿ ಪನೆಯಾಲ ಜಿಎಲ್‌ಪಿ ಶಾಲೆ ಶಿಕ್ಷಕ ಪುರುಷೋತ್ತಮ ಕುಲಾಲ್, ಕಾಸರಗೋಡು ಜಿಎಚ್‌ಎಸ್ ಶಾಲಾ ಶಿಕ್ಷಕ ಅಬ್ದುಲ್ ರಹಿಮಾನ್ ಅವಿರೋಧವಾಗಿ ಆಯ್ಕೆಯಾದರು.
ಪ್ರದೀಪ್‌ಕುಮಾರ್ ಶೆಟ್ಟಿ ಸ್ವಾಗತಿಸಿ, ಪ್ರದೀಪ್ ಕೆ.ವಿ. ವಂದಿಸಿದರು. ಜಯಪ್ರಶಾಂತ್ ಪಾಲೆಂಗ್ರಿ ಕಾರ್ಯಕ್ರಮ ನಿರೂಪಿಸಿದರು.

ಮೇ 21ರಿಂದ ಕಾಸರಗೋಡಿನಲ್ಲಿ ಕನ್ನಡ ನಾಟಕ ಪ್ರದರ್ಶನ: ಸಂಘಟನಾ ಸಭೆ



ಕಾಸರಗೋಡು: ಬೆಂಗಳೂರಿನ ರಂಗ ಶಂಕರ ನಡೆಸುವ ಕನ್ನಡ ನಾಟಕೋತ್ಸವವು ಮೇ ತಿಂಗಳ 21 ರಿಂದ ಮೇ 24 ರವರೆಗೆ ಕಾಸರಗೋಡು ಪಿಲಿಕುಂಜೆ ಟೌನ್ ಹಾಲ್‌ನಲ್ಲಿ ಪ್ರತೀ ದಿನ ಸಂಜೆ 7 ಗಂಟೆಯಿಂದ ನಾಟಕ ಪ್ರದರ್ಶನಗೊಳ್ಳಲಿದೆ. ಈ ಕುರಿತು ಕರಂದಕ್ಕಾಡ್ ವಿಕಾಸ್ ಭವನದಲ್ಲಿ ಸಂಘಟನಾ ಸಭೆ ಜರಗಿತು.
ಥಿಯೆಟ್ರಿಕ್ಸ್ ಉಪಾಧ್ಯಕ್ಷ ವಲ್ಸನ್ ಮಾಸ್ತರ್ ಅಧ್ಯಕ್ಷತೆ ವಹಿಸಿದ್ದರು. ಸವಾಕ್ ಜಿಲ್ಲಾಧ್ಯಕ್ಷ ಹಾಗೂ ನಾಟಕೋತ್ಸವದ ಸಂಚಾಲಕ ಉಮೇಶ್ ಎಂ. ಸಾಲ್ಯಾನ್ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ ಪ್ರಸ್ತಾವನೆಗೈದರು.
ಸಭೆಯಲ್ಲಿ ಟಿ.ವಿ.ಗಂಗಾಧರ, ನಾರಾಯಣ ಶೆಟ್ಟಿ, ರಂಗ ನಿರ್ದೇಶಕ ಉದಯ ಸಾರಂಗ್, ಸಾಯಿಕೃಷ್ಣ ರಂಗಕರ್ಮಿ ಅಶೋಕ್ ಕೊಡ್ಲಮೊಗರು, ದೇವಿಪ್ರಸಾದ್, ದಿವಾಕರ, ಕವಿ ಶ್ರೀನಿವಾಸ್ ಪೆರಿಕ್ಕಾನ, ಜಯಂತಿ ಸುವರ್ಣ, ಸ್ಕೂಲ್ ಆಫ್ ಡ್ರಾಮಾದ ಅನಂತಕೃಷ್ಣ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ಸವಾಕ್ ಜಿಲ್ಲಾ ಕಾರ್ಯದರ್ಶಿ ಗಂಗಾಧರ ವಂದಿಸಿದರು.

ಮೇ 15ರೊಳಗೆ ಹೆಸರು ನೋಂದಾಯಿಸಿ

ಕನ್ನಡ, ಮಲಯಾಳಂ, ತುಳು ರಂಗ ಗೀತೆಗಳ, ಏಕಪಾತ್ರಾಭಿನಯ ಸ್ಪರ್ಧೆಗಳನ್ನು ಜೂನಿಯರ್ (17 ವರ್ಷ ಕೆಳಗಿನವರು) , ಸೀನಿಯರ್ ವಿಭಾಗದಲ್ಲಿ (17ವರ್ಷ ಮೇಲ್ಪಟ್ಟವರು) ಜರಗ ಲಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಮೇ 15ರೊಳಗೆ ಹೆಸರು ನೋಂದಾಯಿಸಬೇಕು .

ಬೆದ್ರಂಪಳ್ಳ ಬನ- ಪಾಟ್ಲದಳ ರಸ್ತೆ ಅಭಿವೃದ್ಧಿ ಕಾಮಗಾರಿ ಕಳಪೆ: ಆರೋಪ

ಅಧಿಕಾರಿಗಳಿಂದ ಸ್ಥಳ ಪರಿಶೀಲನೆ: ಗುತ್ತಿಗೆದಾರನ ವಿರುದ್ಧ ತನಿಖೆ?

ಪೆರ್ಲ: ಎಣ್ಮಕಜೆ ಪಂಚಾಯತ್‌ನ 16ನೇ ವಾರ್ಡ್‌ನ ಬೆದ್ರಂಪಳ್ಳ ಬನ - ಬಲ್ತಕಲ್ಲು - ಪಾಟ್ಲದಳ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ ಕಳಪೆಯಾಗಿದ್ದು ಕಾಮಗಾರಿಯಲ್ಲಿ ಗುತ್ತಿಗೆದಾರ ಭ್ರಷ್ಟಾಚಾರ ಎಸಗಿರುವುದಾಗಿ ಆರೋಪಿಸಿ ನಾಗರಿಕರು ಕಾಮಗಾರಿಗೆ ತಡೆಯೊಡ್ಡಿದರು.
ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ 2023-24ನೇ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಸುಮಾರು 70 ಲ.ರೂ.ವನ್ನು ಯೋಜನೆಗೆ ಮೀಸಲಿರಿಸಿ ಉತ್ತಮ ರಸ್ತೆ ನಿರ್ಮಾಣದ ಉದ್ದೇಶದಿಂದ ಪೆರ್ಲದ ವ್ಯಕ್ತಿಯೊಬ್ಬರ ಮಾಲಕತ್ವದ ಕಂಪೆನಿಯೊಂದಕ್ಕೆ ಗುತ್ತಿಗೆ ನೀಡಲಾಗಿತ್ತು. ಪ್ರಸಕ್ತ ಕಳಪೆ ಡಾಮರು, ಜಲ್ಲಿಕಲ್ಲು ಉಪಯೋಗಿಸಿ ಯೋಜನೆಯಲ್ಲಿ ಸೂಚಿಸಿದ ರೀತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸದಿರುವುದರಿಂದ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.
ಈ ಬಗ್ಗೆ ಲೋಕೋಪಯೋಗಿ ಇಲಾಖೆ ಇಂಜಿನಿಯರ್, ಬ್ಲಾಕ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ದೂರು ನೀಡಲಾಗಿದ್ದು, ಅದರಂತೆ ಸ್ಥಳ ಸಂದರ್ಶಿಸಿ ಪರಿಶೀಲನೆ ನಡೆಸಿ ಗುತ್ತಿಗೆದಾರನ ವಿರುದ್ಧ ತನಿಖೆ ಕೈಗೆತ್ತಿಕೊಂಡಿದ್ದಾರೆ.



ಶಾಸಕರ ಅನುದಾನ ಮಂಜೂರಾಗಿತ್ತು

ಈ ಪ್ರದೇಶದ ಬಹುಪಯೋಗಿ ರಸ್ತೆ ಇದಾಗಿದ್ದು, ರಸ್ತೆಯ ಜಲ್ಲಿಕಲ್ಲುಗಳು ಎದ್ದು ಹೋಗಿ ಹೊಂಡ ಗುಂಡಿಗಳಿಂದ ಕೂಡಿದ್ದ ರಸ್ತೆಯನ್ನು ವಾರ್ಡ್ ಸದಸ್ಯರಾದ ರಾಧಾಕೃಷ್ಣ ನಾಯಕ್ ಶೇಣಿ ಅವರು ಮುತುವರ್ಜಿ ವಹಿಸಿ ಶಾಸಕರ ಮೂಲಕ ಯೋಜನೆಗೆ ಮೊತ್ತ ಮಂಜೂರುಗೊಳಿಸಿದ್ದು, ಅದರಂತೆ 2025 ಜೂನ್ 23ರಂದು ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗಿತ್ತು. ಆದರೆ ನಡೆದ ಕಾಮಗಾರಿ ಮಾತ್ರ ಕಳಪೆಯಾಗಿದೆ.

ಯುವಜನ ಸಂಘಗಳಿಗೆ ಸಂಗೀತ ವಾದ್ಯಗಳ ವಿತರಣೆ

ಕಾಸರಗೋಡು: ಕಾಞಂಗಾಡು ಬ್ಲಾಕ್ ಪಂಚಾಯತ್‌ನ ವಾರ್ಷಿಕ ಯೋಜನೆ ಭಾಗವಾಗಿ ಪರಿಶಿಷ್ಟ ಜಾತಿಗಳ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶದಿಂದ ಯುವಜನ ಸಂಘಗಳಿಗೆ ಸಂಗೀತ ವಾದ್ಯ ಉಪಕರಣಗಳನ್ನು ವಿತರಿಸಲಾಯಿತು.
ಈ ಯೋಜನೆ ಯನ್ನು 2025-26ನೇ ವಾರ್ಷಿಕ ಯೋಜನೆಯಲ್ಲಿ ಸೇರಿಸುವ ಮೂಲಕ ಕಾರ್ಯಗತಗೊಳಿಸಲಾಯಿತು. ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ ಅವರು ವಿತರಣೆಯನ್ನು ಉದ್ಘಾಟಿಸಿದರು.
ಮಡಿಕ್ಕೈ ಗ್ರಾ.ಪಂ.ನ ಶಿವೋಹಮ್ ಸಂಗೀತ ಸಂಘ, ಪುಲ್ಲೂರು ಪೆರಿಯ ಪಂ.ನ ಚಿಲಂಬು ಸಂಗೀತ ಸಂಘ, ಅಜಾನೂರು ಪಂಚಾಯತ್‌ನ ಚಕ್ಲಿಯಾ ಸಮುದಾಯ ಸಂಘ ಮತ್ತು ಪಳ್ಳಿಕೆರೆ ಪಂಚಾಯತ್‌ನ ಎಸ್.ಕೆ.ಸಿ.ಸಂಗೀತ ಸಂಘಗಳಿಗೆ ಮೊದಲ ಹಂತದಲ್ಲಿ ವಾದ್ಯಗಳನ್ನು ಒದಗಿಸಲಾಯಿತು. ವಿವಿಧ ವರ್ಷಗಳಲ್ಲಾಗಿ ಒಟ್ಟು 11 ಗುಂಪುಗಳು ಈ ಯೋಜನೆಯ ಪ್ರಯೋಜನ ಪಡೆದಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.
ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಪಿ.ಎಚ್.ಮುಹಮ್ಮದ್ ಹನೀಫ ಅಧ್ಯಕ್ಷತೆ ವಹಿಸಿದ್ದರು. ಬ್ಲಾಕ್ ಪಂಚಾಯತ್ ಉಪಾಧ್ಯಕ್ಷ ಪಿ.ಗೋವಿಂದನ್, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಎಂ.ಪಿ.ಜಯಶ್ರೀ, ಬ್ಲಾಕ್ ಪಂಚಾಯತ್ ಸದಸ್ಯರಾದ ನಾರಾಯಣನ್ ಮಡಿಕ್ಕಲ್, ಬಿಂದು ಕೆ., ಬ್ಲಾಕ್ ಪಂಚಾಯತ್ ಕಾರ್ಯದರ್ಶಿ ಕೆ.ಪಿ.ರಜಿತಾ, ಎಸ್‌ಸಿಡಿಒ ಪಿ.ಬಿ.ಬಶೀರ್ ಮತ್ತಿತರರಿದ್ದರು.



ನಮ್ಮ ಉಡುಪಿ

ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಗುರುವಾರ 14, ಮೇ 2026

ಆಡಳಿತ, ವಿರೋಧ ಪಕ್ಷಗಳ ನಡುವೆ ತೀವ್ರ ಸಂಘರ್ಷಕ್ಕೆ ಕಾರಣವಾಗಿದ ನಿವೇಶನ ಮಂಜೂರು ವಿಚಾರ

ಬಿಜೆಪಿ ಪ್ರತಿಭಟನೆ ನಡುವೆ ಕಾಂಗ್ರೆಸ್ ಕಚೇರಿಗೆ ಶಂಕುಸ್ಥಾಪನೆ

ಕುಂದಾಪುರ: ಕುಂದಾಪುರದ ಹೃದಯಭಾಗದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕಾಗಿ ಸರ್ಕಾರಿ ಜಾಗ ಮಂಜೂರು ಮಾಡಿರುವುದು ಈಗ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ತೀವ್ರ ಸಂಘರ್ಷಕ್ಕೆ ಕಾರಣವಾಗಿದೆ. ಒಂದು ಕಡೆ ಬಿಜೆಪಿ ಇದನ್ನು ಸರ್ಕಾರಿ ಜಾಗದ ದುರ್ಬಳಕೆ ಎಂದು ಪ್ರತಿಭಟಿಸಿದರೆ, ಮತ್ತೊಂದೆಡೆ ಕಾಂಗ್ರೆಸ್ ಇದು ಕಾನೂನುಬದ್ಧ ಪ್ರಕ್ರಿಯೆ ಎಂದು ಸಮರ್ಥಿಸಿಕೊಂಡಿದೆ.

ಬಿಜೆಪಿ ಆಕ್ರೋಶ ಮತ್ತು ಬೃಹತ್ ಪ್ರತಿಭಟನೆ

ಕುಂದಾಪುರ ನಗರದ ಪ್ರಮುಖ ಜಾಗವನ್ನು ಕಾಂಗ್ರೆಸ್ ಕಚೇರಿಗೆ ಮಂಜೂರು ಮಾಡಿರುವುದನ್ನು ಖಂಡಿಸಿ ಭಾರತೀಯ ಜನತಾ ಪಕ್ಷದ ಕುಂದಾಪುರ ಮಂಡಲದ ವತಿಯಿಂದ ಶಾಸ್ತ್ರಿ ಸರ್ಕಲ್ ಬಳಿ ಬೃಹತ್ ಪ್ರತಿಭಟನೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು, ಸಾರ್ವಜನಿಕ ಹಿತಾಸಕ್ತಿಯನ್ನು ಬಲಿಗೊಟ್ಟು ರಾಜಕೀಯ ಪಕ್ಷಕ್ಕೆ ಜಾಗ ನೀಡಿರುವುದನ್ನು ತಕ್ಷಣ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.



ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಬೆಲೆಬಾಳುವ ಪರಂಬೋಕು ಜಾಗವನ್ನು ತರಾತುರಿಯಲ್ಲಿ ನೀಡಲಾಗಿದೆ ಎಂದು ಟೀಕಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಶೆಟ್ಟಿ ಕುತ್ಯಾರು, ಮಾಜಿ ಅಧ್ಯಕ್ಷ ಶಂಕರ ಅಂಕದಕಟ್ಟೆ, ರಾಜೇಶ ಕಾವೇರಿ, ಮುಖಂಡರಾದ ಸುರೇಶ ಶೆಟ್ಟಿ ಕಾಡೂರು, ಶ್ರೀಕಾಂತ ನಾಯಕ್, ಜಿಲ್ಲಾ ಯುವಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ವಿಠಲ ಪೂಜಾರಿ, ಸುನೀಲ್ ಶೆಟ್ಟಿ ಬಾರ್ಕೂರು ಶಾಂತಾರಾಮ ಶೆಟ್ಟಿ, ಮೋಹನದಾಸ ಶೆಣೈ, ಪ್ರಭಾಕರ ಎ., ಗುಣರತ್ನ, ಆಶೋಕ ಪೂಜಾರಿ, ಭಾಸ್ಕರ ಬಿಲ್ಲವ, ಸುಧೀರ ಕೆ.ಎಸ್., ಸತೀಶ ಪೂಜಾರಿ ಹಾಗೂ ಮಂಡಲ ಅಧ್ಯಕ್ಷ ಸುರೇಶ ಶೆಟ್ಟಿ ಗೋಪಾಡಿ ಸೇರಿದಂತೆ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಭಾಗವಹಿಸಿದ್ದರು. ನಂತರ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಕಾಂಗ್ರೆಸ್ ಸಮರ್ಥನೆ ಮತ್ತು ಶಂಕುಸ್ಥಾಪನೆ

ಮತ್ತೊಂದೆಡೆ, ಕುಂದಾಪುರ ಬ್ಲಾಕ್ ಕಾಂಗ್ರೆಸ್ ನೂತನ ಕಚೇರಿ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದ ಸಣ್ಣ ನೀರಾವರಿ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ಬಿಜೆಪಿಯ ಟೀಕೆಗಳನ್ನು ತಳ್ಳಿ ಹಾಕಿದರು. ಕಾಂಗ್ರೆಸ್ ಕಚೇರಿಗೆ ಜಾಗವನ್ನು ಕಾನೂನುಬದ್ಧವಾಗಿಯೇ ಪಡೆಯಲಾಗಿದೆ. ಬಿಜೆಪಿ ಅಧಿಕಾರದಲ್ಲಿದ್ದಾಗ ತನ್ನ ಅಂಗಸಂಸ್ಥೆಗಳಿಗೆ ಅಕ್ರಮವಾಗಿ ಜಾಗ ನೀಡಿದೆ ಎಂದು ಅವರು ಪ್ರತ್ಯಾರೋಪ ಮಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ಮಾಜಿ ಸಚಿವ ಕೆ. ಜಯಪ್ರಕಾಶ ಹೆಗ್ಡೆ, ಮುಖಂಡ ದಿನೇಶ್ ಹೆಗ್ಡೆ ಮೊಳಹಳ್ಳಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕುಮಾರ ಕೊಡವೂರು ಮತ್ತು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ. ಎ. ಗಫೂರ್ ಮಾತನಾಡಿದರು. ವೇದಿಕೆಯಲ್ಲಿ ಪ್ರಮುಖರಾದ ದೇವಕಿ ಸಣ್ಣಯ್ಯ, ಕಿಶನ್ ಹೆಗ್ಡೆ, ರಾಜು ಪೂಜಾರಿ, ಶಿವರಾಮ ಶೆಟ್ಟಿ ಮಲ್ಯಾಡಿ, ಶಂಕರ ಕುಂದರ, ಉದಯ ಕುಮಾರ್ ಶೆಟ್ಟಿ ಮುನಿಯಾಲು, ಜ್ಯೋತಿ ಹೆಬ್ಬಾರ್, ವಿನೋದ ಕ್ರಾಸ್ಟೊ, ಹರೀಶ ಕಿಣಿ, ಬಿ. ಹಿರಿಯಣ್ಣ, ಸದಾನಂದ ಶೆಟ್ಟಿ, ಸತೀಶ ಕಿಣಿ, ಮುಸ್ತಾಕ್ ಅಹಮ್ಮದ್, ವಿಕಾಸ್ ಹೆಗ್ಡೆ, ಕೃಷ್ಣದೇವ ಕಾರಂತ ಹಾಗೂ ಪ್ರಸನ್ನಕುಮಾರ್ ಉಪಸ್ಥಿತರಿದ್ದರು. ಕುಂದಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್. ಹರಿಪ್ರಸಾದ ಶೆಟ್ಟಿ ಕಾನ್ಕಿ ಕಾರ್ಯಕ್ರಮವನ್ನು ನಿರ್ವಹಿಸಿದರು.

ಸುತ್ತ ಮುತ್ತ

ಮೇ 14: ಹಸಿರು ಹೊರೆ ಕಾಣಿಕೆ ಸಮರ್ಪಣೆ

ಉಡುಪಿ: ಕೊಡವೂರು ಶ್ರೀ ಶಂಕರ ನಾರಾಯಣ ದೇವಸ್ಥಾನದಲ್ಲಿ ಪ್ರಸಾದ್ ರಾಜ್ ನೇತೃತ್ವದಲ್ಲಿ ನಡೆಯಲಿರುವ ಮಹಾರುದ್ರ ಯಾಗದ ಪ್ರಯುಕ್ತ ಮೇ 14ರಂದು ಹಸಿರು ಹೊರೆ ಕಾಣಿಕೆ ಸಮರ್ಪಣೆಯಾಗಲಿದೆ. ಮೇ 14ರಂದು ಸಂಜೆ 4 ಗಂಟೆಗೆ ಮಲ್ಪೆ ಅಯ್ಯಪ್ಪ ಮಂದಿರದ ಬಳಿ ಉಡುಪಿ ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಶ್ರೀಪಾದರು ಭವ್ಯ ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಮಲ್ಪೆಯಿಂದ ಕೊಡವೂರು ದೇವಸ್ಥಾನವರೆಗೆ ಭವ್ಯ ಹೊರೆಕಾಣಿಕೆ ಮೆರವಣಿಗೆ ನಡೆಯಲಿದೆ. ಮೇ. 14ರಂದು ರಾತ್ರಿ 8 ಗಂಟೆಯಿಂದ ಕೃಷ್ಣ ಕಲಾವಿದರು ಕಿನ್ನಿಮುಲ್ಕಿ ಇವರಿಂದ ಆನದ ಮನದಾನ ತುಳು ಹಾಸ್ಯಮಯ ನಾಟಕ ನಡೆಯಲಿದೆ.

ಹಾನಿಯಾಗಿರುವ ಸ್ವಾಗತ ಕಮಾನು ತೆರವಿಗೆ ಮನವಿ

ಉಡುಪಿ: ರಾತ್ರಿ ಸುರಿದ ಭಾರೀ ಗಾಳಿ ಮಳೆಗೆ ಉಡುಪಿಯ ರಾಷ್ಟ್ರೀಯ ಹೆದ್ದಾರಿಗೆ ಅಳವಡಿಸಿರುವ ಕಾರ್ಯಕ್ರಮವೊಂದರ ಸ್ವಾಗತ ಕಮಾನಿಗೆ ಹಾನಿಯಾಗಿದ್ದು, ಬೀಳುವ ಸ್ಥಿತಿಯಲ್ಲಿದೆ. ವಾಹನ ಸಂಚಾರ ಹಾಗೂ ಜನ ನಿಬಿಡ ಪ್ರದೇಶದಲ್ಲಿ ವಾಲಿಕೊಂಡಿರುವ ಕಮಾನಿನಿಂದ ಅಪಾಯ ಕಟ್ಟಿಟ್ಟ ಬುತ್ತಿ. ಹಾಗಾಗಿ ಬಿದ್ದು ಅನಾಹುತವಾಗುವ ಮೊದಲು ಸಂಬಂಧಪಟ್ಟವರು ಇದನ್ನು ತೆರವುಗೊಳಿಸಬೇಕೆಂದು ಉಡುಪಿ ಜಿಲ್ಲಾ ನಾಗರಿಕ ಸಮಿತಿಯ ಸಂಚಾಲಕ ನಿತ್ಯಾನಂದ ಒಳಕಾಡು ಒತ್ತಾಯಿಸಿದ್ದಾರೆ.

ಕನಕ ಕವನ ಸ್ಪರ್ಧೆ

ಉಡುಪಿ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯ ಮಟ್ಟದ ಕನಕ ಕವನ ಸ್ಪರ್ಧೆ ಏರ್ಪಡಿಸಲು ಉದ್ದೇಶಿಸಿದ್ದು 18 ರಿಂದ 30 ವರ್ಷದೊಳಗಿನವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಭಾಗವಹಿಸುವ ಸ್ಪರ್ಧಿಗಳು ಸ್ವ-ರಚಿತ ಕವನವನ್ನು ಸಲ್ಲಿಸಲು ಜೂನ್ 22 ಕೊನೆಯ ದಿನ. ಅರ್ಜಿ ಮತ್ತು ಕವನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056 ಇಲ್ಲಿಗೆ ಅಂಚೆ, ಕೊರಿಯರ್, ಇ-ಮೇಲ್ ಅಥವಾ ಮುದ್ದಾಂ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://kanakadasare-searchcenter.karnataka.gov.in/ ಅಥವಾ ಮೊ.ನಂ: 9743545865 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಕೃಷಿ ಉಡೀಸ್

ಗಣೇಶ ಹೆಬ್ಬಾರ್ ಎಂಬವರ ತೋಟದಲ್ಲಿ ಬೃಹತ್ ಹಲಸಿನ ಮರ ಸಹಿತ 25 ಅಡಕೆ ಮರಗಳು ಧರಾಶಾಯಿಯಾಗಿವೆ. ಬೆಳ್ತಂಗಡಿ, ಲಾಯಿಲ, ಅಗಳಿ ರಸ್ತೆಯ ಬೇಲಾಜೆ ಎಂಬಲ್ಲಿ ಬೃಹತ್ ಗಾತ್ರದ ಮರ ರಸ್ತೆಗೆ ಬಿದ್ದು ಸಂಚಾರ ವ್ಯತ್ಯಯ ಉಂಟಾಗಿತ್ತು. ಕರಂಬಾರು ಗ್ರಾಮದ ಕಾಜಿಮುಗೇರು ಪರಿಸರದ ಸಂತೋಷ್ ಕೇಳ್ಕರ್ ಎಂಬವರ ಮನೆಯ ಮುಂಭಾಗದ ಶೀಟುಗಳು ಗಾಳಿಗೆ ಹಾರಿ ಹೋಗಿವೆ. ಇಲ್ಲಿನ ಶಂಕರ ಹೆಬ್ಬಾರ್, ವಿವೇಕ ಕೇಳ್ಕರ್, ಸುಭಾಷ್ ಬಾಪಟ್ ಸೇರಿದಂತೆ ಮತ್ತಿತರ ಕೃಷಿಕರ ತೋಟಗಳಲ್ಲಿ ನೂರಾರು ಅಡಕೆ ಮರಗಳು ನೆಲಕಚ್ಚಿವೆ. ಶಿರ್ಲಾಲು ಗ್ರಾಮದ ಮನಿಲಬೈಲು, ಮಲವಂತಿಗೆ ಗ್ರಾಮದ ದಿಡುಪೆ, ಬಂಗಾಡಿ, ಪರಾರಿ ಮೊದಲಾದ ಭಾಗಗಳಲ್ಲಿ ಗಾಳಿಯ ರಭಸಕ್ಕೆ ಅಡಕೆ, ರಬ್ಬರ್ ಗಿಡಗಳಿಗೆ ಹಾನಿ ಉಂಟಾಗಿದೆ.

ಉಪ್ಪಳದಲ್ಲೂ ಅಪಾರ ಹಾನಿ

ಉಪ್ಪಳದ ಮಂಗಲ್ಪಾಡಿ ಕೃಷ್ಣನಗರದಲ್ಲಿ ಸಿಡಿಲಿಗೆ ಮನೆ ಬಿರುಕು ಬಿಟ್ಟಿದೆ. ಭಾಸ್ಕರ ಕೊಂಡೆವೂರು ಎಂಬವರ ಮನೆಯ ಒಂದನೇ ಮಹಡಿಯಲ್ಲಿ ಗೋಡೆ ಬಿರುಕು ಬಿಟ್ಟಿದ್ದು ವಾಷಿಂಗ್ ಮಿಷನ್, ವಯರಿಂಗ್ ಪೂರ್ತಿ ಉರಿದು ಹೋಗಿವೆ. ಅಲ್ಲದೆ ಇದೇ ಕಂಪೌಂಡ್ ನಲ್ಲಿರುವ ಅವರ ಸಹೋದ ಪ್ರಭಾಕರ, ಉಪ್ಪಳ ಬಸ್ ಏಜೆಂಟ್ ಸುಕುಮಾರ, ಮಾಧವ ಅವರ ಟಿವಿ ಸಹಿತ ಬೆಲೆ ಬಾಳುವ ವಿದ್ಯುತ್ ಉಪಕರಣಗಳು ನಾಶಗೊಂಡಿದೆ. ಈ ಘಟನೆ ವೇಳೆ ಮನೆಯವರು ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ. ಉಡುಪಿ ಜಿಲ್ಲೆಯ ಉಡುಪಿ ನಗರ, ಕಟಪಾಡಿ, ಶಂಕರಪುರ, ಶಿರ್ವ, ಅಲೆವೂರು, ಹಿರಿಯಡ್ಕ, ಪೆರ್ಣಂಕಿಲ, ಮೂಡಬೆಳ್ಳೆ, ಬ್ರಹ್ಮಾವರ ಹಾಗೂ ಕಾಪು ಸೇರಿದಂತೆ ಜಿಲ್ಲೆಯ ಬಹುತೇಕ ಭಾಗಗಳನ್ನು ವ್ಯಾಪಿಸಿತು. ಗಾಳಿಯ ತೀವ್ರತೆಗೆ ಹಲವೆಡೆ ವಿದ್ಯುತ್ ಕಂಬಗಳು ನೆಲಸಮಗೊಂಡಿದ್ದು ರಾತ್ರಿಯಿಡೀ ವಿದ್ಯುತ್ ಸಂಪರ್ಕ ಕಡಿತಗೊಂಡು ಸಾರ್ವಜನಿಕರು ಕತ್ತಲಲ್ಲಿ ಕಾಲ ಕಳೆಯುವಂತಾಗಿತ್ತು.

ಬೆಚ್ಚಿಬಿದ್ದ ಮೂಡುಬಿದಿರೆ

ಮನೆಯ ಬಳಿಯಿದ್ದ ವಿದ್ಯುತ್ ಕಂಬ ಗಾಳಿಯ ತೀವ್ರತೆಗೆ ಉರುಳಿ ಬಿದ್ದಿದೆ. ತಂತಿಗಳು ಎಳೆಯಲ್ಪಟ್ಟು ಗೋಡೆಗೆ ಹಾನಿಗಳಾಗಿವೆ. ಪಡುಮಾರ್ನಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಹಲವು ಕಡೆಗಳಲ್ಲಿ ಮನೆಗಳಿಗೆ ತೀವ್ರ ಹಾನಿಗಳಾಗಿವೆ. ಪಡುಮಾರ್ನಾಡ್ ಜಿ ಕೆ ಗಾರ್ಡನ್ ಬಳಿಯಿಂದ ಪಂಡಿತ್ ರೆಸಾರ್ಟ್ ತನಕ ಸುಮಾರು 4ಕ್ಕೂ ಅಧಿಕ ವಿದ್ಯುತ್ ಕಂಬಗಳು ಧರೆಗುರುಳಿವೆ. ಹಲವು ಮರಗಳು ಧಾರಾಶಾಹಿಯಾಗಿವೆ. ಕೋಡಿಗುಂಡದ ಸುಲೋಚನಾ ಹೆಗ್ಡೆ ಮುನ್ನೇರು ದಿನೇಶ್ ಶೆಟ್ಟಿ ಬಂಗೊಟ್ಟು ವಿಜಯ್ ಹೆಗ್ಡೆ ಎಂಬವರ ಮನೆಯ ಶೀಟುಗಳು ಹಾರಿಹೋಗಿವೆ. ಬಸವನಕಜೆ ಎಂಬಲ್ಲಿ ಶಂಕರ ಎಂಬವರ ಮನೆಯ ಮೇಲೆ ತೆಂಗಿನಮರ ಬಿದ್ದು ಅಪಾರ ಹಾನಿ ಸಂಭವಿಸಿದೆ. ಮಂದಾರ ತೋಟದ ಮನೆಯ ತೋಟದಲ್ಲಿ ಅಪಾರ ಕೃಷಿ ಹಾನಿ ಸಂಭವಿಸಿದೆ. ಮಾರೂರು ಗ್ರಾಮದ ವನಿತಾ ಎಂಬವರ ಮನೆಯ ಸೂರು ಗಾಳಿಗೆ ಹಾನಿಗೊಳಗಾಗಿದೆ. ಮಾರೂರು ಶಶಿಕಲಾ ಎಂಬವರ ಮನೆಯ ಮೇಲೆ ಮರಬಿದ್ದು ಭಾಗಶಃ ಹಾನಿಗೊಂಡಿದೆ.

ಬೈಂದೂರು ನಟರಾಜ ಡ್ಯಾನ್ಸ್ ಕಂಪನಿ ವಾರ್ಷಿಕೋತ್ಸವ, ಬೇಸಿಗೆ ಶಿಬಿರ ಆರಂಭ



ಬೈಂದೂರು: ಸಂಸ್ಕೃತಿಯ ಪ್ರೀತಿ ಜೀವನದಲ್ಲಿ ಹೊಸ ಬದುಕನ್ನು ರೂಪಿಸುತ್ತದೆ. ಮಾನವೀಯ ಮೌಲ್ಯ ವೃದ್ಧಿಸಿ ಸಮಾಜಮುಖಿ ಚಿಂತನೆಗಳನ್ನು ಕಲಿಸುತ್ತದೆ. ಅದೇ ರೀತಿ ಕೇವಲ ಮಸ್ತಕದ ಜ್ಞಾನ ಜೀವನಕ್ಕೆ ಸಾಕಾಗುವುದಿಲ್ಲ, ಶಿಕ್ಷಣೇತರ ಚಟುವಟಿಕೆಗಳು ಜೀವನದುದ್ದಕ್ಕೂ ನೆನಪಿನಲ್ಲಿ ಉಳಿದು ಸಾಂಸ್ಕೃತಿಕವಾಗಿ ಎಲ್ಲವನ್ನು ಎದುರಿಸುವ ಧೈರ್ಯ ತುಂಬಲು ಸಹಕಾರಿಯಾಗುತ್ತದೆ ಬೇರಾವ ಅನುಕೂಲತೆಗಳಿಂದ ದೊರೆಯಲಾರ ದಂತಹ ತೃಪ್ತಿ ಕಲಾ ಮಾಧ್ಯಮಗಳಿಂದ ದೊರೆಯುತ್ತದೆ ಎಂದು ಶ್ರೀ ಸೇನೇಶ್ವರ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಿರೀಶ ಬೈಂದೂರು ಹೇಳಿದರು..

ಶ್ರೀ ಶಾರದಾ ವೇದಿಕೆಯಲ್ಲಿ ನಟರಾಜ ಡ್ಯಾನ್ಸ್ ಕಂಪನಿ ಇದರ 9ನೇ ವರ್ಷದ ವಾರ್ಷಿಕೋತ್ಸವ ಹಾಗೂ ಬೇಸಿಗೆ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸುರಭಿ ಸಂಸ್ಥೆಯ ಅಧ್ಯಕ್ಷ ಆನಂದ ಮದ್ದೋಡಿ ಮಾತನಾಡಿ, ನೃತ್ಯ ಪ್ರಾಕಾರಗಳು ದೈಹಿಕ ಹಾಗೂ ಮಾನಸಿಕವಾಗಿ ಆರೋಗ್ಯಕ್ಕೆ ಉತ್ತಮ ಸಹಕಾರಿಯಾಗಿವೆ. ಬದುಕಿನಲ್ಲಿ ಪರಿಪೂರ್ಣತೆ ಕಾಣಬೇಕಾದರೆ ಹಾಗೂ ವ್ಯಕ್ತಿತ್ವದ ಬೆಳವಣಿಗೆಗೆ ಬಾಲ್ಯದಿಂದಲೇ ಸಾಂಸ್ಕೃತಿಕವಾಗಿ ತೊಡಗಿಸಿಕೊಳ್ಳಬೇಕು. ಎಳೆಯ ಮನಸ್ಸುಗಳಲ್ಲಿ ಬಿತ್ತಿದ ಚಿಂತನೆಗಳ ಬೀಜ ಮುಂದೆ ಅವರ ಜೀವನದಲ್ಲಿ ನಿರಂತರ ಉಪಯೋಗಕ್ಕೆ ಬರಲಿದೆ. ಪಠ್ಯ ನಮಗೆ ವಿವೇಕ ನೀಡಿದರೆ ಪಠ್ಯೇತರ ಚಟುವಟಿಕೆಗಳು ಜ್ಞಾನ ನೀಡುತ್ತದೆ. ಕೇವಲ ಪಠ್ಯ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡಿ ಸಾಂಸ್ಕೃತಿಕ ಬದುಕಿನ ನಂಟಿನಿಂದ ದೂರವಾಗಬಾರದು ಎಂದರು.

ಸ್ಥಳೀಯ ರೋಟರಿ ಕ್ಲಬ್ ಅಧ್ಯಕ್ಷ ಸುಬ್ರಹ್ಮಣ್ಯ ಜಿ. ಉಪ್ಪುಂದ ಮಾತನಾಡಿ, ಹಾಡುವುದು ಮತ್ತು ಕುಣಿಯುವುದು ಹುಟ್ಟುತ್ತಲೇ ಬರುವ ಸಹಜಪ್ರವೃತ್ತಿ ಎಂದರು.

ಲಾವಣ್ಯ ಅಧ್ಯಕ್ಷ ನರಸಿಂಹ ನಾಯಕ್, ಕೋರಿಯೋಗ್ರಾಫರ್ ನಟರಾಜ್ ಇದ್ದರು. ಗೀತಾ ಪ್ರಸನ್ನ ಸ್ವಾಗತಿಸಿ, ಪಾರ್ವತಿ ವಂದಿಸಿದರು. ದೀಪಿಕಾ ರಾವ್ ನಿರೂಪಿಸಿದರು. ನಂತರ ಕೇಂದ್ರದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಸಂಭ್ರಮ ನಡೆಯಿತು.

ಪಡುಬಿದ್ರಿ ದೇವಸ್ಥಾನ: ವಿಜೃಂಭಣೆಯ ಜಾತ್ರೆ, ವರ್ಷಾವಧಿ ಮಹಾರಥೋತ್ಸವ



ಪಡುಬಿದ್ರಿ: ಪಡುಬಿದ್ರಿಯ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವರ್ಷಾವಧಿ ಮಹಾ ರಥೋತ್ಸವವು ಮಂಗಳವಾರ ರಾತ್ರಿ ಶ್ರೀ ಕ್ಷೇತ್ರದ ತಂತ್ರಿಗಳಾದ ವೇದಮೂರ್ತಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರಗಿತು. ಸಾವಿರಾರು ಸಂಖ್ಯೆಯ ಭಕ್ತ ಗಡಣವು ವರ್ಷಾವಧಿ ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ದೇಗುಲದ ಆನುವಂಶಿಕ ಮೊಕ್ತೇಸರ ಪಡುಬಿದ್ರಿ ಬೀಡು ರತ್ನಾಕರ ರಾಜ್ ಅರಸ್ ಕಿನ್ನಕ್ಕ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ, ಕೊರ್ನಾಯ ಶ್ರೀಪತಿ ರಾವ್, ಕಾರ್ಯ ನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಕೃಷ್ಣಾಪುರ



ಶಾಖಾ ಮಠದ ಶ್ರೀನಿವಾಸ ಉಪಾಧ್ಯಾಯ, ಸಹಿತ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಸಮಿತಿಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು, ದೇಗುಲದ ಅರ್ಚಕರು, ಸಿಬಂದಿ ವರ್ಗ ಇದ್ದರು.

ಪಾದೂರು: ವಲದೂರು ವೆಲ್ಫೇರ್ ಎಸೋಸಿಯೇಶನ್ ವಾರ್ಷಿಕೋತ್ಸವ



ಶಿರ್ವ: ಪಾದೂರು ವ್ಯಾಪ್ತಿಯ ವಲದೂರು ವೆಲ್ಫೇರ್ ಎಸೋಸಿಯೇಶನ್ 14ನೇ ವರ್ಷದ ವಾರ್ಷಿಕೋತ್ಸವ ನೆರವೇರಿತು.

ಕಾಪು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಮಂಡಲೀಕ ಮರಾತೆ ಭಾಗವಹಿಸಿದ್ದರು. ಸಮಾರಂಭವನ್ನು ಸಂಸ್ಥೆಯ ಗೌರವ ಅಧ್ಯಕ್ಷ, ಮಹಾಪೋಷಕ ಶಾಂತರಾಜ ವೈ. ಶೆಟ್ಟಿ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಉದ್ಯಮಿ ವಳದೂರು ಪಡುಮನೆ ಗಣೇಶ್ ಪೂಜಾರಿ, ಉಡುಪಿ ತುಳು ಕೂಟದ ಕಾರ್ಯದರ್ಶಿ ಗಂಗಾಧರ ಕಿದಿಯೂರು, ಕೆಮ್ತೂರು ದೊಡ್ಡಣ್ಣ ಶೆಟ್ಟಿ ನಾಟಕ ಪಂಥ ಇದರ ಸಂಚಾಲಕರಾದ ಬಿ. ಪ್ರಭಾಕರ ಭಂಡಾರಿ ಮಾತನಾಡಿದರು.

ಈ ಸಂದರ್ಭದಲ್ಲಿ ಈ ಭಾಗದ ಹಿರಿಯ ಆಶಾ ಕಾರ್ಯಕರ್ತೆ ಸರಸ್ವತಿ ಭಂಡಾರಿ, ಹಾಲು ಉತ್ಪಾದಕರ ಸಹಕಾರಿ ಸಂಘ ಪಂಜಿಮಾರು ಇದರ ಮಾಜಿ ಅಧ್ಯಕ್ಷೆ ಹಾಗೂ ಪ್ರಗತಿಪರ ಹೈನುಗಾರಿಕೆ ಸಾಧಕಿ ಹರಿಣಾಕ್ಷಿ ಎಂ.ಶೆಟ್ಟಿ ಪ್ರಗತಿಪರ ಮಲ್ಲಿಗೆ ಕೃಷಿಕೆ ವಿಶಾಲಾಕ್ಷಿ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಲಾಯಿತು. ಸಮಾಜ ಸೇವಕ ಮಧುಸೂದನ ಸಾಲಿಯಾನ್, ಪ್ರತಿಭಾವಂತ ವಿದ್ಯಾರ್ಥಿ ನಿತಿನ್ ನಾಯಕ್ ಆಸ್ಟ್ರೇಲಿಯಾ ಇವರ ಪರವಾಗಿ ಅವರ ತಂದೆ ನಿತ್ಯಾನಂದ ನಾಯಕ್ ಪಾಲಮೆ ಅವರನ್ನು ಅಭಿನಂದಿಸಲಾಯಿತು. ಕೊಡುಗೈ ದಾನಿಗಳಾದ ಶಾಂತರಾಜ್ ವೈ. ಶೆಟ್ಟಿ ಗಣೇಶ್ ಪೂಜಾರಿ ವಳದೂರು ಪಡುಮನೆ, ದಿನೇಶ್ ವಿಠಲ್ ಶೆಟ್ಟಿ ಕಲ್ಲೊಟ್ಟೆ ಮನೆ ಅವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ಎಸೋಸಿಯೇಶನ್‌ನ ಅಧ್ಯಕ್ಷ ಅಶೋಕ್ ಕುಮಾರ್ ವಲದೂರು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯನ್ನು 13 ವರ್ಷಗಳ ಕಾಲ ಮುನ್ನಡೆಸಿದ ಅಧ್ಯಕ್ಷ ಲೀಲಾಧರ ಶೆಟ್ಟಿ ವಲದೂರು, ಕಾರ್ಯದರ್ಶಿ ಪ್ರಸಾದ್ ಶೆಟ್ಟಿ ವಲದೂರು, ಕೋಶಾಧಿಕಾರಿ ಸುಕೇಶ್ ಪೂಜಾರಿ ವಲದೂರು ಅವರನ್ನು ನೂತನ ಅಧ್ಯಕ್ಷ ಅಶೋಕ್ ಕುಮಾರ್ ವಲದೂರು ಸನ್ಮಾನಿಸಿದರು. ಗರಡಿಮನೆ ವಿಶ್ವನಾಥ್ ಪೂಜಾರಿ, ಗೋಪಾಲ ಪೂಜಾರಿ ಉಪಸ್ಥಿತರಿದ್ದರು. ಶುಭಲಕ್ಷ್ಮೀ ಶೆಟ್ಟಿ ಪ್ರಾರ್ಥಿಸಿದರು. ಉಪನ್ಯಾಸಕಿ ಸುನೀತಾ ನಿರೂಪಿಸಿ, ಸುಕೇಶ್ ಪೂಜಾರಿ ವಲದೂರು ಧನ್ಯವಾದವಿತ್ತರು.

ಶ್ರೀ ಸತ್ಯನಾರಾಯಣ ಪೂಜೆ

ವೇದಮೂರ್ತಿ ಹರಿಕೃಷ್ಣ ತಂತ್ರಿ ಕುತ್ಯಾರು ನೇತೃತ್ವದಲ್ಲಿ ವಲದೂರು ಬ್ರಹ್ಮಸ್ಥಾನದಲ್ಲಿ ಶ್ರೀನಾಗಬ್ರಹ್ಮ ತಂಬಿಲ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನೆರವೇರಿತು.

ಅಂಜಾರು ಮರಾಟಿ ಸಮುದಾಯ ಕಲಾ ಸಂಘದ ಬೇಸಿಗೆ ಶಿಬಿರ ಸಮಾರೋಪ



ಉಡುಪಿ: ಮಕ್ಕಳಲ್ಲಿ ಸೃಜನಶೀಲತೆ ಬೆಳೆಸಲು ಬೇಸಿಗೆ ಶಿಬಿರಗಳು ಪರಿಣಾಮಕಾರಿಯಾಗಿವೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಮಕ್ಕಳು. ಬೆಳೆಯುವ ಸಮಯದಲ್ಲಿ ಅವರಿಗೆ ಉತ್ತಮ ವಿಚಾರಗಳನ್ನು ಹೇಳಿ ಮಾರ್ಗದರ್ಶನ ಮಾಡಿದರೆ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಲು ಸಾಧ್ಯವೆಂದು ಸೂರ್ಯಕಲಾ ಆಚಾರ್ಯ ಹೇಳಿದ್ದಾರೆ.

ಅಂಜಾರು ಶ್ರೀ ದುರ್ಗಾಪರಮೇಶ್ವರಿ ಮರಾಟಿ ಸಮುದಾಯ ಕಲಾ ಸಂಘದ ವತಿಯಿಂದ ಅಂಜಾರಿನಲ್ಲಿ ಹಮ್ಮಿಕೊಳ್ಳಲಾದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡುತಿದ್ದರು. ಮುಖ್ಯ ಅತಿಥಿಯಾಗಿ ವಿಜಯ ಶೆಟ್ಟಿ ಕೊಂಡಾಡಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾದ ಭಜನಾ ಶಿಕ್ಷಕ ಸುಶಾಂತ್, ಯೋಗ ಶಿಕ್ಷಕ ರವಿ ಕುಲಾಲ್ ಹಾಗೂ ಜಾನಪದ ಕುಣಿತ ಶಿಕ್ಷಕ ರಾಘವೇಂದ್ರ ಮಣಿಪಾಲ್ ಅವರನ್ನು ಗೌರವಿಸಲಾಯಿತು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ವೆಂಕಟೇಶ್ ನಾಯ್ಕ್ ವಹಿಸಿದ್ದರು. ವೇದಿಕೆಯಲ್ಲಿ ಪ್ರಮುಖರಾದ ಬಾಬು ನಾಯ್ಕ್, ಚಂದ್ರಶೇಖರ್ ನಾಯ್ಕ್, ನಾಗೇಶ್ ನಾಯ್ಕ್ ಇದ್ದರು. ಸಂಘದ ಕಾರ್ಯದರ್ಶಿ ಪ್ರದೀಪ್ ನಾಯ್ಕ್ ನಿರೂಪಿಸಿದರು. ಸುಧಾಕರ್ ನಾಯ್ಕ್ ವಂದಿಸಿದರು ನಂತರ ಶಿಬಿರದ ಮಕ್ಕಳಿಂದ ಯೋಗ, ಭಜನೆ ಹಾಗೂ ಹಾಲಕ್ಕಿ ಕುಣಿತ ಮತ್ತು ಕಂಸಾಳೆ ಕುಣಿತಗಳು ನಡೆದವು.

ರಾಜಕೀಯ ಪಕ್ಷದ ಕಚೇರಿಗೆ ಪುರಸಭೆ ನಿವೇಶನ : ಸಿಪಿಎಂನಿಂದ ವಿರೋಧ



ಕುಂದಾಪುರ: ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಬೋರ್ಡ್ ಹೈಸ್ಕೂಲ್ ಪಕ್ಕದಲ್ಲಿರುವ ಪುರಸಭೆ ವ್ಯಾಪ್ತಿಯ ಸ್ಥಳವನ್ನು ರಾಜಕೀಯ ಪಕ್ಷಕ್ಕೆ ಕಚೇರಿಗಾಗಿ ನೀಡುವುದಕ್ಕೆ ಸಿಪಿಎಂ ಆಕ್ಷೇಪ ವ್ಯಕ್ತಪಡಿಸಿದ್ದು ಕುಂದಾಪುರ ಉಪವಿಭಾಗಾಧಿಕಾರಿ, ಪುರಸಭಾ ಆಡಳಿತಾಧಿಕಾರಿ ರಶ್ಮಿ ಎಸ್.ಆರ್ ಅವರಿಗೆ ಮನವಿ ಸಲ್ಲಿಸಿದೆ.

ರಾಜಕೀಯ ಪಕ್ಷದ ಕಚೇರಿಗೆ ನೀಡಲು ಉದ್ದೇಶಿಸಿರುವ ಜಾಗವು ಲಗೇಜ್ ಟೆಂಪೋ ನಿಲ್ದಾಣವಾಗಿ ಬಳಕೆ ಆಗುತ್ತಿದೆ. ಈ ಜಾಗವನ್ನು ಈ ಹಿಂದೆಯೂ ರಾಜಕೀಯ ಪಕ್ಷಗಳಿಗೆ ನೀಡುವ ಪ್ರಸ್ತಾವನೆ ಇದ್ದು ಈ ಬಗ್ಗೆ ಆಕ್ಷೇಪ ಬಂದಿರುತ್ತದೆ. ಆಕ್ಷೇಪದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರ ವರದಿಯಂತೆ ಈ ಪ್ರದೇಶವು ಪೊರಂಬೋಕು ರಸ್ತೆ ತೋಡು ಆಗಿರುವುದರಿಂದ ರಾಜಕೀಯ ಪಕ್ಷಗಳಿಗೆ ಮಂಜೂರಾತಿಗೆ ಅವಕಾಶ ಇಲ್ಲ ಎಂಬುದಾಗಿ ವರದಿ ನೀಡಿದ್ದಾರೆ. ಸಾರ್ವಜನಿಕ ಉಪಯೋಗಕ್ಕೆ ಪುರಸಭೆ ವ್ಯಾಪ್ತಿಯಲ್ಲಿ ಯಾವುದೇ ಸ್ಥಳ ಇಲ್ಲದಿರುವಾಗ ಇರುವ ಜಾಗವನ್ನು ರಾಜಕೀಯ ಪಕ್ಷದ ಕಚೇರಿಗೆ ನೀಡುವುದಕ್ಕೆ ಸಿಪಿಎಂ ತಾಲೂಕು ಸಮಿತಿ ಆಕ್ಷೇಪ ಇದೆ. 2000ರಲ್ಲಿ ಪುರಸಭೆ ತೀರ್ಮಾನದಂತೆ ಲಗೇಜ್ ಆಟೋ ಟೆಂಪೋ ನಿಲ್ದಾಣವಾಗಿಯೇ ಕಾಯ್ದಿರಿಸಬೇಕು. ಪುರಸಭೆ ಆಡಳಿತ ಅಧಿಕಾರಿ ತೀರ್ಮಾನವನ್ನು ಮರು ಪರಿಶೀಲಿಸಿ ಸ್ಥಳವನ್ನು ಸಾರ್ವಜನಿಕ ಉಪಯೋಗಕ್ಕೆ ಮೀಸಲಿರಿಸಬೇಕಾಗಿ ಸಲ್ಲಿಸಿರುವ ಮನವಿಯಲ್ಲಿ ಆಗ್ರಹಿಸಲಾಗಿದೆ.

ಸಿಪಿಎಂ ಹಿರಿಯ ಮುಖಂಡ ವಿ. ನರಸಿಂಹ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಎಚ್. ನರಸಿಂಹ, ಚಂದ್ರಶೇಖರ್, ಆಟೋ ಸಂಘದ ಮುಖಂಡರಾದ ರಾಜು ದೇವಾಡಿಗ ಉಪಸ್ಥಿತರಿದ್ದರು.

ಭಂಡಾರ್‌ಕಾರ್ಸ್‌ನಲ್ಲಿ ರೆಡ್‌ಕ್ರಾಸ್ ದಿನಾಚರಣೆ



ಕುಂದಾಪುರ: ಭಂಡಾರ್‌ಕಾರ್ಸ್ ಆರ್ಟ್ಸ್ ಆ್ಯಂಡ್ ಸಾಯನ್ಸ್ ಕಾಲೇಜು ಆಶ್ರಯದಲ್ಲಿ ರೆಡ್ ಕ್ರಾಸ್ ಸಂಸ್ಥೆ ಕುಂದಾಪುರ ಸಹಯೋಗದಲ್ಲಿ ಕಾಲೇಜಿನ ಯೂತ್ ರೆಡ್ ಕ್ರಾಸ್ ಘಟಕ ಆಶ್ರಯದಲ್ಲಿ "ರೆಡ್ ಕ್ರಾಸ್ ದಿನಾಚರಣೆ– 2026" ಕಾರ್ಯಕ್ರಮ ಕಾಲೇಜಿನಲ್ಲಿ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದ ಕುಂದಾಪುರ ರೆಡ್ ಕ್ರಾಸ್ ಸಂಸ್ಥೆ ಕುಂದಾಪುರ ಘಟಕದ ಸಭಾಪತಿ ಜಯಕರ ಶೆಟ್ಟಿ ಮಾತನಾಡಿದರು. ಅಧ್ಯಕ್ಷತೆಯನ್ನು ಭಂಡಾರ್‌ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ವಹಿಸಿದ್ದರು. ಕುಂದಾಪುರ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಸತ್ಯನಾರಾಯಣ ಪುರಾಣಿಕ್, ಭಂಡಾರ್ಕಾರ್ಸ್ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಸತ್ಯನಾರಾಯಣ, ಕಾರ್ಯಕ್ರಮ ಸಂಯೋಜಕಿ ವಿದ್ಯಾ ರಾಣಿ ಇದ್ದರು. ಪಲ್ಲವಿ ಕಾರ್ಯಕ್ರಮ ನಿರೂಪಿಸಿ, ವೈಭವಿ ಸೂರ್ಯ ವಂದಿಸಿದರು.

ಕಾಲುಬಾಯಿ ಲಸಿಕಾ ಕಾರ್ಯಕ್ರಮದ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿ ಸಭೆ | ರೈತರು ನಿರ್ಲಕ್ಷ್ಯ ವಹಿಸದಂತೆ ಸೂಚನೆ

ಕಾಲುಬಾಯಿ ರೋಗ ನಿಯಂತ್ರಣಕ್ಕೆ ಲಸಿಕೆಯೊಂದೇ ಪರಿಹಾರ: ಡಿಸಿ ಸ್ವರೂಪ

ಉಡುಪಿ: ಕಾಲುಬಾಯಿ ರೋಗವು ಜಾನುವಾರುಗಳಲ್ಲಿ ಅತ್ಯಂತ ವೇಗವಾಗಿ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಈ ರೋಗದ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಒಂಭತ್ತನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದ್ದು, ರೈತರು ತಮ್ಮ ಜಾನುವಾರುಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ಅವರು ಇಂದು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ 9ನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮದ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ



ವಹಿಸಿ ಮಾತನಾಡಿದರು.

ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯಾದ್ಯಂತ ಒಂಭತ್ತನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮ ಈಗಾಗಲೇ ಆರಂಭಗೊಂಡಿದ್ದು, ಮೇ 22ರ ವರೆಗೆ ಲಸಿಕಾ ಕಾರ್ಯಕ್ರಮ ನಡೆಯಲಿದೆ. ಜಾನುವಾರುಗಳಿಗೆ ವೈರಾಣುವಿನಿಂದ ಹರಡುವ ಈ ರೋಗ ತಡೆಗೆ ಲಸಿಕೆಯೊಂದೇ ಪರಿಹಾರವಾಗಿದ್ದು ರೈತರು ನಿರ್ಲಕ್ಷ್ಯ ವಹಿಸದೇ ತಪ್ಪದೇ ಲಸಿಕೆ ಹಾಕಿಸುವಂತೆ ನೋಡಿಕೊಳ್ಳಬೇಕು ಎಂದು ಪಶು ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಲಸಿಕಾ ಕಾರ್ಯಕ್ಕಾಗಿ ಮನೆ ಮನೆ ಭೇಟಿ ನೀಡುವ ಪಶುವೈದ್ಯರು, ತಾಂತ್ರಿಕ ಸಿಬ್ಬಂದಿ, ಕೆ.ಎಂ.ಎಫ್ ಸಿಬ್ಬಂದಿ, ಮೈತ್ರಿ ಕಾರ್ಯಕರ್ತರು, ಪಶು ಸಖಿಯರು ಹಾಗೂ ಇತರೆ ತರಬೇತಿ ಹೊಂದಿದ ಸಿಬ್ಬಂದಿಗಳಿಗೆ ರೈತರು ಅಗತ್ಯ ಸಹಕಾರ ನೀಡಬೇಕು ಎಂದರು.

ಕಳೆದ ಎಂಟನೇ ಸುತ್ತಿನ ಕಾಲುಬಾಯಿ ಜ್ವರ ಲಸಿಕಾ ಕಾರ್ಯಕ್ರಮದಲ್ಲಿ ಜಿಲ್ಲೆಯ 2,00,518 ಜಾನುವಾರುಗಳ ಗುರಿ ನಿಗದಿಪಡಿಸಿ, 1,92,434 ಜಾನುವಾರುಗಳಿಗೆ ಲಸಿಕೆ ಹಾಕಿಸಿ ಶೇ. 96 ರಷ್ಟು ಪ್ರಗತಿ ಸಾಧಿಸಲಾಗಿದ್ದು, ಒಂಭತ್ತನೇ ಸುತ್ತಿಗೆ 1,96,905 ಗುರಿ ನಿಗದಿಪಡಿಸಿ, ಈವರೆಗೆ 68,840 ಜಾನುವಾರುಗಳಿಗೆ ಲಸಿಕೆ ಹಾಕುವುದರೊಂದಿಗೆ ಶೇ. 34.96 ರಷ್ಟು ಗುರಿ ಸಾಧಿಸಲಾಗಿದೆ. ಲಸಿಕಾ ಕಾರ್ಯವು ಪ್ರತಿಶತಃ ನೂರರಷ್ಟು ಪ್ರಗತಿಯಾಗುವುದರೊಂದಿಗೆ ಯಾವುದೇ ಜಾನುವಾರುಗಳು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ಒಟ್ಟು 8 ಪಶು ಸಂಜೀವಿನಿ ಆಂಬುಲೆನ್ಸ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು ಈ ವಾಹನಗಳ ಮೂಲಕ 2025 ರ ಏಪ್ರಿಲ್‌ನಿಂದ 2026ರ ಮಾರ್ಚ್ ವರೆಗೆ ಒಟ್ಟು 10,043 ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗಿರುತ್ತದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ.ಎಂ.ಸಿ ರೆಡ್ಡಪ್ಪ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಬ್ರಹ್ಮಣ್ಯ, ಪಶುವೈದ್ಯಕೀಯ ಪಾಲಿ ಕ್ಲಿನಿಕ್ ಉಪನಿರ್ದೇಶಕ ಡಾ. ಬಾಬಣ್ಣ, ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.